ಆದರೆ ಪ್ರಮುಖವಾಗಿ ಈ ಚಾಮುಂಡೇಶ್ವರಿ ಬಿಲ್ಡರ್ಸ್ ..... ನಾನೇನೋ ಒಂದು ಸಾವಿರ ಎಕರೆ ಜಮೀನಿನಲ್ಲಿ ..... ಒಂದು ನಿಮಿಷ ಅದಕ್ಕೆ ದಾಖಲೆ ಕೊಡುತ್ತಿದ್ದೇನೆ. ಗೋಮಾಳ, ಗುಡ್ಡಗಳು ಆಕ್ರಮಿಸಿಕೊಂಡಿದ್ದಾರೆ ಎಂದು ನಾನು ಹೇಳಿದೆ. ಆಗ ಒಂದು ಪ್ರಶ್ನೆಯನ್ನು ಎತ್ತಿದರು ಕಾನೂನು ಬಾಹಿರವಾದಂಥ ಕೆಲಸವನ್ನು ನಾವೇನಾದರೂ ಮಾಡಿದ್ದೇವೆಯೇ ಎಂದು. ಮಾನ್ಯ ಅಧ್ಯಕ್ಷರೇ, ಈ ಬಿ.ಎಂ.ಆರ್.ಡಿ.ಎ. ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಏನಿದೆ ಕಾಯಿದೆ ಪ್ರಕಾರ ವಸತಿ ಸಮುಚ್ಛಯ ಯಾರಾದರೂ ಮಾಡಬೇಕಿದ್ದರೆ ಬಿ.ಎಂ.ಆರ್.ಡಿ.ಎ. ಅನುಮತಿಯನ್ನು ಪಡೆಯಬೇಕಾಗುತ್ತದೆ. ಇದು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿಗೆ ಇದು ಸೇರುತ್ತದೆ. ಈ ಚೌಕಟ್ಟಿಗೆ ಬರುತ್ತದೆ. ಗ್ರಾಮಪಂಚಾಯಿತಿಯ ಅಧ್ಯಕ್ಷ, ಕಾರ್ಯದರ್ಶಿ ಈ ನಕ್ಷೆಗಳಿಗೆ ಅನುಮೋದನೆ ಮಾಡಿ ಕೊಟ್ಟಿದ್ದಾರೆ ಉಪಾಧ್ಯಕ್ಷರೇ, 1000 ಕೋಟಿ ರೂಪಾಯಿ ಬೆಲೆ ಬಾಳುವಂಥ ......

2) ಪ್ರಕಟಣೆ.

ಉಪಾಧ್ಯಕ್ಷರು : ಒಂದು ನಿಮಿಷ ಇರಿ, ಒಂದು ಪ್ರಕಟಣೆ ಇದೆ. ಇಂದು ಮಧ್ಯಾಹ್ನ ಸುಮಾರು 1-10 ಗಂಟೆ ಸಮಯದಲ್ಲಿ ಕರ್ನಾಟಕ ರಾಜ್ಯ ರೈತಸಂಘ, ಮೈಸೂರು ಜಿಲ್ಲಾ ಶಾಖೆಯ ಶ್ರೀ ಸದ್ಗುರು, ಶ್ರೀ ಬಸವರಾಜು, ಶ್ರೀ ಹೆಚ್. ಸುರೇಶ್, ಶ್ರೀ ಮಲ್ಲಪ್ಪ, ಶ್ರೀ ನಂಜುಂಡಸ್ವಾಮಿ ಹಾಗೂ ಶ್ರೀ ಎಸ್. ಪ್ರಕಾಶ್ ಅವರುಗಳು ಸದನದ ಪ್ರೇಕ್ಷಕರ ಗ್ಯಾಲರಿಯಿಂದ ಘೋಷಣೆಗಳನ್ನು ಕೂಗಿ ಸದನದ ಕಲಾಪಕ್ಕೆ ಅಡ್ಡಿಯುಂಟು ಮಾಡಿರುತ್ತಾರೆ. ಇವರುಗಳನ್ನು ಪಹರೆ ಮತ್ತು ನಿಗಾವಣೆ ಶಾಖೆಯವರು ತಮ್ಮ ವಶಕ್ಕೆ ತೆಗುದುಕೊಂಡು ವಿಧಾನಸೌಧದ ಪೋಲೀಸ್ ಠಾಣೆಯವರ ವಶದಲ್ಲಿಟ್ಟಿರುತ್ತಾರೆ. ಅವರುಗಳು ಸದನಕ್ಕೆ ತೀವ್ರ ಸ್ವರೂಪದ ಅಪರಾಧಗಳನ್ನು ಮಾಡಿರುವುದರಿಂದ ಈ ಮೇಲ್ಕಾಣಿಸಿದವರಿಗೆ ಶಿಕ್ಷೆಯನ್ನು ವಿಧಿಸಿದ್ದು ಇಂದು ಅವರು ಸದನವು ಮುಗಿಯುವವರೆಗೆ ವಿಧಾನಸೌಧದ ಪೋಲೀಸ್ ಕಸ್ಟಡಿಯಲ್ಲಿರಬೇಕೆಂದು ಆದೇಶಿಸುತ್ತೇನೆ. ತಾವು ಮುಂದುವರೆಸಿ.

3) ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆ

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದ ರೈತರು ಕೂಲಿಕಾರರು ಒದ್ದಾಡುತ್ತಿರುವಂಥ ಸಂದರ್ಭದಲ್ಲಿ ಪ್ರತಿಭಟನೆ ಮಾಡಿದ್ದಾರೆ.

ಉಪಾಧ್ಯಕ್ಷರು : ಆಯಿತು, ಎಲ್ಲಾ ಗೊತ್ತಿದೆ. ಅವರು ಮಾತನಾಡಲಿ. ಈಗ ವಿರೋಧಪಕ್ಷದ ನಾಯಕರು ಮಾತನಾಡಲಿ.

ಶ್ರೀ ಕೆ.ಎಸ್. ಈಶ್ವರಪ್ಪ : ಈಗ ಅವರನ್ನು ಬಿಡುಗಡೆ ಮಾಡಿ. ಬೇರೆ ಇನ್ನೇನೂ ಇಲ್ಲ. ನಾನು ಮನವಿ ಮಾಡಿಕೊಳ್ಳುತ್ತೇನೆ ಇಡೀ ರಾಜ್ಯದ ರೈತರ ಪರವಾಗಿ ಅವರ ನೋವನ್ನು ನಿಮ್ಮ ಗಮನಕ್ಕೆ ತಂದಿದ್ದಾರೆ. ದಯವಿಟ್ಟು ಅವರನ್ನು ಬಿಡುಗಡೆ ಮಾಡಿ.

ಉಪಾಧ್ಯಕ್ಷರು : ಆಯಿತು. ಈಗ ಅವರು ಮಾತನಾಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾಡಿದ್ದು ಕಾನೂನು ಚೌಕಟ್ಟಿನಲ್ಲಿ ಸರಿ ಎಂದು ನಾನೂ ಒಪ್ಪುವುದಿಲ್ಲ. ಆದರೆ ರೈತರ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಅವರಿಗೆ ಈ ರೀತಿ ಮಾಡಬೇಡಿ ಎಂದು ಬುದ್ಧಿವಾದ ಹೇಳಿ ಬಿಡುಗಡೆ ಮಾಡಬೇಕು ಎನ್ನುವಂಥ ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ಈ ಮೊಂಡು ಸರ್ಕಾರಕ್ಕೆ, ಬೇಜವಾಬ್ದಾರಿ ಸರ್ಕಾರಕ್ಕೆ, ಕಾನೂನು ಬಾಹಿರ ಕೆಲಸ ಮಾಡುತ್ತಿರುವ ಈ ಸರ್ಕಾರಕ್ಕೆ ಒಂದು ವಿಷಯ ಗಮನಕ್ಕೆ ತರುತ್ತಾ ಇದ್ದೆ. ಬಿ.ಎಂ.ಆರ್.ಡಿ.ಎ. ಅನುಮತಿ ಇಲ್ಲದೆ ಯಾವುದೇ ಬಿಲ್ಡರ್‌ಗೆ ಈ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನಲ್ಲಿ ಈ ರೀತಿ......

ಶ್ರೀ ಸಿ. ಬೈರೇಗೌಡ : ಮಾಲೂರು ತಾಲ್ಲೂಕೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಮೂರು ಸೇರುತ್ತದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕು ಈ ಮೂರೂ ಸಹ ಬಿ.ಎಂ.ಆರ್.ಡಿ.ಎ. ಆಡಳಿತ ಚೌಕಟ್ಟಿನಲ್ಲಿ ಬರುತ್ತದೆ. ಇಲ್ಲಿ ಯಾವುದೇ ಜಮೀನುಗಳನ್ನು ಈ ರೀತಿ ಗ್ರಾಂಟ್ ಮಾಡಿ ಅವರು ಬಿಲ್ಡಿಂಗನ್ನು ಕಟ್ಟಬೇಕಾದರೆ, ಬೇರೆ ಕೆಲಸಕ್ಕೆ ಉಪಯೋಗ ಮಾಡಬೇಕಾದರೆ ಬಿ.ಎಂ.ಆರ್.ಡಿ.ಎ. ಅನುಮತಿಯನ್ನು ಪಡೆಯಬೇಕಾಗುತ್ತದೆ. ಈ ನಕ್ಷೆಯನ್ನು ಕೇವಲ ಅಲ್ಲಿರುವಂಥ ಗ್ರಾಮಪಂಚಾಯಿತಿ ಅಧ್ಯಕ್ಷ, ಕಾರ್ಯದರ್ಶಿ ಅನುಮೋದನೆ ಮಾಡಿ ಭೂ ಪರಿವರ್ತನೆ ಆದೇಶ ಅಲ್ಲಿ ಕೊಟ್ಟಿದ್ದಾರೆ. ಈ ನಕ್ಷೆ ಇಲ್ಲಿದೆ. ಅವರು ಕೊಟ್ಟಿರುವುದು ಕಡಿಮೆ ಎಕ್ಸ್‌ಟೆಂಟ್, ಕಾಂಪೌಂಡ್ ಹಾಕಿಕೊಂಡಿರುವುದು ಒಂದು ಸಾವಿರ ಎಕರೆಗೆ. ಬಹುಶಃ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಈ ರೀತಿ ಅಕ್ರಮ ವ್ಯವಹಾರ ಸರ್ಕಾರದ ಸಹಕಾರದಿಂದ, ಅಧಿಕಾರಿಗಳ ಸಹಕಾರದಿಂದ ನಡೆದಿರಲಿಲ್ಲ ಕಾನೂನು ಬಾಹಿರವಾದಂಥದ್ದು. ನೂರಾರು ಕೋಟಿ ಕೈ ಬದಲಾವಣೆಯಾಗಿದೆ ಎನ್ನುವಂಥದ್ದನ್ನು ನಾನು ಹೇಳುವವನಿದ್ದೇನೆ. ಈಗ ಇಲ್ಲಿ as per tthe BMRDA Act. local bodies are prohibited from entertaining such applications.

ಈಗ ಇಲಾಖೆಯ ವರದಿ ನನಗೆ ಬೇಕು ನಾನು ಜವಾಬ್ದಾರಿಯಿಂದ ಮಾತನಾಡುತ್ತಿದ್ದೇನೆ ಎಂದು ನಾನು ಪತ್ರ ಬರೆದಿದ್ದೆ ಸ್ವಾಮಿ 16-8-96ರಲ್ಲಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರಕ್ಕೆ. ಸ್ವಾಮಿ, ನೀವು ಯಾವ ಯಾವುದಕ್ಕೆ ಅನುಮತಿಯನ್ನು ಕೊಟ್ಟಿದ್ದೀರಿ? ಇವರಿಗೇನಾದರೂ ಅನುಮತಿ ಕೊಟ್ಟಿದ್ದೀರೋ ಅಥವಾ ಇಲ್ಲವೋ ಎಂದು ಕೇಳಿ ನಾನು ಪತ್ರ ಬರೆದಿದ್ದೆ. ನೀವು ಬೇಕು ಎಂದು ಕೇಳಿದಾಗ ನಾನು ಹೇಳಲಿಲ್ಲ. ನೀವು ಕೂಗಬೇಕು ನಿಮ್ಮ ಹತ್ತಿರ ಏನೂ ಇಲ್ಲ ಎಂದು ಈಗ ನಿಮ್ಮ ಮುಖಕ್ಕೆ ಚಾಚಿ ಈ ದಾಖಲೆಯನ್ನು ಕೊಡಬೇಕು. ಆಗಲಾದರೂ ನೀವು ಗೌರವದಿಂದ ಅಧಿಕಾರ ಬಿಟ್ಟು ತೊಲಗುತ್ತೀರಿ ಎಂದು ಇಟ್ಟುಕೊಂಡಿದ್ದೆ. ಈಗ ಕೇಳಿದ್ದೀರಿ. ನಾನು ಕೊಡುತ್ತಿದ್ದೇನೆ. ಈಗ ದೇಶಪಾಂಡೆಯವರಿಲ್ಲ. ಸ್ವಾಮಿ, ಇದು ಮಾಹಿತಿ, ರೂ.ರೆ. 011-1-96-97 ದಿನಾಂಕ 24-8-1996, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ - ಶ್ರೀ ಪಿ.ಎಸ್.ಎಸ್. ಥಾಮಸ್, ಮಹಾನಗರ ಆಯುಕ್ತ, ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು ಇವರ ಪತ್ರ ಇದು. ಏನು ಬರೆದಿದ್ದಾರೆ?

ವಿಷಯ : ಬೆಂಗಳೂರು ಜಿಲ್ಲೆಯ ನೆಲಮಂಗಲ, ಆನೇಕಲ್, ಮತ್ತು ರಾಮನಗರ ತಾಲ್ಲೂಕಿನಲ್ಲಿ ಕೈಗಾರಿಕೆ ಹಾಗೂ ವಸತಿ ಉದ್ದೇಶಕ್ಕೆ ಮಂಜೂರಾತಿ ನೀಡಿರುವ ವಿವರಗಳ ಮಾಹಿತಿ ಒದಗಿಸುವ ಬಗ್ಗೆ. ಉಲ್ಲೇಖ : ತಮ್ಮ ಪತ್ರ ಎಲ್.ಓ.ಪಿ. 2924 ಎಲ್.ಎ. 95 ದಿನಾಂಕ 16-8-96. ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಉಲ್ಲೇಖಿಸಿರುವ ಪತ್ರದಲ್ಲಿ ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಉಲ್ಲೇಖಿಸಿರುವ ಪತ್ರದಲ್ಲಿ ತಾವು ಕೋರಿರುವಂತೆ ಬೆಂಗಳೂರು ಜಿಲ್ಲೆಯ ನೆಲಮಂಗಲ, ರಾಮನಗರ, ಹೊಸಕೋಟೆ, ಬೆಂಗಳೂರು ಉತ್ತರ ತಾಲ್ಲೂಕು ಮತ್ತು ಆನೇಕಲ್ ತಾಲ್ಲೂಕುಗಳಲ್ಲಿ ಕಳೆದ ಎರಡು ವರ್ಷಗಳಲ್ಲಿ ಈ ಪ್ರಾಧಿಕಾರವು ಮಂಜೂರಾತಿ ನೀಡಿರುವ ಪ್ರಕರಣಗಳು ಈ ಕೆಳಗಿನಂತಿವೆ. ನೆಲಮಂಗಲ ತಾಲ್ಲೂಕು -3 ಕೈಗಾರಿಕಾ ಕಟ್ಟಕ್ಕೆ ಅನುಮೋದನೆ ನೀಡಲಾಗಿದೆ. ಅವುಗಳಲ್ಲಿ ಒಂದು ಮೆಸರ್ಸ್ ವಿಲಿಯಂ ಲೋಂಬಾರ್ಡ್ ಚ್ಯೂಯಿಂಗ್ ಗಮ್ ಕಾರ್ಖಾನೆ ಮತ್ತು ಉಳಿದ ಎರಡು ಸಣ್ಣ ಕೈಗಾರಿಕೆಗಳು. ಎರಡನೆಯದು ನೆಲಮಂಗಲ ಕಸಬಾ ಗ್ರಾಮದಲ್ಲಿನ ಸರ್ವೆ ನಂಬರ್ 39ರಲ್ಲಿನ ಒಂದು ಎಕರೆ 12 ಗುಂಟೆ ಜಮೀನಿನಲ್ಲಿ ಡಿಸ್ಪೆನ್ಸರಿ ಮತ್ತು ಸಾಮೂಹಿಕ ಭವನವನ್ನು ಒಳಗೊಂಡ ವಿದ್ಯಾಸಂಸ್ಥೆ ಕಟ್ಟಡಕ್ಕೆ ಶ್ರೀ ನಾರಾಯಣಪ್ಪನವರು ಪರವಾಗಿ ಅನುಮತಿ ನೀಡಲಾಗಿದೆ. ಇನ್ನು ನಾನು ಹೇಳುತ್ತಿರುವುದು ರಾಮನಗರ ತಾಲ್ಲೂಕು. ಇಲ್ಲಿ ಬಿಡದಿ ಹೋಬಳಿ ಗೊಲ್ಲರ-ಪಾಳ್ಯ ಗ್ರಾಮದ ಸರ್ವೆ ನಂಬರ್ 13 ಮತ್ತು 15(2) ರಲ್ಲಿ ಎರಡು ಎಕರೆ ಜಮೀನಿನಲ್ಲಿ ಭವಾನಿ ಫುಡ್ ಪ್ರೈವೇಟ್ ಲಿಮಿಟೆಡ್ ಇವರ ಕಾರ್ಖಾನೆ ಕಟ್ಟಡಕ್ಕೆ ಅನುಮತಿ ನೀಡಲಾಗಿದೆ. ಇದು ಬಿಟ್ಟು ಮತ್ತೊಬ್ಬರಿಗೆ ಕಳೆದ ಎರಡು ವರ್ಷದಲ್ಲಿ ಅನುಮತಿ ಕೊಟ್ಟಿಲ್ಲ ಎನ್ನುವಂತ ಅಧಿಕೃತ ದಾಖಲೆ. ಮತ್ತೆ ಹೊಸಕೋಟೆ ತಾಲ್ಲೂಕಿನಲ್ಲಿ ಚೊಕ್ಕನಹಳ್ಳಿ ಗ್ರಾಮದ ಸರ್ವೆ ನಂಬರ್ 80(3)ರಲ್ಲಿನ 11 ಎಕರೆ 18 ಗುಂಟೆ ಜಮೀನಿನಲ್ಲಿ ಒಂದು ಕೈಗಾರಿಕಾ ಕಟ್ಟಡಕ್ಕೆ ಸೆರಾಮಿಕ್ಸ್ ಲಿಮಿಟೆಡ್‌ರವರ ಪರವಾಗಿ ಅನುಮತಿ ನೀಡಲಾಗಿದೆ.

ಬೆಂಗಳೂರು ಉತ್ತರ ತಾಲ್ಲೂಕು ಕಡಬಗೆರೆ ಗ್ರಾಮದ ಮಾಗಡಿ ರಸ್ತೆಯಲ್ಲಿ ಸರ್ವೆ ನಂ. 10-1ರಲ್ಲಿ 6 ಎಕರೆ ವಿಸ್ತೀರ್ಣದಲ್ಲಿ ಒಂದು ಸಮೂಹ ವಸತಿ ಯೋಜನೆಗೆ ಗ್ರೂಪ್ ಹೌಸಿಂಗ್‌ಗೆ ಮೆಸರ್ಸ್ ಇಂಜನಿಯರ್ಸ್ ಸಿಂಡಿಕೇಟ್ ಪ್ರವೇಟ್ ಲಿಮಿಟೆಡ್ ಇವರಿಗಾಗಿ ಅನುಮೋದನೆಯನ್ನು ನೀಡಲಾಗಿದೆ. ಆನೇಕಲ್ ತಾಲ್ಲೂಕು ಯಾವುದೂ ಇಲ್ಲ. ಮೇಲ್ಕಂಡ ಮಾಹಿತಿಯನ್ನು ತಮ್ಮ ಅವಗಾಹನೆಗಾಗಿ ಹಾಗೂ ಮಾಹಿತಿಗಾಗಿ ಕಳುಹಿಸಿಕೊಡಲಾಗಿದೆ. ಸಹಿ : ಪಿ.ಎಸ್.ಎಸ್. ಥಾಮಸ್, ಮಹಾನಗರ ಆಯುಕ್ತ, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ದಿನಾಂಕ 24.8.96 ಸ್ವಾಮಿ, ನಾನು ಹೇಳಿದಂತಹ ಜಮೀನಿಗಾಗಲಿ, ಈಗಾಗಲೇ ಸುತ್ತಮುತ್ತ ಈಗಲ್‌ಟನ್ ಡೆವಲಪರ್ಸ್ ಮೆಗಾಸಿಟಿ ಪ್ರಾಜೆಕಟ್ಸ್, ಅಂಜನಾದ್ರಿ ಪ್ರಾಜೆಕಟ್ಸ್, ಪೀಸ್ ಡೆವಲಪರ್ಸ್, ಮಂಗೋಲಿಯ ಗ್ರೂಪ್ಸ್, ಗ್ರೀನ್ ಪಾಯಿಂಟ್, ಇಂಟರ್‌ನ್ಯಾಷನಲ್ ವಿಲೇಜ್ ಇವುಗಳು ಮೈಸೂರು ರಸ್ತೆಯಲ್ಲಿರುವ ಕೆಲವು ಭೂ ಕಬಳಿಕೆಯ ಸಂಸ್ಥೆಗಳು,

ಇವು ಯಾವುದಕ್ಕೂ ಸಹ ಈ ಬೆಂಗಳೂರು ಮಹಾನಗರ ಪ್ರದೇಶ ಪ್ರಾಧಿಕಾರ ಅನುಮತಿ ಕೊಟ್ಟಿಲ್ಲ. ಕಾನೂನು ಇದೆ, ಅನುಮತಿ ಪಡೆಯದೆ ಸಾವಿರಾರು ಎಕರೆ ಜಮೀನನ್ನು ಕಬಳಿಸಿ ಲೂಟಿ ಮಾಡಿ ಅವರ ಬೆಂಬಲಕ್ಕೆ ನಿಮ್ಮ ಸರ್ಕಾರ ನಿಂತು ಜನಹಿತವನ್ನು ಮರೆತು ನಿಮ್ಮ ಸ್ವಾರ್ಥಕ್ಕಾಗಿ ಅಧಿಕಾರ ದುರುಪಯೋಗ ಮಾಡಿಕೊಳ್ಳುವಂತಹ ನೀವು ಆ ಕಾನೂನು ಮೀರಿ ಕೆಲಸ ಮಾಡುವಂತಹ ಧೈರ್ಯ ಆ ಅಧಿಕಾರಿಗಳಿಗೆ.

ಯಾರ ಬಲ? ಯಾರು ಅವರ ಹಿಂದೆ ನಿಂತಿದ್ದೀರಿ? ಅಧಿಕಾರಿಗಳು ಕಾನೂನು ಓದುತ್ತಾರೆ. ಲೋಕನಾಯಕ ಜಯಪ್ರಕಾಶ್ ನಾರಾಯಣ್‌ರವರು ಹೇಳಿದರು. ಈ ವ್ಯವಸ್ಥೆ ಕುಲಗೆಟ್ಟು ಹೋಗುತ್ತಿದೆ ಸಂಬಳ ತಿನ್ನುವ ಐಎಎಸ್, ಐಪಿಎಸ್ ಅಧಿಕಾರಿಗಳು ನೀವು ಯಾರು ಕುಳಿತಿದ್ದೀರಿ, ಈ ಸರ್ಕಾರ ಇರುತ್ತದೆ ಹೋಗುತ್ತದೆ ಕಾನೂನು ಬಾಹಿರವಾದ ಈ ಕೆಲಸವನ್ನು ಮಾಡಿಯೆಂದು ಹೇಳಿದಾಗ ಮಾಡಬೇಡಿಯೆಂದು ಕರೆ ಕೊಟ್ಟ ಆ ಪುಣ್ಯಾತ್ಮ ಪ್ರಾಣವನ್ನು ಕೊಟ್ಟ. ಕೇವಲ ಒಂದು ಪ್ರಮೋಷನ್‌ಗೋಸ್ಕರ ಲಂಚದ ಹಣಕ್ಕೋಸ್ಕರ ಕೋಟ್ಯಾಂತರ ರೂಪಾಯಿ ತೆರಿಗೆ ರೂಪದಲ್ಲಿ ಜನರು ಕೊಡುವಂತಹ ಹಣದಲ್ಲಿ ಸಂಬಳ ತೆಗೆದುಕೊಳ್ಳುವಂತಹ ಸರ್ಕಾರಿ ನೌಕರರು ಆಡಳಿತ ಪಕ್ಷದ ಜೊತೆಗೆ ಶಾಮೀಲಾಗಿ ನಿಮ್ಮ ಕುರ್ಚಿ ಉಳಿಸಿಕೊಳ್ಳುವುದಕ್ಕೋಸ್ಕರ ಈ ರೀತಿಯ ಆದೇಶ ಈ ರೀತಿಯ ಲೂಟಿ ಹಗಲು ದರೋಡೆಯಲ್ಲಿ ಕೆಲವರು ಷಾಮೀಲಾಗುತ್ತಿದ್ದೀರಿ.

ಪ್ರಾಮಾಣಿಕ ಅಧಿಕಾರಿಗಳು ಎತ್ತಂಗಡಿ. ಯಾರು ನಿಮ್ಮ ತಾಳಕ್ಕೆ ಕುಣಿಯುತ್ತಾರೆ, ಅವರಿಗೆ ಸಹಕಾರ ಇದು ನಿಮ್ಮ ಆಡಳಿತ ವ್ಯವಸ್ಥೆ. ಬಹಳ ಜನ ವಿರೋಧಪಕ್ಷದ ನಾಯಕರು, ನುರಿತವರು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂದು ಇದ್ದಾರೆ. ಅವರಲ್ಲಿ ಅನೇಕ ದಾಖಲೆಗಳಿವೆ. ಆದರೆ ಇವತ್ತು ಇನ್ನೊಂದು ಎರಡು ಮೂರು ಸಂಗತಿಗಳನ್ನು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ. ಸ್ವಾಮಿ ಬೆಂಗಳೂರು-ಹೊಸೂರು ರಸ್ತೆಯಲ್ಲಿ ನ್ಯಾಷನಲ್ ಹೈವೇನಲ್ಲಿ ವಿದ್ಯುತ್ ಕಂಬಗಳು ಇತ್ತು. ರಸ್ತೆಯನ್ನು ವೈಡನ್ ಮಾಡುವಂತಹ ಕಾಲದಲ್ಲಿ ಆ ಕಂಬಗಳನ್ನು ಸ್ಥಳಾಂತರ ಮಾಡಬೇಕಾಯಿತು. ಅಲ್ಲಿ ಕೇಬಲ್ ವೈರನ್ನು ಹಾಕುವಂತಹ ಕೆಲಸವನ್ನು ಮಾಡಿಸಬೇಕಾಗಿತ್ತು. ಬೆಂಗಳೂರು-ಹೊಸೂರು ರಸ್ತೆಯಲ್ಲಿ ಆಗಿರುವ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸುವ ಕಾಮಗಾರಿಯಲ್ಲಿ ಸುಮಾರು ಒಂದೂವರೆ ಕೋಟಿ ರೂಪಾಯಿಗಳ ಕೆಲವು ಅವ್ಯವಹಾರದ ದಾಖಲೆಗಳನ್ನು ನಾನು ನಿಮಗೆ ಕೊಡುತ್ತಿದ್ದೇನೆ.

ಬೆಂಗಳೂರು-ಹೊಸೂರು ರಸ್ತೆಯಲ್ಲಿ ಮಾನ್ಯ ಹಿರಿಯ ಸಚಿವರಾದ ಮಾನ್ಯ ಸಿಂಧ್ಯಾರವರೇ, ನಾಲ್ಕು ಲೈನುಗಳನ್ನು ಮಾಡುವಂತಹ ಕಾಲದಲ್ಲಿ ನ್ಯಾಷನಲ್ ಹೈವೇನಲ್ಲಿ ವಿದ್ಯುತ್ ಕಂಬಗಳು ಏನಿತ್ತು ಅವುಗಳನ್ನು ಸ್ಥಳಾಂತರ ಮಾಡುವಂತದ್ದು ಮತ್ತು ಕೇಬಲ್ ಹಾಕುವಂತಹದ್ದು, ಇದು ಬೆಂಗಳೂರು-ಹೊಸೂರು ರಸ್ತೆ ವಿದ್ಯುತ್ ಕಾಮಗಾರಿಯಲ್ಲಿ ಆಗಿರುವ ಅವ್ಯವಹಾರದ ಬಗ್ಗೆ ಕಳೆದ ಒಂದು ವರ್ಷದಿಂದ ನಾನು ಅನೇಕ ಸಂದರ್ಭಗಳಲ್ಲಿ ಪ್ರಸ್ತಾಪ ಮಾಡಿದ್ದೇನೆ. ಇಲ್ಲಿ ಏನಾಯಿತು? ಬೆಂಗಳೂರು-ಹೊಸೂರು ರಾಷ್ಟ್ರೀಯ ಹೆದ್ದಾರಿ ಏನಿದೆ ಈ ವಿದ್ಯುತ್ ಕಾಮಗಾರಿಯನ್ನು ನಿರ್ವಹಿಸುವುದಕ್ಕೆ ಕೆಇಬಿ ಒಂದು ಅಂದಾಜು ವೆಚ್ಚದ ಪಟ್ಟಿಯನ್ನು ಕೊಟ್ಟಿತು. ಕೆಇಬಿಯವರು ಎಸ್.ಆರ್. ದರದ ಆಧಾರದ ಮೇಲೆ ಇನ್ನರ್ಥ ಮಾರ್ಕೆಟ್ ದರದ ಮೇಲೆ ಒಂದು ಎಸ್ಟಿಮೇಟನ್ನು ಶಿಫ್ಟಿಂಗ್ ಇದಕ್ಕೆಲ್ಲಾ ತಯಾರು ಮಾಡಿದರು. ಕೆಲಸಕ್ಕಾಗಿ ಹಣವನ್ನು ಯಾರು ಕೊಡಬೇಕು? ರಾಷ್ಟ್ರೀಯ ಹೆದ್ದಾರಿಯವರು ಕೊಡಬೇಕು.

ಅವರ ಅಂದಾಜಿನ ಪ್ರಕಾರ ರಾಷ್ಟ್ರೀಯ ಹೆದ್ದಾರಿಯವರು ಕೆಇಬಿಗೆ 55ಲಕ್ಷ ರೂಪಾಯಿಗಳನ್ನು ಸಂದಾಯ ಮಾಡಿದರು. ವಿದ್ಯುತ್ ಕಂಬಗಳನ್ನು ಶಿಫ್ಟ್ ಮಾಡುವುದಕ್ಕೆ ಅಲ್ಲಿರುವಂತಹ ಭೂಪ, ಸರ್ಕಾರದ ಜೊತೆ ಷಾಮೀಲಾಗಿ ಒಬ್ಬ ಅಧಿಕಾರಿ, ಸಿಂಧ್ಯಾರವರು ನಗುತ್ತಾರೆ. ಯಾರೋ ಪ್ರೈವೇಟ್ ಏಜೆನ್ಸಿಗೆ ಕೊಟ್ಟು ಕಬಳಿಸಲಿಕ್ಕೋಸ್ಕರ ಸರ್ಕಾರದ ಒಬ್ಬ ಪ್ರಮುಖ ಅಧಿಕಾರಿ ಕೆಇಬಿಯಿಂದ ನಾವು ಇದನ್ನು ಮಾಡುವುದಕ್ಕೆ ಸಾಧ್ಯವಿಲ್ಲವೆಂದು ರಿಪೋರ್ಟ್ ತರಿಸಿಕೊಂಡ. ಕೆಇಬಿಯ ಕಾರ್ಯಪಾಲಕ ಅಭಿಯಂತರು

ಈ ಕೆಲಸವನ್ನು ಕೆಇಬಿಯವರು ಮಾಡಲಿಕ್ಕಾಗುವುದಿಲ್ಲವೆಂದು ನ್ಯಾಷನಲ್ ಹೈವೇ ಕಾರ್ಯಪಾಲಕ ಅಭಿಯಂತರಿಗೆ ಒಂದು ಕಾಗದ ಬರೆಸಿದ. ನಾನು ಕೇಳುತ್ತೇನೆ, ಮಣ್ಣು ತಿನ್ನುವುದಕ್ಕೆ ಕೆಇಬಿಯವರು ರಾಷ್ಟ್ರೀಯ ಹೆದ್ದಾರಿಯವರಿಂದ 55 ಲಕ್ಷ ತೆಗೆದುಕೊಂಡರೇ ನಾವು ಕೆಲಸ ಮಾಡುತ್ತೇವೆಂದು ಒಪ್ಪಿಕೊಂಡ ಮೇಲೆ ಯಾರೋ ಅಧಿಕಾರಿ ಹೇಳಿದ ತಕ್ಷಣ ಕೆಲಸ ಮಾಡುವುದಿಲ್ಲವೆಂದು ಏಕೆ ಹೇಳಿದ? ಇದಕ್ಕೆ ಯಾವ ಪ್ರೆಷರ್? ಸ್ವಾಮಿ ಈ ಕಾಮಗಾರಿಗೆ ರಾಷ್ಟ್ರೀಯ ಹೆದ್ದಾರಿಯವರು ಟೆಂಡರ್ ಕರೆದಾಗ ಕೆಇಬಿಯವರು ಆಗುವುದಿಲ್ಲವೆಂದರು. ಇವರ ಹತ್ತಿರ ಅವರದು 55 ಲಕ್ಷ ದುಡ್ಡು ಇದೆ.

ಇದುವರೆಗೂ ಆ ಹಣವನ್ನು ವಾಪಸ್ಸು ಕೊಟ್ಟಿಲ್ಲ. ಕೆಇಬಿಯವರ ಹತ್ತಿರವೇ ಇದೆ 55 ಲಕ್ಷ. ಇವರೇನು ಮಾಡಿದರು ರಾಷ್ಟ್ರೀಯ ಹೆದ್ದಾರಿಯವರು ಈ ಕಾಮಗಾರಿಕೆ ಟೆಂಡರನ್ನು ಕರೆಸಿದರು. ಟೆಂಡರ್‌ನಲ್ಲಿ ಭಾಗವಹಿಸಿದವರು ಯಾರು? ಎಲ್ ಅಂಡ್ ಟಿ ಮತ್ತು ವಿನಾಯಕ ಎಲೆಕ್ಟ್ರಿಕಲ್ಸ್‌ನವರು. ಸ್ವಾಮಿ ಟೆಂಡರನ್ನು ಒಡೆದಾಗ, ಆಶ್ಚರ್ಯದ ಸಂಗತಿ ಇದು ಸಾಧ್ಯವೇ ಎಂದು ಮಾನ್ಯ ಉಪಾಧ್ಯಕ್ಷರು ನೀವೂ ಸಹ ಆಶ್ಚರ್ಯಪಡುತ್ತೀರಿ.

ಟೆಂಡರನ್ನು ಒಡೆದಾಗ, ವಿನಾಯಕ ಎಲೆಕ್ಟ್ರಿಕಲ್ಸ್‌ನವರು ಎಲ್ ಅಂಡ್ ಟಿ ಅವರ ದರಕ್ಕಿಂತ 500 ಪರ್ಸೆಂಟ್‌ಹೆಚ್ಚು ಹಾಕಿದ್ದರು. ವಿನಾಯಕ ಎಲೆಕ್ಟ್ರಿಕಲ್ಸ್‌ನವರು ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿ ಕೇವಲ 30 ಪರ್ಸೆಂಟ್ ಟೆಂಡರ್ ಹಾಕಿದರು. ಟೆಂಡರ್ ಒಡೆಯುವಂತಹ ಸಂದರ್ಭ, 500 ಪರ್ಸೆಂಟ್ ಏರಿಕೆಯಾಗಿತ್ತು. ಅರೆ ಇಷ್ಟೊಂದು ಲಾಭ ಇದೆಯೇ ನಾವು 30 ಪರ್ಸೆಂಟ್‌ಗೆ ಮಾಡುತ್ತಿದ್ದೇವೆಯಲ್ಲಾ ಎಂದು ಹೇಳಿ 30ರ ಮುಂದೆ ಒಂದು ಸೊನ್ನೆ ಹಾಕಿಸಿದರು ಅಷ್ಟೇ.

300 ಎಂದು ತಿದ್ದಿದರು ಕೊಡುತ್ತೇನೆ ನಿಮಗೆ ದಾಖಲೆಗಳನ್ನು. 300 ಪರ್ಸೆಂಟ್‌ಗೆ ಈ ಟೆಂಡರನ್ನು ಏರಿಸಿದರು. ಇವನೇನು ಮಾಡಿದ, ಕೆಲಸ ಮಾಡಲಿಲ್ಲ. 300 ಪರ್ಸೆಂಟ್‌ಗೆ ಏರಿಸಿ ಯೂನಿವರ್ಸಲ್ ಇಂಡಸ್ಟ್ರೀಸ್ ಸಪ್ಲೈಯರ್ಸ್‌ಗೆ ಜನರಲ್ ಪವರ್ ಆಫ್ ಅಟಾರ್ನಿ ಮಾಡಿಕೊಂಡು ನೀನು ಮಾಡು ಎಂದು ಆ ಕಾಮಗಾರಿಯನ್ನು ಅವರಿಗೆ ಕೊಟ್ಟುಬಿಟ್ಟ. ಈ ಯೂನಿವರ್ಸಲ್ ಇಂಡಸ್ಟ್ರೀಸ್ ಸಪ್ಲೈಯರ್ಸ್ ಇದುವರೆಗೆ ಯಾವುದೇ ವಿದ್ಯುತ್ ಕಾಮಗಾರಿಯನ್ನೂ ಸಹ ನಿರ್ವಹಿಸಿಲ್ಲ. ಇವತ್ತು ಇವರ ಬಳಿ ವಿದ್ಯುತ್‌ಕಾಮಗಾರಿ ಮಾಡುವ ಲೈಸೆನ್ಸ್ ಸಹ ಇಲ್ಲ. ಇವರು ಎಲೆಕ್ಟ್ರಿಕಲ್ ಗುತ್ತಿಗೆದಾರರು ಅಲ್ಲ. ವಿದ್ಯುತ್ ಕಾಮಗಾರಿಯನ್ನು ಮಾಡಿದ. ನುರಿತ ಕೆಲಸಗಾರರು ಒಂದು ಆಫೀಸ್ ಆಗಲಿ ಇಲ್ಲ. ಕಾಟನ್‌ಪೇಟೆಯಲ್ಲಿ ಇವರದೊಂದು ಸಣ್ಣ ಅಂಗಡಿ ಪ್ರಾರಂಭವಾಯಿತು. ಈ ಟೆಂಡರನ್ನು ಮಾಡಿದರಲ್ಲಾ ಸ್ವಾಮಿ, ಇದಕ್ಕೆ ಸರ್ಕಾರದ ಅನುಮೋದನೆ ಬೇಕಾಗಿತ್ತು,

ಸರ್ಕಾರದ ಅನುಮೋದನೆ ಇಲ್ಲ, ಅನುಮತಿಯನ್ನು ಪಡೆಯದೇ ತರಾತುರಿಯಲ್ಲಿ ಇನ್‌ಫ್ಲೂಯೆನ್ಸ್ ನೋಡಿ, ಮೂವತ್ತನ್ನು ಮುನ್ನೂರು ಎಂದು ಮಾಡಿಕೊಂಡು ಗುತ್ತಿಗೆದಾರ ರಾಷ್ಟ್ರೀಯ ಹೆದ್ದಾರಿಯ ಯಾವುದೋ ಅಧಿಕಾರಿಗಳಿಗೆ ಅವರ ಒತ್ತಡಕ್ಕೋ ಮಣಿದು, ಸರ್ಕಾರ ಅನುಮೋದನೆಯನ್ನು ಕೊಡುವುದಕ್ಕೆ ಮುಂಚೆ, ವರ್ಕ್ ಆರ್ಡರನ್ನೂ ಸಹ ಕೊಟ್ಟುಬಿಟ್ಟರು. ಸರ್ಕಾರ ಸ್ಯಾಂಕ್ಷನ್ ಮಾಡುವುದಕ್ಕೆ ಮುಂಚೆ, ವರ್ಕ್ ಆರ್ಡರನ್ನೂ ಸಹ ಕೊಟ್ಟುಬಿಟ್ಟರು. ಸರ್ಕಾರ ಸ್ಯಾಂಷನ್ ಮಾಡುವುದಕ್ಕೆ ಮುಂಚೆ. ಈ ಕಾಮಗಾರಿಯಲ್ಲಿ ಗುತ್ತಿಗೆದಾರರಿಗೆ ಒಂದು ಕೋಟಿ 40 ಲಕ್ಷ ರೂಪಾಯಿಗಳಿಗಿಂತ ಹೆಚ್ಚಿಗೆ ಹಣವನ್ನು ಈಗಾಗಲೇ ಪಾವತಿ ಮಾಡಿ ಆಗಿದೆ ಮತ್ತೆ ಈ ಗುತ್ತಿಗೆದಾರರು ಎಕ್ಸ್‌ಟ್ರಾ ಐಟಂ

ಬೇಕೆಂದು ಇನ್ನು 20 ರಿಂದ 30 ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಅದನ್ನೂ ಸಹ ಮಂಜೂರು ಮಾಡುವ ಹಂತದಲ್ಲಿ ತಾವು ಇದ್ದೀರಿ. ಈಗ ಗುತ್ತಿಗೆದಾರರಿಗೆ 1 ಕೋಟಿ ರೂಪಾಯಿ ಏನು ಹಣವನ್ನು ಕೊಟ್ಟಿದ್ದೀರಿ, ಅದು ಕೇಂದ್ರ ಸರ್ಕಾರದ ನ್ಯಾಷನಲ್ ಹೈವೇಯಿಂದ ಬರುವುದಿಲ್ಲ, ಏಕೆಂದರೆ 300 ಪರ್ಸೆಂಟ್ ಹೆಚ್ಚಿಗೆ ಕೊಟ್ಟಿದ್ದರಿಂದ ಸ್ಟೇಟ್ ಗೌರ್ನಮೆಂಟ್ ಕೊಡಬಹುದೆಂದು ಮಾಡಿಕೊಂಡಿರಿ. ಕೇಬಿಗೆ ಸಂದಾಯ ಮಾಡಿರುವಂತಹ 55 ಲಕ್ಷ ರೂಪಾಯಿ ಏನಾಯಿತು? ಅದು ಹಾಗೆಯೇ ಉಳಿಯಿತು. ಸ್ವಾಮಿ, ಇದು ಮೊದಲನೆಯ ಹಂತದ ಒಂದು ಪ್ರಕರಣ. ಎರಡನೆಯ ಪ್ರಕರಣ,

ಇದೇ ಕಂಟ್ರಾಕ್ಟರ್ ಇದುವರೆಗೆ ನಾನು ವಿದ್ಯುತ್ ಕಂಬಗಳನ್ನು ಶಿಫ್ಟ್ ಮಾಡುವ ಬಗ್ಗೆ ಮಾತನಾಡಿದೆ. ಇದರ ಬಗ್ಗೆ ಫೈನಾನ್ಸ್ ಸೆಕ್ರೆಟರಿ ಎನ್‌ಕ್ವೈಯರಿ ಮಾಡಲಿಕ್ಕೆ ಬರೆದಿದ್ದರು. ಇದು ಸರಿಯಿಲ್ಲವೆಂದು ಬರೆದಿದ್ದರು. ಆ ಅವ್ಯವಹಾರಕ್ಕೆ ಸಚಿವ ಸಂಪುಟ ತನ್ನ ಒಪ್ಪಿಗೆಯನ್ನು ಕೊಟ್ಟುಬಿಟ್ಟಿತು. ಮಂತ್ರಿಮಂಡಲದ ತೀರ್ಮಾನ ಅದನ್ನು ಕೊಡುತ್ತೇನೆ. ಈ ಕಂಟ್ರಾಕ್ಟರ್‌ರಿಂದ ರೂಲ್ಸ್ ಪ್ರಕಾರ 15 ಪರ್ಸೆಂಟ್ ಟ್ಯಾಕ್ಸ್ ಕಲೆಕ್ಷನ್ ಮಾಡಬೇಕು. 1.40 ಕೋಟಿಗೆ ಎಷ್ಟಾಗುತ್ತದೆ ಟ್ಯಾಕ್ಸ್ ಅಂದರೆ 21 ಲಕ್ಷ ರೂಪಾಯಿ ಟ್ಯಾಕ್ಸ್ ವಸೂಲಿ ಮಾಡಬೇಕು. ಒಂದು ಪೈಸೆ ವಸೂಲಿ ಮಾಡಿಲ್ಲ. ಕಾನೂನು ಬಾಹಿರ ವ್ಯವಹಾರ 30ನ್ನು 300 ಎಂದು ತಿದ್ದಿದರು. ಸಚಿವ ಸಂಪುಟ ಅನುಮೋದನೆ ಕೊಟ್ಟಿತು. ಅಧಿಕಾರಿಗಳ ಎಲ್ಲಾ ಟಿಪ್ಪಣಿಯನ್ನು ಧಿಕ್ಕರಿಸಿ ಇದಾಯಿತು. ಇದು ಮೊದಲನೆಯದು. ಈಗ ಕೇಬಲ್ ಹಾಕುವ ಬಗ್ಗೆ, ರುಚಿ ಕಂಡಿರಿ, ಲಾಭ ತಿಂದಾಯಿತು.

ಈ ವ್ಯವಹಾರವನ್ನು ಇದೇ ಗುತ್ತಿಗೆದಾರರಿಗೆ ಕೊಡಲಿಕ್ಕೆ ಹೊರಟಿದ್ದೀರಿ. ಸ್ವಾಮಿ, ನಿಮ್ಮ ಸರ್ಕಾರಿ ಕಡತದಲ್ಲಿ ಬರೆದಿರುವಂತಹ ಟಿಪ್ಪಣಿಯನ್ನು ನಾನು ಓದುತ್ತೇನೆ. ಫೈಲ್ ನಂಬರ್ ನೀವು ಬರೆದುಕೊಳ್ಳಿ. ಫೈಲ್ ನಂ. 1 ಅಂಡ್ 2 ಲೋಕೋಪಯೋಗಿ ಇಲಾಖೆ 60 ಸಿಎನ್‌ಎಂ 94 ಕೇಬಲ್ ಹಾಕುವ ಕೆಲಸ ಪ್ಯಾರಾ 44ರಲ್ಲಿ ನಿಮ್ಮ ಟಿಪ್ಪಣಿ ಏನು ಹೇಳುತ್ತದೆ. ಅದು ಈ ರೀತಿ ಇದೆ. ಮಾನ್ಯ ಮುಖ್ಯಮಂತ್ರಿಯವರ ಸೂಚನೆಯ ಮೇರೆಗೆ ಮುಖ್ಯ ಇಂಜಿನಿಯರ್ ರಾಷ್ಟ್ರೀಯ ಹೆದ್ದಾರಿ, ಬೆಂಗಳೂರು ಇವರು ಗುತ್ತಿಗೆದಾರರನ್ನು ನಿಗದಿಪಡಿಸಲು ಈಗಾಗಲೇ ಕ್ರಮ ಕೈಗೊಂಡಿರುತ್ತಾರೆ. ಆದ್ದರಿಂದ ಮುಖ್ಯ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ಇವರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅನುಮತಿಯನ್ನು ಕೋರಲಾಗಿದೆ. ಸ್ವಾಮಿ, ನಾನು ಕೇಳುತ್ತೇನೆ, ಮುಖ್ಯಮಂತ್ರಿಗಳು ಇಲ್ಲಿ ಏಕೆ ಪ್ರವೇಶ ಮಾಡಿದರು? ಕಾನೂನು ಬಾಹಿರವಾದ ಕೆಲಸಕ್ಕೆ ಮುಖ್ಯಮಂತ್ರಿಗಳು ಏಕೆ ಟಿಪ್ಪಣಿಯನ್ನು ಕಳುಹಿಸಿದರು? ಇದು ಒಂದು. ಎರಡನೆಯದು, ಪ್ಯಾರಾ 66ರಲ್ಲಿ ಟಿಪ್ಪಣಿ ಅದರಲ್ಲಿ ಏನು ಹೇಳುತ್ತಾರೆ?

3.40 ಪಿ.ಎಂ

.... ಈ ಬೇಡಿಕೆಯನ್ನು ಎಂ.ಓ.ಎಸ್.ಟಿ. ಗೆ ಸಲ್ಲಿಸುವಾಗ ಸುಮಾರು ಮುನ್ನೂರು ಲಕ್ಷ ರೂಪಾಯಿಗಳ ಕಾಮಗಾರಿಗಳನ್ನು ಮೆಸರ್ಸ್ ವಿನಾಯಕ ಎಲೆಕ್ಟ್ರಿಕಲ್ ಎಂಟರ್‌ಪ್ರೈಸಸ್‌ನವರಿಗೆ ನೀಡಬೇಕೆಂಬ ಕೋರಿಕೆಯನ್ನು ಶಿಫಾರಸ್ಸು ಮಾಡುವಾಗ ಸೂಕ್ತ ನಿಯಮಗಳನ್ನು ಪಾಲಿಸಿದ್ದು ಕಂಡುಬರುತ್ತಿಲ್ಲ. ಇದಕ್ಕೆ ಕಾರಣ ಪ್ರಥಮವಾಗಿ ಈ ಕಾಮಗಾರಿ ವೆಚ್ಚವನ್ನು ಯಾರು ಭರಿಸಬೇಕು ಎಂಬುದರ ಬಗ್ಗೆ ಎಲ್ಲಿಯೂ ಸೂಚನೆ ಇರಲಿಲ್ಲ. ಇಷ್ಟು ಮೊತ್ತದ ಕಾಮಗಾರಿಯನ್ನು ಓರ್ವ ಗುತ್ತಿಗೆದಾರರಿಗೆ ನೇರವಾಗಿ ಕೊಡುವುದಕ್ಕೆ ನಿಯಮ ಇಲ್ಲ, ನಿಯಮಗಳಲ್ಲಿ ಎಲ್ಲೂ ಅವಕಾಶ ಇಲ್ಲ. ಮುಖ್ಯ

ಇಂಜಿನಿಯರ್ ಅವರ ಶಿಫಾರಸ್ಸು ನಿಯಮ ಬಾಹಿರವಾಗಿದ್ದು, ಅಂದಾಜು ಬಗ್ಗೆ ಎಲ್ಲಿಯೂ ಪ್ರಸ್ತಾವನೆ ಕಂಡುಬರುವುದಿಲ್ಲ......

69ನೇ ಟಿಪ್ಪಣಿ - ಇದು ಒಂದೇ ಪ್ಯಾರಾ.

...... ಇದರಲ್ಲಿ ರಾಜ್ಯ ಸರ್ಕಾರವೇ ಭರಿಸಬೇಕು ಎಂಬ ತೀರ್ಮಾನಕ್ಕೆ ಬರಲಾಯಿತು ಎಂದು ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಯವರ ರೆಕಾರ್ಡ್ ಆಫ್ ನೋಟ್ಸ್‌ನಿಂದ ತಿಳಿದು ಬಂದಿರುತ್ತದೆ.....

ಈ ನ್ಯಾಷನಲ್ ಹೈವೇ ರೋಡ್‌ಗೆ ಏನು ದುಡ್ಡು ಕೇಂದ್ರ ಸರ್ಕಾರದಿಂದ ಬರಬೇಕಾಗಿತ್ತು, ಕಾನೂನು ಬಾಹಿರವಾಗಿ 30 ಪರ್ಸೆಂಟ್ ಇದ್ದದ್ದು ಏನು ಅವ್ಯವಹಾರ ನಡೆಯಿತು, ಅದಕ್ಕೋಸ್ಕರ ಲೋಕೋಪಯೋಗಿ ಇಲಾಖೆಯಲ್ಲೇ ತೀರ್ಮಾನವಾಗುತ್ತದೆ. ಕಾರ್ಯದರ್ಶಿಯವರು ಟಿಪ್ಪಣಿ ಹಾಕುತ್ತಾರೆ. ರಾಜ್ಯ ಸರ್ಕಾರ ಕೊಡಬೇಕು ಎಂದು. ಈ ಹಣವನ್ನು ನಾವು ಭರಿಸಬೇಕು ಎಂದು.

ಟಿಪ್ಪಣಿ - 70

ಈ ತೀರ್ಮಾನದ ಹಿನ್ನೆಲೆಯಲ್ಲಿ ಭೂಗತ ವಿದ್ಯುತ್ ವಾಹಕಗಳನ್ನು ಹಾಕುವ ಬಗ್ಗೆ ಗುತ್ತಿಗೆಗಳನ್ನು ಕರೆಯುವಂತೆ ಮುಖ್ಯ ಇಂಜಿನಿಯರ್ ಅವರಿಗೆ ಸರ್ಕಾರವು ಸೂಚನೆಗಳನ್ನು ಅಕ್ಟೋಬರ್ 94ರಲ್ಲಿ ನೀಡಲಾಯಿತು. ಅದರಂತೆ ಮುಖ್ಯ ಇಂಜಿನಿಯರ್ ಅವರು ಗುತ್ತಿಗೆಗಳನ್ನು ಕರೆದು 20.1.95ರಲ್ಲಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸುತ್ತಾ ಇದರಲ್ಲಿ ಯಾವುದೇ ಶಿಫಾರಸ್ಸು ಇರುವುದಿಲ್ಲ...

ಈತನ್ಮಧ್ಯೆ 71 ಟಿಪ್ಪಣಿಯಲ್ಲಿ .... ಸರ್ಕಾರ ಎಂ.ಓ.ಎಸ್.ಟಿ. ಅವರಿಗೆ 408.19 ಲಕ್ಷ ರೂಪಾಯಿಗಳ ಅಂದಾಜಿಗೆ ತಾಂತ್ರಿಕ ಮಂಜೂರಾತಿ ನೀಡುವಂತೆ ಪ್ರಸ್ತಾವನೆಯನ್ನು ಸಲ್ಲಿಸಲಾಯಿತು. ಆದರೆ ಇದುವರೆಗೆ ಅಂದಾಜಿಗೆ ತಾಂತ್ರಿಕ ಮಂಜೂರಾತಿ ದೊರೆತಿರುವುದಿಲ್ಲ.

72 ಪ್ಯಾರಾ

ಮುಖ್ಯ ಇಂಜಿನಿಯವರು ಸಲ್ಲಿಸಿರುವ ವರದಿಯನ್ನು ಮುಖ್ಯ ಇಂಜಿನಿಯರ್ ಅವರೇ ಬಹಳ ನ್ಯೂನತೆಗಳನ್ನು ಗಮನಕ್ಕೆ ತಂದರು. ಈ ಗುತ್ತಿಗೆಗಳನ್ನು ಒಪ್ಪಿಕೊಳ್ಳುವ ಬಗ್ಗೆ ಯಾವುದೇ ರೀತಿಯ ಶಿಫಾರಸ್ಸುಗಳನ್ನು ಮಾಡಿರುವುದಿಲ್ಲ. ಸ್ಥೂಲವಾಗಿ ಪರಿಶೀಲಿಸಿದರೆ ಕೆಳಕಂಡ ಲೋಪದೋಷಗಳು ಕಂಡುಬರುತ್ತವೆ ... ಗುತ್ತಿಗೆಗಳು ತೀರ್ಮಾನವಾಗುವವರೆಗೆ ಎರಡನೇ ಮತ್ತು ಮೂರನೇ ಗುತ್ತಿಗೆದಾರರ ಇ.ಎಂ.ಡಿ.ಗಳನ್ನು ಹಿಂತಿರುಗಿಸುವುದು ತಪ್ಪಾಗುತ್ತದೆ. ಇದರಿಂದ ಗುತ್ತಿಗೆಗಳಲ್ಲಿನ ವಿವರಗಳು ಪಾರದರ್ಶಕವಾಗಿದೆ ಎಂಬುದನ್ನು ಹೇಳಲು ಬರುವುದಿಲ್ಲ. ಈ ಗುತ್ತಿಗೆದಾರರು ಈ ಮಟ್ಟದ ವರ್ಕ್ಸ್ ಕ್ವಾಲಿಫಿಕೇಷನ್ಸ್‌ನ್ನು ಹೊಂದಿರುವುದಿಲ್ಲ. ಪ್ರಸಕ್ತ ಮೆಸರ್ಸ್ ಯೂನಿವರ್ಸಲ್ ಕಾರ್ಪೋರೇಷನ್‌ನವರು ಲೋಕೋಪಯೋಗಿ ಇಲಾಖೆಯ ಇದೇ ರಸ್ತೆಯಲ್ಲಿ ಕಾಮಗಾರಿಗಳನ್ನು ನೇರವಾಗಿ ಮಾಡಿರುವುದಿಲ್ಲ. ಇವರು ಪವರ್ ಆಫ್ ಅಟಾರ್ನಿ ಹೊಂದಿದವರು ಆಗಿರುತ್ತಾರೆ. ಇವರಿಗೆ ವರ್ಕ್ ಕ್ವಾಲಿಫಿಕೇಷನ್ ನೀಡುವ ಬಗ್ಗೆ ಸಹ ಮುಖ್ಯ ಇಂಜಿನಿಯರ್ ಅವರಿಂದ ಯಾವುದೇ ರೀತಿಯ ಶಿಫಾರಸ್ಸು ಇರುವುದಿಲ್ಲ. ಗುತ್ತಿಗೆ ನಿಯಮಗಳ ಪ್ರಕಾರ ಪಾಲುದಾರರೂ ಸಹ ಗುತ್ತಿಗೆಗಳಲ್ಲಿ ಸಹಿ ಮಾಡಬೇಕಾಗುತ್ತದೆ. ಆದರೆ ಅದನ್ನು ಮಾಡಿರುವುದಿಲ್ಲ. ಗುತ್ತಿಗೆಗಳನ್ನು ನೀಡಿರುವುದರಲ್ಲಿ ಸರಿಯಾದ ಪರಿಪಾಠವಿಲ್ಲ.

ಈ ಹಿಂದೆ ಇವರ ಗುತ್ತಿಗೆಗೆ ಅನುಮೋದನೆ ಇಲ್ಲ. ಅನುಮೋದನೆ ಕೊಡಲು ಸಾಧ್ಯವಿಲ್ಲ.....

ಸ್ವಾಮಿ, ಕೊನೆಗೆ ನಮ್ಮ ಲೋಕೋಪಯೋಗಿ ಸಚಿವರು ಸನ್ಮಾನ್ಯ ಶಿವಾನಂದ ಕೌಜಲಗಿಯವರು ಟಿಪ್ಪಣಿಯಲ್ಲಿ ಏನು ಬರೆಯುತ್ತಾರೆ?

..... ಇದರಲ್ಲಿ ಟೆಂಡರ್ ಕರೆದಿರುವುದರಿಂದ ಹಿಡಿದು ಟೆಂಡರ್ ಅಕ್ಸಪ್ಟೆನ್ಸ್ ಆಗುವವರೆಗೆ ಎಲ್ಲವೂ ನಿಯಮಬಾಹಿರವಾದದ್ದು ಕಂಡುಬರುವುದು. ಆದಕಾರಣ ಮುಖ್ಯಮಂತ್ರಿಗಳು.... ಇಲ್ಲಿ ನಾನೇನು ಓದಿದೆ ಕಂಡಿಕೆ 66, 68, 69, 72 ಹಾಗೂ 74ನ್ನು ಗಮನಿಸಬೇಕು. ಇದರಲ್ಲಿ ಮುಖ್ಯಮಂತ್ರಿಗಳು ನಿಯಮಗಳ ಬಾಹಿರ ಕ್ರಮ ತೆಗೆದುಕೊಂಡವರ ಮೇಲೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಪರಿಶೀಲಿಸಬಹುದು. 14.9.1995 - ಶಿವಾನಂದ ಕೌಜಲಗಿಯವರು, ಮುಖ್ಯಮಂತ್ರಿಯವರಿಗೆ, ಪತ್ರ ಬರೆಯುತ್ತಾರೆ ಮತ್ತು ಅವರಿಗೆ ಫೈಲು ಹೋಗುತ್ತದೆ. ಅದನ್ನು ಮುಚ್ಚಿಟ್ಟಿದ್ದೀರಿ. ಇದುವರೆಗೆ ಕ್ರಮ ತೆಗೆದುಕೊಂಡಿಲ್ಲ. ಇದು ನಿಮ್ಮ ಸರ್ಕಾರದ ಆಡಳಿತ ವೈಖರಿ.

ಆಯಿತಾ ಸ್ವಾಮಿ, ಇದು ಕೆ.ಸ್.ಎಸ್. ಐ.ಡಿ.ಸಿ. ಬಗ್ಗೆ, ಪಿ.ಡಬ್ಲ್ಯೂ.ಡಿ. ಮಂತ್ರಿಗಳು ಇಲ್ಲಿ ಇದ್ದಾರೆ. ಇಲ್ಲಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮದಲ್ಲಿ ಕಬ್ಬಿಣ ಮತ್ತು ಉಕ್ಕು ಬೇಡಿಕೆ ಇಲ್ಲದಿದ್ದರೂ ಖರೀದಿಸಿದ್ದೀರಿ. ಇಲ್ಲಿ ಅವ್ಯವಹಾರ ನಡೆದಿರುವುದರಿಂದ ನಿಗಮಕ್ಕೆ ಒಂದೂವರೆ ಕೋಟಿ ಬಡ್ಡಿ ನಷ್ಟವಾಗಿದೆ. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮ ಕಳೆದ ಒಂದು ವರ್ಷದಲ್ಲಿ ಎಸ್.ಆರ್. ಸ್ಟೀಲ್ಸ್, ಗುಜರಾತ್ ಅವರಿಂದ ಕಬ್ಬಿಣ ಮತ್ತು ಉಕ್ಕನ್ನು ಖರೀದಿಸಿ, ಈ ಕಬ್ಬಿಣ ಮತ್ತು ಉಕ್ಕನ್ನು ಯಾವ ಕೈಗಾರಿಕೆಗಳೂ ಖರೀದಿಸದೆ ಕಳೆದ ಒಂದು ವರ್ಷದಿಂದ ಚನ್ನಸಂದ್ರ ಮಳಿಗೆಯಲ್ಲಿ ಹಾಗೆಯೇ ಉಳಿದಿದೆ. ಪಿ.ಡಬ್ಲ್ಯೂ.ಡಿ. ಮಂತ್ರಿಗಳಿಗೆ ಪುರಸೊತ್ತು ಇದ್ದರೆ ಹೋಗಿ ಬನ್ನಿ. ಇಷ್ಟೊಂದು ಪ್ರಮಾಣದಲ್ಲಿ ಕಬ್ಬಿಣ ಮತ್ತು ಉಕ್ಕನ್ನು, ಕೆ.ಎಸ್.ಎಸ್. ಐ.ಡಿ.ಸಿ. ಯಲ್ಲಿ ಬೇಡಿಕೆ ಇಲ್ಲದಿದ್ದರೂ ಸಹ ಖರೀದಿಸಲು ಕಾರಣ ಏನು? ಈ ಬಗ್ಗೆ ವಾಣಿಜ್ಯ ಇಲಾಖೆಯು ಪದೆಪದೇ ಎಚ್ಚರಿಸಿದ್ದರೂ ಸಹ ಇದನ್ನು ಖರೀದಿ ಮಾಡಿದೆ. ಈ ಸ್ಟೀಲ್‌ನ ಗುಣಮಟ್ಟ ಸರಿಯಿಲ್ಲ. ಅಳತೆ, ಅಗಲ ಸರಿಯಿಲ್ಲದಿದ್ದರೂ ಸಹ ಇದನ್ನು ಖರೀದಿಸಿ ನಷ್ಟಕ್ಕೆ ಗುರಿ ಮಾಡಿದ್ದೀರಿ. ಇದರಿಂದ ವರ್ಷಕ್ಕೆ ಇನ್ನೂರು ಲಕ್ಷ ಬಡ್ಡಿಯನ್ನು ನಿಗಮ ಬ್ಯಾಂಕಿಗೆ ಕಟ್ಟುತ್ತಿದೆ, ಎಸ್.ಆರ್. ಸ್ಟೀಲ್ಸ್‌ನಿಂದ ಖರೀದಿಸಿದ ಕಬ್ಬಿಣ ಮತ್ತು ಉಕ್ಕನ್ನು ರಿಯಾಯಿತಿ ದರದಲ್ಲಿ ಮಾರಾಟ ಮಾಡುವುದಾಗಿ ಕೆ.ಎಸ್.ಎಸ್.ಐ.ಡಿ.ಸಿ. ಘೋಷಿಸಿದ್ದರೂ ಕೂಡ ಯಾವ ಸಣ್ಣ ಕೈಗಾರಿಕೆಗಳೂ ಈ ಸರಕನ್ನು ಖರೀದಿ ಮಾಡಿಲ್ಲ. 17 ಕೋಟಿ ರೂಪಾಯಿ ಸರಕು ಇವತ್ತು ಹಾಗೆಯೇ ಬಿದ್ದಿದೆ.

ಕೇಂದ್ರ ಸರ್ಕಾರದ ಮಾಲೀಕತ್ವದ ಸ್ಟೀಲ್ ಅಥಾರಿಟಿ ಆಫ್ ಇಂಡಿಯಾದವರು ಉತ್ತಮ ಮಟ್ಟದ ಕಬ್ಬಿಣ ಮತ್ತು ಉಕ್ಕನ್ನು ಕೊಡುತ್ತಿದ್ದರೂ ಸಹ ಎಸ್.ಆರ್. ಸ್ಟೀಲ್ಸ್, ಗುಜರಾತ್‌ನಿಂದ ಖರೀದಿಸಿದ್ದರಿಂದ ಈ ನಷ್ಟವನ್ನು ಯಾರು ತುಂಬಿ ಕೊಡಬೇಕು? ಈ ವ್ಯವಹಾರದಲ್ಲಿ ನಿಗಮದ ಚೀಫ್ ಮ್ಯಾನೇಜರ್ ಎಂ.ಎಲ್. ಬಸವರಾಜ್, ಎಕ್ಸಿಕ್ಯೂಟಿವ್ ಡೈರೆಕ್ಟರ್ ಪಾರ್ಥಸಾರಥಿ ಇವರಿಬ್ಬರೂ ಶಾಮೀಲಾಗಿದ್ದಾರೆ. 2 ಕೋಟಿ 40 ಲಕ್ಷ ರೂಪಾಯಿಗಳಿಗೆ ತಿಂಗಳಿಗೆ 17 ಲಕ್ಷ ಬಡ್ಡಿ. ಇವತ್ತೂ ಸಹ ಈ ಮೆಟೀರಿಯಲ್ಸ್ ಉಪಯೋಗ ಆಗದೆ ಸ್ಟೀಲ್ ಯಾರ್ಡ್‌ನಲ್ಲಿ ಬಿದ್ದಿದೆ. 17 ಕೋಟಿಗೆ ಶೇಕಡಾ 11ರಂತೆ ಬಡ್ಡಿಯೆಂದರೂ ತಿಂಗಳಿಗೆ 17 ಲಕ್ಷ ರೂಪಾಯಿ

ಆಗುತ್ತದೆ. ಯಾರಿಗೆ ಕಮೀಷನ್ ಬಂತು? ಏತಕ್ಕೋಸ್ಕರ ಈ ವ್ಯವಹಾರ ಮಾಡಿದಿರಿ? ಯಾರ್‍ಯಾರು ಕಲ್ಕತ್ತ, ಬೊಂಬಾಯಿಗೆ ಹೋಗಿ ಆತಿಥ್ಯ ಸ್ವೀಕರಿಸಿದ್ದಾರೆ? ಎಷ್ಟು ಹಣ ಕೈ ಬದಲಾವಣೆ ಆಯಿತು? ಇದು ಹಗಲು ದರೋಡೆ ಅಲ್ಲವೇ, ಲೂಟಿ ಅಲ್ಲವೇ? ಆದರೂ ನೀವು ಅಧಿಕಾರದಲ್ಲಿ ಮುಂದುವರೆಯಬೇಕಾ ಸ್ವಾಮಿ? ಇಲ್ಲಿ ಶಾಣಪ್ಪನವರು ಇಲ್ಲವೆಂದು ಕಾಣುತ್ತದೆ. ಅವರು ಒಂದು ಮಾತನ್ನು ಹೇಳಿದ್ದಾರೆ -

"It is suffocating. I cannot work with this bloody Excise Commissioner"

ಇದು ಪತ್ರಿಕೆಯಲ್ಲಿ ಬಂದಿದೆ. ಇದು ಹೌದೋ ಅಲ್ಲವೋ ಗೊತ್ತಿಲ್ಲ. ಅವರು ಹೇಳಲಿ. ಅಲ್ಲವೆಂದರೆ ನನ್ನ ಅಭ್ಯಂತರವಿಲ್ಲ. ಇನ್ನು ಕೋಜೆಂಟ್ರಿಕ್ಸ್ ಬಗ್ಗೆ ನಾನು ಮಾತನಾಡಬೇಕು ಎಂದು ಇದ್ದೆ. ನಮ್ಮ ಉಳಿದಂಥ ಸ್ನೇಹಿತರು ಮಾತನಾಡುತ್ತಾರೆ. ತಮಗೆ ಗೊತ್ತಿದೆ, ಈ ಪರಿಸರ ಮಾಲಿನ್ಯ ಮಧ್ಯೆ ಸಹ ನಿಮ್ಮ ಪಕ್ಷದ ಒಬ್ಬ ಸಂಸತ್ ಸದಸ್ಯರೇ ನೂರು ಕೋಟಿ ರೂಪಾಯಿ ವ್ಯವಹಾರ ನಡೆದಿದೆ ಎಂದು ಆರೋಪ ಮಾಡಿರುವಂಥಾದ್ದು ಇದೆ. ಇದು ನಾಚಿಕೆಯಿಂದ ತಲೆತಗ್ಗಿಸಬೇಕಾದ ಸಂಗತಿ. ಇವತ್ತು ನೀವು ಮನಸ್ಸು ಮಾಡಿದರೆ, ಬಹುಶಃ ಈ ದುಬಾರಿ ಯೋಜನೆ, ಪರಿಸರಕ್ಕೆ ತೀವ್ರತರವಾದಂಥ ಹಾನಿಯನ್ನು ತರುವಂಥ ಈ ಕೆಲಸವನ್ನು ಎನ್.ಟಿ.ಪಿ.ಸಿ. ಯವರು 1995ರಲ್ಲೇ ಎರಡು ಸಾವಿರ ಅವಧಿಯೊಳಗೆ 2690 ಕೋಟಿ ವೆಚ್ಚದಲ್ಲಿ ಸರಿದೂಗಿಸುತ್ತೇವೆ ಎಂದು ಹೇಳಿದರೂ ಸಹ ವಿದೇಶಗಳಿಂದ ಕಲ್ಲಿದ್ದಲು, ಆಫ್ರಿಕಾ, ಆಸ್ಟ್ರೇಲಿಯಾದಿಂದ ತಂದು ಇದನ್ನು ಮಾಡುವುದಕ್ಕೆ ಏಕೆ ಹೊರಟಿದ್ದೀರೋ ಗೊತ್ತಿಲ್ಲ. ಕರಾವಳಿ ಒಂದು ಕಡೆ, ಪೂರ್ವದಲ್ಲಿ ಪಶ್ಚಿಮಘಟ್ಟ ನಡುವೆ ಇರುವಂಥ 25ರಿಂದ 45 ಕಿಲೋಮೀಟರ್ ಇರುವ ಸಣ್ಣ ಕಾರಿಡಾರ್‌ನಲ್ಲಿ ಜನಸಾಂದ್ರತೆ ಜಾಸ್ತಿ ಇದ್ದರೂ ಸಹ ಅಲ್ಲೇ ಹೊಗೆ, ಬೂದಿ, ವಿದ್ಯುತ್ ಸ್ಥಾವರ ಸ್ಥಾಪನೆ ಮಾಡುವಂಥ ಪ್ರಯತ್ನ ಏಕೆ ಮಾಡುತ್ತೀರೋ ಗೊತ್ತಿಲ್ಲ. ಬದಲಿ ವಿದ್ಯುತ್ ಯೋಜನೆಯನ್ನು ತಾವು ಮಾಡಬಹುದಿತ್ತು.

ಆನ್ ಗೋಯಿಂಗ್ ಪ್ರಾಜೆಕ್ಟ್‌ನ್ನು ಮುಂದುವರೆಸಬಹುದಾಗಿತ್ತು. ಈ ಶರಾವತಿ ಟೇಲ್‌ರೇಸ್‌ನಲ್ಲಿ 240 ಮೆಗಾವಾಟ್ಸ್, ಕಾಳಿ ಯೋಜನೆ 2ನೇ ಹಂತ, ಸರಪಾಡಿ, ವರಾಹಿ 3 ಮತ್ತು 4ನೇ ಘಟಕ ಇದಕ್ಕೆಲ್ಲಾ ಹಣ ಒದಗಿಸಿದ್ದರೆ ಬಹುಶಃ ಕೆ.ಪಿ.ಸಿ. ಯವರೇ ಮಾಡುತ್ತಿದ್ದರು. ಕೃಷ್ಣಾ ಜಲನಿಗಮ ಬಾಂಡ್‌ನಂತೆ ಪವರ್ ಬಾಂಡ್ ಬಿಡುಗಡೆ ಮಾಡಿದ್ದರೆ ಕೆ.ಪಿ.ಸಿ. ಸಮರ್ಥವಾಗಿ ಕಡಿಮೆ ದರದಲ್ಲಿ ಉತ್ಪಾದನೆ ಮಾಡಲು ರೆಡಿ ಇದ್ದರೂ ಸಹ ಇವತ್ತು ಈ ಕೆಲಸ ಮಾಡುವುದಕ್ಕೆ ಹೊರಟಿದ್ದೀರಿ. 26.7.96ರಂದು ನಾಗಾರ್ಜುನ ಪವರ್ ಕಾರ್ಪೊರೇಷನ್‌ಗೆ ಮಂಗಳೂರಿನಲ್ಲಿ ಮತ್ತೊಂದು ಥರ್ಮಲ್ ಪವರ್ ಪ್ರಾಜೆಕ್ಟ್ ಮಾಡುವುದಕ್ಕೆ ಅನುಮತಿಯನ್ನು ಕೊಡುವುದಕ್ಕೆ ಹೊರಟಿದ್ದೀರಿ ಎನ್ನುವುದು ಗೊತ್ತಿದೆ. ಬಹುಶಃ ಕೆ.ಪಿ.ಸಿ.ಗೆ ಕೊಟ್ಟರೆ ಲಾಭ ಆಗುವುದಿಲ್ಲ. ಹೊರಗಡೆ ಕೊಟ್ಟರೆ ನೂರಾರು ಕೋಟಿ ರೂಪಾಯಿ ಅದಲು ಬದಲಾಗುತ್ತದೆ ಎನ್ನತಕ್ಕಂಥ ಇಂಗಿತ ಇಟ್ಟುಕೊಂಡು ರಾಜ್ಯದ ಹಿತ ಬಿಟ್ಟು ಇದನ್ನು ಮಾಡಿದ್ದೀರಿ. ಸ್ವಾಮಿ, ಅನೇಕ ಜನ ಹಿರಿಯರು ಇದ್ದಾರೆ.

ನಾನು ಎರಡು ನಿಮಿಷದಲ್ಲಿ ಮಾತು ಮುಗಿಸುತ್ತೇನೆ. ಊಟದ ಸಮಯದಲ್ಲಿ ತಾವೆಲ್ಲರೂ ಹೋಗಿದ್ದಿರಿ. ನಾನು ಮಾಡಿದಂಥ ಆರೋಪ, ದಾಖಲೆಗಳು, ಅಂಕಿಅಂಶಗಳು ಇದರ ಬಗ್ಗೆ ಆಡಳಿತ ಪಕ್ಷದ ಕೆಲವು ಶಾಸಕರಿಗಾದರೂ ಮನದಟ್ಟಾಗಿದೆಯೆಂದು ನಾನಂದುಕೊಂಡಿದ್ದೇನೆ. ನಾನು ಕೆಲವು ಇಲಾಖೆಗಳ ಕೆಲವು ದಾಖಲೆಗಳನ್ನು ಮಾತ್ರ ತಿಳಿಸುವಂಥ ಪ್ರಯತ್ನ ಮಾಡಿದ್ದೇನೆ. ಇನ್ನೂ ನೂರಾರು ದಾಖಲೆಗಳು ಇವೆ.

ಬೇಕಾದರೆ ಕೆಲವು ಆಡಳಿತ ಪಕ್ಷದ ಶಾಸಕರ ಸಭೆಯನ್ನು ಸಾಯಂಕಾಲ ಕರೆಯಬೇಕು ಎಂದು ಇದ್ದೇನೆ. ಇನ್ನೂ ಕೆಲವರು ಕನ್ವಿನ್ಸ್ ಆಗಬೇಕು, ಈ ಸರ್ಕಾರದ ವಿರುದ್ಧ ಓಟು ಮಾಡಬೇಕು, ನಮ್ಮ ಪರವಾಗಿ ನಿಲ್ಲಬೇಕೆನ್ನುವುದಾದರೆ ನಾನು ಅವುಗಳನ್ನು ಸರ್ಕ್ಯುಲೇಟ್ ಮಾಡುತ್ತೇನೆ, ವಿವರಗಳನ್ನು ನಾನು ತಮಗೆ ಕೊಡುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ನೀವು ಕರೆಯುವ ಸಭೆಗೆ ಆಡಳಿತ ಪಕ್ಷದ ಸದಸ್ಯರು ಯಾರೂ ಬರುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾರು ಬರುತ್ತಾರೋ ನೋಡೋಣ. ನೀವು ಬರುವುದಿಲ್ಲ... ಲಾಭ ಜಾಸ್ತಿ ಇದ್ದರೆ ನೀವೆಲ್ಲಿ ಬರುತ್ತೀರಿ?

ಶ್ರೀ ಎಲ್.ಆರ್. ಶಿವರಾಮೇಗೌಡ : ನೀವೇನು ವಿಚಾರ ಎತ್ತಿದಿರಿ....

ಶ್ರೀ ಬಿ.ಎಸ್. ಯಡಿಯೂರಪ್ಪ : ಕುಳಿತುಕೊಳ್ಳಿ. ನಾನು ಈಲ್ಡ್ ಆಗಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಯಡಿಯೂರಪ್ಪ ಬಗ್ಗೆ ನನಗೆ ಬಹಳ ಗೌರವ ಇದೆ. ಅವರು ವಿರೋಧ ಪಕ್ಷದ ನಾಯಕರು. ಆಡಳಿತ ಪಕ್ಷದ ಶಾಸಕರಿಗೆ ಸಭೆ ಕರೆದರೆ ಯಾರೂ ಬರುವುದಿಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಅಧ್ಯಕ್ಷರೇ, ಈ ರಾಜ್ಯದಲ್ಲಿ ಯಾವುದೇ ಪಕ್ಷ ಆಡಳಿತಕ್ಕೆ ಬಂದರೂ ಕೂಡ, ಆ ಪಕ್ಷದ ಬೋಗಿ ನೀವು. ಇವರು ಏಕೆ ಮಾತನಾಡಬೇಕು?

(ಗೊಂದಲ)

ಉಪಾಧ್ಯಕ್ಷರು : ಶಿವರಾಮೇಗೌಡರೇ, ದಯವಿಟ್ಟು ಕುಳಿತುಕೊಳ್ಳಿ. ಯಡಿಯೂರಪ್ಪನವರೇ, ತಾವು ಮಾತನಾಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ ಇಷ್ಟೇ ವಿನಂತಿ ಮಾಡುವಂತಾದ್ದು ನನಗೆ ಈಗಲೂ ವಿಶ್ವಾಸ ಇದೆ. ರಾಜ್ಯದ ಜನತೆಯ ಹಿತ ಮಾಡುವುದಕ್ಕೋಸ್ಕರ ನಾವೆಲ್ಲಾ ಚುನಾಯಿತ ಪ್ರತಿನಿಧಿಗಳಾಗಿ ಇಲ್ಲಿ ಬಂದಿದ್ದೇವೆ. ಹತ್ತಾರು ಉದಾಹರಣೆಗಳನ್ನು, ದಾಖಲೆ ಸಹಿತ ಕೊಟ್ಟಿದ್ದೇನೆ. ಆತ್ಮಸಾಕ್ಷಿ ಎನ್ನುವುದು ಒಂದಿದೆಯೆಂದು ನಾನಾದರೂ ನಂಬಿಕೊಂಡಿದ್ದೇನೆ. ದಯಮಾಡಿ, ಮುಖ್ಯಮಂತ್ರಿಗಳು ಈ ಎಲ್ಲಾ ವಿವರಗಳನ್ನೂ ಕೇಳಿದ ಮೇಲೆ, ಒಂದು ಕ್ಷಣ, ನಮ್ಮ ಭವಿಷ್ಯದ ದೃಷ್ಟಿಯಿಂದ, ರಾಜ್ಯದ ಭವಿಷ್ಯದ ದೃಷ್ಟಿಯಿಂದ, ನಿಮ್ಮ ಸರ್ಕಾರದ ಜೊತೆಯಲ್ಲಿ ಇರುವಂಥ ಪರಿಸ್ಥಿತಿಯಲ್ಲಿ ನಾವಿಲ್ಲವೆಂದು ಹೇಳಿ, ಒಂದು ರೀತಿ ಏನಾದರೂ ಸೀಕ್ರೆಟ್ ವೋಟಿಂಗಿಗೆ, ನೀವೇ ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡಿ, ಈ ರಾಜ್ಯದ ಜನರಿಗೆ, ಶನಿ ಎನ್ನುವಂಥ ' ರೀತಿಯಲ್ಲಿ ಕಾಡುತ್ತಿರತಕ್ಕಂಥ ಈ ಸರ್ಕಾರವನ್ನು ಉರುಳಿಸುವುದಕ್ಕೆ ತಾವೆಲ್ಲರೂ ಸಹಕಾರ ನೀಡುತ್ತೀರಿ ಎಂದು ನಾನು ಅಂದುಕೊಂಡಿದ್ದೇನೆ. ಇಲ್ಲಿ ನನ್ನ ಕರ್ತವ್ಯವನ್ನು ಮಾಡಿದ್ದೇನೆ. ನಾನು ಒಂದು ಮಾತನ್ನು ಹೇಳುತ್ತೇನೆ. ದೇವರನ್ನು ನಾನು ನಂಬಿದ್ದೇನೆ. ನೀವೇನಾದರೂ ನಿಮ್ಮ ಆತ್ಮಸಾಕ್ಷಿಯಂತೆ ನಡೆದುಕೊಳ್ಳದಿದ್ದರೆ ದೇವರೂ ಸಹ ನಿಮ್ಮನ್ನು ಕ್ಷಮಿಸುವುದಿಲ್ಲ. ಮುಂದಿ ಪೀಳಿಗೆ ಕ್ಷಮಿಸುವುದಿಲ್ಲ. ಈ ರೀತಿಯ ಪಾಪ ಕೃತ್ಯ, ಸ್ವಾರ್ಥಕ್ಕಾಗಿ ಅಧಿಕಾರ

ದುರುಪಯೋಗ ಮಾಡಿಕೊಂಡು, ಲೂಟಿ ಮಾಡುವಂಥ, ಹಗಲು ದರೋಡೆ ಮಾಡುವಂಥ ನೀವು ಒಂದು ಕ್ಷಣವೂ ಅಧಿಕಾರದಲ್ಲಿ ಮುಂದುವರಿಯುವ ನೈತಿಕ ಹಕ್ಕಿಲ್ಲವೆಂದು ಹೇಳುತ್ತೇನೆ. ಮಾನ್ಯ ಉಪಾಧ್ಯಕ್ಷರೇ, ತಾವು ಇಷ್ಟು ಸಮಯವನ್ನು ಕೊಟ್ಟಿದ್ದೀರಿ. ತಮಗೂ ಮನಸ್ಸಿಗೆ ನೋವಾಗಿದೆ, ನನಗೆ ಗೊತ್ತಿದೆ. ಇಷ್ಟೆಲ್ಲಾ ನಡೆದುಹೋಗಿದೆಯೆಂದು ತಾವೂ ನೊಂದಿದ್ದೀರಿ. ಆದರೆ ಆ ಸ್ಥಾನದಲ್ಲಿ ಕುಳಿತಾಗ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕಾಗುವುದಿಲ್ಲ ಎನ್ನುವಂಥ ಅರಿವು ನನಗಿದೆ. ಆದ್ದರಿಂದ, ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : 4 ಗಂಟೆ ಮಾತನಾಡಿ, ಏನೂ ಹೇಳಲೇ ಇಲ್ಲವಲ್ಲಾ. ವಿರೋಧ ಪಕ್ಷದ ನಾಯಕರ ಭಾಷಣದಲ್ಲಿ ಏನೂ ಇಲ್ಲ, ಬುಡುಬುಡಿಕೆ

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಜವಾಬ್ದಾರಿ ಉಪ ಮುಖ್ಯಮಂತ್ರಿಗಳು, ಎಚ್ಚರವಾಗಿದ್ದಾರೆಂದು ನಾವು ನಂಬಿದ್ದೆವು. ಆದರೆ, ಅವರು ಮಲಗಿದ್ದಾರೆ. ನೀವು ಪ್ರಜಾಪ್ರಭುತ್ವವನ್ನು ಖಂಡಿತವಾಗಿ ಕೊಲೆ ಮಾಡಿದ್ದೀರಿ.

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡಲಿ.

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಸನ್ಮಾನ್ಯ ಉಪಾಧ್ಯಕ್ಷರೇ, ಇವತ್ತು ಎಲ್ಲಾ ವಿರೋಧ ಪಕ್ಷಗಳ ಶಾಸಕರೂ ಸೇರಿ, ಈ ಒಂದು ಅವಿಶ್ವಾಸ ನಿರ್ಣಯವನ್ನು ಮೂವ್ ಮಾಡಿದ್ದೇವೆ. ವಿರೋಧ ಪಕ್ಷದ ನಾಯಕರು ಈಗಾಗಲೇ ಸಾಕಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ಒಂದು ಅವಿಶ್ವಾಸ ಪ್ರಸ್ತಾಪವನ್ನು ಮಂಡಿಸತಕ್ಕಂಥ ಕಾರಣವಾದರೂ ಏಕೆ ಬಂತು ಅಥವಾ ಇದಕ್ಕೆ ಏನು ಕಾರಣ ಎನ್ನತಕ್ಕಂಥಾದ್ದನ್ನು ನಾನು ಸ್ಪಷ್ಟವಾಗಿ ಹೇಳಬೇಕಾದರೆ, ಇದಕ್ಕೆ ಮುಖ್ಯವಾಗಿ ಆಲಮಟ್ಟಿ ಡ್ಯಾಮಿನ ಎತ್ತರವನ್ನು ಕಡಿಮೆ ಮಾಡಬೇಕೆಂದು ಹೇಳಿ, ಏನು ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಮತ್ತು ಅಲ್ಲಿನ ಶಾಸಕರು ಹೋರಾಟವನ್ನು ಪ್ರಾರಂಭ ಮಾಡಿದರು. ಅದಕ್ಕೆ ಸ್ಪಂಧಿಸತಕ್ಕಂಥ ಕೆಲಸವನ್ನು ಕರ್ನಾಟಕ ಸರ್ಕಾರ ಇವತ್ತು ಮಾಡಿದೆ. ಆ ಒಂದು ಸಂದರ್ಭದಲ್ಲಿ ನಾವು ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕೇಳಿಕೊಂಡಾಗ, ಬಹುಶಃ ಆಡಳಿತ ಪಕ್ಷದವರು ಒಪ್ಪಲಿಲ್ಲ. ಏಕೆಂದರೆ, ಅವರಿಗೆ ಈ ರಾಜ್ಯದಲ್ಲಿ ಪ್ರಧಾನ ಮಂತ್ರಿಗಳು ಬಂದು,

ಅವರು ಎಲ್ಲಾ ಜಿಲ್ಲೆಗಳಿಗೆ ಹೋಗಿ, ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಏನು ಪ್ರವಾಸ ಮಾಡಿದರು, ಆ ಪ್ರವಾಸದಲ್ಲಿ ಅವರಿಗೆ ಸಿಕ್ಕಿದಂಥ ಬೆಂಬಲವನ್ನು ನೋಡಿಕೊಂಡ ಮೇಲೆ, ನಾವೂ ಕೂಡ ಅದೇ ರೀತಿಯಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಹೇಳಿ, ಅವರೂ ಕೂಡ ಗುಲ್ಬರ್ಗಾದಿಂದ ಪ್ರಾರಂಭ ಮಾಡಿಕೊಂಡು ಹಾಸನಕ್ಕೆ ಮುಕ್ತಾಯ ಮಾಡಿದರು. ಆ ಒಂದು ಸಂದರ್ಭದಲ್ಲಿ ಈ ಒಂದು ಚರ್ಚೆಗೆ ಅವಕಾಶ ಸಿಕ್ಕಲಿಲ್ಲ. ಕೊನೆಯ ಅಸ್ತ್ರವಾಗಿ, ನಾವೆಲ್ಲಾ ಶಾಸಕರೂ ಸೇರಿ, ವಿರೋಧಪಕ್ಷದ ನಾಯಕರೂ ಸೇರಿಕೊಂಡು ಈ ಅವಿಶ್ವಾಸ ಪ್ರಸ್ತಾಪವನ್ನು ಇವತ್ತು ಮಂಡಿಸಿದ್ದೇವೆ. ಇದು ಒಂದು. ಇದರ ಜೊತೆಯಲ್ಲಿ ಇನ್ನೂ ಅನೇಕ ವಿಷಯಗಳನ್ನೂ

ಕೂಡ ನಾವು ಪ್ರಸ್ತಾಪ ಮಾಡತಕ್ಕಂಥಾದ್ದು ಇದೆ. ಆದರೆ ಒಂದು ದುಃಖದ ಸಂಗತಿ ಏನೆಂದರೆ, ಆಗಸ್ಟ್ 15, ಸ್ವಾತಂತ್ರ್ಯ ದಿನ ಆಚರಣೆ ಮಾಡುವಾಗ ಮಾನ್ಯ ಮುಖ್ಯಮಂತ್ರಿಗಳಿಗೆ ದೂರದರ್ಶನದವರು ಮತ್ತು ಕೆಲವು ಪತ್ರಿಕಾ ಮಿತ್ರರು ಒಂದು ಮಾತನ್ನು ಕೇಳಿದರು.

ನಿಮ್ಮ ವಿರುದ್ಧ ಅವಿಶ್ವಾಸ ನಿರ್ಣಯವನ್ನು ವಿರೋಧ ಪಕ್ಷದವರೆಲ್ಲರೂ ಸೇರಿ ತಂದಿದ್ದಾರೆ, ಇದಕ್ಕೆ ತಾವೇನು ಹೇಳುತ್ತೀರಿ ಎಂದು ಅವರು ಕೇಳಿದರು. ಇದಕ್ಕೆ ಮುಖ್ಯಮಂತ್ರಿಯವರು ಯಾವ ದಾಟಿಯಲ್ಲಿ ಉತ್ತರವನ್ನು ಕೊಟ್ಟರೆಂದರೆ, ಈ ಸದನದಲ್ಲಿ ಸುಮಾರು 35-40 ದಿವಸ ಏನು ಚರ್ಚೆ ನಡೆಯಿತು ಆ ಯಾವ ಚರ್ಚೆಯೂ ಕೂಡ ಒಳ್ಳೆಯ ಚರ್ಚೆ ಇರಲಿಲ್ಲ. ಅವರು ಸದನದ ಕಾಲಹರಣ ಮಾಡಿದರು. ಪುನಃ ಅದನ್ನೇ ರಿಪೀಟ್ ಮಾಡುವುದಕ್ಕೋಸ್ಕರ ಈ ಒಂದು ಅವಿಶ್ವಾಸ ಪ್ರಸ್ತಾಪವನ್ನು ಸದನದ ಮುಂದೆ ತಂದಿದ್ದಾರೆ. ಇದೆಲ್ಲವೂ ಕೂಡ futile exercise, ಇದರಲ್ಲಿ ಯಾವ ಅರ್ಥವೂ ಇಲ್ಲ, ಯಾವ ಗಂಧವೂ ಇಲ್ಲ. ಅಂತಹ ಒಂದು ಅವಿಶ್ವಾಸ ನಿರ್ಣಯವನ್ನು ಅವರು ಮಂಡಿಸಿದ್ದಾರೆ. ಅದಕ್ಕೆ ಹೇಗೆ ಉತ್ತರವನ್ನು ಕೊಡಬೇಕೋ, ಅದನ್ನು ನಾನು ಕೊಡುತ್ತೇನೆ ಎನ್ನತಕ್ಕಂಥ ಮಾತನ್ನು ಅವರು ಹೇಳಿದರು.

ಅಂದರೆ ಅವರ ದೃಷ್ಟಿಯಲ್ಲಿ ಈ ಸದನದಲ್ಲಿ ನಡೆಯತಕ್ಕ ಎಲ್ಲಾ ಚರ್ಚೆಯೂ ಕೂಡ ಸರಿಯಿಲ್ಲ ಅಥವಾ ಸರಿಹೋಗಲಿಲ್ಲ ಎನ್ನತಕ್ಕಂಥಾದ್ದು ಅವರ ಅಭಿಪ್ರಾಯವಿದ್ದರೆ, ನಾನು ಒಂದು ಮಾತನ್ನು ಅವರಿಗೆ ಕೇಳಬೇಕಾಗುತ್ತದೆ. ಈ ಸದನದಲ್ಲಿ ನಾವು ಚರ್ಚೆ ಮಾಡಿದ್ದು ಏನು? ಈ 35-40 ದಿವಸದಲ್ಲಿ, ವಿಶೇಷವಾಗಿ, ವಿದ್ಯುತ್ ದರವನ್ನು ಏಕಾಏಕಿ ಪಂಪ್ಸೆಟ್ ಮೇಲೆ ಮತ್ತು ಗೃಹಬಳಕೆದಾರರಿಗೆ ಏರಿಸಿದರು. ಗೃಹಬಳಕೆದಾರರಿಗೆ 30 ಪರ್ಸೆಂಟ್, ಅದೇ ರೀತಿಯಾಗಿ ಒಂದು ಹೆಚ್.ಪಿ.ಗೆ 300 ರೂಪಾಯಿಗಳನ್ನು ನಿಗದಿಪಡಿಸಿದ್ದು, ಇದರಿಂದ ಜನ ಏನು ರೊಚ್ಚಿಗೆದ್ದಿದ್ದರೋ, ಆ ಒಂದು ಸಮಸ್ಯೆಯನ್ನು ತೆಗೆದುಕೊಂಡು ಬಂದು ಈ ಸದನದಲ್ಲಿ ನಾವು ಚರ್ಚೆ ಮಾಡಿದ್ದೇವೆ. ಅಂದರೆ, ಇದು ಸರಿ ಅಲ್ಲವೇ? ನಾನು ಕೇಳುತ್ತೇನೆ. ಇಂಥ ವಿಷಯಗಳ ಬಗ್ಗೆ ಚರ್ಚೆಯಾಗಿದ್ದು, ಅದು ಸರಿಯಿಲ್ಲವೆಂದು ಹೇಳಿದರೆ, ಅವರ ದೃಷ್ಟಿಯಲ್ಲಿ ಇನ್ನು ಯಾವ ಚರ್ಚೆ ಸರಿ? ಎರಡನೆಯದಾಗಿ, ಈ ಎಂ.ಎಲ್.ಸಿ. ಚುನಾವಣೆಗೆ, ಗ್ರಾಮ ಪಂಚಾಯಿತಿ ಸದಸ್ಯರನ್ನೂ ಮತದಾರರನ್ನಾಗಿ ಮಾಡಬೇಕೆಂದು ಹೋರಾಟ ಮಾಡಿ ಧರಣ ಮಾಡಿದೆವು. ಪ್ರಜಾಪ್ರಭುತ್ವದಲ್ಲಿ ಈ ಒಂದು ತತ್ವಕ್ಕೆ ಅಂಟಿಕೊಂಡಂಥ ಜನ, ನಾವೆಲ್ಲರೂ ಕೂಡ ಮತ್ತು ತಾವೂ ಕೂಡ ಡೀ-ಸೆಂಟ್ರಲೈಸೇಷನ್ ಆಫ್ ಪವರ್, ನಾವೇ ಮಾಡಿದ್ದೇವೆ, ನಮ್ಮ ಕಾಲದಲ್ಲೇ ಜಿಲ್ಲಾಪರಿಷತ್, ಮಂಡಲ್‌ಪಂಚಾಯ್ತಿ ಅಸ್ತಿತ್ವದಲ್ಲಿ ಬಂದಿದೆ. ಇದಕ್ಕೆ ನಾವೇ ಕಾರಣಕರ್ತರು ಎಂದು ಹೇಳಿ ಬೆನ್ನ ಚಪ್ಪರಿಸಿಕೊಳ್ಳತಕ್ಕ ಜನರು ತಾವು. ನಾವು ಆ ಗ್ರಾಮ ಪಂಚಾಯ್ತಿ ಸದಸ್ಯರನ್ನು ಮತದಾರರನ್ನಾಗಿ ಮಾಡಿ ಎಂದು ಹೋರಾಟ ಮಾಡಿದ್ದೇವೆ. ಅದು ಜನಪರ ಕಾರ್ಯಕ್ರಮ ಅಥವಾ ಅದರಿಂದ ಏನಾದರೂ ಸದನದ ಸಮಯ ಹಾಳಾಯಿತೇ?

ಮೂರನೆಯದಾಗಿ, ಬೆಂಗಳೂರು ನಗರದಲ್ಲಿ ಹಾಗೂ ರಾಜ್ಯದಲ್ಲಾ ಕಡೆ ಅಲ್ಲದಿದ್ದರೂ ಕೆಲವು ಕಡೆ ಲಾಕಪ್ ಡೆತ್ಸ್, ಕೆಲವು ಕಡೆ ದರೋಡೆಗಳು, ಕೆಲವು ಕಡೆ ಖೂನಿಗಳು. ಹೋದ ಸಲ ನಾವು ಪೋಲೀಸ್ ಇಲಾಖೆ ಮೇಲೆ ಮತ್ತು ಸಮಾಜ ಕಲ್ಯಾಣ ಇಲಾಖೆ ಮೇಲೆ ಮಾತನಾಡುವಾಗ ಸಾಕಷ್ಟು ಅಂಕಿಅಂಶಗಳನ್ನು ಕೊಟ್ಟು

ಮಾತನಾಡಿದ್ದಾರೆ. ಎಷ್ಟು ಖೂನಿಗಳು ಅದವು ಎಷ್ಟು ದರೋಡೆಗಳು ಅದವು ಯಾವ ಯಾವ ರೀತಿಯಲ್ಲಿ ಬೆಂಗಳೂರಿನಲ್ಲಿ ನಡೆದಿದೆ ಮತ್ತು ಹೊರಗಡೆ ಕೂಡ ಇದು ಯಾವ ರೀತಿಯಾಗಿ ಆಗಿದೆ ಎನ್ನುವುದನ್ನು ಪ್ರಸ್ತಾಪ ಮಾಡಿದೆವು ಸರ್ಕಾರಕ್ಕೆ ತಿಳಿ ಹೇಳತಕ್ಕಂಥಾದ್ದು ತಪ್ಪೇ ಅಥವಾ ಅದು ಸರಿಯಲ್ಲವೇ ಅದರಿಂದ ಸದನದ ಸಮಯ ವ್ಯರ್ಥವಾಯಿತೇ ಎನ್ನತಕ್ಕಂಥ ಮಾತನ್ನು ಅವರು ಹೇಳಬೇಕು. ನಾಲ್ಕನೆಯದಾಗಿ ಅನೇಕ ಜಮೀನುಗಳಿಗೆ ಡೀನೋಟಿಫೈ ಮಾಡಿದ್ದಾರೆ. ಈಗಾಗಲೇ ಅದರ ಪಟ್ಟಿಯನ್ನು ಅವರು ಹೇಳಿದ್ದಾರೆ. ಸರ್ಕಾರಿ ಜಮೀನುಗಳನ್ನು ಕಬಳಿಸಿಕೊಳ್ಳತಕ್ಕಂಥ ಜನಗಳಿಗೆ ಪ್ರೋತ್ಸಾಹ ಕೊಟ್ಟಿದ್ದಾರೆ ಎನ್ನುವುದೂ ಕೂಡ ಇವತ್ತು ಸದನದಲ್ಲಿ ಬಂದಿದೆ ಮತ್ತು ದಾಖಲೆಯನ್ನು ಸಹ ಕೊಟ್ಟಿದ್ದಾರೆ. ಇದರ ಬಗ್ಗೆ ನಾವು ಚರ್ಚೆ ಮಾಡಿದ್ದೇವೆ. ಅದು ಸರಿಯಲ್ಲವೇ? ಅದು ವ್ಯರ್ಥ ಚರ್ಚೆಯೇ? 5ನೇಯದಾಗಿ ಮಾನ್ಯ ಪ್ರಧಾನ ಮಂತ್ರಿಗಳು ಅವರ ಹೆಸರನ್ನು ತೆಗೆದುಕೊಳ್ಳಬಾರದು ಅಂದರೂ ದುರ್ದೈವದಿಂದ ಏನಾಗಿದೆ ಅಂದರೆ ಅವರು ಇಲ್ಲಿ ಮುಖ್ಯಮಂತ್ರಿಗಳಾಗಿದ್ದರು. ಅವರು ಈಗ ಪ್ರಧಾನ ಮಂತ್ರಿಗಳಾಗಿದ್ದಾರೆ. ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಅವರು ಹೋಗುವಾಗ ತರಾತುರಿಯಲ್ಲಿ ಇಲ್ಲೀಗಲ್ ಅಪಾಯಿಂಟ್‌ಮೆಂಟ್ಸ್ ಮಾಡಿ ಯಾವುದೇ ರೋಸ್ಟರ್ ಫಾಲೋ ಮಾಡದೇ ಜಯದೇವ ಕಾರ್ಡಿಯಾಲಜಿ ಇನ್‌ಸ್ಟಿಟ್ಯೂಟ್ ಇರಬಹುದು ಅಥವಾ ಸೆಕ್ರೆಟರಿಯೇಟ್‌ನಲ್ಲಿ ಕೂಡ ಇಲ್ಲೀಗಲ್ ಅಪಾಯಿಂಟ್‌ಮೆಂಟ್ಸ್‌ನ್ನು ಮಾಡಿ ಸುಮಾರು 300ಕ್ಕಿಂತಲೂ ಹೆಚ್ಚು ಸಿಬ್ಬಂದಿಗಳನ್ನು ಕನ್‌ಫರ್ಮ್ ಮಾಡಿದ್ದಾರೆ. ಅದಕ್ಕೂ ಸಹ ಯಾವ ರೋಸ್ಟರ್ ಇಲ್ಲ. ಅದರ ಬಗ್ಗೆ ಚರ್ಚೆ ಮಾಡತಕ್ಕಂಥಾದ್ದು ತಪ್ಪೇ? 77ನೇ ತಿದ್ದುಪಡಿ ಆರ್ಟಿಕಲ್ 16(4) ಎರ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ನೀವು ಮೀಸಲಾತಿಯನ್ನು ಕೊಡಿ ಎಂದು ಕೇಳಿ ಹೋರಾಟ ಮಾಡಿ ಚರ್ಚೆ ಮಾಡಿ ವಾಕ್ ಔಟ್ ಮಾಡಿದ್ದು ತಪ್ಪೇ? ಅದೂ ಅಲ್ಲದೇ ಹೇಳದೇ ಕೇಳದೇ ತಾವು ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೇ ಕಾವೇರಿ ಜಲಾಶಯದಿಂದ 5 ಟಿ.ಎಂ.ಸಿ. ನೀರನ್ನು ಬಿಟ್ಟುಬಿಟ್ಟಿರಿ.

ಅದರ ಬಗ್ಗೆ ಇಲ್ಲಿ ಚರ್ಚೆ ಆಯಿತು. ಅದು ವ್ಯರ್ಥ ಚರ್ಚೆಯೇ? ಆಮೇಲೆ ರಾಜ್ಯದಲ್ಲಿ ರೈತರು ಲಕ್ಷಾಂತರ ಟನ್ ಕಬ್ಬನ್ನು ಬೆಳೆದು ಅವರು ಇಡೀ ತಮ್ಮ ಸರ್ವಸ್ವವನ್ನು ಅದರಲ್ಲಿ ಹಾಕಿ ಬೆಳೆಸಿದಂಥ ಕಬ್ಬನ್ನು ಕ್ರಷ್ ಮಾಡುವುದಕ್ಕೆ ತಾವು ಯಾವುದೇ ಅವಕಾಶವನ್ನು ಮಾಡಿಕೊಡದೇ ಅವರಿಗೆ ಯಾವುದೇ ಪರಿಹಾರವನ್ನು ಕೊಡದೇ ಅವರ ಕಡೆ ಯಾವುದೇ ನಿಗಾವಹಿಸದೇ ಅವರ ಬಗ್ಗೆ ಇಲ್ಲಿ ಚರ್ಚೆ ಆಯಿತು ಸಾಕಷ್ಟು ಸದಸ್ಯರು ಅದರ ಮೇಲೆ ಬೆಳಕು ಚೆಲ್ಲಿದರು. ಆ ಚರ್ಚೆ ಜನಪರ ಇರಲಿಲ್ಲವೇ? ಆ ಚರ್ಚೆ ರೈತರ ಪರ ಇರಲಿಲ್ಲವೇ? ಆ ಚರ್ಚೆ ಸಾರ್ವಜನಿಕರಿಗೆ ಉಪಯೋಗವಾಗುವಂತಹ ಚರ್ಚೆ ಆಗಿರಲಿಲ್ಲವೇ ಎನ್ನತಕ್ಕಂಥ ಮಾತನ್ನು ನಾನು ಕೇಳುತ್ತಿದ್ದೇನೆ.

ಅನೇಕ ಕಡೆ ಆಡಳಿತ ಪಕ್ಷದ ಸದಸ್ಯರು ಪೋಲೀಸರ ಬೆಂಬಲದಿಂದ ಅಲ್ಲಿರತಕ್ಕಂಥ ಪಕ್ಷದ ಕಾರ್ಯಕರ್ತರು ತಮ್ಮ ಪಕ್ಷದ ಒಂದು ಆಧಾರದ ಮೇಲೆ ಇವರು ಕಾಂಗ್ರೆಸ್ಸ್ ಇವರು ಬಿ.ಜೆ.ಪಿ. ಇವರು ಇಂಡಿಪೆಂಡೆಂಟ್ ಎಂದು ಹೇಳಿ ಅವರ ಮೇಲೆ ಸೇಡು ತೆಗೆದುಕೊಳ್ಳತಕ್ಕಂಥ ಪ್ರಯತ್ನವನ್ನು ಅನೇಕ ತಾಲ್ಲೂಕುಗಳಲ್ಲಿ ಜಿಲ್ಲೆಗಳಲ್ಲಿ ನಡೆದಿದೆ. ಅದರ ಬಗ್ಗೆ ಪ್ರಸ್ತಾಪ ಮಾಡಿದ್ದು ತಪ್ಪೇ? ಅದು ಫ್ಯೂಟಲ್ ಎಕ್ಸರ್‌ಸೈಜ್ ಆಗುತ್ತದೆಯೇ? ಆಮೇಲೆ ತುಂಗಭದ್ರ ಎಡದಂಡೆ ನಾರಾಯಣಪುರ ಲೆಫ್ಟ್ ಬ್ಯಾಂಕ್ ಕೆನಾಲ್ ಇವೆರಡೂ ಬ್ರೀಚ್ ಆದವು. ತಾವು ಕೊಟ್ಟಂತಹ ಮಾತನ್ನು ಉಳಿಸಿಕೊಳ್ಳಲಿಲ್ಲ. ಯಾವ ರೀತಿಯಾಗಿ ಆ ಜನರಿಗೆ ಸಹಾಯ ಮಾಡಬೇಕಾಗಿತ್ತೋ ಅದನ್ನು ಮಾಡಲಿಲ್ಲ.

ಅದರ ಬಗ್ಗೆ ಈ ಸದನದಲ್ಲಿ ಚರ್ಚೆ ಆಯಿತು ಅದು ಸರಿಯಲ್ಲವೇ? ಅದು ಏನು ಕಾನೂನು ವಿರುದ್ಧವೇ? ಅದು ಏನು ಟೊಳ್ಳು ಭಾಷಣವೇ? ಅದು ಏನು ನಾವು ಸುಮ್ಮನೆ ಉಡಾಫೆಗೋಸ್ಕರ ಹೇಳಿದ್ದಾರೆ. ಎಲ್ಲವೂ ಕೂಡ ಜನಪರ ಇರತಕ್ಕಂಥಾದ್ದು ಜನ ಹಿತಕ್ಕೆ ಸಂಬಂಧಪಟ್ಟಿದ್ದುದು. ಜನರ ಸಮಸ್ಯೆಗಳಿಗೆ ಸ್ಪಂದಿಸಬೇಕು ಎಂದು ಹೇಳಿ ಚರ್ಚೆ ಮಾಡಿದ್ದನ್ನು ಬಹಳ ಲಘುವಾಗಿ ಅಂದಿನ ದಿವಸ ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿದರು.

ಇನ್ನೊಂದು ಏನೆಂದರೆ ಆಡಳಿತದಲ್ಲಿ ನ್ಯೂನತೆ ಇರತಕ್ಕಂಥ ಸರ್ಕಾರ ತನ್ನ ಕರ್ತವ್ಯವನ್ನು ಮಾಡದೇ ಕೇವಲ ವಿರೋಧ ಪಕ್ಷದವರನ್ನು ಟೀಕಿಸಿಕೊಂಡು ನೀವು ಹೀಗೆ ಮಾಡಿದ್ದೀರಿ ನೀವು ಹಾಗೆ ಮಾಡಿದ್ದೀರಿ ಎಂದು ಹೇಳುವುದನ್ನು ನಾವು ಎಷ್ಟೋ ಸಾರಿ ನೋಡಿದ್ದೇವೆ. ಆದರೆ ನಾವು ತಪ್ಪು ಮಾಡುತ್ತಿದ್ದೇವೆ. ಅದನ್ನು ಹೇಗೆ ಸರಿಪಡಿಸಿಕೊಳ್ಳಬೇಕು ಎನ್ನತಕ್ಕಂಥಾದ್ದು ಅವರು ಎಂದೂ ಕೂಡಾ ಒಪ್ಪಿಕೊಂಡಿಲ್ಲ. ನಿಮ್ಮ ಕಾಲದಲ್ಲಿ ಏನಾಯಿತು ಅವರ ಕಾಲದಲ್ಲಿ ಏನಾಯಿತು ಅದನ್ನು ನೋಡಿದ್ದೇವೆಂದು ಹೇಳುವುದು. ಅದು ಅಲ್ಲ ಉತ್ತರ ಕೊಡತಕ್ಕಂಥಾದ್ದು. ನೀವು ಏನು ಮಾಡುತ್ತೀರಿ. ತಾವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ. ನೀವು ಅಧಿಕಾರಕ್ಕೆ ಬಂದ ಮೇಲೆ ಏನು ಕೆಲಸವನ್ನು ಮಾಡುತ್ತಿದ್ದೀರಿ.

ಅದರ ಬಗ್ಗೆ ತಾವು ಸ್ಪಂದಿಸಬೇಕೇ ಹೊರತಾಗಿ ಹೇಳಬೇಕೆ ಹೊರತು ಅದು ಬಿಟ್ಟು ಹಿಂದೆ ಇದ್ದ ಲೋಪದೋಷಗಳನ್ನು ತೆಗೆದುಕೊಂಡು ಡಿಫೆಂಡ್ ಮಾಡಿಕೊಳ್ಳುವುದು ಸರಿಯೇ? ಅಂದರೆ ನಾವು ತಪ್ಪು ಮಾಡಿದ್ದೇವೆ. ನೀವು ತಪ್ಪು ಮಾಡಬೇಕೆಂದೇನು? ಹಾಗೇನಾದರೂ ಕೇಳಿಕೊಂಡು ನಿಮ್ಮ ಚುನಾವಣೆ ಪ್ರಣಾಳಿಕೆಯಲ್ಲಿ ಅಧಿಕಾರಕ್ಕೆ ಬಂದಿದ್ದೀರಾ? ಏಕೆಂದರೆ ಅವರು ತಪ್ಪು ಮಾಡಿದ್ದಾರೆ ಇನ್ನು ಮುಂದೆ ನಮಗೆ ಆರಿಸಿ ಕಳುಹಿಸಿದ್ದರೆ ನಾವು ಕೂಡ ತಪ್ಪು ಮಾಡುತ್ತೇವೆಂದು ಹೇಳಿಕೊಂಡು ಬಂದಿದ್ದರೆ ನಾನು ಒಪ್ಪಿಕೊಳ್ಳುತ್ತೇನೆ. ನೀವು ಇಂತಹ ಸಣ್ಣಪುಟ್ಟ ಮಾತುಗಳನ್ನು ನಿಮ್ಮಲ್ಲಿ ಇಟ್ಟುಕೊಂಡು ಇವತ್ತು ವಿರೋಧಪಕ್ಷದವರು ಕಾಲಹರಣ ಮಾಡುತ್ತಿದ್ದಾರೆ. ಅವರು ಈ ಸದನದ ಸಮಯವನ್ನು ವ್ಯರ್ಥ ಮಾಡುತ್ತಿದ್ದಾರೆ ಎನ್ನತಕ್ಕಂಥ ಭಾವನೆ ಬರುವಂತಹ ರೀತಿಯಲ್ಲಿ ತಾವು ಇಂಟರ್‌ವ್ಯೂಗೆ 14ನೇ ತಾರೀಖು ರಾತ್ರಿ ದೂರದರ್ಶನಕ್ಕೂ ಕೊಟ್ಟಿರಿ; ಪತ್ರಿಕೆಯಲ್ಲಿಯೂ ಹೇಳಿದಿರಿ. ಆಮೇಲೆ ಡೆಲ್ಲಿಯಲ್ಲಿಯೂ ಸಹ ಕೇಳಿದಾಗ ತಾವು ಇದೇ ರೀತಿಯಾದ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದಿರಿ. ಇದು ತಮಗೆ ಶೋಭೆ ತರತಕ್ಕಂಥಾದ್ದು ಅಲ್ಲ. ಏಕೆಂದರೆ ಯಾವ ಮಾತು ತಮಗೆ ಸರಿ ಅನಿಸುವುದಿಲ್ಲ ಅದಕ್ಕೆ ನಾನು ಒಪ್ಪುವುದಿಲ್ಲ ಎಂದು ಹೇಳಿ.

ಆದರೆ ವಿರೋಧಪಕ್ಷದವರು ಎಲ್ಲರೂ ಕೂಡ ಜನರ ಪರವಾಗಿ ಅಥವಾ ಜನತೆಯ ಪರವಾಗಿ ರೈತರ ಪರವಾಗಿ ಕಾರ್ಮಿಕರ ಪರವಾಗಿ ನೀರಾವರಿ ಬಗ್ಗೆ ವಿದ್ಯುಚ್ಛಕ್ತಿ ಬಗ್ಗೆ ಅನೇಕ ವಿಷಯಗಳು ಇಲ್ಲಿ ಪ್ರಸ್ತಾಪ ಮಾಡಿದ್ದು ಅದು ಸರಿ ಇಲ್ಲ ಎಂದು ತಾವು ಒಂದೇ ವಾಕ್ಯದಲ್ಲಿ ಹೇಳಿ ವಿರೋಧ ಪಕ್ಷದ ಮೇಲೆ ತಾವು ಗೂಬೆ ಕೂರಿಸತಕ್ಕಂಥ ಪ್ರಯತ್ನವನ್ನು ತಾವು ಏನು ನಡೆಸಿದ್ದೀರಿ ಇದು ಸರಿಯಲ್ಲ. ಇದನ್ನು ನಾನು ಖಂಡಿಸುತ್ತೇನೆ. ಇನ್ನು ಮುಂದೆ ತಾವು ಈ ಮಾತನ್ನು ಹೇಳುವುದಕ್ಕೆ ಹೋಗಬೇಡಿ. ಅದಕ್ಕಾಗಿ ಈ ಎಲ್ಲಾ ಮಾತುಗಳು ಈ ಸದನದಲ್ಲಿ ಏನು ಆಗಿದೆ ಮತ್ತು ಚರ್ಚೆಗಳು ಏನು ಆಗಿದೆ ಅದಕ್ಕೆ ನಿಮ್ಮ ಸರ್ಕಾರದಿಂದ ಯಾವು ಉತ್ತರವೂ

ಕೂಡ ಸಮರ್ಪಕವಾಗಿ ಇಲ್ಲಿಯವರೆಗೂ ಬಂದಿಲ್ಲ. ಅದಕ್ಕಾಗಿ ನಾವು ಇವತ್ತು ಈ ಅವಿಶ್ವಾಸ ಪ್ರಸ್ತಾವವನ್ನು ತಂದಿದ್ದೇವೆ. ಏಕೆ ತಂದಿದ್ದೀರಿ.

ಅದರಲ್ಲಿ ಏನು ಇದೆ ಎಂದು ಹೇಳುತ್ತೀರಿ. ಅದರಲ್ಲಿ ಇದೆಲ್ಲಾ ಕೂಡಾ ಇದೆ. ಕೆಲವು ವಿಷಯಗಳನ್ನು ಹೇಳಿದ್ದಾರೆ, ಇನ್ನು ಕೆಲವು ಮಿತ್ರರು ಹೇಳಬಹುದು. ಇವತ್ತು ನಮ್ಮ ಮುಂದೆ ಇರತಕ್ಕಂಥಾದ್ದು ಈ ರಾಜ್ಯದ ಹಿತವನ್ನು ರಕ್ಷಣೆ ಮಾಡತಕ್ಕಂಥ ಶಕ್ತಿ ನಿಮ್ಮ ಸರ್ಕಾರಕ್ಕೆ ಇದೆಯೇ ಇಲ್ಲವೇ ಎನ್ನತಕ್ಕಂಥಾದ್ದು ಮುಖ್ಯವಾದ ಪ್ರಶ್ನೆ. ಆ ಶಕ್ತಿ ನಿಮ್ಮಲ್ಲಿ ಇಲ್ಲ ಎನ್ನುವುದಕ್ಕೆ ನನ್ನ ವಾದ ಏನೆಂದರೆ ಇವತ್ತು ಬಚಾವತ್ ಅವಾರ್ಡ್ ಪ್ರಕಾರ ನಮಗೆ ಈಗಾಗಲೇ ಒಂದು ತೀರ್ಮಾನ ಸಿಕ್ಕಿದೆ. ಏನು ಬಚಾವತ್ ಅವಾರ್ಡ್ ಪ್ರಕಾರ ನಮಗೆ ಈಗಾಗಲೇ 734 ಟಿಎಂಸಿ ನೀರನ್ನು ಅಲಾಟ್ ಮಾಡಿದ್ದಾರೆ.

4.10 ಪಿ.ಎಂ.

ನಮಗೆ ಲಭ್ಯವಾಗಿದ್ದ 734 ಟಿ ಎಂ ಸಿ ಎಫ್ ಟಿ ನೀರಿನಲ್ಲಿ 5 ಟಿ. ಎಂ. ಸಿ. ಎಫ್. ಟಿ. ಯಷ್ಟು ನೀರನ್ನು ತಮಿಳುನಾಡಿನ ಕುಡಿಯುವ ನೀರಿನ ವ್ಯವಸ್ಥೆಗೆ ಕೊಡಲು ನಾವು ಒಪ್ಪಿದ್ದೇವೆ. ನಮ್ಮಂತೆಯೇ ಮಹಾರಾಷ್ಟ್ರದವರು ಮತ್ತು ಆಂಧ್ರಪ್ರದೇಶದವರೂ ತಲಾ 5 ಟಿ ಎಂ ಸಿ ಎಫ್ ಟಿ ಯಷ್ಟು ನೀರನ್ನು ಕೊಟ್ಟಿದ್ದಾರೆ. 5 ಟಿ ಎಂ ಸಿ ಎಫ್ ಟಿ ನೀರು ಕೊಟ್ಟಾದ ಮೇಲೆ ಬಚಾವತ್ ಅವಾರ್ಡ್ ಪ್ರಕಾರ ನಮಗೆ 729 ಟಿ ಎಂ ಸಿ ಎಫ್ ಟಿ ಯಷ್ಟು ನೀರು ಲಭಿಸುತ್ತದೆ. ಈ ರೀತಿ ನಮಗೆ ಸಿಕ್ಕಿರುವ ನೀರಿನ ಪ್ರಮಾಣವನ್ನು ಬದಲಾವಣೆ ಮಾಡುವ ಹಕ್ಕು ಪ್ರಧಾನ ಮಂತ್ರಿಯವರಿಗೂ ಇಲ್ಲ. ಯಾರಿಗೂ ಇಲ್ಲ ಮತ್ತು ಯಾವುದೇ ಟ್ರಿಬ್ಯುನಲ್ ಕೂಡ ಇದನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ.

ಒಂದು ಪಕ್ಷ ಹಾಗೆ ಬದಲಾವಣೆ ಮಾಡಬೇಕೆಂದು ತೀರ್ಮಾನಿಸಿದರೆ ಅದು ಪಾರ್ಲಿಮೆಂಟ್‌ನಲ್ಲಿ ಕಾನೂನು ಪ್ರಕಾರ ಮಾಡಬಹುದು ಅಥವಾ ಮ್ಯೂಚುಯಲ್ ಅಂಡರ್‌ಸ್ಟ್ಯಾಂಡಿಂಗ್ ಮೇಲೆ ಮಾರ್ಪಾಟು ಮಾಡಿಕೊಳ್ಳಬಹುದು. ಆದರೆ, ಇವತ್ತು ತರಾತುರಿಯಿಂದ, ಕೇಂದ್ರದಲ್ಲಿ ಯುನೈಟೆಡ್ ಫ್ರಂಟ್ ಗೌರ್ನಮೆಂಟ್ ಇದೆಯೆಂದು ಕೇಂದ್ರ ಸರ್ಕಾರಕ್ಕೆ ಬೆಂಬಲ ಕೊಟ್ಟಿರುವ ಪಕ್ಷಗಳ ಮಾತುಗಳನ್ನು ಕೇಳಿಕೊಂಡು ಈ ನೀರಿನ ಹಂಚಿಕೆ ವಿಚಾರದಲ್ಲಿ ಏನೋ ಒಂದು ಒಪ್ಪಂದಕ್ಕೆ ಬರುತ್ತಿದ್ದಾರೆಂದು ಇದರಿಂದ ಸ್ಪಷ್ಟವಾಗುತ್ತದೆ. ನಮ್ಮ ರಾಜ್ಯದ ಮುಖ್ಯ-ಮಂತ್ರಿಗಳು, ಯಾವುದೇ ಕಾರಣಕ್ಕೂ ಆಲಮಟ್ಟಿ ಡ್ಯಾಮ್‌ನ ಹೈಟನ್ನು ಇಳಿಸುವುದಿಲ್ಲ ಮತ್ತು ಕೆಲಸವನ್ನು ನಿಲ್ಲಿಸುವುದಿಲ್ಲವೆಂದು ಎರಡು ಮೂರು ಸರಿ ಹೇಳಿಕೆ ಕೊಟ್ಟು ಸ್ಪಷ್ಟಪಡಿಸಿದ್ದಾರೆ.

ಆದರೆ, ಈ ವಿಷಯದ ಬಗ್ಗೆ ಚರ್ಚೆ ಮಾಡಲು ಯಾವ ಒತ್ತಡಕ್ಕಾಗಿ ಪ್ರಧಾನ ಮಂತ್ರಿಯವರು ಸಭೆಯನ್ನು ಕರೆದರು? ಯಾವ ಕಾನೂನು ಅಡಿಯಲ್ಲಿ ಈ ಸಭೆಯನ್ನು ಕರೆಯಲಾಯಿತು? ಯಾವ ಕಾರಣಕ್ಕಾಗಿ ಮೂರೂ ರಾಜ್ಯಗಳ ಮುಖ್ಯ ಮಂತ್ರಿಗಳನ್ನು ಕರೆಯಿಸಿ ವಿಷಯವನ್ನು ಪ್ರಸ್ತಾಪ ಮಾಡುವಂಥ ಸಂದರ್ಭ ಬಂತು ಏಕೆಂದರೆ, ಆಂಧ್ರಪ್ರದೇಶದ ಕೆಲವು ರಾಜಕೀಯ ಮುಖಂಡರುಗಳು ಫೋಟೋಗ್ರಾಫರ್ಸ್ ಮತ್ತು ಪ್ರೆಸ್ ರಿಪೋರ್ಟರ್ಸ್ ಜೊತೆಯಲ್ಲಿ ದಿನಾಂಕ 23 ಜೂನ್ 1996ರಂದು ಆಲಮಟ್ಟಿಗೆ ಡ್ಯಾಮ್ ಪ್ರದೇಶಕ್ಕೆ ವಿಸಿಟ್ ಕೊಟ್ಟಿದ್ದರು. ಅವರು ಅಲ್ಲಿಗೆ ವಿಸಿಟ್ ಕೊಟ್ಟಾದ ಮೇಲೆ ಅವರು, ಆಲಮಟ್ಟಿ ಡ್ಯಾಮ್ ಹೈಟನ್ನು 519 ಮೀಟರಿನಿಂದ 524 ಮೀಟರ್‌ರವರೆಗೆ

ಕರ್ನಾಟಕ ರಾಜ್ಯದವರು ಎತ್ತರಿಸುತ್ತಾರೆಂದು ಗುಲ್ಲನ್ನು ಎಬ್ಬಿಸಿದ ಮೇಲೆ ಈ ಗುಲ್ಲಿಗೆ ಸ್ಪಂದಿಸತಕ್ಕಂಥ ಕೆಲಸವನ್ನು ಮಾನ್ಯ ಚಂದ್ರಬಾಬು ನಾಯ್ಡುರವರು ಮಾಡಿದ್ದಾರೆ. ಬಚಾವತ್ ಅವಾರ್ಡ್‌ನ್ನು ವಯಲೇಟ್ ಮಾಡಿ ಕೃಷ್ಣಾ ಬೇಸಿನ್ ಪ್ರಾಜೆಕ್ಟ್‌ಗಳನ್ನು ಕಾನೂನು ಬಾಹಿರವಾಗಿ ಕರ್ನಾಟಕ ರಾಜ್ಯದವರು ಮಾಡುತ್ತಿದ್ದಾರೆ ಅನ್ನತಕ್ಕಂಥ ಇಂಪ್ರೆಷನ್ ಅನ್ನು ಅವರು ದೇಶಕ್ಕೆಲ್ಲಾ ಕೊಡುತ್ತಿದ್ದಾರೆ.

ಇವತ್ತು ನಮ್ಮ ಹಣೆಬರಹ ಏನಾಗಿದೆ ಎಂದರೆ, ಇದೇ ರೀತಿ ತಮಿಳುನಾಡಿನವರೂ ಗುಲ್ಲನ್ನು ಎಬ್ಬಿಸಿ ನಮ್ಮನ್ನು ಹೆದರಿಸಲು ಪ್ರಯತ್ನ ಮಾಡುತ್ತಿದ್ದಾರೆ ಮತ್ತು ಮಾಡಿದ್ದಾರೆ. ಅದು ಇನ್ನೂ ನಮ್ಮ ಮೇಲೆ ತೂಗುವ ಕತ್ತಿ ಇದ್ದ ಹಾಗೆಯೇ ಇದೆ. ಕೆಲವು ದಿವಸಗಳ ಹಿಂದೆ ಮಾನ್ಯ ಮುಖ್ಯ ಮಂತ್ರಿಯವರು ತಮಿಳುನಾಡಿಗೆ ಹೋಗಿ ಅಲ್ಲಿನ ಮುಖ್ಯ ಮಂತ್ರಿಗಳ ಜೊತೆ ಏನೋ ಮಾಡನಾಡಿಕೊಂಡು ಬಂದು ಪುನಃ 5 ಟಿ ಎಂ ಸಿ ಎಫ್ ಟಿ ಯಷ್ಟು ನೀರನ್ನು ಬಿಡುತ್ತೇವೆಂದು ಒಪ್ಪಿಕೊಂಡು ಬಂದಿದ್ದಾರೆ. ಈಗ ಸರ್ಪಲೆಸ್ ವಾಟರ್ ಇದ್ದರೆ ಹೋಗಲಿ, ಅದನ್ನು ಯಾರೂ ಹಿಡಿದಿಟ್ಟುಕೊಳ್ಳುವುದಕ್ಕಾಗುವುದಿಲ್ಲ. ಆದರೆ, ಆಲಮಟ್ಟಿ ವಿಚಾರ ಏನಾಯಿತು? ಅದಕ್ಕೆ ಮಾನ್ಯ ಚಂದ್ರಬಾಬು ನಾಯ್ಡುರವರು ಕಾಟ. ಕಾನೂನು ಪರವಾಗಿ ಅವರದು ಯಾವುದೇ ಸಂಬಂಧವಿಲ್ಲದಿದ್ದರೂ ಅವರು ಇದರ ಬಗ್ಗೆ ಹೋರಾಟ ಮಾಡುತ್ತಿದ್ದಾರೆ. ಅವರು ಹೇಳಿದ್ದಕ್ಕೆಲ್ಲಾ ನಮ್ಮ ಸರ್ಕಾರದವರು ಕಣ್ಣು ಮುಚ್ಚಿಕೊಂಡು ಕೇಳಿಕೊಂಡು ಹೋಗುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಇದರ ವಿರುದ್ಧ ಸ್ಟೇಟ್‌ಮೆಂಟ್ ಕೊಟ್ಟಿರಬಹುದು. ಆದರೆ, ಇದರ ಬಗ್ಗೆ ಚರ್ಚೆ ಮಾಡಲು ಕಾನೂನು ಬಾಹಿರವಾಗಿ ಪ್ರಧಾನ ಮಂತ್ರಿಯವರು ಮೀಟಿಂಗ್ ಕರೆಯತಕ್ಕಂಥ ವ್ಯವಸ್ಥೆ ಏಕೆ ಮಾಡಿದರು? ಏನಾದರೂ ಮಾಡಿ ನಮ್ಮ ಪ್ರಾಜೆಕ್ಟ್‌ಗಳನ್ನು ನಿಲ್ಲಿಸಿ ಎರಡು ಸಾವಿರ ಇಸವಿಯೊಳಗೆ ಅಲಾಟ್ ಆದಂಥ ನೀರನ್ನು ಉಪಯೋಗ ಮಾಡಿಕೊಳ್ಳದ ಹಾಗೆ ಮಾಡಿದರೆ ನಂತರ ಆಗತಕ್ಕಂಥ ನೀರಿನ ಹಂಚಿಕೆಯಲ್ಲಿ ನಮ್ಮ ವಾದವನ್ನು ಮುಂದಿಟ್ಟು ಹೆಚ್ಚು ನೀರು ಪಡೆಯಬೇಕೆಂದು ಆಂಧ್ರ ಪ್ರದೇಶದವರು ಪ್ರಯತ್ನ ಮಾಡುತ್ತಿದ್ದಾರೆ.

ಅವರ ಪ್ರಯತ್ನಕ್ಕೆ ನಾವು ಬಲಿ ಆಗುತ್ತಿದ್ದೇವೆಯೇ ಹೊರತು ನಮ್ಮ ಮಾತನ್ನು ನಡೆಸಿಕೊಳ್ಳಬೇಕೆಂದು ನಾವು ಅಲ್ಲಿಗೆ ಹೋಗಲಿಲ್ಲ. ಅವರ ಮಾತನ್ನು ನಡೆಸಿಕೊಡುವುದಕ್ಕಾಗಿಯೇ ನಾವು ಅಲ್ಲಿಗೆ ಹೋಗಿದ್ದೇವೆಂದು ಅನಿವಾರ್ಯವಾಗಿ ಹೇಳಬೇಕಾಗಿದೆ. 13 ಪಕ್ಷದವರು ಸೇರಿ ಅವರನ್ನು ಪ್ರಧಾನ ಮಂತ್ರಿಯನ್ನನಾಗಿ ಮಾಡಿರುವುದರಿಂದ ಎಲ್ಲಾ ಪಕ್ಷದವರು ಪ್ರಧಾನ ಮಂತ್ರಿಯವರಿಗೆ ಒತ್ತಡ ತಂದು ಅವರ ಕೆಲಸವನ್ನು ಮಾಡಿಸಿಕೊಳ್ಳುತ್ತಿದ್ದಾರೆ. ಈ ಸಮಯದಲ್ಲಿ ಮಾತ್ರ ಜಗ್ಗಿದರೆ ಏನಾದರೂ ಸಿಗುತ್ತದೆಂದುಕೊಂಡು ತಮಿಳುನಾಡಿನವರು ಜಗ್ಗುವ ಪ್ರಯತ್ನ ಮಾಡುತ್ತಿದ್ದಾರೆ. ಅದೇ ರೀತಿ ಒತ್ತಡ ಅಂದರೆ ಪ್ರಧಾನ ಮಂತ್ರಿಯವರು ನಮ್ಮ ಕೆಲಸವನ್ನೂ ಮಾಡಿಕೊಡುತ್ತಾರೆ ಇಲ್ಲವೆಂದರೆ ಪ್ರಧಾನ ಮಂತ್ರಿ ಗಾದಿಯನ್ನು ಅವರು ಬಿಟ್ಟು ಹೋಗಬೇಕಾಗುತ್ತದೆಂದು ಆಂಧ್ರ ಪ್ರದೇಶದವರೂ ಕೂಡ ಒತ್ತಡ ತರಲು ಪ್ರಯತ್ನ ಮಾಡುತ್ತಿದ್ದಾರೆ. ಹೀಗೆ ಎಲ್ಲರೂ ತಮ್ಮ ತಮ್ಮ ಶಕ್ತಿಯನ್ನು ಹಚ್ಚಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಅವರುಗಳ ಪ್ರಾಜೆಕ್ಟ್‌ಗಳನ್ನು ಮುಂದುವರಿಸಿಕೊಂಡು ನಮ್ಮ ಪ್ರಾಜೆಕ್ಟ್‌ಗಳಿಗೆ ಕಲ್ಲು ಹಾಕಬೇಕೆನ್ನುವ ಪ್ರಯತ್ನ ಮಾಡುತ್ತಿದ್ದಾರೆ.

ಆದರೆ, ಇವತ್ತು ನಾವು ಕಾನೂನು ರೀತಿಯಿಂದ ಸ್ಟ್ರಾಂಗ್ ಇದ್ದೇವೆ. ಕಾನೂನು ಬಲ, ಬಚಾವತ್ ಅವಾರ್ಡ್‌ನ ಬಲ ನಮ್ಮ ಜೊತೆಯಲ್ಲಿ ಇದೆ. ಇವತ್ತು ನಾವು ಹೆಚ್ಚಿನ ನೀರನ್ನು ಉಪಯೋಗ ಮಾಡಿಕೊಂಡಿಲ್ಲ. ಬಚಾವತ್ ಅವಾರ್ಡ್ ಪ್ರಕಾರ

ನಮಗೆ ಏನು ನೀರು ಅಲಾಟ್ ಆಗಿದೆಯೋ ಅಷ್ಟನ್ನು ನಾವು ಎರಡು ಸಾವಿರ ಇಸವಿಯೊಳಗೆ ಉಪಯೋಗ ಮಾಡಿಕೊಳ್ಳಲೇಬೇಕು. ಒಂದು ವೇಳೆ ಆ ಸಮಯಕ್ಕೆ ಅಲಾಟ್ ಆಗಿರುವ ನೀರನ್ನು ಉಪಯೋಗ ಮಾಡಿಕೊಳ್ಳದೆ ಹೋದರೆ ಅವರು ಬೇರೆ ತರಹದಲ್ಲಿ ವಾದವನ್ನು ಮಂಡಿಸುತ್ತಾರೆ. ಬಚಾವತ್ ಟ್ರಿಬ್ಯುನಲ್ ಖಾಯಂ ಆಗುವುದಕ್ಕೆ ಮುಂಚೆ ಯಾವ ಪರಿಸ್ಥಿತಿ ಇತ್ತೋ ಅಂದರೆ, ಯಾವ ಯಾವ ರಾಜ್ಯಗಳು ಎಷ್ಟೆಷ್ಟು ನೀರನ್ನು ಉಪಯೋಗ ಮಾಡಿಕೊಂಡಿದ್ದವೋ ಅಷ್ಟಷ್ಟಕ್ಕೇ ಸೀಮಿತಗೊಳಿಸಿ ಮುಂದೆ ಯಾವ ರೀತಿ ಅಲಾಟ್ ಮಾಡಬೇಕೆಂದು ಲೆಕ್ಕಕ್ಕೆ ತೆಗೆದುಕೊಂಡು ಅಲಾಟ್ ಮಾಡಿದರು. ಆಗ, ನಮಗಿಂತ ಹೆಚ್ಚು ನೀರನ್ನು ಆಂಧ್ರಪ್ರದೇಶದವರು ಮತ್ತು ಮಹಾರಾಷ್ಟ್ರದವರು ಯುಟಿಲೈಸ್ ಮಾಡಿದ್ದರು. ಅವರು ಮಾಡಿಕೊಂಡಿರುವ ಕ್ಯಾಚ್‌ಮೆಂಟ್ ಏರಿಯಾಗಳಿಗೂ ನಾವು ಮಾಡಿಕೊಂಡಿರುವ ಕ್ಯಾಚ್‌ಮೆಂಟ್ ಏರಿಯಾಗೂ ಹೋಲಿಸಿದಾಗ, ಮಹಾರಾಷ್ಟ್ರದವರಿಗೆ ಮತ್ತು ಆಂಧ್ರಪ್ರದೇಶದವರಿಗೆ ಇವತ್ತು ಕಡಿಮೆ ನೀರು ಸಿಕ್ಕಬೇಕು. ಬಚಾವತ್ ಅವಾರ್ಡ್ ತೀರ್ಪು ಕೂಡ ನಮಗೆ ಫಾರ್ ಅಲ್ಲ. ನಮ್ಮ ಕ್ಯಾಚ್‌ಮೆಂಟ್ ಏರಿಯಾ ಎಷ್ಟು ಇದೆ ಎಂದು ತಮಗೆ ಹೇಳಬೇಕಾದರೆ, ಎಕ್ಸ್‌ಟೆಂಟ್ ಆಫ್ ಡ್ರೈನೇಜ್ ಏರಿಯಾ ಕರ್ನಾಟಕದ್ದು 43.7, ಮಹಾರಾಷ್ಟ್ರದ್ದು 26.8, ಆಂಧ್ರಪ್ರದೇಶದ್ದು 29.5 ಇಷ್ಟು ಕ್ಯಾಚ್‌ಮೆಂಟ್ ಏರಿಯಾ ಇದೆ.

ಇದು ಡ್ರೆನೇಜ್. ಅಂದರೆ ಇಷ್ಟೊಂದು ಕ್ಯಾಚ್‌ಮೆಂಟ್ ಏರಿಯಾ ನಮ್ಮದ್ದು. ಇದರ ಪ್ರಕಾರ ನಮಗೆ ಅಲೋಕೇಷನ್‌ನಲ್ಲಿಯೂ ಕೂಡ ಬರಬೇಕಾಗಿತ್ತು. ಇದರ ಪ್ರಕಾರ ನಮಗೆ ಅಲೋಕೇಷನ್‌ನಲ್ಲಿ ಬರಲಿಲ್ಲ. ಅಲ್ಲಿ ಅನ್ಯಾಯವಾಗಿದ್ದರೂ ಕೂಡ ನಾವು ಇದು ಆಗಿದ್ದು ಆಯಿತು, ಹೋಗಿದ್ದು ಹೋಯಿತು ಏನು ಉಳಿದಿದೆ ಅದನ್ನು ಕೊಡಿ, ಬಚಾವತ್ ಅವಾರ್ಡ್‌ನ ಪ್ರಕಾರವೇ ನಮಗೆ ಕೊಟ್ಟುಬಿಡಿ ಎಂದು ಹೇಳಿ, ಆ ಒಂದು ಬಚಾವತ್ ಅವಾರ್ಡ್‌ನ ಮೇಲೆ ನಾವು ನಿಂತರೂ ಕೂಡ ಇವೊತ್ತು ಕೇಂದ್ರ ಸರಕಾರವೂ ಒಂದು ಕಡೆ ಇಂಟರ್‌ಫಿಯರೆನ್ಸ್, ಇನ್ನೊಂದು ಕಡೆಯಲ್ಲಿ ನಾವು ಪದೇ ಪದೇ ಸುಮ್ಮನೆ ಅವರ ಕಡೆ ಹೋಗಿ ಕೇಳಿಕೊಳ್ಳುವುದು, ಸಮಾಧಾನ ಮಾಡುವುದು, ಅವರ ತುಟಿ ಹಿಡಿಯುವುದು, ಗಲ್ಲ ಹಿಡಿಯುವುದು, ಮುಂತಾಗಿ ಈ ರೀತಿಯಾಗಿ ನಾವು ಮೈಮೇಲೆ ಬಿದ್ದು ಕಾಂಪ್ರಮೈಸ್ ಮಾಡಿಕೊಳ್ಳತಕ್ಕಂಥಾದ್ದು ಅದರಲ್ಲಿ ಏನಿದೆ? ಏತಕ್ಕಾಗಿ ನಾವು ಮಾಡಿಕೊಳ್ಳಬೇಕು? ಯಾವುದೇ ದೃಷ್ಟಿಯಿಂದ ಎಲ್ಲವನ್ನೂ ಕೇಳಿ ಬಚಾವತ್ ಅವಾರ್ಡ್‌ನ್ನು ಕೊಟ್ಟಿದ್ದರು. ಅದರಲ್ಲಿ ನಮ್ಮ ಡ್ರೆನೇಜ್ ಸಿಸ್ಟಂ,

ನಮ್ಮ ಕ್ಯಾಚ್‌ಮೆಂಟ್ ಏರಿಯಾ, ನಮ್ಮ ಯುಟಿಲೈಸೇಷನ್, ಮಹಾರಾಷ್ಟ್ರ ಯುಟಿಲೈಸೇಷನ್, ಆಂಧ್ರಪ್ರದೇಶದ ಯುಟಿಲೈಸೇಷನ್, ಇವೆಲ್ಲವನ್ನೂ ತಿಳಿದುಕೊಂಡು ನಮಗೆ ಅಲಾಟ್‌ಮೆಂಟ್ ಆಗಿದ್ದರೂ ಕೂಡ ಪುನಃ ಪ್ರಧಾನಿಯವರು ಇಂಟರ್‌ಫಿಯರೆನ್ಸ್ ಮಾಡಿ ನಾಲ್ಕು ಜನ ಮುಖ್ಯಮಂತ್ರಿಗಳು ಸೇರಿಕೊಂಡು ಏತಕ್ಕೆ ನಮ್ಮ ನ್ಯಾಯವನ್ನು ಬಗೆಹರಿಸಬೇಕು? ಈ ನಾಲ್ಕು ಮುಖ್ಯಮಂತ್ರಿಗಳು ಯಾರು? ಅವರಿಗೆ ಕಾನೂನು ಪ್ರಕಾರ • ಏನು ಸ್ಟೇಟಸ್ ಇದೆ? ಯಾವ ಕಾನೂನಿನ ಪ್ರಕಾರ ಕಮಿಟಿಯು ಆಯಿತು? ಆ ನಾಲ್ಕು ಜನ ಯುನೈಟೆಡ್‌ಫಂಟ್‌ನ ಮುಖ್ಯಮಂತ್ರಿಗಳು ಸೇರಿ 9 ಜನರ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ಮಾಡಿದರು. ಒಂದು ಪಾರ್ಟಿ ವತಿಯಿಂದ ಮಾಡಿದ ಕಮಿಟಿಗೆ ಲೀಗಲ್‌ಸ್ಟೇಟಸ್ ಏನು ಇರುತ್ತದೆ? ನೀವೇ ಏನೂ ಇಲ್ಲ ಎಂದು ಹೇಳಿದ್ದೀರಿ. ಹೀಗೆ ಹೇಳುತ್ತೀರಿ ಮತ್ತು ಅವರು ಕರೆದರೆ ಬೇಗನೆ ಅಲ್ಲಿಗೆ ಹೋಗುತ್ತೀರಿ? ಏನೂ ಇಲ್ಲವೆಂದು ಹೇಳಿ ಅಲ್ಲಿ ನಾಲ್ಕು ದಿನಗಳ ಮುಕ್ಕಾಂ

ಅಲ್ಲೇ ಹೂಡುತ್ತೀರಿ. ಇಲ್ಲಿ ಕಮಿಟಿಗೆ ಲೀಗಲ್‌ಸ್ಟೇಟಸ್ ಇಲ್ಲವೆಂದು ಒಂದು ಕಡೆ ಸ್ಟೇಟ್‌ಮೆಂಟ್ ಕೊಡುವುದು, ನಾಲ್ಕು ಜನ ಮುಖ್ಯಮಂತ್ರಿಗಳು ಹೇಳಿದರೂ ಕೂಡ 9 ಜನ ಎಕ್ಸ್‌ಪರ್ಟ್ ಕಮಿಟಿಯವರು ಇಲ್ಲಿಗೆ ಬಂದರೂ ಕೂಡ ಅದಕ್ಕೆ ಕಾನೂನಿನಲ್ಲಿ ಯಾವುದೇ ಹಕ್ಕು ಇಲ್ಲ. ಅಥವಾ ಯಾವುದೇ ಕಾನೂನಿನ ಬೆಂಬಲ ಅದಕ್ಕಿಲ್ಲ.

ಅಂಥ ಕಮಿಟಿಯನ್ನು ನಾವು ಎಂದೂ ಒಪ್ಪಲು ಆಗುವುದಿಲ್ಲ. ಮತ್ತು ಅದು ರೆಕಮೆಂಡೇಟರಿನೂ ಕೂಡ ಇಲ್ಲ ಎಂದು ಹೇಳತಕ್ಕಂಥವರು ನಾಲ್ಕು ದಿವಸ ಅಲ್ಲಿ ಕುಳಿತು ಇದರ ಬಗ್ಗೆ ಚರ್ಚೆ ಮಾಡಿ, ಖಾಲಿ ಕೈಯಿಂದ ತಾವು ಬರತಕ್ಕಂಥಾದ್ದು ಏನಿತ್ತು? ಇದು ನಮಗೆ ಅರ್ಥವಾಗುತ್ತಾ ಇಲ್ಲ. ಇಷ್ಟೆಲ್ಲಾವೂ ತಮಗೆ ಗೊತ್ತಿದೆ. ಯಾವ ಸಂವಿಧಾನದ ಪ್ರಕಾರ ಈ ಕಮಿಟಿಯನ್ನು ಪ್ರಧಾನಿಯವರು ಕಾನ್ಸಿಟಿಟ್ಯೂಟ್ ಮಾಡಿದರು? ಯಾವ ಕಾನೂನಿನ ಪ್ರಕಾರ ತಾವು ಒಪ್ಪಿಕೊಂಡಿದ್ದೀರಿ? ಎಕ್ಸ್‌ಪರ್ಟ್ ಕಮಿಟಿ ಬರಲಿ ಎಂದು ಹೇಗೆ ಒಪ್ಪಿಕೊಂಡಿದ್ದೀರಿ? ಯಾವುದು ಈ ಎಕ್ಸ್‌ಪರ್ಟ್ ಕಮಿಟಿ? ಅದೇನು ಸೆಂಟ್ರಲ್ ಗವರ್ನಮೆಂಟ್‌ನವರು ಕ್ಯಾಬಿನೆಟ್ ಡಿಸಿಷನ್ ತೆಗೆದುಕೊಂಡು ನಮ್ಮ ಇಂಟರ್‌ಸ್ಟೇಟ್ ವಾಟರ್‌ಡಿಸ್ಪ್ಯೂಟ್ ಆಕ್ಟ್‌ನ ಪ್ರಕಾರ ಮಾಡಿದಂಥ ಟೀಮೇ ಅಥವಾ ಸುಪ್ರೀಂಕೋರ್ಟ್‌ನ ಡೈರೆಕ್ಷನ್ ಪಡೆದು ಅವರ ಹೇಳಿಕೆಯಂತೆ ಮಾಡಿದ ಕಮಿಟಿಯೇ? ಇದಾವುದೂ ಇಲ್ಲ. ಇದು ಕೇವಲ ನಿಮ್ಮ ಇಂಟರ್ನಲ್ ಪಾರ್ಟಿ ಆರೇಂಜ್‌ಮೆಂಟ್. ಇದೊಂದು ಪೊಲಿಟಿಕಲ್ ಡಿಸಿಷನ್. ಇದಕ್ಕೆ ನಾವೆಲ್ಲರೂ ಕೂಡ ಭಾಗಿಯಾಗಬೇಕೇ?

ಈ ರಾಜ್ಯದ ಜನರು ನಿಮ್ಮ ಪೊಲಿಟಿಕಲ್ ಡಿಸಿಷನ್‌ಗೆ ವಿಕ್ಟಿಂ ಆಗಬೇಕೇ ಎಂದು ನಾನು ಕೇಳುತ್ತೇನೆ. Should we become victims of your political decision? ನಿಮ್ಮ ಪೊಲಿಟಿಕಲ್ ಡಿಸಿಷನ್ ಇರತಕ್ಕಂಥಾದ್ದು ನಿಮ್ಮ ರಕ್ಷಣೆಗೋಸ್ಕರ. ನಿಮ್ಮ ಹಿತಕ್ಕೋಸ್ಕರ, ನಿಮ್ಮ ಕುರ್ಚಿಗೋಸ್ಕರ. ನಿಮ್ಮ ಎಲ್ಲಾ 13 ಪಕ್ಷಗಳನ್ನು ಒಗ್ಗಟ್ಟಿನಿಂದ ಹೇಗೆ ಇರಬೇಕೆಂಬ ದೃಷ್ಟಿ ಇಂದ ಆದಂಥದ್ದೇ ಹೊರತಾಗಿ ರಾಜ್ಯದ ಹಿತವನ್ನು ಹೇಗೆ ಸಾಧಿಸಬೇಕೆಂದು ಹೇಳಿ ಮಾಡಿದಂಥ ನಿರ್ಣಯವಂತೂ ಅಲ್ಲ. ಆಲಮಟ್ಟಿ ಡ್ಯಾಂ 528 ಮೀಟರ್‌ಗೆ ಇಡಬೇಕೆಂದು ಹೇಳಿ ರಚಿಸಿದಂಥ ಕಮಿಟಿ ಅಲ್ಲ. ನೀವು 13 ಜನರು ಸೇರಿಕೊಂಡು ರಾಜ್ಯವನ್ನು ಏನು ಆಳುತ್ತಾ ಇದ್ದೀರಿ. ಇದರಲ್ಲಿ ಯಾವುದೇ ಒಡಕು ಬರಬಾರದು, ಇದರಲ್ಲಿ ತೊಂದರೆ ಬರಬಾರದು, ಇದರಲ್ಲಿ ನಾವು ಮುಳುಗಿ ಹೋಗಬಾರದು ಎಂದು ಹೇಳಿ ಅವರಿಗೆಲ್ಲಾ ಕರೆಸಿ ಸಮಾಧಾನ ಮಾಡುವುದಕ್ಕೋಸ್ಕರವಾಗಿ ಈ ನಾಲ್ಕು ಜನ ಮುಖ್ಯ ಮಂತ್ರಿಗಳನ್ನು ಸೇರಿಸಿ ಒಂದು ಕಮಿಟಿಯನ್ನು ಮಾಡಿದ್ದೀರಿ.

ಅವರು ಏನು ಸಜೆಸ್ಟ್ ಮಾಡಿದರು ಎಂದರೆ ನೀವು 9 ಜನ ಸದಸ್ಯರು ಸೇರಿದ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ಮಾಡಿ ಎಂದು ಹೇಳಿದರು. ಇವರೆಲ್ಲರೂ ಇಲ್ಲಿಗೆ ಒಂದು ಸುತ್ತಾಡುವುದು, ಅವರ ಎಕ್ಸ್‌ಪೆಂಡಿಚರ್‌ನ್ನು ಯಾರು ಕೊಡುವುದು? ಅದನ್ನು ಯಾವ ಕಾನೂನಿನಲ್ಲಿ ಕೊಡುತ್ತಾರೆ? ಪತ್ರಿಕೆಯಲ್ಲಿ ಒಂದು ಪ್ರಕಾರ ಮೊನ್ನೆ ಅವರುಗಳು ಇಲ್ಲಿ ಬಂದು ಅಶೋಕ ಹೋಟೆಲ್‌ನಲ್ಲಿದ್ದು ಕೊಂಡಿದ್ದರು. ಅವರಿಗೆ ಏನೇನು ಸವಲತ್ತು ಕೊಡಬೇಕಾಗಿತ್ತೋ ಅದನ್ನೆಲ್ಲ ಕೊಟ್ಟಿದ್ದೀರಿ. ಯಾವ ಕಾನೂನಿನಡಿಯಲ್ಲಿ ಕೊಟ್ಟಿದ್ದೀರಿ? ಅದಕ್ಕೆ ಯಾವ ಸರಕಾರಿ ಆದೇಶ ಇತ್ತು? ಕೇಂದ್ರ ಸರಕಾರ, ಸೆಂಟ್ರಲ್‌ವಾಟರ್ ಕಮಿಷನ್, ಪ್ಲಾನಿಂಗ್ ಕಮಿಷನ್ ಅಥವಾ ಏನಾದರೂ ಒಂದು ಆರ್ಡರ್‌ನ್ನು ಕೇಂದ್ರದವರು ಇಷ್ಯೂ ಮಾಡಿ ಇಂಥಿಂಥವರು ಬರುತ್ತಾರೆ, ಅವರು

ಸ್ಪಾಟ್ ವಿಸಿಟ್ ಮಾಡಿ ನೋಡಿಕೊಂಡು ಹೋಗುತ್ತಾರೆ, ನಿಮಗೆ ಸಹಾಯ ಮಾಡಿಕೊಡುತ್ತಾರೆ ಎಂಬ ಬಗ್ಗೆ ಜೆಓ ಇಷ್ಯೂ ಆಗಿತ್ತೇ? ಆ ಜಿ.ಓ. ಪ್ರಕಾರವೇನಾದರೂ ಅವರು ಬಂದಿದ್ದರೇ? ಇವೊತ್ತು ನಿಮ್ಮ ಖುಷಿ ಮತ್ತು ಸಮಾಧಾನಕ್ಕೋಸ್ಕರ, ತೃಪ್ತಿಗೋಸ್ಕರ ಇಂಥ ಕಮಿಟಿಗಳನ್ನು ಮಾಡಿ ದೇಶದಲ್ಲಿ ಕನ್‌ಫ್ಯೂಷನ್ ಕ್ರಿಯೇಟ್ ಮಾಡಿದ್ದೀರಿ.

ಇಂಥ ಹೊಸ ಕಮಿಟಿ ಬಂದರೆ ನ್ಯಾಚುರಲಿ ಒಂದು ಕನ್‌ಫ್ಯೂಷನ್ ಬರುತ್ತದೆ. ಈ ನಾಲ್ಕು ಜನ ಮುಖ್ಯಮಂತ್ರಿಗಳು ಏನಾದರೂ ಮುನಿಸಿಕೊಂಡು ಹೋದರೆ, ಏನಪ್ಪಾ ಕರ್ನಾಟಕದವರು, ಇವರು ಯಾವಾಗಲೂ ಇದನ್ನೇ ಕಲಿತುಕೊಂಡ ಹಾಗೆ ಕಾಣುತ್ತದೆ, ಇವರು ತಮಿಳುನಾಡಿನ ಜೊತೆಗೆ ಜಗಳ ತೆಗೆಯತ್ತಾರೆ, ಮಹಾರಾಷ್ಟ್ರದವರ ಜೊತೆಗೆ ಉಜನಿಡ್ಯಾಂ, ಕೋಯ್ನಾ ಡ್ಯಾಂನ ವಿಚಾರ ಬಂದಾಗ ಜಗಳ ತೆಗೆದುಕೊಂಡರು. ಕೃಷ್ಣಾ ಬೇಸಿನ್ ವಿಚಾರ ಬಂದಾಗ ಆಂಧ್ರದವರ ಜೊತೆಗೆ ಜಗಳ ಮಾಡುತ್ತಿದ್ದಾರೆ, ಇವರು ಬರೇ ಜಗಳಗಂಟರು ಎಂಬ ಒಂದು ಅಭಿಪ್ರಾಯವು ಈ ನಾಲ್ಕು ಜನ ಮುಖ್ಯಮಂತ್ರಿಗಳ ತಲೆಯಲ್ಲಿ ಅನ್‌ಫಾರ್ಚುನೇಟ್‌ಲಿ ಮೂಡಿದರೆ ಇವತ್ತಲ್ಲ ನಾಳೆ ನಮಗೆ ತೊಂದರೆಯಾಗಬಹುದು. ಯಾಕೆಂದರೆ ಇವೊತ್ತು ನೀವು ನಾಳೆ ನಾವು ಅಧಿಕಾರದಲ್ಲಿರಬಹುದು. ಅಧಿಕಾರದಲ್ಲಿ ಕೆಲವು ಜನರು ಬಂದು ಹೋಗಬಹುದು. ಅದರಲ್ಲಿ 20-25 ವರ್ಷ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದಂಥ ಜ್ಯೋತಿಬಸುರವರು ಇದ್ದಾರೆ. ಅಸ್ಸಾಂ ರಾಜ್ಯದ ಮಹಾಂತರವರು ಯಂಗ್‌ಸ್ಟರ್ ಇದ್ದಾರೆ, ತಮಿಳುನಾಡಿನ ಕರುಣಾನಿಧಿಯವರು ಇದ್ದಾರೆ.

ಹೀಗೆ ಅನೇಕ ಸೀನಿಯರ್ ಜನರು ಇದ್ದಾರೆ. ಒಂದು ವೇಳೆ ಅವರಲ್ಲಿ ನಮ್ಮ ರಾಜ್ಯದ ಬಗ್ಗೆ ತಪ್ಪು ತಿಳುವಳಿಕೆ, ಭಾವನೆಗಳು ನಮ್ಮ ರಾಜ್ಯದ ಬಗ್ಗೆ ಬಂದರೆ ಮುಂದೆ ಒಂದು ದೊಡ್ಡ ಅನಾಹುತವೇ ಆಗಬಹುದೆಂಬ ಮಾತನ್ನು ನಾನು ಇವೊತ್ತಿನ ದಿವಸ ಸ್ಪಷ್ಟಪಡಿಸುತ್ತೇನೆ. ಆ ಅನಾಹುತವನ್ನು ತಾವು ತಡೆಗಟ್ಟಬಹುದಾಗಿತ್ತು. ಈಗ ತಾವು ಅವರಿಗೆ ಎಷ್ಟೇ ಬೇಕಾದವರು ಇರಬಹುದು, ಅವರಿಗೆ ರಕ್ಷಣೆ ಕೊಡತಕ್ಕಂಥ ಜವಾಬ್ದಾರಿಯು ನಿಮಗೆ ಇರಬಹುದು. ಇದು ನಿಮ್ಮ ಸಮಸ್ಯೆ. ಇದು ಕರ್ನಾಟಕದ ಜನರ ಸಮಸ್ಯೆಯಲ್ಲ. ಇದು ನಿಮ್ಮ ಪಕ್ಷದ ಮತ್ತು ನಿಮ್ಮ ಸಮಸ್ಯೆಯಾಗಿದೆ. ಅದಕ್ಕೆ ಹೇಗೆ ಸ್ಪಂದಿಸಬೇಕೆಂಬುದು ನಿಮಗೆ ಬಿಟ್ಟಿದ್ದುದು. ಅದನ್ನು ಬಿಟ್ಟು ನಮಗೆಲ್ಲರಿಗೂ ಕೂಡ, ನಮ್ಮ ಸರಕಾರಕ್ಕೆ ಪಾರ್ಟಿ ಮಾಡುತ್ತಾ ಇದ್ದೀರಿ. You are acting as a Chief Minister; acting as a Government ಬರೇ ಜೆ.ಹೆಚ್.ಪಟೇಲರು ಜನತಾದಳದ ಶಾಸಕರು ಎಂದಿದ್ದರೆ ವಿಷಯ ಬೇರೆ ಇತ್ತು.

ಆದರೆ ಇಲ್ಲಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿ, ಐದು ಕೋಟಿ ಜನರ ಪ್ರತಿನಿಧಿಗಳಾಗಿ, ಮತ್ತು ಈ ಭಾಗದ ಜನರ ನೀರಿನ ಸಮಸ್ಯೆಯನ್ನು ಬಿಡಿಸತಕ್ಕಂಥ ಮತ್ತು ಅದರ ಬಗ್ಗೆ ಕಾಳಜಿ ಮತ್ತು ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ನಮ್ಮೆಲ್ಲರ ಮುಖಂಡರಾಗಿದ್ದೀರಿ. ಅಂದಮೇಲೆ ನಿಮ್ಮ ಜವಾಬ್ದಾರಿಯು ಹೆಚ್ಚು ಇರುತ್ತದೆಯೇ ಹೊರತಾಗಿ ಪಕ್ಷದ ಜವಾಬ್ದಾರಿ ಅಷ್ಟೇ ಎಂದು ತಿಳಿದುಕೊಂಡು ನೀವು ವರ್ತಿಸಬೇಕಾದ ಅವಶ್ಯಕತೆ ಇಲ್ಲ. ನಾನು ಇನ್ನು ಮೇಲೆ ಇಲ್ಲಿಗೆ ಬರುವ ಅವಶ್ಯಕತೆ ಇಲ್ಲ ಎಂದು ನೀವು ಹೇಳಬೇಕಾಗಿತ್ತು. ನಮಗೆ ಇಂಥ ಯಾವುದೂ ಕೂಡ ಬೇಕಾಗಿಲ್ಲವೆಂದು ಹೇಳಬಹುದಾಗಿತ್ತು. ನಾವು ಯಾರು ಮುಂದೆ ಹೋಗಬೇಕು? ಯಾವ ಜನ ಇವೊತ್ತು ನಮಗಿಂತಲೂ ಹೆಚ್ಚು ನೀರು ಉಪಯೋಗ ಮಾಡಿಕೊಂಡಿದ್ದಾರೆ, ಎಲ್ಲಿ

ಇವೊತ್ತು ಕ್ಯಾಚ್‌ಮೆಂಟ್ ಏರಿಯಾ ಹೆಚ್ಚು ಇದೆ ಯಾರು ತಮ್ಮ ಎಲ್ಲಾ ಪ್ರಾಜೆಕ್ಟ್‌ಗಳನ್ನು ಪೂರ್ಣ ಮಾಡಿಕೊಂಡಿದ್ದಾರೆ. ಅವರು ವಾಯಿಲೆಟ್ ಮಾಡಿಕೊಂಡಿರತಕ್ಕಂಥಾದ್ದು ಯಾವುದು? ತೆಲುಗುಗಂಗಾ ಮಾಡಿಕೊಂಡು ಬಚಾವತ್ ಅವಾರ್ಡ್‌ನ್ನು ವೈಲೆಟ್ ಮಾಡಿಕೊಂಡಿದ್ದಾರೆ. ಶ್ರೀ ಶೈಲಂಡ್ಯಾಂಗೆ ಲಿಫ್ಟ್ ಬ್ಯಾಂಕ್, ರೈಟ್‌ಬ್ಯಾಂಕ್ ಕ್ಯಾನಾಲ್ ಮಾಡಿ ವೈಲೆಟ್ ಮಾಡುತ್ತಿದ್ದಾರೆ.

ಜುರಾಲಕ್ಕೆ ಸುಮಾರು ಒಂದು ಮೀಟರ್‌ನಷ್ಟು ಎತ್ತರಿಸಿ ಇವೊತ್ತಿನ ದಿವಸ ಅವಾರ್ಡ್‌ನ್ನು ವೈಲೆಟ್ ಮಾಡಿ ಸುಮಾರು ಆರು ಟಿಎಂಸಿ ನೀರನ್ನು ಹೆಚ್ಚು ಸಂಗ್ರಹಣೆ ಮಾಡುವುದನ್ನು ಮಾಡುತ್ತಿದ್ದಾರೆ. ಹೀಗೆ ಇವೊತ್ತು ವೈಲೆಟ್ ಮಾಡತಕ್ಕಂಥವರು ಅವರಾದರೆ ನಾವು ಇವೊತ್ತು ಅವರ ಮನ ಒಲಿಸಲು ಎಷ್ಟು ಪ್ರಯತ್ನ ನಡೆದಿದೆ? ಅಲ್ಲಿ ಮಾತುಕತೆ ನಡೆದಾಗಂತೂ ಮುನಿಸಿಕೊಂಡು ಬಂದ ಮಾತು ಬೇರೆ ಆದರೂ ಹಿಂದಿನ ಬಾಗಿಲಿಂದ ಅವರ ಮನ ಒಲಿಸುವ ಯತ್ನಗಳು ನಡೆದಿವೆ. ಇವೊತ್ತು ಚಂದ್ರಬಾಬು ನಾಯ್ಡುರವರು ಜ್ಯೋತಿಬಸುರವರಿಗೆ ಪತ್ರ ಬರೆಯುತ್ತಾರೆ. ಜ್ಯೋತಿಬಸುರವರು ಅವರಿಗೆ ಸಮಾಧಾನ ಹೇಳುತ್ತಾರೆ. ಈ ನಾಲ್ಕು ಜನರ ಕಮಿಟಿಗೆ ಈ ಎಕ್ಸ್‌ಪರ್ಟ್ ಕಮಿಟಿಯವರು ರಿಪೋರ್ಟ್ ಕೊಡತಕ್ಕಂಥವರು. ಆ 9 ಜನರು ಇಲ್ಲಿ ಬಂದು ಇನ್‌ಸ್ಪೆಕ್ಟ್ ಮಾಡುವುದು. ಇದರ ಅರ್ಥ ಏನು? ಅದಕ್ಕೆ ಕಾನೂನಿನಲ್ಲಿ ಸ್ಟಾಂಡೇ ಇಲ್ಲ ಅಂದರೆ without examining without taking the opinion from the law Department, I want to ask, how the Prime Minister acted and how you responded?

ಕಾನೂನಿನಲ್ಲಿ ಅವಕಾಶವಿಲ್ಲವೆಂದು ಆಮೇಲೆ ಅನೌನ್ಸ್ ಮಾಡುವುದಕ್ಕಿಂತ 9 ಅಥವಾ 8ಕ್ಕೆ ಅವರನ್ನು ಕರೆಯಬೇಕು ಅಂದಾಗ ಅಥವಾ ಹಿಂದೆ 5ನೇ ತಾರೀಖು ಕರೆಯಬೇಕೆಂದು ನಿಗದಿ ಮಾಡಿದ್ದರು ಅದು ಪೋಸ್ಟ್‌ಪೋನ್ಡ್ ಆಗಿ ನಿಮಗೆ 9ನೇ ತಾರೀಖು ಇಂಟಿಮೇಷನ್ ಬಂದಮೇಲೆ 10ನೇ ತಾರೀಖು ನಾವು ಮೀಟಿಂಗ್ ಮಾಡಿದಮೇಲೆ 10ನೇ ತಾರೀಖಿನವರೆಗೂ ಲಾ ಇಲಾಖೆ ಜೊತೆ ಕನ್‌ಸಲ್ಟ್ ಮಾಡಿ ಒಂದು ನಿಲುವು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲವೇ ನಿಮಗೆ? Whether a particular body which is constituted under the Inter-State Disputes Act is correct or constitutionally correct?

ಕಾನೂನಿನಲ್ಲಿ ಅದಕ್ಕೇನಾದರೂ ಸ್ಟಾಂಡ್ ಇದೆಯೇ ಎಂದು ತಿಳಿದುಕೊಳ್ಳುವಷ್ಟು ಪುರುಸೊತ್ತು ಇಲ್ಲವೇ ನಿಮಗೆ? ಅಷ್ಟು ಸಮಯ ಇಲ್ಲವೇ? ನಾವು ಅಲ್ಲಿಗೆ ಹೋಗಿ ಮಿಟಿಂಗ್ ಮಾಡಿ ಬೆಂಗಳೂರಿಗೆ ಹಿಂದಿರುಗಿದ ಮೇಲೆ 4 ಮುಖ್ಯಮಂತ್ರಿಗಳ ಕಮಿಟಿ ಮಾಡಿ ಅವರಿಂದ ಎಕ್ಸ್‌ಪರ್ಟ್ ಕಮಿಟಿ ಅನೌನ್ಸ್ ಆದ ಮೇಲೆ ಕಾನೂನು ಇಲಾಖೆ ಹೇಳುತ್ತದೆ, ಎಲ್ಲಿ, ಪ್ರಧಾನಮಂತ್ರಿಗಳ ಮನೆಯಲ್ಲಿ ಹೋದಾಗ, ಇದು ಕಾನೂನು ಪ್ರಕಾರ ಬರುವುದಿಲ್ಲ. ಅದಕ್ಕೇ ಈ ಕಮಿಟಿ ಕಳುಹಿಸುವ ಅವಶ್ಯಕತೆ ಇಲ್ಲ ಎಂದು. ಅಂದರೆ ಎಷ್ಟರಮಟ್ಟಿಗೆ ನಾವು ಕಾಳಜಿ ವಹಿಸಿದ್ದೇವೆ ಅಥವಾ ಕೃಷ್ಣ ಬೇಸಿನ್‌ನ ನೀರನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೇವೆಂಬುದು ತೋರುತ್ತದೆ. ಅದಕ್ಕೆ ಅಧ್ಯಕ್ಷರೇ, ನಾನು ಹೇಳಬೇಕಾಗುತ್ತದೆ ಸ್ಪಷ್ಟವಾಗಿ ಈ ಒಂದು ನಿಲುವಿನಿಂದ ಈ ಸರ್ಕಾರಕ್ಕೆ ಕಾಳಜಿಯಿಲ್ಲ, ನಮ್ಮ ಹಿತರಕ್ಷಣೆ ಮಾಡುವುದು ಇವರ ಕೈಯಿಂದ ಸಾಧ್ಯವಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ, ಇವತ್ತು ಶ್ರೀ ಚಂದ್ರಬಾಬು ನಾಯ್ಡು

ಏನು ಹೇಳುತ್ತಿದ್ದಾರೆಂದರೆ ಅವರು ಕೇಂದ್ರ ಸರ್ಕಾರಕ್ಕೆ ಒಂದು ಮೆಮೊರ್‍ಯಾಂಡಂ ಕೊಟ್ಟರು. ಅದರಲ್ಲಿ ಅವರೇ ಒಪ್ಪಿಕೊಂಡಿದ್ದಾರೆ ಏನೆಂದರೆ ಕೃಷ್ಣ ಮೇಲ್ದಂಡೆ ಯೋಜನೆಯ ಆಲಮಟ್ಟಿ ಡ್ಯಾಮಿಗೆ ಯಾವ್ಯಾವ ತಾರೀಖುಗಳಲ್ಲಿ ಅಪ್ರೂವಲ್ ಸಿಕ್ಕಿತು ಎಂದು. ಆದರೂ ಗಲಾಟೆ ಮಾಡುತ್ತಿದ್ದಾರೆ, ಗಲಾಟೆ ಮಾಡುವಾಗ ನಮ್ಮ ಉತ್ತರ ಏನಿರಬೇಕಾಗಿತ್ತು? ಅವರಿಗೆ ನೇರವಾಗಿ ಒಂದೇ ಮಾತಿನಲ್ಲಿ ಹೇಳಬೇಕಾಗಿತ್ತು, ನಾವು ಈ ಸಂದರ್ಭದಲ್ಲಿ ಮಾತುಕತೆ ಆಡುವ ಅವಶ್ಯಕತೆ ಇಲ್ಲ. ನಾವು ಬರುವ ಅವಶ್ಯಕತೆ ಇಲ್ಲ ನಮಗೀಗಾಗಲೇ ಪ್ಲಾನಿಂಗ್ ಕಮೀಷನ್‌ನಿಂದ ಕೇಂದ್ರ ಜಲ ಆಯೋಗದಿಂದ ಪರ್ಮಿಷನ್ ಸಿಕ್ಕಿದೆ. ಅದರ ಪ್ರಕಾರ ನಾವು ಮುಂದುವರೆಯುತ್ತೇವೆ ಎಂದು ಹೇಳಬೇಕಾಗಿತ್ತು. ಆದರೆ ಇಲ್ಲಿ ಗೊಂದಲ ಪ್ರೆಷರ್, ಮುಖ್ಯಮಂತ್ರಿಗಳು ಇನ್ನೂ ಆ ಮೆಂಟಲ್ ಟೆನ್‌ಷನ್‌ನಲ್ಲಿದ್ದಾರೆ. ಅವರು ಹೇಳಬಹುದು ನಾನು ಹೇಳಬೇಕಾದ್ದನ್ನು ಹೇಳಿದ್ದೇನೆ, ಉಳಿದದ್ದನ್ನು ನಾನು ತಲೆಗೆ ಹಚ್ಚಿಕೊಂಡಿಲ್ಲ ಎಂದು. ಆದರೆ ಇನ್ನೂ ಆ ತಲವಾರು(ಕತ್ತಿ) ತಲೆಮೇಲೆ ತೂಗುತ್ತಲೇ ಇದೆ.

ನಾವು ಪ್ಲಾನಿಂಗ್ ಕಮೀಷನ್‌ಗೆ ಸಬ್‌ಮಿಟ್ ಮಾಡಿದ್ದು 1978ರಲ್ಲಿ, ಅದರ ಪ್ರಕಾರ ನಮ್ಮ ಆಲಮಟ್ಟಿ ಡ್ಯಾಮಿನ ಹೈಟು 512, ಇದಕ್ಕೆ ಮುಂದೆ ಸ್ಟೇಜ್-1 ಮತ್ತು ಸ್ಟೇಜ್-2 ಪ್ರಕಾರ ಡ್ಯಾಮಿನ ಹೈಟ್ ಏರಿಸಬೇಕೆಂದು ಮೊದಲೇ ತಯಾರು ಮಾಡಿದ್ದೆವು ಆ ಡಾಕ್ಯುಮೆಂಟನ್ನು ಯೋಜನಾ ಆಯೋಗಕ್ಕೆ 89ರಲ್ಲಿ ಕೊಟ್ಟೆವು. ಅದನ್ನು ಪ್ಲಾನಿಂಗ್ ಕಮಿಷನ್‌ರವರು 90ರಲ್ಲಿ ಸ್ಯಾಂಕ್ಷನ್ ಮಾಡಿದರು. ಹೇಗೆಂದರೆ ಕ್ರಸ್ಟ್‌ಗೇಟ್ 509 ಮೀಟರ್ ಇರಬೇಕು, ಅದರ ಗೇಟ್ 3.5 ಮೀಟರ್ ಇರಬೇಕು ಆಮೇಲೆ ಡ್ಯಾಮ್ ಹೈಟ್ 524 ಇರಬೇಕು, ಆಮೇಲೆ ಪವರ್ ಡ್ಯಾಂ 528.25 ಮೀಟರ್ ಇರಬೇಕು. ಇದಕ್ಕೆ ಕ್ಲಿಯರೆನ್ಸ್ 1990ರಲ್ಲೇ ಕೊಟ್ಟರು, ಪುನಃ 96ರಲ್ಲಿ I could see that description of stage-I of project has undergone total change in the perceptions of the Government of Karnataka Stage-II features already stand sanctioned in Stage-I.

ಅಂದರೆ ಸ್ಟೇಜ್ 1 ಮತ್ತು 2 ಬೇರೆ ಬೇರೆ ಎಂದು ಅವರ ವಾದ ಇರಬಹುದು. ಆದರೆ ನಾವು ಪವರ್ ಜನರೇಷನ್‌ಗಾಗಿ ಎನ್‌ಹ್ಯಾನ್ಸ್ ಮಾಡಬೇಕೆಂದು ಕೇಳಿಕೊಂಡು ಅದರ ಅಪ್ರೂವಲ್ಲನ್ನು 1990ರಲ್ಲಿ ಪಡೆದುಕೊಂಡಿದ್ದೇವೆ ಮತ್ತು. ಸಿಡಬ್ಲ್ಯುಸಿ ಕೂಡ ಜುಲೈ 96ರಲ್ಲಿ ಅದಕ್ಕೆ ಒಪ್ಪಿಗೆ ಕೊಟ್ಟಿದೆ ಎಂದು ಗೊತ್ತಾಗಿದೆ. ಅದನ್ನು ತಾವು ಕ್ಲಿಯರ್ ಮಾಡಬೇಕು. In July 96 the CWC approved the gates design from Stage-II height of the UKP. ಅಂದರೆ ಯೋಜನಾ ಆಯೋಗ, ಕೇಂದ್ರ ಜನ ಆಯೋಗ, ಕೇಂದ್ರ ಸರ್ಕಾರಗಳೂ ಒಪ್ಪಿಗೆ ಕೊಟ್ಟವು, ವಿಶ್ವಬ್ಯಾಂಕ್‌ನವರೂ ಲೋನ್‌ಗಾಗಿ ಅಪ್ರೂವ್ ಮಾಡಿದ್ದಾರೆ. ಇದೆಲ್ಲಾ ಇದ್ದ ಮೇಲೂ ನಾವು ಎಕ್ಸ್‌ಪರ್ಟ್ ಕಮಿಟಿಗಳನ್ನು ಅಥವಾ ಎಕ್ಸ್‌ಟ್ರಾ ಕಾನ್‌ಸ್ಟಿಟ್ಯೂಷನಲ್ ಆಥಾರಿಟೀಸ್‌ಗೆ ಮಾನ್ಯತೆ ಕೊಡುವಂಥ ಅವಶ್ಯಕತೆ ಏನಿತ್ತು? ಆ ಮುಖ್ಯಮಂತ್ರಿಗಳ ಹತ್ತಿರ ನಾವು ವರದಿ ಕೊಡಬೇಕಾದ ಅವಶ್ಯಕತೆ ಏನಿತ್ತು ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಯಾಗಿ ಜೆಎಚ್ ಪಟೇಲ್ ಆಗಿ ನಾನು ಹೋಗಿದ್ದೆ ಅಂದರೆ ಅದು ಬೇರೆ ವಿಷಯ, ಆದರೆ ಜೆಎಚ್ ಪಟೇಲರಾಗಿ ಹೋಗಲು ಸಾಧ್ಯವಿಲ್ಲ ಏಕೆಂದರೆ ತಮ್ಮನ್ನು ಕರೆಸಿದ್ದು ಕರ್ನಾಟಕದ ಮುಖ್ಯಮಂತ್ರಿಯಾಗಿ ನಿಮ್ಮಿಂದ ಸಮಜಾಯಿಷಿ ಕೇಳುವ ಕೆಲಸವನ್ನೂ ಆ 4 ಮುಖ್ಯಮಂತ್ರಿಗಳು ಮಾಡಿದ್ದು.

ಆದ್ದರಿಂದ ಇದರಲ್ಲಿ ತಾವು ಎಡವಿದ್ದೀರಿ ಎಂದು ನಾನು ಸ್ವಚ್ಛವಾಗಿ ಹೇಳುತ್ತೇವೆ. ತಾವಿದರಲ್ಲಿ ತಪ್ಪು ಮಾಡಿದ್ದೀರಿ ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಅದಕ್ಕಾಗೇ ನಿಮ್ಮ ವಿರುದ್ಧ ಅವಿಶ್ವಾಸ ನಿರ್ಣಯ. ಅದೇನು ಫ್ಯುಟೈಲ್ ಎಕ್ಸ್‌ಸೈಜಲ್ಲ. ನೀವೇನೋ ಹೇಳಬಹುದು, ಏನು ಬೇಕಾದರೂ ಮಾತನಾಡಿಕೊಳ್ಳಿ. ನಮಗೆ ಮೆಜಾರಿಟಿ ಇದೆ ನಾವು ವೋಟ್ ಮಾಡಿಕೊಂಡು ಹೋಗುತ್ತೇವೆಂದರೆ ಅದು ಬಲಾಬಲದ ಮೇಲೆ ಹೋಗುತ್ತದೆ ನೋಡೋಣ. ನಾವೂ ಈ ನಿರ್ಣಯ ತಂದಿದ್ದು ಏತಕ್ಕೆಂದರೆ ನಮಗೂ ಕೂಡ ಆ ಕಡೆ ಜನ ಹೇಳಿದ್ದಾರೆ ಅನೇಕ ಶಾಸಕರು ಬಂದು ಹೇಳಿದರು. ಏನೆಂದರೆ ನೀವು ತನ್ನಿ. ನಾವೂ ಬೆಂಬಲ ಕೊಡುತ್ತೇವೆ ಎಂದು ಯಾರು ಈ ರಾಜ್ಯದ ರಕ್ಷಣೆ ಮಾಡುವುದಕ್ಕಾಗುವುದಿಲ್ಲ ಅಂಥ ಸರ್ಕಾರಕ್ಕೆ ರಕ್ಷಣೆ ಕೊಡಲು ನಾವೂ ತಯಾರಿಲ್ಲ ನಾವೇನೋ ಅಕ್ಟೋಬರ್ 2ಕ್ಕೆ ಹೊರಕ್ಕೆ ಬೀಳುವವರಿದ್ದೇವೆ, ಆದರೆ ನೀವು ಈಗ ಅವಿಶ್ವಾಸ ಸೂಚನೆ ತಂದಿದ್ದರಿಂದ ನಾಳೆಯೇ ಹೊರಕ್ಕೆ ಬೀಳುತ್ತೇವೆ ಎಂದು ಅವರು ಮಾತು ಕೊಟ್ಟಿದ್ದಕ್ಕಾಗಿ ನಾವು ಇದನ್ನು ಮೂವ್ ಮಾಡಿದೆವು. ನಮಗೆ ಶಕ್ತಿ ಇದೆ, ಅದರ ಜೊತೆಗೆ ಅವರ ಅಡಿಷನಲ್ ಸಪೋರ್ಟ್‌ನಿಂದ ಇದನ್ನು ಮೂವ್ ಮಾಡಿದ್ದೇವೆ. 22 ಜನರಂತೂ ನಮಗೆ ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : 5 ಜನ ಮಂತ್ರಿಗಳು, ಹಾಗೂ 16 ಜನ ಶಾಸಕರು ನಮ್ಮ ಪರ ಬರುತ್ತೇವೆಂದು ಹೇಳಿದ್ದಾರೆ.

4.40 ಪಿ.ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇವತ್ತು ಅದಕ್ಕೆ ಆಂಧ್ರ ಪ್ರದೇಶದ ಮುಖ್ಯ ಮಂತ್ರಿಗಳೇ ಕುಮ್ಮಕ್ಕು ಕೊಡುತ್ತಿದ್ದಾರೆ. ಅದಕ್ಕೆ ಫೈನಾನ್ಸ್ ಮಾಡುತ್ತಿದ್ದಾರೆ. ಇದು ಎಷ್ಟು ವಿಚಿತ್ರ ನೋಡಿ. ಒಂದು ಕಡೆ ಚಂದ್ರಬಾಬು ನಾಯ್ಡು ಅವರು ಬಂದು ಪ್ರಧಾನ ಮಂತ್ರಿಯವರಿಗೆ ನೀವು ನಮಗೆ ಸಹಾಯ ಮಾಡಿ ಎಂದು ಅವರ ಹತ್ತಿರ ಹೋಗುತ್ತಾರೆ ಮಾತುಕತೆಗೆ ಎಕ್ಸ್‌ಪರ್ಟ್ ಸಮಿತಿ ಬಂದರೆ ನಾನು ಸಿದ್ಧನಿದ್ದೇನೆಂದು ಮುಖ್ಯ ಮಂತ್ರಿಗಳ ಹತ್ತಿರ ಮಾತನಾಡುತ್ತಾರೆ. ಇನ್ನೊಂದು ಕಡೆ ಹೈಕೋರ್ಟಿನಲ್ಲಿರತಕ್ಕಂತಹ ಕೇಸ್ ಏನು ಕೃಷ್ಣಯ್ಯ ಎಂಬುವವರು ಪಿಟಿಷನ್ ಹಾಕಿದ್ದಾರೆ ಅದಕ್ಕೆ ಎಲ್ಲಾ ಶಕ್ತಿಯನ್ನು ಎಲ್ಲಾ ಕುಮ್ಮಕ್ಕನ್ನು ಕೊಡತಕ್ಕಂತಹ ಪ್ರಯತ್ನವನ್ನು ಕೂಡ ಇವತ್ತು ಅವರು ಮಾಡುತ್ತಿದ್ದಾರೆ. ಇಲ್ಲದಿದ್ದರೆ ಇದಕ್ಕೆ ಇಷ್ಟೊಂದು ಮಹತ್ವ ಬರುತ್ತಿರಲಿಲ್ಲ, ನಾವು ಇವತ್ತು ಹೇಳುತ್ತಿದ್ದೇವೆ. ದಟ್ ಕೇಸ್ ಈಸ್‌ನಾಟ್ ಟೆನೆಬಲ್ ಎಂದು ಎಲ್ಲರೂ ಹೇಳುತ್ತಿದ್ದೆವು.

ಆ ಕೇಸ್ ಅಗಲೇ ಡಿಸ್‌ಮಿಸ್ ಆಗಬೇಕಾಗಿತ್ತು ಅವರಿಗೆ ಯಾವುದೇ Inter State water Dispute Act ನ್ನು centertain ಮಾಡತಕ್ಕಂಥ ಹಕ್ಕು ಇಲ್ಲ. ಅವರೇನು ಅವಾರ್ಡ್ ತೆಗೆದುಕೊಂಡಿದ್ದಾರೆಂದರೆ ಬಚಾವತ್ ಅವಾರ್ಡ್ ಪ್ರಕಾರ ಅಲ್ಲಿ ಕರ್ನಾಟಕ ಸರಕಾರದವರು ಆ ಬಚಾವತ್ ಅವಾರ್ಡನ್ನು ಇಂಪ್ಲಿಮೆಂಟ್ ಮಾಡುತ್ತಿಲ್ಲ. ಆ ಅವಾರ್ಡ್ ಅನ್ನು ವಯೊಲೇಟ್ ಮಾಡುತ್ತಿದ್ದಾರೆ. ಆ ಅವಾರ್ಡ್ ಅನ್ನು ವಯೊಲೇಟ್ ಮಾಡಿದರೆ ನಾವು ಆ ಡ್ಯಾಮಿನ ಹೈಟ್ ಅನ್ನು ಕಡಿಮೆ ಮಾಡಬೇಕೆಂಬ ಬಗ್ಗೆ ಮಾತ್ರ ಇಲ್ಲಿ ನಾವು ಪ್ರಶ್ನೆಯನ್ನು ಹಾಕಿದ್ದೇವೆಯೇ ಹೊರತಾಗಿ ಆ ಅವಾರ್ಡಿಗೆ ಚಾಲೆಂಜ್ ಮಾಡತಕ್ಕಂಥಾದ್ದೇ ಆಗಲೀ ಟ್ರಿಬ್ಯುನಲ್ ಜಡ್ಜ್‌ಮೆಂಟಿಗೆ ಚಾಲೆಂಜ್ ಮಾಡತಕ್ಕಂಥದ್ದಾಗಲೀ ನಾವು ಮಾಡಿಲ್ಲವೆಂಬ ವಾದವನ್ನು ಇವತ್ತು ಅವರು

ಮಂಡಿಸುತ್ತಿದ್ದಾರೆ. ಇವತ್ತು ಎಲ್ಲಾ ರಾಜ್ಯಗಳು ಸಾವರಿನ್ ಇದೆ ಪ್ರತಿಯೊಂದು ರಾಜ್ಯವೂ ನಮ್ಮ ನಮ್ಮ ಅಲೋಕೇಷನ್ ಏನು ಇದೆ ನಮಗೆ ಕೊಟ್ಟಂತಹ ವಿಷಯಗಳು ಅದರಲ್ಲಿ ನಾವು ಸುಪ್ರೀಂ ಇದ್ದೇವೆ, ನಾವು ಸಾವರಿನ್ ಇದ್ದೇವೆ, ನಾವು ಸಾರ್ವಭೌಮರಿದ್ದೇವೆ.

ನಮ್ಮ ಸಾರ್ವಭೌಮತ್ವವನ್ನು ನಮ್ಮ ನೀರನ್ನು ಯಾವ ರೀತಿಯಾಗಿ ಉಪಯೋಗ ಮಾಡಬೇಕು ನಮ್ಮ ಡ್ಯಾಮಿನ ಹೈಟ್ ಎಷ್ಟು ಇಡಬೇಕೆಂದು ಹೇಳಿ ನಿರ್ಣಯ ಮಾಡತಕ್ಕಂಥಾದ್ದು ನಮ್ಮ ಸರಕಾರವೇ ಹೊರತು ಅವರು ಅಲ್ಲ. ಅದರ ಬಗ್ಗೆ ನಿರ್ಣಯ ಕೊಡತಕ್ಕಂಥಾದ್ದು ಮಾತನಾಡತಕ್ಕಂಥಾದ್ದರ ಬಗ್ಗೆ ಪ್ರಯತ್ನ ಮಾಡುತ್ತಿದ್ದಾರೆ. ಅಲ್ಲಿನ ಹೈಕೋರ್ಟ್ ಕೂಡ ಅದಕ್ಕೆ ಎಂಟರ್‌ಟೇನ್ ಮಾಡುತ್ತಿದೆ. ಅದಕ್ಕೆ ಒಂದು ಕಡೆಯಿಂದ ಕುಮ್ಮಕ್ಕು ಕೊಡುತ್ತಿದ್ದಾರೆ.

ಅವರು ಎರಡು ಕಡೆಯಿಂದ ಪ್ರಯತ್ನ ಮಾಡುತ್ತಿದ್ದಾರೆ. ಒಂದು ಕಡೆಯಿಂದ ಕೋರ್ಟಿನಿಂದ ಏನಾಗುತ್ತದೆ ಅದೂ ಮುಂದುವರಿಯಬೇಕು ಇನ್ನೊಂದು ಕಡೆಯಿಂದ ಮಾತುಕತೆಯಿಂದ ನಿಮ್ಮಿಂದ ಎಷ್ಟು ತಡೆ ಮಾಡುವುದಕ್ಕೆ ಆಗುತ್ತದೆ ಅಂದರೆ ಈ ಆಲಮಟ್ಟಿ ಡ್ಯಾಮಿನ ಎತ್ತರವನ್ನು ಅಥವಾ ಯು.ಕೆ.ಪಿ.ಕೆಲಸವನ್ನು ಎಷ್ಟರ ಮಟ್ಟಿಗೆ ನಿಲ್ಲಿಸುವುದಕ್ಕೆ ಸಾಧ್ಯವಿದೆ ಅಷ್ಟರಮಟ್ಟಿಗೆ ನಿಲ್ಲಿಸುವುದಕ್ಕೆ ಪ್ರಯತ್ನ ಪಟ್ಟು ಮಾತುಕತೆಯಿಂದ ಮಾಡುತ್ತಿದ್ದಾರೆ. ಈ ಮಾತುಕತೆ ಕೂಡ ಒಂದು ಕಡೆ ಜಾರಿಯಲ್ಲಿದೆ. ಆ ಕಡೆ ಜ್ಯೂಡಿಷಿಯರಿಯಲ್ಲಿ ಕಾನೂನು ಪ್ರಕಾರವಾಗಿ ಏನು ಹೋರಾಟ ಮಾಡಬೇಕು ಅದನ್ನು ಕೂಡ ಪ್ರಯತ್ನ ಮಾಡುತ್ತಿದ್ದಾರೆ. ಇವತ್ತು ನಮ್ಮನ್ನು ಇಕ್ಕಟ್ಟಿಗೆ ಸಿಕ್ಕಿಸತಕ್ಕಂತಹ ಪ್ರಯತ್ನವನ್ನು ಮಾನ್ಯ ಚಂದ್ರಬಾಬು -ನಾಯ್ಡು ಅವರು ಮಾಡುತ್ತಿದ್ದಾರೆ. ಬಾಯಿಗೆ ಬಂದಂತೆ ಒಂದೊಂದು ಹೇಳಿಕೆ ಕೊಡುತ್ತಿದ್ದಾರೆ. ಒಂದು ಸಲ ಆ ಮಾತುಕತೆಗೆ ಹೋಗುವುದಿಲ್ಲವೆಂದು ಹೇಳುತ್ತಾರೆ. ಅವರ ನೀರಾವರಿ ಮಂತ್ರಿಗಳು ಹೇಳಿದ್ದಾರೆ. ಅನೇಕ ಸಾರಿ ನಮ್ಮ ಮಾನ್ಯ ಜೆ.ಹೆಚ್. ಪಟೇಲರು, ನಮ್ಮ ಮಾನ್ಯ ಮುಖ್ಯ-ಮಂತ್ರಿಗಳು ಮಾತನಾಡತಕ್ಕಂಥಾದ್ದು ಸರಿಯಲ್ಲ ಮತ್ತು ಅವರು ಇವತ್ತು ಯಾವ ಧಾಟಿಯಲ್ಲಿ ಹೋಗುತ್ತಿದ್ದಾರೆ ಆ ಧಾಟಿ ಸರಿ ಇಲ್ಲವೆನ್ನತಕ್ಕಂತಹ ವಾದವನ್ನು ಒಂದು ಕಡೆ ಹೇಳುತ್ತಾರೆ. ಆದರೆ ನನಗೆ ಇದು ಗೊತ್ತಾಗುತ್ತಿಲ್ಲ ಧಾಟಿ ಸರಿ ಇಲ್ಲವೆಂದು ಪತ್ರಿಕೆಯಲ್ಲಿ ಅವರು ಖಂಡಿಸುತ್ತಾರೆ. ಇವರೂ ಖಂಡಿಸುತ್ತಾರೆ. ಆದರೆ ಈ ಮಾತುಕತೆಗಾಗಿ ಒಳಗಿಂದೊಳಗೆ ಪತ್ರ ಬರೆಯುವುದು, ಮಾತನಾಡುವುದು ಜ್ಯೋತಿಬಸು ಅವರ ಜೊತೆ ಟೆಲಿಫೋನಿನಲ್ಲಿ ಮಾತನಾಡುವುದು, ಕರುಣಾನಿಧಿಯವರ ಜೊತೆ ದೂರವಾಣಿಯಲ್ಲಿ ಮಾತನಾಡುವುದು, ಚಂದ್ರಬಾಬು ನಾಯ್ಡು ಅವರ ಜೊತೆ ದೂರವಾಣಿಯಲ್ಲಿ ಮಾತನಾಡತಕ್ಕಂಥಾದ್ದು, ಪ್ರಧಾನ ಮಂತ್ರಿಗಳು ಇಲ್ಲಿಗೆ ಬಂದಾಗ ಅವರ ಜೊತೆ ಇದರ ಬಗ್ಗೆ ಮಾತುಕತೆಗಳನ್ನು ನಡೆಸತಕ್ಕಂಥಾದ್ದು. ಇದರ ಒಳಗುಟ್ಟು ಏನು ಇದೆ ಎನ್ನುವುದು ಹೊರಗೆ ಇನ್ನೂ ಬಂದಿಲ್ಲ. ಇದು ಬರಬೇಕು. ಏಕೆಂದರೆ ನಾವು ಬರೀ ಪೇಪರ್ ಮೇಲೆ ಹೋಗುವುದಕ್ಕಾಗುವುದಿಲ್ಲ. ತಾವು ಪೇಪರ್ ಟೈಗರ್ ಆಗಿದ್ದೀರಿ ದೊಡ್ಡ ಹೇಳಿಕೆಯನ್ನು ತೋರಿಸುತ್ತೀರಿ. ಯ್ಯಾರೇ ಬಂದರೂ ನಾನು ಇದನ್ನು ನಿಲ್ಲಿಸುವುದಿಲ್ಲ, ಹೈಟ್ ಕಡಿಮೆ ಮಾಡುವುದಕ್ಕೆ ಸಾಧ್ಯವಿಲ್ಲ ವರ್ಕ್ ವಿಲ್ ಗೋ ಆನ್ ಎಂದು ಹೇಳಿದ್ದೀರಿ.

ಹಾಗೆ ಹೇಳಿದ ತಕ್ಷಣ ಇಲ್ಲಿ ಏನಾದರೂ ಬಂದಾಗ ನಾರು ಮಾತುಕತೆಗೂ ರೆಡಿ ಇದ್ದೇವೆಂದು ಇನ್ನೊಂದು ಕಡೆ ಹೇಳುತ್ತೀರಿ. ಅಥವಾ ಅವರು ಯಾವುದೇ ಒಂದು ಸಮಜಾಯಿಷಿ ನಿಮಗೆ ಕೇಳಿದರೆ ಅವರ ಜೊತೆ ಚರ್ಚೆ ಮಾಡಲಿಕ್ಕೆ

ಸಿದ್ಧನಿದ್ದೇನೆಂದು ಹೇಳುತ್ತೀರಿ. ಅವರ ಟೀಮ್ ಬಂದು ಎಲ್ಲಾ ಕಡೆ ಭೇಟಿ ಮಾಡಲಿ ನಾನು ತೋರಿಸುವುದಕ್ಕೆ ಸಿದ್ಧನಿದ್ದೇನೆಂದು ಹೇಳುತ್ತೀರಿ. ಯಾವ ಟೀಮ್ ಅಲ್ಲಿಂದ ಬಂದಿದೆ ಆ ಟೀಮಿಗೆ ಅದೇ ರೀತಿಯಾಗಿ ವಾಪಸ್ಸ್ ಕಳುಹಿಸುತ್ತೇನೆಂದು ಒಂದು ಸಲ ಹೇಳುತ್ತೀರಿ. ಯಾವ ಮಾತನ್ನು ನಾವು ನಂಬಬೇಕು.

ಯಾವ ರೀತಿಯಾಗಿ ತಾವು ನಡೆದು ಕೊಳ್ಳುತ್ತೀರಿ ಎಂಬುದನ್ನು ಇವತ್ತು ನಮ್ಮ ಮುಂದೆ ಸ್ಪಷ್ಟ ಆಗಿಲ್ಲ. ಇದರಿಂದ ಇಡೀ ಕರ್ನಾಟಕ ರಾಜ್ಯದ ಜನತೆ ಗೊಂದಲದಲ್ಲಿದ್ದಾರೆ ಮತ್ತು ಆ ಗೊಂದಲಕ್ಕೆ ತಾವೇ ಮುಖ್ಯ ಕಾರಣ ಕರ್ತರೆಂದು ಹೇಳತಕ್ಕಂತಹ ಮಾತನ್ನು ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ. ಅವರ ಮುಖ್ಯ ಅಬ್ಜೆಕ್ಷನ್ ಏನೆಂದರೆ ನಮ್ಮ ಆಂಧ್ರ ಪ್ರದೇಶದವರದ್ದು, ಇವತ್ತು ಅವರು ಪ್ರಧಾನ ಮಂತ್ರಿಯವರ ಮುಂದೆ ಮೂರು ಬೇಡಿಕೆಯನ್ನು ಸ್ಪಷ್ಟವಾಗಿ ಇಟ್ಟಿದ್ದಾರೆ ನಾನು ಆ ಜಿಸ್ಟ್ ಓದುತ್ತೇನೆ. 'In the interest of speedy and amicable solution to the Almatti issue, the Government of Andhra Pradesh suggest that the Government of Karnataka Provide all details of the Almatti Dam project.."

ಇದೊಂದು ಅವರಿಗೆ ಕೊಟ್ಟಿದ್ದಾರೆ. ಬಹುಶಃ ಅವರಿಗೆ ಮುಟ್ಟಿರಬೇಕು. ಯೂನಿಯನ್ ಸರಕಾರಕ್ಕೆ ಕೊಟ್ಟಿದ್ದಾರೆ. "To speed up matters Andhra Pradesh propose to depute a senior team of Engineers to Karnataka and to the project site to seek all clarifications'.

ಅಂದರೆ ಅವರ ಸೀನಿಯರ್ ಇಂಜಿನಿಯರ್ಸ್ ಇಲ್ಲಿಗೆ ಬರುತ್ತಾರೆ. ಇಲ್ಲಿ ಪ್ರಶ್ನೆ ಉತ್ತರ ಮಾಡಿ ನಮ್ಮ ಇನ್ಸ್‌ಪೆಕ್ಷನ್ ಮಾಡಿಕೊಂಡು ನಮ್ಮ ಕೆಲಸ ಸರಿ ಇದೆಯೇ ಅಥವ ಇಲ್ಲವೇ, ಅವರಿಗೆ ಅನುಕೂಲವಾಗುತ್ತದೆಯೇ ಅಥವಾ ಇಲ್ಲವೋ ಅವರಿಗೆ ಅನುಕೂಲವಾಗತಕ್ಕಂತಹ ರೀತಿಯಲ್ಲಿ ಕಟ್ಟುತ್ತೇವೋ ಹೇಗೆ ಎನ್ನುವುದನ್ನು ನೋಡಿಕೊಂಡು ಹೋಗುವುದಕ್ಕೆ ನಾವು ಬರುತ್ತೇವೆ ನೀವು ಎಲ್ಲಾ ವ್ಯವಸ್ಥೆ ಮಾಡಿ ಎಂದು ಕೇಳಿಕೊಂಡಿದ್ದಾರೆ. ಎರಡನೆಯದಾಗಿ,

'The Government of India directs immediate suspension of all the work on the Almatti Dam including the construction of Spill way and solid crest gate.

ಇದನ್ನು ಕೂಡ ಅವರೇನು ಹೇಳುತ್ತಿದ್ದಾರೆಂದರೆ ಈ ಕೆಲಸವನ್ನು ನಿಲ್ಲಿಸುವುದಕ್ಕೆ ಕೇಂದ್ರ ಸರಕಾರ ಆದೇಶ ಕೊಡಬೇಕು ಸ್ಪಿಲ್ ವೇ ಸಾಲಿಡ್ ಕ್ರಸ್ಟ್ ಗೇಟ್ ಅನ್ನು ನಿಲ್ಲಿಸಬೇಕು ಎಂದೂ ಕೂಡ ಅವರು ಕೇಳಿಕೊಂಡಿದ್ದಾರೆ. ಮೂರನೆಯದಾಗಿ the Government of Karnataka should cancel all clearances, permissions given to Upper Krishna project which constitute modification to Stage-I of the project as sanctioned by planning Commission vide letter No. II/26/77-1/CAD/22nd April 1978.

ಅಂದರೆ ಇಲ್ಲಿಯವರೆಗೆ ಕೊಟ್ಟಿದ್ದೆಲ್ಲವನ್ನೂ ಕ್ಯಾನ್ಸಲ್ ಮಾಡಿ ಎಂದು ಹೇಳುತ್ತಿದ್ದಾರೆ. ಇದು ಅವರ 3 ನೇ ಬೇಡಿಕೆ. 4, ನೇ ಬೇಡಿಕೆ ಏನೆಂದರೆ The Government of India should immediately rescind reported sanction of the special central assistance of Rs. 200 crores to Upper Krishna project for completion of

certain on-going works on this violative of the riparian rights of Andhra Pradesh as protected under the Krishna Disputes Tribunal Award.

ಇದರ ಬಗ್ಗೆ ಕೂಡ ಅವರು ಹೇಳಿದ್ದಾರೆ. ಆಕ್ಸಿಲರೇಟೆಡ್ ಇರಿಗೇಷನ್ ಪ್ರೋಗ್ರಾಮ್ಸ್‌ನಲ್ಲಿ 900 ಕೋಟಿಗಳಲ್ಲಿ 200 ಕೋಟಿ ರೂಪಾಯಿಗಳನ್ನು ಕರ್ನಾಟಕ ರಾಜ್ಯಕ್ಕೆ, ಇಂತಹ ಪ್ರಾಜೆಕ್ಟ್ ಎಂದು ಇಲ್ಲ, ಕೊಡಬೇಕೆನ್ನುವ ಒಂದು ಊಹಾಪೋಹ ಅಥವಾ ಕೊಡುತ್ತೇವೆ ಎನ್ನುವ ವದಂತಿ ಇದ್ದು ಆ ವದಂತಿ ಇವರ ಕಿವಿಯಲ್ಲಿ ಬಿದ್ದಿರಬಹುದು. ನಾಗೇಗೌಡರ ಕಿವಿಯಲ್ಲಿ ಬಿದ್ದಿರಬಹುದು. ಇವರೇನು ಮಾಡಿದರು ಎಂದರೆ ಅವರು ಅದನ್ನು ಇಷ್ಟು ಪ್ರಚಾರ ಮಾಡಿದರು. ಸಿಗುವುದಕ್ಕೆ ಮೊದಲು ಕಳೆದುಕೊಳ್ಳುವ ಪರಿಸ್ಥಿತಿ ಬಂತು. ನಮ್ಮ ಕಡೆ ಹೇಳುತ್ತಾರಲ್ಲಾ, ಹಾಗೆ, ಕುತ್ತಿಗೆ ಕಡಿದು ಬಿಸಾಕಾ ಊರಾಗ ಬತ್ತಲೆ ಬಿಟ್ಟರೆ ಸಾಕಾಗಿದೆ ಎನ್ನುವ ಹಾಗಾಯಿತು. ಅಂತಹ ಊರಿಗೆ ತಾವು ಒಯ್ದು ಬಿಟ್ಟಿದ್ದೀರಿ. ನಮ್ಮ ಡ್ಯಾಮ್ ನಮಗೆ ಉಳಿದರೆ ಸಾಕು ನಮ್ಮ ಹೈಟ್ ನಮಗೆ ಉಳಿದರೆ ಸಾಕು ಎನ್ನುವ ಪರಿಸ್ಥಿತಿ ಇವತ್ತು ನಮಗೆ ಬಂದಿದೆ. ಇವತ್ತು ಆ ಪರಿಸ್ಥಿತಿ ನಾಗೇಗೌಡರಿಗೆ ಬಂದಿದೆ. ಬಹುಶಃ ಅವರಿಗೇನೋ ಸ್ವಲ್ಪ ಕಷ್ಟವಾಗುತ್ತದೆ.

ಏಕೆಂದರೆ 900 ಕೋಟಿ ರೂಪಾಯಿ ಆಕ್ಸಿಲರೇಟೆಡ್ ಇರಿಗೇಷನ್ ಪ್ರೋಗ್ರಾಮ್ಸ್‌ಗೆ ಇಡೀ ರಾಜ್ಯದಲ್ಲಿ ಕೊಡುವಾಗ ಇದಕ್ಕೆ 200 ಕೋಟಿ ಕೊಡುತ್ತೇನೆ ಎಂದು ಹೇಳಿ ನೀನು ಇಲ್ಲಿ ಪ್ರಚಾರ ಮಾಡು ಎಂದು ಅವರಿಗೆ ಬಹುಶಃ ಹೇಳಿರಬಹುದು. ಕಡೆಗೆ ಏನಾಯಿತು ಎಂದರೆ ಆಂಧ್ರ ಪ್ರದೇಶದವರು ಇಲ್ಲಿಗೆ ಬಂದು ಕೊನೆಗೆ ಎಕ್ಸ್‌ಪರ್ಟ್ ಸಮಿತಿಯನ್ನು ನಾವು ಮಾಡಿ ನೋಡುತ್ತೇವೆ ಆ 200 ಕೋಟಿಯೂ ಬೇಡ ಎಂದು ಅವರು ಹೇಳುವುದು. ಆ ಹೈಟ್ ಬೇಡ. ಇಲ್ಲಿಯವರೆಗೆ ಏನೇನು ಕ್ಲಿಯರೆನ್ಸ್ ಕೊಟ್ಟಿದ್ದೀರಿ ಅದನ್ನು ತಡೆಹಿಡಿಯಬೇಕು ಅಲ್ಲಿಯವರೆಗೆ ನಮ್ಮ ಡಿಸ್‌ಕಷನ್ ಆಗುವುದಿಲ್ಲವೆಂದು ಹೇಳಿದರು. ಅದಕ್ಕಾಗಿ ಇವರ ಕಥೆ ಏನಾಗಿದೆ ಎಂದರೆ ಕದ್ದು ಹೋಳಿಗೆ ಕೊಟ್ಟರೆ ಹೊಯ್ಕೊಂಡು ತಿಂದರಂತೆ ಹಾಗೆ ಆಗಿದೆ. ಪ್ರಧಾನ ಮಂತ್ರಿಗಳು ಹೇಳಿರಬಹುದು ಮುಂದೆ ಬಂದರೆ ಯೋಚನೆ ಮಾಡಿ ಕೊಡೋಣ. ಅದಕ್ಕಾಗಿ ನೀವು ಇದನ್ನು ಉಪಯೋಗ ಮಾಡಿ ಕೊಳ್ಳಿ ಎಂದು ಬಹುಶಃ ಹೇಳಿರಬಹುದು. ಅದಕ್ಕೆ ಕದ್ದು ಹೋಳಿಗೆ ಕೊಟ್ಟರೆ ಆ ಮನುಷ್ಯ ಊರ ತುಂಬಾ ಹೊಂಕ್ಕೊಂಡು ನನಗೆ ನಮ್ಮ ಸಾಹುಕಾರರು ಹೋಳಿಗೆ ಕೊಟ್ಟಿದ್ದಾರೆ ಹೋಳಿಗೆ ಕೊಟ್ಟಿದ್ದಾರೆಂದು ಹೊಯ್ದುಕೊಂಡು ತಿಂದನಂತೆ. ಆಗ ಎಲ್ಲರೂ ಮನೆಗೆ ಬಂದು ನೀನು ಯಾರಿಗೆ ಕೇಳಿ ಕೊಟ್ಟೆ ಎಂದು ನೀಡಿದಂತಹ ಹೆಣ್ಣುಮಗಳನ್ನು ಕೇಳಿದರಂತೆ ಆ ಪರಿಸ್ಥಿತಿ ನಮಗೆ ಬಂದಿದೆ. ಆ 200 ಕೋಟಿಯಂತೂ ನಮಗೆ ಸಿಗಲೇ ಇಲ್ಲ.

ಕೊನೆಗೆ ಏನು ಎಂದರೆ ಕೆಟ್ಟ ಹೆಸರೂ ಕೂಡ ತಪ್ಪಲಿಲ್ಲ. ಪ್ರಧಾನಮಂತ್ರಿಯವರು ಇವತ್ತು ನಾನು 200 ಕೋಟಿ ರೂಪಾಯಿ ಬಿಡುಗಡೆ ಮಾಡುತ್ತೇನೆ ಪ್ರಚಾರ ಮಾಡಿ ಎಂದುಹೇಳಿರಬೇಕು. ಆದರೆ ನಮಗೇನೂ ಪ್ರಯೋಜನವಾಗಲಿಲ್ಲ. ನಮಗೇನಾಯಿತು? 528 ಮೀಟರ್ ಹೈಟನ್ನು ಏರಿಸುವುದು ನೀವು ನಿಲ್ಲಿಸಿ ನಿಲ್ಲಿಸಿ ಎಂದು ಹೇಳಿ ಈವತ್ತು ಎಲ್ಲರೂ ಕೂಡ ನಮಗೆ ಗಂಟು ಬಿದ್ದಿದ್ದಾರೆ. ಮತ್ತು ದುಡ್ಡುಕೊಡುವುದಕ್ಕೂ ಕೂಡ ಅವರು ಹಿಂದೆಮುಂದೆ ಜರಿಯುತ್ತಾರೆ. ಈಗೇನೂ ಇನ್ನೂ ಬಂದೇ ಇಲ್ಲ. ಇವತ್ತಿನ ದಿವಸ ಕೊಟ್ಟೇ ಇಲ್ಲ. ಮತ್ತೆ ಅದರ ಬಗ್ಗೆ ಚಿಂತೆ ಮಾಡುತ್ತಿದ್ದೇವೆ. ಯೋಚನೆ ಮಾಡುತ್ತಿದ್ದೇವೆ ಎನ್ನುವುದು ಇದೆ. ಅದಕ್ಕಾಗಿ ಈ ಅಸೆಂಬ್ಲಿಯಾದ ಮೇಲೆ

ವೋಟ್ ಆಫ್ ನೋಕಾನ್‌ಫಿಡೆನ್ಸ್ ಚರ್ಚೆ ಮುಗಿದ ಮೇಲೆ ಇವರ ಪಾತ್ರ 28 ರಿಂದ ಏನು ಇರುತ್ತದೆಯೇ ಅಥವಾ 29 ರಿಂದ ಏನು ಇರುತ್ತದೆಯೋ ಗೊತ್ತಿಲ್ಲ. ಅದೇನು 200 ಕೋಟಿ ರೂಪಾಯಿ ಬರುತ್ತದೆಯೇ ಅಥವಾ ಆ ಕಡೇಗೇ ಹೋಗುತ್ತದೇಯೋ ಗೊತ್ತಿಲ್ಲ 528 ಮೀಟರ್ ಡ್ಯಾಮ್ ಹೈಟನ್ನು ಕಡಿಮೆ ಮಾಡಿಸುವುದಕ್ಕೆ ಏನಾದರೂ ಒಪ್ಪಿಕೊಂಡು ಬರುತ್ತಾರೋ ಹೇಗೋ ಅದು ಕೂಡ ಗೊತ್ತಿಲ್ಲ. ಏಕೆಂದರೆ ಇವೆಲ್ಲವೂ ಕೂಡ ಅಮುಖಿನಲ್ಲಿದೆ.

ಚಂದ್ರಬಾಬುನಾಯ್ಡುರವರು ಮುನಿಸಿಕೊಂಡು ಮನೆಯಲ್ಲಿ ಕುಳಿತಂಥ ವ್ಯಕ್ತಿ ನಿನ್ನೆ ನಮ್ಮ ಪ್ರಧಾನಮಂತ್ರಿಯವರ ಹತ್ತಿರ ಹೋಗಿ ಶಾಲು ಹೊದ್ದಿಸಿ ಏನೋ ಮಾತು ಆಡಿಕೊಂಡು ಬಂದಿದ್ದಾರೆ. ಅದಕ್ಕಾಗಿ ಸ್ವಲ್ಪ ಬದಲಾವಣೆಯಾದಂತೆ ಕಾಣುತ್ತದೆ. ಯಾವ ಮನುಷ್ಯ ಕರ್ಟಿಸಿ ಪ್ರಕಾರ ಅಂದರೆ ಯಾವುದೇ ಮುಖ್ಯ ಮಂತ್ರಿ ಒಬ್ಬರು ಪ್ರಧಾನಮಂತ್ರಿಯವರು ಬರುವಾಗ ಹೋಗುವಾಗ ನಮ್ಮ ಪ್ರೊಟೋಕಾಲ್ ಪ್ರಕಾರ ಅಲ್ಲಿ ಇರಲೇಬೇಕು. ಕಳುಹಿಸುವಾಗ ಇರಬೇಕು. ರಿಸೀವ್ ಮಾಡುವಾಗ ಇರಬೇಕು. ಆದರೆ ಅವರ ಕ್ಷೇತ್ರದಲ್ಲಿ ಹೋದಾಗ, ಅವರ ರಾಜ್ಯದಲ್ಲಿ ಹೋದಾಗ ಅವರು ಇರಲಿಲ್ಲ. ರಿಸೀವ್ ಮಾಡುವುದಕ್ಕೂ ಇರಿಲಿಲ್ಲ. ಕೊನೆಗೆ ಏನೆಂದರೆ ಹೋಗುವಾಗ ಕೊನೆಗಳಿಗೆಗೆ ಹೋಗಿ ಒಂದು ಶಾಲು ಹೊದ್ದಿಸಿದ್ದಾರೆ.

ಅವರಿಬ್ಬರ ಫೋಟೋವನ್ನು ನೋಡಬೇಕು. ಸ್ವಲ್ಪವೂ ನಗುಮುಖವೂ ಇಲ್ಲ. ಒಬ್ಬರಿಗೊಬ್ಬರು ನೋಡುವ ಸ್ಥಿತಿಯಲ್ಲೂ ಇಲ್ಲ. ಆದರೆ ಏನಾದರೂ ಒಂದು ಸಂಧಾನ ನಡೆದಿದೆ. ಏಕೆಂದರೆ ಅವರು ಕೂಡ ಹೇಳಿದ್ದಾರೆ. ನಿನ್ನೆ ಒಂದು ಮೀಟಿಂಗ್ ಮಾಡಿದ್ದಾರೆ. ಎಲ್ಲಾ ಪಕ್ಷಗಳ ತಮ್ಮ ಪಾರ್ಟಿ ಒಂದು ಎಕ್ಸಿಕ್ಯೂಟಿವ್ ಕಮಿಟಿ ಮೀಟಿಂಗ್ ಮಾಡಿಕೊಂಡು ಮತ್ತು ಮಂತ್ರಿಮಂಡಲದ ಸಭೆಯನ್ನು ಕೂಡ ಮಾಡಿಕೊಂಡು ಅವರು ಸ್ಪಷ್ಟವಾಗಿ ಹೇಳಿದ್ದಾರೆ. ನೀವು ಚಿಂತೆ ಮಾಡಬೇಡಿ? ಕೇಂದ್ರ ಸರ್ಕಾರದಲ್ಲಿ ನೀವೇನು ಮಂತ್ರಿಗಳಾಗಿದ್ದೀರಿ, ನೀವು ಬಿಡುವ ಅವಶ್ಯಕತೆ ಇಲ್ಲ, ನಾವು ಮಾತುಕತೆ ಮುಂದುವರೆಸುತ್ತೇನೆ ಎನ್ನುವ ಆ ಧಾಟಿಯಲ್ಲಿ ಅವರು ಹೇಳುತ್ತಿದ್ದಾರೆ. ಅಂದರೆ ಏನರ್ಥ?

ಶ್ರೀ ಬಿ.ಎಸ್. ಯಡಿಯೂರಪ್ಪ : ಬಹಳ ಪ್ರಮುಖವಾದ ಕಾರಣ ಎಂದರೆ ಪ್ರಧಾನಿಯವರು ಹೇಳಿದರಂತೆ, ನಾನು ಎರಡು-ಮೂರು ಸೂಟ್‌ಕೇಸ್ ಇಟ್ಟು ಕೊಂಡು ಬಂದಿದ್ದೇನೆ, -ಯಾವ ಸಮಯದಲ್ಲಿ ಬೇಕಾದರೂ ಬ್ಯಾಗ್ ತೆಗೆದುಕೊಂಡು ನಾನು ವಾಪಸ್ ಹೋಗುತ್ತೇನೆ. ಬಿಜೆಪಿ ಯವರು ಮತ್ತೆ ಅಧಿಕಾರಕ್ಕೆ ಬರುತ್ತಾರೆ. ಯಾವುದು ಬೇಕು ಎಂದಾಗ ಇಲ್ಲಾ, ಸದ್ಯಕ್ಕೆ ನಮ್ಮ ಬೆಂಬಲ ಕೊಡುತ್ತೇವೆ ಎಂದು ಹೇಳಿದರು ಎಂದು ಸುದ್ದಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದು ನಿಮ್ಮ ಕನಸು. ಅದು ಆಗುವುದಿಲ್ಲ ಬಿಡಿ. ನೀವು ಅಧಿಕಾರಕ್ಕೆ ಬರುತ್ತೇವೆ, ಬರುತ್ತೇವೆ ಎಂದು ಹೇಳುತ್ತಿದ್ದರೆ ಅದು ನಿಮ್ಮ ಕನಸು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಹೇಳಲಿಲ್ಲ. ಪ್ರಧಾನಿಯವರು ಚಂದ್ರಬಾಬುನಾಯ್ಡು ಹತ್ತಿರ ಹೇಳಿದರು ಎಂದು ಹೇಳಿದೆ. ಖರ್ಗೆಯವರಿಗೆ ಏನಾದರೂ ವಿಶೇಷವಾಗಿ ಗೊತ್ತಿದ್ದರೆ ಹೇಳಬೇಕು ಏನು ಎಂದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದು ನನ್ನ ಮುಂದೆಯೂ ಹೇಳಿದ್ದಾರೆ. ಆದರೆ ಅದನ್ನು ಎಲ್ಲಾ ಕಡೆಯಲ್ಲೂ ಹೇಳುವುದು ಸರಿಯಲ್ಲ. ಪತ್ರಿಕೆಯಲ್ಲೂ ಬಂದಿದೆ.

ನನ್ನ ಮುಂದೆ ಅಂದರು. ಯಾರೇ ನನ್ನನ್ನು ಬಹಳ ಹೆದರಿಸಿದರೆ ನಾನು ಮೂರು ಸೂಟ್‌ಕೇಸ್ ತಂದಿದ್ದೇನೆ, ಆ ಮೂರು ಸೂಟ್‌ಕೇಸನ್ನು ಹೊತ್ತು ಕೊಂಡು ಮನೆಗೆ ಹೋಗುತ್ತೇನೆ ಎಂದು ಅವರು ಹೇಳಿದರು. ಇನ್ನೊಂದು ಸಾರಿ ಝೀ.ಟಿ.ವಿಯಲ್ಲಿ ಇಬ್ರಾಹಿಂರವರು ಹೇಳಿದರು, ನಾನು ಎರಡು ಸೂಟ್‌ಕೇಸ್ ತಂದಿದ್ದೇನೆ, ಅವೆರೆಡೂ ಸೂಟ್‌ಕೇಸ್ ವಾಪಸ್ ಒಯ್ಯುತ್ತೇನೆ ಎಂದರು.

ಶ್ರೀ ಹೆಚ್.ಎನ್. ನಂಜೇಗೌಡ : ಸೂಟ್‌ಕೇಸ್‌ನಲ್ಲಿ ಏನು ಇದೆ ಎಂದು ಯಾರು ಹೇಳಿದ ಹಾಗೆ ಕಾಣಲಿಲ್ಲವಲ್ಲಾ!

ಶ್ರೀ ವಾಟಾಳ್ ನಾಗರಾಜ್ : ಸೂಟ್‌ಕೇಸ್‌ನಲ್ಲಿ ಇನ್ನೇನು ಇರುತ್ತದೆ ಪಂಚೆ ಜುಬ್ಬಾ ಎರಡು ಇರುತ್ತವೆ, ಇನ್ನೇನು ಇರುತ್ತದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಜಾಲಪ್ಪನವರನ್ನು ಕರ್ನಾಟಕ ಭವನದಲ್ಲಿ, ಕೇಳಿದಾಗ ನಾನೇ ಒಂದು ಸೂಟ್‌ಕೇಸ್ ತಂದಿದ್ದೇನೆ, ಒಂದನ್ನೇ ಒಯ್ಯುತ್ತೇನೆ ಎಂದರು.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದನ್ನು ಚೆಕ್ ಮಾಡಿಸಬೇಕು. ಸೂಟ್‌ಕೇಸ್‌ನಲ್ಲಿ ಏನೇನು ತೆಗೆದುಕೊಂಡು ಹೋಗಿದ್ದರು, ಬರಬೇಕಾದರೆ ಅದನ್ನೇ ತರುತ್ತಾರೋ ಬೇರೆ ಏನು ತರುತ್ತಾರೋ ಎಂದು ಚೆಕಪ್ ಆಗಬೇಕಲ್ಲಾ.

ಶ್ರೀ ವಾಟಾಳ್ ನಾಗರಾಜ್ : ಇನ್ನೇನೂ ಅವರು ಸೂಟುಗೀಟು ಹಾಕಿಕೊಂಡು ಬರುವುದಕ್ಕೆ ಹೋಗುವುದಿಲ್ಲ. ದಯವಿಟ್ಟು ಕ್ಷಮಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹೀಗೆ ಇವತ್ತಿನ ದಿವಸ ಏನೋ ಒಂದು ಮಾತುಕತೆ ನಡೆದಿದೆ. ಅದಿನ್ನೂ ಬಹಿರಂಗವಾಗಿಲ್ಲ. ಅದನ್ನು ತಾವು ಬಹಿರಂಗ ಪಡಿಸಬೇಕು. ಏಕೆಂದರೆ ಮಾತುಗಳು ಮುಖ್ಯ ಇರುವುದಿಲ್ಲ ಮತ್ತು ನಮ್ಮ ರಾಜ್ಯದ ಜನತೆಗೆ ಇದರ ಬಗ್ಗೆ ತಮ್ಮ ಸ್ಪಷ್ಟವಾದ ನಿಲುವು ಇರಲೇಬೇಕು. ಏಕೆಂದರೆ ಈ ವಿಷಯದಲ್ಲಿ ಪಕ್ಷಬೇಧವಿಲ್ಲದೆ ನಾವೆಲ್ಲರೂ ಕೂಡ ನಿಂತುಕೊಳ್ಳಬೇಕಾಗುತ್ತದೆ. ಬಿಜೆಪಿ ಇರಬಹುದು, ಕಾಂಗ್ರೆಸ್ ಇರಬಹುದು, ಜನತಾದಳ ಇರಬಹುದು, ಕೆಸಿಪಿ ಇರಬಹುದು ಯಾವುದೇ ಪಕ್ಷದವರು ಇರಬಹುದು, ಈ ರಾಜ್ಯದ ನೀರಿನ ಸಮಸ್ಯೆ ಬಂದಾಗ ಅಥವಾ ನಮ್ಮ ಬಾರ್ಡರ್ ಡಿಸ್‌ಫ್ಯೂಟ್ ಬಂದಾಗ ಜಮೀನಿನ ಪ್ರಶ್ನೆ ಬಂದಾಗ ಇವೆಲ್ಲದರ ಬಗ್ಗೆ ನಾವು ಒಗ್ಗಟ್ಟಾಗಿ ಹೋರಾಟ ಮಾಡುವುದು ಮಾಡಲೇಬೇಕಾಗುತ್ತದೆ. ಅದಕ್ಕಾಗಿ ನೀವು ಇಡೀ ಸದನವನ್ನು ವಿಶ್ವಾಸದಲ್ಲಿ ತೆಗೆದುಕೊಂಡು ಏನು ಮಾತುಕತೆ ನಡೆದಿದೆ, ಯಾವ ಕಾರಣದಿಂದ ಈ ರೀತಿಯಾಗಿ ಆಯಿತು? ಏತಕ್ಕಾಗಿ ಈ ಮೀಟಿಂಗನ್ನು ಕರೆಸಿದ್ದರು?

ಏತಕ್ಕಾಗಿ ಈ ಒತ್ತಡಕ್ಕೆ ತಾವು ಮಣಿದು ಈ ಒಂದು ಮೀಟಿಂಗ್‌ನಲ್ಲಿ ಪಾಲ್ಗೊಂಡು ಇವತ್ತಿನ ದಿವಸ ಈ ರೀತಿಯಾಗಿ ಒದ್ದಾಡುತ್ತಿದ್ದೀರಿ ಎನ್ನುವುದರ ಬಗ್ಗೆ ಸ್ಪಷ್ಟವಾಗಿ ಇವತ್ತಿನ ದಿವಸ ತಾವು • ಹೇಳಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಇನ್ನೊಂದು ವಿಷಯ ಏನೆಂದರೆ ಇವತ್ತು ನಮಗೆ ಚುಡಾಯಿಸುತ್ತಿದ್ದಾರೆ. ಏನು? ಆಲಮಟ್ಟಿ ಡ್ಯಾಮ್‌ನ ಬಗ್ಗೆ ಸ್ಟೇಜ್-1ರಲ್ಲೇ ತಂದು ತಾವು ಅಪ್ರೂವಲ್ ತೆಗೆದುಕೊಂಡಿರಿ, ಇದು ಇಲ್ಲೀಗಲ್ ಇದೆ ಎನ್ನುವ ವಾದವನ್ನು ಕೇಂದ್ರ ಸರ್ಕಾರದ ಮುಂದೆ, ಪ್ಲಾನಿಂಗ್ ಕಮಿಷನ್ ಮುಂದೆ ಸೆಂಟ್ರಲ್ ವಾಟರ್ ಕಮಿಷನ್ ಮುಂದೆ ಅವರು ಮಂಡಿಸುತ್ತಿದ್ದಾರೆ. ಆದರೆ ಮಾನ್ಯ ನಂಜೇಗೌಡರಿಗೆ ಚೆನ್ನಾಗಿ ಗೊತ್ತಿರಬಹುದು. "ದಿ

ಕೃಷ್ಣಾ ವಾಟರ್ ಡಿಸ್‌ಪ್ಯೂಟ್ ಟ್ರಿಬ್ಯುನಲ್ ವಿತ್ ಡಿಸಿಷನ್'' ವಾಲ್ಯೂಂ (2) ರಲ್ಲಿ ಸ್ಪಷ್ಟವಾಗಿ ಅವರು ಕೂಡ ನಾಗಾರ್ಜುನ ಸಾಗರದ ರಿವೈಸ್ಡ್ ಸ್ಕೀಮ್‌ಕೊಟ್ಟರು.

ಅಂದರೆ ಅವರದೇನು ಮೊದಲು ಒರಿಜಿನಲ್ ಸ್ಕೀಮ್ ಇತ್ತು ನಾಗಾರ್ಜುನ ಸಾಗರದ್ದು, ಆ ಸ್ಕೀಮನ್ನು ರಿವೈಸ್ ಮಾಡಿಕೊಟ್ಟು ಪುನಃ 200 ಟಿಎಂಸಿ ನೀರು ಹೆಚ್ಚಿಗೆ ಅಕ್ಯುಮ್ಯುಲೇಟ್ ಆಗುವ ರೀತಿಯಲ್ಲಿ ಅವರು ಆ ಒಂದು ಡಿಸೈನ್ ಮಾಡಿಕೊಟ್ಟರು. ಆ ಡಿಸೈನ್‌ನ್ನೂ ಕೂಡ ಅಂದಿನ ಬಚಾವತ್ ಟ್ರಿಬ್ಯೂನಲ್ ಒಪ್ಪಿಕೊಂಡು, ಅವರೇನೋ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ, ಮಾಡಿಕೊಳ್ಳಲಿ. ಅದು ಲೋಯರ್ ರೈಪೇರಿಯನ್ ಸ್ಟೇಟ್ ಇದೆ. ಸಮುದ್ರಕ್ಕೆ ಹೋಗುವ ನೀರನ್ನು ಹಿಡಿದುಕೊಂಡು ಇಟ್ಟರೆ ಏನು ತಪ್ಪು ಎನ್ನುವ ರೀತಿಯಲ್ಲಿ ಮಾತನಾಡಿ ಆ ಮಾತಿಗೆ ಒಪ್ಪಿಗೆ ಕೊಟ್ಟಾಗ ಆ ಕನ್‌ಸ್ಟ್ರಕ್ಷನ್ ಕೆಲಸ ಮಾಡಬಾರದು ಎಂದು ಹೇಳಿ ಮಹಾರಾಷ್ಟ್ರ ಗೌರ್ನಮೆಂಟ್‌ನವರು ಅದಕ್ಕೆ ಅಬ್ಜೆಕ್ಟ್ ಮಾಡಿದರು. ಅಬ್ಜೆಕ್ಟ್ ಮಾಡಿದಾಗ ಟ್ರಿಬ್ಯೂನಲ್‌ನವರು ಈ ಮಾತನ್ನು ಸ್ವತಃ ಹೇಳಿದ್ದಾರೆ. ನಾಗಾರ್ಜುನ ಸಾಗರ ರಿವೈಸ್ಡ್ ಸ್ಕೀಮ್ ಕೊಟ್ಟಿದ್ದು ತಪ್ಪೇನಲ್ಲ. ಇದಕ್ಕೆ ನಾವು ಸಹಾಯಮಾಡಬೇಕು ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಇಲ್ಲಿ ತಮ್ಮ ಗಮನಕ್ಕೆ ತರುತ್ತೇನೆ. ಅಂದರೆ ಈ ಟ್ರಿಬ್ಯೂನಲ್ ಅವಾರ್ಡ್‌ನಲ್ಲೇ.

"In making allocations to the 3 States in this manner in Scheme-A, we do not expressly provide for the sharing of deficiency but we may mention that we have taken notice of the fact that out of 100 years, there may occur deficiency in 25 years and in these 25 years, the State of Andhra pradesh is likely to suffer more than the State of Maharashtra and Mysore. In this connection, we have discussed the carryover capacity of Nagarjuna Sagar Dam and Sreeasilam Dam and have permitted the State of Andhra Pradesh to utilise the carry-over capacity available in these two Dams." ಎಂದು ಹೇಳಿದ್ದಾರೆ.

ಅಂದರೆ ಹಿಂದೆ ಅವರು ಇದೇ ರೀತಿಯಾಗಿ ರಿವೈಸ್ ಮಾಡಿಕೊಟ್ಟರೆ ಅವರಿಗೆ ಹಿಂದಿನ ಟ್ರಿಬ್ಯುನಲ್ ಈ ಮಾತಿಗೆ ಒಟ್ಟಿಗೆ ಕೊಟ್ಟು ಅವರಿಗೆ ಅನುಮತಿ ಕೊಟ್ಟಿದ್ದಾರೆ. ಅಂದಾಗ ನಾವು ಇಲ್ಲಿ ನಮ್ಮದು ಅಲೊಕೇಟ್ ಆದಂಥ ನೀರು 729 ಟಿಎಂಸಿ ನೀರು ಏನು ಇದೆ, ಆ ನೀರಿನ ಉಪಯೋಗವನ್ನು ನಾವು ಹೇಗೆ ಮಾಡಿಕೊಳ್ಳಬೇಕುಎನ್ನುವುದರ ಬಗ್ಗೆ ಎಲ್ಲಿಯೂ ಯಾರೂ ಕೂಡ ಏನೂ ಹೇಳಿಲ್ಲ. ಅಂದಾಗ ಆ ನೀರಿನ ಉಪಯೋಗವನ್ನು ನಾವು ನಮಗೆ ಬೇಕಾದಂಥ ರೀತಿಯಲ್ಲಿ ಮಾಡಿಕೊಳ್ಳುವಾಗ ಅವರು ಆಭ್ಯಂತರ ಮಾಡುವಂಥದ್ದು ಇದು ಸರಿಯಲ್ಲ ಮತ್ತು ಅದರಿಗೆ ತಾವು ಪದೇ ಪದೇ ಸ್ಪಂದಿಸುವುದು ಕೂಡ ಸರಿಯಲ್ಲ. ಅದರಿಂದ ತಾವು ನಮಗೆ ಒಂದು ತಪ್ಪುದಾರಿಗೆ ಎಳೆಯತಕ್ಕಂಥದ್ದು ಮತ್ತು ಈ ರಾಜ್ಯದ ಜನರಿಗೆ ಒಂದು ಮಿಸ್‌ಅಂಡರ್‌ಸ್ಟಾಂಡಿಂಗ್ ಅಥವಾ ಕನ್‌ಫ್ಯೂಷನ್ ಮಾಡುವ ಪ್ರಯತ್ನವನ್ನು ತಾವು ಮಾಡಿದ್ದಿರಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಅದು ತಾವು ಮಾಡಿದ್ದುದು ಇದು ಮೊದಲನೇ ತಪ್ಪು. ಎರಡನೆಯದಾಗಿ ಇವತ್ತು ತುಂಗಭದ್ರಾ ಕೆಳಗಡೆ ಇರುವ ಪ್ರಾಜೆಕ್ಟ್ಸ್‌ಗಳು. ತುಂಗಭದ್ರಾ ಲೆಫ್ಟ್‌ಬ್ಯಾಂಕ್ ಕೆನಾಲ್

ಇರಬಹುದು ಅಥವಾ ಕೃಷ್ಣಾಬೇಸಿನ್‌ನಲ್ಲಿ ನಾರಾಯಣಪುರ್ ಡ್ಯಾಮ್ ಲಿಫ್ಟ್ ಬ್ಯಾಂಕೇ ಇರಬಹುದು. ಅಲ್ಲಿ ಸಾವಿರಾರು ಎಕರೆ ಬೆಳೆಯಂತೂ ಒಣಗುತ್ತಾ ಇದೆ, ಯಾರೂ ಕೂಡ ರೈತರು ಇವತ್ತು ಒಂದು ಬೀಜವನ್ನೂ ಕೂಡ ಹಾಕಿಲ್ಲ.

ಏಕೆಂದರೆ ತಾವು ತುಂಗಭದ್ರಾ ಲೆಫ್ಟ್‌ಬ್ಯಾಂಕ್ ಕೆನಾಲ್ ದುರಸ್ತಿ ಕೆಲಸವನ್ನು ಜುಲೈ ಎಂಡ್ ಒಳಗೆ ಮಾಡುತ್ತೇವೆಂದು ಮಾತು ಕೊಟ್ಟಿದ್ದಿರಿ. ಅದಕ್ಕಾಗಿ 20 ಕೋಟಿ ರೂಪಾಯಿಗಳನ್ನು ತಾವು ನಿಗದಿಪಡಿಸಿದ್ದಿರಿ. ಆದರೆ ನೀರು ಬಿಟ್ಟ ಹಾಗೆ ಮತ್ತೆ ಮುಂದೆ ಒಡೆದುಕೊಂಡು ಹೋಯಿತು. ಕೆಲಸ ಮಾಡಿದ್ದೇವೆಂದು ತಾವು ಹೇಳಿದಿರಿ. 4500 ಕ್ಯೂಸೆಕ್ಸ್ ಫೀಟ್ ಕೆಪ್ಯಾಸಿಟಿ ಇರತಕ್ಕಂಥ ಕೆನಾಲ್ ನಿಮ್ಮದು. ಆದರೆ ಮೂರುನೂರು ಕ್ಯೂಸೆಕ್ಸ್ ನೀರು ಬಿಟ್ಟರೂ ಕೂಡ ಅದು ಒಡೆದು ಹೋಗುತ್ತದೆ ಎನ್ನತಕ್ಕ ಮಾತು ಇವತ್ತು ತಮ್ಮ ರಿಪೋರ್ಟಿನಲ್ಲಿ ಬಂದಿದೆ. ಕೆ ಸಿ ರೆಡ್ಡಿಯವರು ಹಿಂದೆ ರಿಪೋರ್ಟ್ ಕೊಟ್ಟಾಗ ಸ್ಟ್ರೆಂಗ್ತ್‌ನ್ ಮಾಡಬೇಕು ಎಂದು ಹೇಳಿದ್ದರು. ಇನ್ನರ್ ಬಂಡ್ ಸ್ಟ್ರೆಂಗ್ತ್‌ನ್ ಎಂದು ಏನೋ ಹೇಳುತ್ತಾರೆ. ಅದನ್ನು ಮಾಡುವಾಗ ನೀವು ಇವತ್ತು. 20 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ.

20 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಏನಾಯಿತು ಎಂದರೆ ಮಸ್ಕಿ ಹತ್ತಿರ ಅದು ಒಡೆದು ಹೋಯಿತು. ಆ ಮೇಲೆ ಇಲ್ಲಿ ನಮ್ಮ ಗಂಗಾವತಿಯಲ್ಲಿ ಒಡೆದು ಹೋಯಿತು. ಪ್ರತಿ ಒಂದು ತಾಲ್ಲೂಕಿನಲ್ಲಿ ಪ್ರತಿಒಂದು ಹತ್ತು ಕಿಲೋ ಮೀಟರ್‌ಗೆ ಒಡೆದು ಹೋಯಿತು. ಅದರ ಬಗ್ಗೆ ಇಲ್ಲಿ ಡಿಸ್ಕಷನ್ ಸಾಕಷ್ಟು ಆಯಿತು. ತಾವು ಕೂಡ ಉತ್ತರ ಕೊಟ್ಟರಿ. ಆಗಸ್ಟ್‌ನಲ್ಲಿ ಈ ತುಂಗಭದ್ರಾ ಲೆಫ್ಟ್ ಬ್ಯಾಂಕ್ ಕೆನಾಲ್‌ನ್ನು ನಾನು ದುರಸ್ತಿ ಮಾಡಿ ರೈತರಿಗೆ ನೀರನ್ನು ಕೊಡುತ್ತೇವೆಂದು ಹೇಳಿದಿರಿ. ಆದರೆ ಏನಾಯಿತು? ಎಲ್ಲಿ ಬೇಕೋ ಅಲ್ಲಿ ಒಡೆಯುತ್ತಿದೆ. ಏಕೆ ಒಡೆಯುತ್ತಿದೆ? ಡಿಪಾರ್ಟ್‌ಮೆಂಟಲ್ ವರ್ಕ್ ಎಂದು ಹೇಳಿ ಯಾರೋ ಅನ್‌ಕ್ವಾಲಿಫೈಡ್ ಕಂಟ್ರಾಕ್ಟರ್ಸ್‌ನ್ನು ಹಿಡಿದು ಕೆಲಸ ಮಾಡಿಸುವುದು. ಆಮೇಲೆ ಇದರ ಬಗ್ಗೆ ಇನ್‌ಕ್ವೈರಿ ಮಾಡಿಸುತ್ತೇನೆಂದೂ ಹೇಳಿದರು. ಆ ಎನ್‌ಕ್ವೈರಿ ಏನಾಯಿತೋ ಗೊತ್ತಿಲ್ಲ. ಹೀಗೆ ಅದರ ಬಗ್ಗೆಯೂ ಕೂಡ ನಾವು ಈ ಸದನದಲ್ಲಿ ವಿಷಯವನ್ನು ಎತ್ತಿದ್ದೇವೆ. ಚರ್ಚೆ ಮಾಡಿದ್ದೇವೆ ಮತ್ತು ಸುಮಾರು ನೂರಾರು ಕೋಟಿ ರೂಪಾಯಿ, 200 ಕೋಟಿ ರೂಪಾಯಿ ಬೆಲೆಯ ಕ್ರಾಪ್ ಇವತ್ತು ಹಾಳಾದರೂ ಕೂಡ ತಾವು ಅದರ ಕಡೆಗೆ ಗಮನ ಕೊಡದೇ ಪುನಃ ಇವತ್ತು ಅದೇ ರೀತಿಯಾಗಿ ನಡೆದಿದೆ. ಮೂರನೆಯದಾಗಿ, ನಾರಾಯಣಪುರ ಲೆಫ್ಟ್ ಬ್ಯಾಂಕ್ ಕೆನಾಲ್. ಅದರ ಬಗ್ಗೆ ಇಲ್ಲಿ ನಮ್ಮ ಸಿಪಿಎಂ ನಾಯಕರಾದ ಶ್ರೀಮಾನ್ ಶ್ರೀ ರಾಮರೆಡ್ಡಿಯವರು ಪ್ರಸ್ತಾಪ ಮಾಡಿದರು. ನಾವೂ ಕೂಡ ಮಾತನಾಡಿದ್ದೇವೆ. ಎಲ್ಲಾ ವಿರೋಧ ಪಕ್ಷದವರು, ವಿರೋಧ ಪಕ್ಷದ ನಾಯಕರೂ ಮಾತನಾಡಿದ್ದಾರೆ. ಆ ಲೆಫ್ಟ್ ಬ್ಯಾಂಕ್ ಕನಾಲ್ ಕೂಡ ಇವತ್ತು 78 ಕಿಲೋ ಮೀಟರ್ ಬಹಳ ವೀಕ್ ಆಗಿದೆ. ಅದನ್ನು ದುರಸ್ತಿ ಮಾಡುತ್ತೇವೆ ಎಂದು ಹೇಳಿ ಸಾಕಷ್ಟು ಹಣವನ್ನು • ಅಲ್ಲಿನ ಕಂಟ್ರಾಕ್ಟರ್ಸ್ ಜನ ಹಾಗೂ ಇಂಜನಿಯರ್ಸ್ ಲಪಟಾಯಿಸಿದ್ದಾರೆ ಡೀಸಿಲ್ಟ್ ಮಾಡಿ, ಅದನ್ನು ನಾವು ಸರಿ ಮಾಡುತ್ತೇವೆ ಎಂದು ಹೇಳಿ ತಾವು ಒಂದು ಕಡೆ ಹೇಳಿದಿರಿ. ಮತ್ತೆ ಔಟ್‌ಸೈಡ್ ಕೂಡ ನಾವು ಕಲ್ಲುಗಳನ್ನು ಪಚ್ಚಿಸಿ ಅದರ ಇನ್ನರ್ ಸ್ಟ್ರೆಂಗ್ತ್‌ನ್ನು ಸ್ಟ್ರೆಂತ್‌ನ್ ಮಾಡುತ್ತೇವೆ ಮತ್ತು ಔಟ್‌ಸೈಡಿಗೂ ಕೂಡ ಕಲ್ಲಿನ ಬಂಡೆಗಳನ್ನು ಪಚ್ಚಿ ಅದು ಒಡಿಯದೇ ಇರುವ ರೀತಿಯಲ್ಲಿ ನೋಡಿಕೊಂಡು ಹೋಗುತ್ತೇವೆಂದು ಹೇಳಿದಿರಿ.

ಜೀರೋ ಟು 78 ವರೆಗೆ ದುರಸ್ತಿ ಮಾಡುತ್ತೇವೆಂದು ಹೇಳಿದ ಜನ ಅದನ್ನೂ ಕೂಡ ಮಾಡಲಿಲ್ಲ. ಇವತ್ತು ಅದೂ ಕೂಡ ಮೂರು ನಾಲ್ಕು ಕಡೆ ಒಡೆದು ಹೋಯಿತು. ಕೆಸಿ ರೆಡ್ಡಿ ಅವರ ರಿಪೋರ್ಟ್ ಇತ್ತು. ಇದಕ್ಕೂ ಹಿಂದೆ ಚೀಫ್ ಇಂಜಿನಿಯರ್ ಅವರ ರಿಪೋರ್ಟ್ ಇತ್ತು. ಮತ್ತು ಈ ಸದನದಲ್ಲಿ ಸ್ವತಃ ಅವರು ಹೋಗಿ ನೋಡಿಕೊಂಡು ಬಂದಿದ್ದು, ನಾವೂ ಕೂಡ ಹೋಗಿ ಅದನ್ನು ವಿಸಿಟ್ ಮಾಡಿ ಬಂದ ಮೇಲೆ ಕೂಡ ಪೇಪರ್ ಸ್ಟೇಟ್ಮೆಂಟ್ ಕೊಟ್ಟು ಇದರ ಬಗ್ಗೆ ಏನಾದರೂ ಆಗಬೇಕೆಂದೂ ಈ ಸದನದಲ್ಲಿ ಹೇಳಿದೆವು. ಅದರ ಬಗ್ಗೆನೂ ಏನೂ ಕಾಳಜಿ ವಹಿಸಲಿಲ್ಲ. ಇವತ್ತು ಅಲ್ಲಿನ ರೈತರು ಗೋಳಾಡುತ್ತಿದ್ದಾರೆ. ಅಂದರೆ ರೈತರ ಬಗ್ಗೆ ನಮಗೆ ಕಾಳಜಿ ಇದೆ ಎಂದು ಹೇಳುವ ಜನ ಆಲಮಟ್ಟಿ ಸ್ಥಿತಿ ಈ ರೀತಿಯಾಗಿ ಮಾಡಿದ್ದಾರೆ. ತುಂಗಭದ್ರಾದ ಲೆಫ್ಟ್ ಬ್ಯಾಂಕ್ ಕೆನಾಲ್ ಆ ರೀತಿ ಆಯಿತು. ಲೆಫ್ಟ್ ಬ್ಯಾಂಕ್ ನಾರಾಯಣಪುರ್ ಕೆನಾಲ್ದು ಜಿರೋ ಟು 78 ಈ ಕಾಲುವೆಗೆ ನಿರ್ಲಕ್ಷ್ಯ ಮಾಡಿ ಇವತ್ತು ಅಲ್ಲೂ ಕೂಡ ಸಾವಿರಾರು ರೈತರು ಗೋಳಾಡುತ್ತಿದ್ದಾರೆ.

ಈ ರೀತಿಯಾಗಿ ನಾವು ರೈತರ ಬಗ್ಗೆ ಕಾಳಜಿ ವಹಿಸಿಕೊಂಡಿದ್ದೇವೆಂದು ಹೇಳತಕ್ಕ ಜನ ನಿಮಗೆ ಯಾವ ನೈತಿಕ ಹಕ್ಕು ಇದೆ ಅಧಿಕಾರದಲ್ಲಿ ಇರುವುದಕ್ಕೆ ಎಂದು ನಾನು ಕೇಳುತ್ತೇನೆ. ಇದು ಏನೂ ಇಲ್ಲ, ಆಲಮಟ್ಟಿ, ತುಂಗಭದ್ರಾ, ನಾರಾಯಣಪುರ ಲೆಫ್ಟ್ ಬ್ಯಾಂಕ್ ಕೆನಾಲ್, ಅಮೇಲೆ ಜುರಾಲಾ. ಜುರಾಲಾ ಬಗ್ಗೆಯಂತೂ ಮಾತನಾಡಿದ್ದೇ ಮಾತನಾಡಿದ್ದುದು. ಈ ಸದನದಲ್ಲಿ ಹೇಳಿದರು. ನಾನು ಎಂಟು ದಿವಸದಲ್ಲಿ ಮಾಡುತ್ತೇನೆ, ತಿಂಗಳಲ್ಲಿ ಮಾಡುತ್ತೇನೆ. ರೀ ಹ್ಯಾಬಿಲಿಟೇಷನ್ ಪ್ರೋಗ್ರಾಮ್ ಕಂಪ್ಲೀಟ್ ಮಾಡುತ್ತೇನೆಂದು ಹೇಳಿದರು. ಅಲ್ಲಿ ಜಾಯಿಂಟ್ ಸರ್ವೆ ಮಾಡಿಸಲಿಕ್ಕೆ ನಾವು ಕೂಗು ಕೊಟ್ಟಾಗ ಮೊದಲು ಒಪ್ಪಿಕೊಂಡಿರಲಿಲ್ಲ. ಆಮೇಲೆ ಒಪ್ಪಿಕೊಂಡರು, ಜಾಯಿಂಟ್ ಸರ್ವೆ ಆಯಿತು. ಏನಾಯಿತು ಕೊನೆಗೆ? ಆ ಪ್ರಾಜೆಕ್ಟಲ್ಲಿ ಸುಮಾರು ಒಂದು ಮೀಟರ್ ಹೆಚ್ಚಿಗೆ ಹೈಟ್ ಮಾಡಿದರು. ಅಂದರೆ 11 ಟಿಎಂಸಿ ನೀರು ಹಿಡಿಸತಕ್ಕದ್ದು, ಅದರ ಕೆಪ್ಯಾಸಿಟಿ ಇದ್ದುದು ಇವತ್ತು 17 ಟಿಎಂಸಿ ನೀರನ್ನು ಆ ಒಂದು ಜುರಾಲಾ ಪ್ರಾಜೆಕ್ಟಲ್ಲಿ ಅವರು ಇಟ್ಟುಕೊಳ್ಳಬಹುದು. ಆದರಿಂದ ಪುನಃ ಇವತ್ತು ಸಾವಿರಾರು ಎಕರೆ ಜಮೀನು ಮುಳುಗಡೆ ಆಗತಕ್ಕ ಪರಿಸ್ಥಿತಿ ಇದೆ. ಆದರೆ ಕಾಂಪೆನ್ಸೇಷನ್ ಕೊಡತಕ್ಕದ್ದು, ರೀಹ್ಯಾಬಿಲಿಟೇಷನ್ ಮಾಡತಕ್ಕದ್ದು ಇಲ್ಲಿಯವರೆಗೂ ನಿಮ್ಮ ಕಾರ್ಯಕ್ರಮವೇ ನಡೆದಿಲ್ಲ. ಸದನ ನಡೆದೇ ಎರಡು ತಿಂಗಳಾಯಿತು ನಿಮ್ಮ ಇನಸ್ಟ್ರಕ್ಷನ್ಸ್ ಏನು ಇದೆ? ಸುಮಾರು 25 ಕೋಟಿ ರೂಪಾಯಿಗಳವರೆಗೆ ಎಸ್ಟಿಮೇಟ್ ಮಾಡಿದರು.

25 ಕೋಟಿ ರೂಪಾಯಿಗಳ ಎಸ್ಟಿಮೇಟ್ ಮಾಡಿ ಪುನಃ ಅದಕ್ಕೆ 17 ಕೋಟಿ ರೂಪಾಯಿಗೆ ಇಳಿಸಿದ್ದೀರಿ. 17 ಕೋಟಿ ರೂಪಾಯಿಗೆ ಇಳಿಸಿದ ಮೇಲೂ ಕೂಡ ಒಂದು ಪೈಸೆ ಆದರೂ ನೀವು ಆಂಧ್ರ ಪ್ರದೇಶದಿಂದ ತಂದಿದ್ದೀರೋ ಒಂದು ಪೈಸೆ ಆದರೂ ತಂದು ನಾವು ಅಲ್ಲಿ ಮುಳುಗಡೆ ಆಗತಕ್ಕ ದೇವಸ್ಥಾನಗಳೇ ಇರಬಹುದು, ಅಥವಾ ಬ್ರಿಡ್ಜ್ ಕಟ್ಟಿಸತಕ್ಕದ್ದೇ ಇರಬಹುದು, ರೋಡೇ ಇರಬಹುದು ಅಥವಾ ಅಲ್ಲಿಮುಳುಗಡೆ ಆಗತಕ್ಕ ಆರೇಳು ಹಳ್ಳಿಗಳು ಏನು ಇವೆ, ಆ ಹಳ್ಳಿ ಜನರ ಮನೆಗಳ ಬಗ್ಗೆ ಇರಲಿ, ಅದರ ಬಗ್ಗೆ ಏನು ಮಾಡಿದ್ದೀರಿ. ಎಂದು ತಮ್ಮ ಉತ್ತರದಲ್ಲಿ ಹೇಳಿ. ಎಷ್ಟು ಹಣ ಖರ್ಚು ಮಾಡಿದ್ದೀರಿ? ಅವರು ಕೊಡದೇ ಇದ್ದರೆ, ನಿಮ್ಮ ಜವಾಬ್ದಾರಿ ಇಲ್ಲವೇ? ಯಾವಾಗ ಅವರು ನೀರು ನಿಲ್ಲಿಸುತ್ತೇವೆಂದಾಗ ಯಾವಾಗ ಅವರು ಡ್ಯಾಮನ್ನು ಎತ್ತರ ಮಾಡಿ ಇನ್ನೂ ಹೆಚ್ಚಿನ ನೀರನ್ನು ನಿಲ್ಲಿಸುವಾಗ

ನಿಮ್ಮ ಜವಾಬ್ದಾರಿ ಮೊದಲು ಏನಿದೆ ಎಂಬುದು ಈ ರಾಜ್ಯದ ಜನತೆಗೆ ಗೊತ್ತಾಗಬೇಕು.

ಆಂಧ್ರ ಪ್ರದೇಶದವರು ಕೊಟ್ಟಿಲ್ಲ ಅದಕ್ಕೆ ಮಾಡಿಲ್ಲ ಎಂದು ನೀವು ಹೇಳುವ ಹಾಗೆ ಇಲ್ಲ, ಅಂಧ್ರ ಪ್ರದೇಶದವರು ಕೊಡಲಿ. ಕೊಡದೇ ಇರಲಿ ನಿಮ್ಮ ಕರ್ತವ್ಯ ಏನು ಎಂದರೆ ಅಲ್ಲಿರತಕ್ಕ ಜನರಿಗೆ ಮೊದಲು ಸೌಲಭ್ಯ ಮಾಡಿಕೊಡತಕ್ಕದ್ದು, ಕಾಂಪೆನ್ಸೇಷನ್ ಕೊಡತಕ್ಕದ್ದು, ರೀಹ್ಯಾಬಿಲಿಟೇಷನ್ ಪ್ರೋಗ್ರಾಮನ್ನು ವಾರ್ ಫುಟಿಂಗ್ನಲ್ಲಿ ತೆಗೆದುಕೊಂಡು ಆ ಜನರಿಗೆ ಅನುಕೂಲ ಮಾಡಿಕೊಡತಕ್ಕ ಜವಾಬ್ದಾರಿ ನಿಮಗೆ ಇದ್ದ ಕಾರಣ, ಇವತ್ತು ಆ ಜವಾಬ್ದಾರಿಯಲ್ಲಿ ನೀವು ಎಡವಿದ್ದೀರಿ. ಆ ಜವಾಬ್ದಾರಿಯನ್ನು ನೀವು ನಿರ್ವಹಿಸಿಲ್ಲ. ಅದಕ್ಕೆ ನೀವು ಅಲಕ್ಷ್ಯ ಮಾಡಿದ್ದೀರಿ ಎನ್ನತಕ್ಕಂಥ ಅಪಾದನೆಯನ್ನು ನಾನು ಮಾಡುತ್ತಿದ್ದೇನೆ. ಮತ್ತು ಈ ಸದನದಲ್ಲಿ ಒಂದು ಸಲ ಅಲ್ಲ ನಾಲ್ಕೈದು ಸಲ ಎಲ್ಲರೂ ಕೂಡ ನಾವು ಪ್ರಸ್ತಾಪ ಮಾಡಿದ್ದೇವೆ. ಆದರೆ ನಿಮ್ಮ ಆಕ್ಷನ್ ಮಾತ್ರ ಅದೇ ರೀತಿ ಇದೆ. ಏನು ಎಂದರೆ ಮುಂದೂ ಇಲ್ಲ, ಹಿಂದೂ ಇಲ್ಲ, Same Statusquo. ಇದರಿಂದ ಏನು ತೋರಿಸುತ್ತಿದೆ ಎಂದರೆ ನಿಮಗೆ ಅದರ ಬಗ್ಗೆ ಆಸಕ್ತಿ ಇಲ್ಲ, ಜುರಾಲಾ ಬಗ್ಗೆ ಇಲ್ಲ, ತುಂಗಭದ್ರಾ ಬಗ್ಗೆ ಇಲ್ಲ, ನಾರಾಯಣಪುರ್ ಲೆಫ್ಟ್ ಬ್ಯಾಂಕ್ ಕೆನಾಲ್ ಬಗ್ಗೆ ಇಲ್ಲ. ಆಲಮಟ್ಟಿ ಬಗ್ಗೆಯಂತೂ ಆಸಕ್ತಿ ಇಲ್ಲವೇ ಇಲ್ಲ ಎನ್ನತಕ್ಕ ಮಾತನ್ನು ನಾನು ಹೇಳಿದ್ದೇನೆ. ಇದು ಒಂದು ಕಡೆ. ಇನ್ನೊಂದು ಯುಕೆಪಿಗಂತೂ ಎರಡು ಸಾವಿರ ಇಸವಿಯೊಳಗೆ ನಮಗೆ ಆಲೋಕೇಟ್ ಮಾಡಿದಂತಹ ನೀರನ್ನು ನಾವು ಉಪಯೋಗ ಮಾಡಿಕೊಳ್ಳುತ್ತೇವೆಂದು ಹೇಳಿ ವಾಗ್ದಾನವನ್ನು ಮಾಡಿದ್ದೇವೆ.

ಆದರೆ ನಾನು ನೀವು ಕೊಟ್ಟಂತಹ ಡಾಕ್ಯುಮೆಂಟ್ ನೋಡಿದೆ. ಆ ಡಾಕ್ಯೂಮೆಂಟಿನಲ್ಲಿ ತಾವು ಹೇಳಿದ್ದೀರಿ. ಏನೆಂದರೆ ಈ ಏಪ್ರಿಲ್ ಎಂಡ್ವರೆಗೆ ತಾವು ಖರ್ಚು ಮಾಡಿದ್ದುದು, ಟೋಟಲ್ ಮೇಜರ್ ಅಂಡ್ ಮೀಡಿಯಂ ಇರಿಗೇಷನ್ಗೆ ಸುಮಾರು 761 ಕೋಟಿ 65 ಲಕ್ಷ ರೂಪಾಯಿ. ಅಧ್ಯಕ್ಷರೆ, ಅಂದರೆ ಒಂದು ವರ್ಷದ ಫಿಗರ್., 1996ರ ಏಪ್ರಿಲ್ ವರೆಗೆ ಅವರು ಕೊಟ್ಟಿರುವ ವಿವರ. ಅಮೇಲೆ ಅವರು ಜೂನ್ವರೆಗೆ ಹೇಳಿದ್ದು 1160 ಕೋಟಿ ರೂಪಾಯಿ. ಅಂದರೆ ಇಡೀ ಇರಿಗೇಷನ್ ಪ್ರಾಜೆಕ್ಟ್,ಮೇಜರ್ ಅಂಡ್ ಮೀಡಿಯಂ ಇರಿಗೇಷನ್ ಪ್ರಾಜೆಕ್ಟ್ ಎಂಟೈರ್ ಸ್ಟೇಟ್ಗೆ ನೀವು ಮಾಡಿದ್ದು. ನಮಗೆಲ್ಲಾ ನೀವು ಸಾರಿ ಸಾರಿ ಹೇಳಿದಿರಿ ಕೃಷ್ಣಾ ಜಲಭಾಗ ನಿಗಮದಿಂದ ಒಂದು ಸಾವಿರ ಕೋಟಿ ರೂಪಾಯಿ ಕೊಡುತ್ತೇನೆ ಇಲ್ಲದಿದ್ದರೆ ನಾನು ಈ ಸ್ಥಳದಲ್ಲಿಯೇ ಇರುವುದಿಲ್ಲವೆಂದು. ಕಾವೇರಿಗೆ ಇಷ್ಟು, ಘಟಪ್ರಭಾಗೆ ಇಷ್ಟು, ಮಲಪ್ರಭಾಗೆ ಇಷ್ಟು ಅಪ್ಪರ್ ಕೃಷ್ಣಾಗೆ ಇಷ್ಟು, ಭೀಮರಾಯನ ಗುಡಿಗೆ ಇಷ್ಟು, ಎಲ್ಲಾ ಹೇಳಿದಿರಿ. ಆದರೆ ನೀವು ಖರ್ಚು ಮಾಡಿದಂತಹದು ನೀವು ಕೊಟ್ಟಂತಹ ಅಂಕಿ ಅಂಶದ ಪ್ರಕಾರ ಇವತ್ತಿನವರೆಗೆ, ಜೂನ್ವರೆಗೆ ಹೋದ ವರ್ಷದ ಲೆಕ್ಕ ಹಿಡಿದುಕೊಂಡು ಮಾಡಿದರೂ ಒಂದು ಸಾವಿರದ ಒಂದು ನೂರಾ ಆರವತ್ತು ಕೋಟಿ ರೂಪಾಯಿ. ಅಂದರೆ ಇದು ಸುಮಾರು 18-19 ತಿಂಗಳು ನೀವು ಅಧಿಕಾರಕ್ಕೆ ಬಂದ ಮೇಲೆ ನಿಮ್ಮ ಲೆಕ್ಕ ಹೆಚ್ಚು ಕಡಿಮೆ.

5.10 ಪಿ.ಎಂ.

ಅಂದರೆ, ಈ ರೀತಿ ಹೇಳುವುದು ಒಂದು, ಮಾಡುವುದು ಇನ್ನೊಂದು. ಮತ್ತು ಇದನ್ನೆಲ್ಲಾವನ್ನೂ ನಾವು ಹೇಳಿದಾಗ ನೀವು ಸಿಟ್ಟಾಗುವುದು. ಹಾಗಾದರೆ, ಹಿಂದೆ ಏಕೆ ಮಾಡಲಿಲ್ಲ? ಮುಂದೆ ಏಕೆ ಮಾಡಲಿಲ್ಲ? ನಾವು ಕೇಳುವುದೇನೆಂದರೆ, ನೀವು

ಏನು ಮಾಡಿದ್ದೀರಿ? ನೀವೇನು ಕಡಿದು ಕಟ್ಟೆ ಹಾಕಿದ್ದೀರಿ ಎಂದು ಅದನ್ನು ಬಿಟ್ಟು ನೀವು ಹಿಂದೆ ಏಕೆ ಮಾಡಲಿಲ್ಲವೆಂದರೆ, ನಾವು ಇಷ್ಟಾದರೂ ಮಾಡಿದ್ದೇವೆ, ಆದರೆ, ನೀವೇನು ಮಾಡಿದಿರಿ? ಮೊನ್ನೆ ತಾವು ಆಯವ್ಯಯವನ್ನು ಮಂಡಿಸುವಾಗಲೂ ತಾವು ಕೃಷ್ಣಾ ಭಾಗ್ಯ ಜಲ ನಿಗಮದಿಂದ ಪುನಃ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದಿರಿ. ನಮ್ಮ ಬಜೆಟರಿ ಅಲೋಕೇಷನ್ ಇನ್ನೂರು ಕೋಟಿ ರೂಪಾಯಿಗಳನ್ನು ಹೊರತುಪಡಿಸಿ ಪ್ಲಸ್ ಕಾವೇರಿ ಬೇಸಿನ್ನಲ್ಲಿ ಮತ್ತು ಮಧ್ಯಮ ನೀರಾವರಿಗೆ ಆಗತಕ್ಕಂಥ ಖರ್ಚು ಕೂಡ, ಅದು ಕೃಷ್ಣಾ ಬೇಸಿನ್ ಇರಬಹುದು, ಕಾವೇರಿ ಬೇಸಿನ್ ಇರಬಹುದು, ಇವೆಲ್ಲವನ್ನೂ ನಾವು ಲೆಕ್ಕಕ್ಕೆ ತೆಗೆದುಕೊಂಡರೆ ನಿಮ್ಮ ಲೆಕ್ಕದ ಪ್ರಕಾರ ಕನಿಷ್ಠ ಪಕ್ಷ ಮೂರು ಸಾವಿರ ಕೋಟಿ ರೂಪಾಯಿಗಳನ್ನು ಹಣವನ್ನು ಖರ್ಚು ಮಾಡಬೇಕಾಗಿತ್ತು. ಆದರೆ, ಅಷ್ಟು ಹಣ ಖರ್ಚು ಮಾಡಲಾಗಿದೆಯೇ? ಈ ರೀತಿ ಜನರಿಗೆ ತಪ್ಪು ತಿಳಿವಳಿಕೆ ಕೊಡತಕ್ಕಂಥಾದ್ದು, ಮೋಸ ಮಾಡತಕ್ಕಂಥಾದ್ದು ಮತ್ತು ಇವೊತ್ತಿನ ದಿವಸ ಯಾವುದೇ ಒಂದು ರೀತಿಯಿಂದ ಸಹಾಯ ಮಾಡುವುದಕ್ಕೆ ನಿಮಗೆ ಮನಸ್ಸು ಇಲ್ಲವೆಂದು ಇದರಿಂದಲೇ ಗೊತ್ತಾಗುತ್ತದೆ.

ಇನ್ನೊಂದು ಭೀಮಾ ಫ್ಲೋ, ಪ್ರಾಜೆಕ್ಟ್-2 ಬಗ್ಗೆ ಹೇಳುವುದಾದರೆ, ಭೀಮಾ ಲಿಫ್ಟ್ ಇರಿಗೇಷನ್ ಪ್ರಾಜೆಕ್ಟ್ ವಿಶೇಷವಾಗಿ ಗುಲ್ಬರ್ಗ ಮತ್ತು ಬಿಜಾಪುರ ಜಿಲ್ಲೆಗಳಿಗೆ ಸಹಾಯವಾಗುವಂಥವು. ಆದರೆ, ಇದರಲ್ಲೂ ಕೂಡ ಏನಾಗಿದೆಯೆಂದರೆ, ನಾನು ಒಂದೇ ಒಂದು ವಿಷಯವನ್ನು ಅವರ ಗಮನಕ್ಕೆ ತರುತ್ತೇನೆ. ಇವೊತ್ತಿನ ದಿವಸ ಭೀಮಾ ಫ್ಲೋಗೆ ಕೇವಲ ಐದು ಲಕ್ಷ ರೂಪಾಯಿಗಳಷ್ಟು ಹಣ ಮಾತ್ರ ಖರ್ಚಾಗಿದೆ. ಈ ಹಣವನ್ನು ಯಾವುದಕ್ಕೆ ಕೊಟ್ಟಿದ್ದಾರೋ ಗೊತ್ತಿಲ್ಲ. ಇನ್ನು ಬರುವ ನಾಲ್ಕು ವರ್ಷಗಳಲ್ಲಿ ಅಂದರೆ ಕ್ರಿ.ಶ. 2000 ಇಸವಿಯೊಳಗೆ ಭೀಮಾ ಫ್ಲೋ ಪ್ರಾಜೆಕ್ಟ್ ಬಚಾವತ್ ತೀರ್ಪಿನ ಪ್ರಕಾರ ಪೂರ್ಣವಾಗಬೇಕು. ಹಾಗೆಯೇ ಅಫಜಲಪುರದ ಸೊನತಿ ಗ್ರಾಮದ ಭೀಮಾ ಲೆಫ್ಟ್ ಪ್ರಾಜೆಕ್ಟ್ ಕೂಡ ಪೂರ್ಣಗೊಳ್ಳಬೇಕು. ಸದರಿ ಯೋಜನೆಗೆ ಸುಮಾರು ನಾಲ್ಕುವರೆ ಕೋಟಿ ರೂಪಾಯಿಗಳನ್ನಿಟ್ಟಿದ್ದು, ಒಂದು ಕೋಟಿ ರೂಪಾಯಿಯನ್ನೂ ಖರ್ಚು ಮಾಡಿಲ್ಲ. 88 ಲಕ್ಷ ರೂಪಾಯಿಗಳಷ್ಟು ಮಾತ್ರ ಖರ್ಚಾಗಿದೆ. ಮೊನ್ನೆ ಇದರ ಬಗ್ಗೆ ತಾವು ಉತ್ತರ ಕೊಡುವಾಗ ಇದರ ಬಗ್ಗೆ ಹಣಕಾಸು ಸಚಿವರ ಹತ್ತಿರ ಮಾತನಾಡಿ ಹೆಚ್ಚು ಹಣ ಕೊಡುತ್ತೇವೆ ಎಂದು ಹೇಳಿದಿರಿ. ಅಂದರೆ, ಹೀಗೆ ನಾವು ಹೇಳುವುದೊಂದು, ನೀವು ಪ್ರಕಟಿಸುವುದು ಒಂದಾದರೆ ನಡೆಮುಕೊಳ್ಳುವುದು ಮತ್ತೊಂದು. ತಾವು ಪ್ರಕಟಿಸಿದಂತೆ ನಡೆದುಕೊಳ್ಳದಿದ್ದರೆ ನಿಮ್ಮ ಸರ್ಕಾರದ ಬಗ್ಗೆ ಜನರಲ್ಲಿ ಯಾವ ಅಭಿಪ್ರಾಯ ಮೂಡುತ್ತದೆ ಎನ್ನುವುದರ ಬಗ್ಗೆ ತಾವು ಸ್ವಲ್ಪ ಯೋಚಿಸಬೇಕು. ಇವೊತ್ತು ನಾವು ನಿಮಗೆ ನೇರವಾಗಿ ಚುಚ್ಚಿ ಹೇಳಿದಾಗ ಬಹಳ ಸಂಕೋಚ ಪಡುತ್ತೀರಿ.

ಏಕೆಂದರೆ, ನೇರವಾಗಿ ಹೇಳಿದಾಗ ಸ್ವಲ್ಪ ಜಗಳಕ್ಕೆ ಬಂದ ಹಾಗೆ ನಡೆದುಕೊಳ್ಳುತ್ತೀರಿ. ಆದರೆ, ಇದು ಫ್ಯಾಕ್ಟ್ಸ್ ಇರುವುದರಿಂದ you cannot deny it, ನೀವೇ ಕೊಟ್ಟಂಥ ಫ್ಯಾಕ್ಟನ್ನು ಇವೊತ್ತು ನಾವು ನಿಮ್ಮ ಮುಂದಿಟ್ಟಾಗ ಇದಕ್ಕೆ ನಿಮ್ಮ ಉತ್ತರ ಏನೂ ಇಲ್ಲ ಮತ್ತು ನನಗನ್ನಿಸಿದ ಮಟ್ಟಿಗೆ ಇವೆಲ್ಲಕ್ಕೂ ಉತ್ತರವನ್ನು ಮಾನ್ಯ ಮುಖ್ಯ ಮಂತ್ರಿಗಳು ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ, ಅವರು ಕೊನೆ ಗಳಿಗೆಗೆ ಏನು ಮಾಡುತ್ತಾರೋ ಗೊತ್ತಿಲ್ಲ. ಕೊನೆಗೆ ಈ ದೇಶದ, ಪ್ರಪಂಚದ ಎಲ್ಲಾ ಫಿಲಾಸಫಿ, ಥಿಯರಿಗಳನ್ನು ಅಡ್ವೊಕೇಟ್ ಮಾಡಿ ಕೊನೆಗೆ ಈ ಮ್ಯಾಟರನ್ನು ಕ್ಲೋಸ್ ಮಾಡಿಕೊಂಡು ಹೋಗಬೇಕು ಎನ್ನುತ್ತಾರೆ. ಆದರೆ, ನಾವು ಅಷ್ಟು ಸುಲಭವಾಗಿ

ಬಿಡುವುದಿಲ್ಲ. ಯು.ಕೆ.ಪಿ. ಪರಿಸ್ಥಿತಿ ಹೀಗಾದರೆ ಕಾವೇರಿ ನದಿ ನೀರಿನ ಬಗ್ಗೆ ಹೇಳುವುದಾದರೆ, ಇದರ ಬಗ್ಗೆ ಅನೇಕ ಸಲ ಪ್ರಸ್ತಾಪವಾಗಿದೆ. ಆದ್ದರಿಂದ ಇದರ ಬಗ್ಗೆ ಹೆಚ್ಚಿಗೆ ಏನೂ ಹೇಳಬೇಕಾಗಿಲ್ಲ. ಕಾವೇರಿ ನೀರನ್ನು ಬಿಡುಗಡೆ ಮಾಡುವ ಬಗ್ಗೆ ಸದನದ ಯಾವುದೇ ಸದಸ್ಯರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೆ, ಇಡೀ ಸದನವನ್ನು ಬದಿಗಿಟ್ಟು ಆಗೌರವ ತೋರಿಸಿ, ತಮಿಳುನಾಡಿಗೆ ಐದು ಟಿ.ಎಂ.ಸಿ.ಯಷ್ಟು ನೀರನ್ನು ಬಿಟ್ಟಿರಿ.

ಇದಕ್ಕುತ್ತರವಾಗಿ ನಾನು ನೀರು ಬಿಡಬೇಕಾಗಿತ್ತು, ಬಿಟ್ಟಿದ್ದೇನೆ, ನೀವು ಏನು ಮಾಡುತ್ತೀರೋ ಮಾಡಿಕೊಳ್ಳಿ. ಎನ್ನುವ ಧಾಟಿಯಲ್ಲಿ ಅವರು ಹೇಳಿದರು. ಈಗ ಯಾವುದೇ ಒಂದು ಇಷ್ಯೂ ಬಗ್ಗೆ, ಸ್ಟೇಟ್ ಕನ್ಸರ್ನ್ಡ್ ಇಷ್ಯೂಸ್ ಬಗ್ಗೆ ಸರ್ಕಾರದ ಪ್ರತಿಯೊಂದು ಟ್ರಾನ್ಸ್ಫರ್‌ನಲ್ಲಿ, ಪೋಸ್ಟಿಂಗ್ನಲ್ಲಿ ನಮ್ಮನ್ನು ಕನ್ಸಲ್ಟ್ ಮಾಡಿ ಎಂದು ಹೇಳುವುದಿಲ್ಲ, ಅಥವಾ ನಿಮ್ಮ ಯಾವುದೋ ಆಡಳಿತದ ವಿಷಯದಲ್ಲಿ ನಮ್ಮನ್ನು ಕನ್ಸಲ್ಟ್ ಮಾಡಿ ಎಂದು ಹೇಳುವುದಿಲ್ಲ ಅಥವಾ ನಿಮ್ಮ ಯಾವುದೋ ಆಡಳಿತದ ವಿಷಯದಲ್ಲಿ ನಮ್ಮನ್ನು ಕನ್ಸಲ್ಟ್ ಮಾಡಿ ಎಂದು ಹೇಳುವುದಿಲ್ಲ. ಆದರೆ, ರಾಜ್ಯಕ್ಕೆ ಸಂಬಂಧಿಸಿದ, ರಾಜ್ಯದ ಹಿತದೃಷ್ಟಿಯಿಂದಿರುವ ಇಷ್ಯೂ ಮತ್ತು ಇಲ್ಲಿಯವರೆಗ ಎಲ್ಲಾ ಪಕ್ಷದವರು, ಎಲ್ಲಾ ಮುಖ್ಯಮಂತ್ರಿಗಳೂ ಕೂಡ ಇಂತಹ ಇಷ್ಯೂಸ್ ಬಂದಾಗ, ವಿಷಯಗಳು ಬಂದಾಗ ವಿಶ್ವಾಸಕ್ಕೆ ತೆಗೆದುಕೊಂಡು ಅವರು ಮುಂದೆ ಹೋಗುತ್ತಿದ್ದರು. ಆದರೆ, ತಾವು ಏನು ಮಾಡಿದಿರಿ? ತಾವು ಯಾರನ್ನೂ ಕೂಡ ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ. ದೆಹಲಿಯಿಂದ ಫೋನ್ ಬಂದರೆ ಇಲ್ಲಿ ನೀರು ಬಿಡುತ್ತೀರಿ. ಇಷ್ಟು ಕನ್ವಿಕ್ಷನ್ ಇರುವ ಮುಖ್ಯಮಂತ್ರಿ ಇವೊತ್ತು ಅಧಿಕಾರ ಸಿಕ್ಕಿದ ನಂತರ ಏತಕ್ಕೆ ಇಷ್ಟು ವೀಕ್ ಆಗಿದ್ದಾರೋ ನನಗರ್ಥವಾಗುತ್ತಿಲ್ಲ. ಅಧಿಕಾರ ಸಿಕ್ಕಿದ ನಂತರ ಬದಲಾವಣೆಯಾಗುವುದು ಒಂದು ಕನ್ವಿಕ್ಷನ್ನೇ? ಇದು ಗೊತ್ತಾಗಿಲ್ಲ. ಏಕೆಂದರೆ, ಪ್ರತಿಯೊಬ್ಬರಿಗೂ ಒಂದೊಂದು ಫಿಲಾಸಫಿ ಇರುತ್ತದೆ. ಇವರು ಅಧಿಕಾರಕ್ಕೆ ಬಂದರೆ ಏನು ಮಾಡುತ್ತಾರೆ? ಇವರ ಸರ್ಕಾರ ಹೇಗಿರುತ್ತದೆ ಎಂದು ಜನರು ಅಪೇಕ್ಷಿಸುತ್ತಾರೆ. ಹಾಗೆಯೇ ದೇವೇಗೌಡರು ಅಧಿಕಾರಕ್ಕೆ ಬಂದಾಗಲೂ ಕೂಡ ನಾನು ಮಣ್ಣಿನ ಮಗನಾಗಿದ್ದೇನೆ, ನಾನು ಹೀಗೆ ಮಾಡುವುದು ಎಂದು ಅವರು ಯಾವತ್ತೂ ಹೇಳಿಕೊಳ್ಳುತ್ತಿದ್ದರು.

ನೀವು ರೈತರಿಗೆ ಏನು ಮಾಡುತ್ತೀರೋ, ಬಿಡುತ್ತೀರೋ ಎಂಬುದು ನೀವೇ ಕೊಟ್ಟಿರುವ ಅಂಕಿ - ಸಂಖ್ಯೆಯನ್ನು ನೋಡಿದರೆ ಗೊತ್ತಾಗುತ್ತದೆ. ಯಾವ್ಯಾವ ಏರಿಯಾಗಳಲ್ಲಿ ಎಷ್ಟೆಷ್ಟು ಹಣ ಖರ್ಚು ಮಾಡಿದ್ದೀರೆಂಬುದು ಗೊತ್ತಾಗುತ್ತದೆ ಈ ಹಿಂದೆಯೂ ನಾನು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯಲ್ಲಿ ಇದರ ಬಗ್ಗೆ ಪ್ರಸ್ತಾಪಿಸಿದ್ದೇನೆ. ಯು.ಕೆ.ಪಿ.ಯಲ್ಲಿ ಎಷ್ಟು ಹಣವನ್ನು ಖರ್ಚು ಮಾಡಿದರು? ಪುನಃ ಅಲ್ಲಿಂದ ಎಷ್ಟು ಹಣವನ್ನು ರೀ-ಅಪ್ರೊಪ್ರಿಯೇಟ್ ಮಾಡಿಕೊಂಡರು? ಅದು ಸ್ಟೀಲ್ ಇರಬಹುದು, ಸಿಮೆಂಟ್ ಇರಬಹುದು, ಯಾವುದೇ ಇರಬಹುದು, ಹಿಂದಿನ ಸರ್ಕಾರವಿದ್ದಾಗಲೂ ಕೂಡ ಮಾಡಿರಬಹುದು. ನಾನು ಅದರ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ. ಆದರೆ, ಜನರು ಈಗ ರಾಜ್ಯದಲ್ಲಿ ಶ್ರೀಮಾನ್ ಜೆ.ಹೆಚ್. ಪಟೇಲರು ಮುಖ್ಯಮಂತ್ರಿಗಳಾಗಿದ್ದಾರೆ, ಅವರು ಎಂತಹ ಸರ್ಕಾರ ಕೊಡಬಹುದು? ಎಂತಹ ವಿಚಾರ ಧಾರೆ ಮೇಲೇ ಸರ್ಕಾರ ನಡೆಸಬಹುದು?

ಯಾವ್ಯಾವ ಕಾರ್ಯಕ್ರಮಗಳಿಗೆ, ಕೆಲಸಗಳಿಗೆ ಅವರು ಆದ್ಯತೆ ಕೊಡಬಹುದು ಎಂದು ನಿರೀಕ್ಷಿಸುತ್ತಾರೆ. ಆ ನಿರೀಕ್ಷೆ ಪ್ರಕಾರ ತಾವು ಬರಲೇ ಇಲ್ಲ. ಸಮಾಜವಾದಿ ನೇತಾರರಾದ ಶ್ರೀಮಾನ್ ಜೆ.ಹೆಚ್. ಪಟೇಲರು ಆಗಸ್ಟ್ 15ರಂದು ಸ್ವಾತಂತ್ರ್ಯ

ದಿನಾಚರಣೆ ಸಂದರ್ಭದಲ್ಲಿ ಏನಾದರೊಂದು ಹೊಸ ಕಾರ್ಯಕ್ರಮವನ್ನು ಘೋಷಿಸುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ ಅವರ ಕಾರ್ಯದರ್ಶಿಯವರು ಏನು ಬರೆದು ಕೊಟ್ಟಿದ್ದಾರೋ ಅದನ್ನು ಅವರು ನೋಡಲಿಲ್ಲವೇನೋ. ಅದನ್ನು ನೇರವಾಗಿ ಹೇಳಿದರು. ಏನೆಂದರೆ, ಹಿಂದಿನ ಸರ್ಕಾರ ಏನು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು, ಆ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಮುಂದುವರೆಸುತ್ತದೆ ಎಂದರು. ಇಲ್ಲಿಗೆ ಮುಗಿಯಿತು. ಇದರ ಬಗ್ಗೆ ಹೇಳಬೇಕಾಗಿಲ್ಲ. ಅಂದರೆ, ಹಿಂದಿನ ಸರ್ಕಾರ ಹಮ್ಮಿ ಕೊಂಡಿದ್ದಂಥ ಕಾರ್ಯಕ್ರಮಗಳನ್ನು ತಾವು ಮುಂದುವರೆಸುವುದಿದ್ದರೆ ಹಿಂದೆ ಆಗಿದ್ದಂಥ ಎಲ್ಲಾ ಲ್ಯಾಪ್ಸಸ್ ಅನ್ನು you should own all deeds, mis-deeds, everything. ಅನಂತರ ಆ ಕಾರ್ಯಕ್ರಮ ಸರಿ ಇರಬೇಕೆಂದರೆ ನಾನು ಕೊಡುತ್ತೇನೆ, ಆ ಕಾರ್ಯಕ್ರಮದ ಪ್ರಕಾರ ತಾವು ಏಕೆ ನಡೆದುಕೊಂಡಿಲ್ಲ? ಆ ಕಾರ್ಯಕ್ರಮದಲ್ಲಿ ನ್ಯೂನತೆಗಳಿರುವುದಕ್ಕೆ ಹೊಣೆ ಯಾರು? ನಿಮ್ಮ ಜವಾಬ್ದಾರಿ ಎಷ್ಟು ಎಂದಾಗ ಆ ಜವಾಬ್ದಾರಿ ಹೊತ್ತುಕೊಂಡು ತಾವು ಹಿಂದಿನ ಸರ್ಕಾರ ಮಾಡಿದ್ದಂಥ ತಪ್ಪೆಲ್ಲವನ್ನೂ ಕೂಡ ಇವೊತ್ತು ತಮ್ಮ ಮೈಮೇಲೆ ಹಾಕಿಕೊಂಡು ತಾವು ರಾಜೀನಾಮೆ ಕೊಡಬೇಕಾಗುತ್ತದೆ.

ಇಲ್ಲವೆಂದರೆ, ನಾನು ಬರೀ ಅರವತ್ತು ದಿವಸಗಳ ಕಾಲ ಇದ್ದೆ, ತೊಂಭತ್ತು ದಿವಸಗಳ ಕಾಲ ಸರ್ಕಾರದಲ್ಲಿದ್ದುದ್ದರಿಂದ ನನಗೂ ಅದಕ್ಕೂ ಏನೂ ಸಂಬಂಧವಿಲ್ಲವೆಂದು ಹೇಳಬಹುದು. ಆದರೆ ಈಗ ಹೇಳುವುದಕ್ಕಾಗುವುದಿಲ್ಲ, ಆ ರೀತಿ ಹೇಳುವಂತಿಲ್ಲ. ಏಕೆಂದರೆ, ಹಿಂದೆ ಏನು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತೋ, ಅದರ ಪ್ರಕಾರವೇ ಇವೊತ್ತು ನನ್ನ ಸರ್ಕಾರ ನಡೆದುಕೊಂಡು ಹೋಗುತ್ತಿದೆಯಾದ್ದರಿಂದ ಹೊಸ ಕಾರ್ಯಕ್ರಮಗಳನ್ನು ನಾನು ಘೋಷಿಸಬೇಕಾಗಿಲ್ಲ, ಇರತಕ್ಕಂಥ ಕಾರ್ಯಕ್ರಮಗಳನ್ನೇ ನಾನು ಅನುಷ್ಠಾನಕ್ಕೆ ತರುತ್ತೇನೆ ಎಂಬ ಬಗ್ಗೆ ಆಗಸ್ಟ್ 15 ರ ಸ್ವಾತಂತ್ರ್ಯ ದಿನಾಚರಣೆ ದಿನದಂದು ಧ್ವಜಾರೋಹಣ ಮಾಡಿದ ನಂತರ ತಮ್ಮ ಭಾಷಣದಲ್ಲಿ ತಾವು ಘೋಷಿಸಿದ್ದೀರಿ. ಮತ್ತು ಹಿಂದೆ ಮಾಡಿದ್ದಂಥ ತಪ್ಪುಗಳೆಲ್ಲವೂ ಕೂಡ ಇವೊತ್ತು ಬಂದಿದ್ದು ನಾವೂ ಕೂಡ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೆವು. ಇವೆಲ್ಲಾ ಜವಾಬ್ದಾರಿಯನ್ನು ಹೊತ್ತುಕೊಂಡು ಹಿಂದೆ ಏನು ಮಾಡಿದ್ದೇವೆ, ನಾನೂ ಕೂಡ ಅದೇ ತಪ್ಪು ಮಾಡಿದ್ದೇನೆಂದು ಹೇಳಿ, ತಾವೆ ಬಿಟ್ಟು ಬಿಟ್ಟರೆ ಅದರ ಬಗ್ಗೆ ಮುಂದೆ ಚರ್ಚೆಯಾಗುವುದಿಲ್ಲ. ಆದುದರಿಂದ ಕಾವೇರಿ ನದಿ ನೀರಿನ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ, ಇದರ ಬಗ್ಗೆ ಅನೇಕ ಸಹ ಚರ್ಚೆಯಾಗಿದೆ. ಆದರೆ ತಮಿಳುನಾಡಿಗೆ ತಾವು ಐದು ಟಿ.ಎಂ.ಸಿ. ನೀರು ಬಿಡುಗಡೆ ಮಾಡಿದ್ದು ಮಾತ್ರ ನಮ್ಮೆಲ್ಲರಿಗೂ ಆಘಾತವುಂಟು ಮಾಡುವಂಥಾದ್ದು. ಏಕೆಂದರೆ, ಇಂತಹ ಒಬ್ಬರು ಮುಖ್ಯಮಂತ್ರಿಗಳಿದ್ದರೂ ಸಹ ಸದನವನ್ನು ಅದರಲ್ಲೂ ವಿಶೇಷವಾಗಿ ವಿರೋಧ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ, ಏಕಪಕ್ಷೀಯವಾಗಿ ಅವರು ಇವೊತ್ತು ನಡೆದುಕೊಂಡಿದ್ದಾರೆ.

ಇದರಿಂದ ಸದನಕ್ಕೆ ಅಗೌರವ ತೋರಿಸಿದಂತಾಗಿದೆಯಲ್ಲದೆ, ಸದಸ್ಯರಿಗೂ ಅಗೌರವ ತೋರಿಸಿದ್ದಾರೆಂಬ ಆಪಾದನೆಯನ್ನು ನಾನು ನೇರವಾಗಿ ಮಾಡುತ್ತಿದ್ದೇನೆ. ಇನ್ನು ನನ್ನ ಐದನೆಯ ಆಪಾದನೆ ಏನೆಂದರೆ, ಗ್ರಾಮ ಪಂಚಾಯಿತಿ ಸದಸ್ಯರು ಕುರಿತು. ಈಗಾಗಲೇ ಇದರ ಬಗ್ಗೆ ಅವರು ಕೂಡ ಹೇಳಿರುವುದರಿಂದ, ನಾನು ಇಷ್ಟು ಮಾತ್ರ ಹೇಳಬಯಸುತ್ತೇನೆ. ಎಂಭತ್ತು ಸಾವಿರದಷ್ಟು ಗ್ರಾಮ ಪಂಚಾಯಿತಿ ಸದಸ್ಯರನ್ನು ಬದಿಗಿಟ್ಟು ಕೇವಲ 8,846 ಗ್ರಾಮ ಪಂಚಾಯಿತಿ ಸದಸ್ಯರುಗಳಿಗೆ ಮಾತ್ರ ವೋಟಿಂಗ್ ಪವರ್ ಕೊಟ್ಟು ಅವರು 25 ಎಂ.ಎಲ್.ಸಿ. ಗಳನ್ನು ಆರಿಸಬೇಕೆಂದರೆ ಯಾವ ನ್ಯಾಯ? ಏಕೆಂದರೆ ತಾವು ಯಾವಾಗಲೂ ಕೂಡ ವಿಕೇಂದ್ರೀಕರಣದ ತತ್ತ್ವವನ್ನು ಪ್ರತಿಪಾದಿಸುತ್ತೀರಿ.

ಪಂಚಾಯತ್ ರಾಜ್ ಬಹಳ ಪರಿಣಾಮಕಾರಿಯಾಗಿ ನಡೆಯಬೇಕು ಮತ್ತು ಇವೊತ್ತು ಗ್ರಾಮ ಮಟ್ಟದಲ್ಲಿ ಅಧಿಕಾರ ವಿಕೇಂದ್ರೀಕರಣವಾಗಿ ಹಳ್ಳಿ ಜನರ ಕೈಗೆ ಅಧಿಕಾರ ಸಿಗಬೇಕೆಂದು ಹಾಡಿ, ಹೊಗಳಿ, ಆ ಕಾನೂನಿನ ಬಗ್ಗೆ ಬಹಳಷ್ಟು ನೀವು ಪ್ರಚಾರ ಪಡೆದುಕೊಂಡಿರಲ್ಲದೆ ಇಡೀ ದೇಶಾದ್ಯಂತ ತಿರುಗಿ ಅದರ ಬಗ್ಗೆ ಹೇಳಿಕೊಂಡಿರಿ.

ಆದರೆ ಆ ಗ್ರಾಮ ಪಂಚಾಯಿತಿಯ ಸದಸ್ಯರಿಗೆ ಓಟರ್ ಲಿಸ್ಟನಿಂದ ಹೆಸರನ್ನು ಎಲಿಮಿನೇಟ್ ಮಾಡತಕ್ಕ ಪ್ರಯತ್ನ ಮಾಡಿದಿರಿ. ಯಾವ ಕಾರಣಕ್ಕಾಗಿ ಆ ಪ್ರಯತ್ನವನ್ನು ಮಾಡಿದಿರಿ? ಎಂಟು ಸಾವಿರ ಮತದಾರರೆಂದರೆ ಆ ಇಪ್ಪತ್ತೈದು ಸ್ಥಾನಕ್ಕೆ ಆಯ್ಕೆ ಮಾಡಬೇಕಾಗಿದ್ದರೆ, ಒಬ್ಬ ಹಣವಂತ ಕೇವಲ 150 ರಿಂದ 200 ಮತಗಳನ್ನು ಪಡೆದುಕೊಂಡರೆ ಆ ವ್ಯಕ್ತಿ ಎಂ.ಎಲ್.ಸಿ. ಯಾಗಿಬಿಡುತ್ತಾರೆ. ಇಲ್ಲಿ ಕನ್ವಿಕ್ಷನ್ ಪ್ರಶ್ನೆಯೇ ಬರುವುದಿಲ್ಲ. ನಿಮ್ಮ ಪಕ್ಷದವರೇ ಆದ ಒಬ್ಬರು ಬಡವರು, ನಿಮ್ಮ ಪಕ್ಷದ ತತ್ವದ ಮೇಲೆ ಕಟ್ಟುನಿಟ್ಟಾಗಿ ಯಾರು ನಡೆದುಕೊಳ್ಳುತ್ತಿರುತ್ತಾರೋ, ಕನ್ವಿಕ್ಷನ್ ಇರತಕ್ಕವರು ಚುನಾವಣೆ ನಿಲ್ಲಿಸಿದರೂ ಗೆದ್ದು ಬರುವುದಿಲ್ಲ.

ಏಕೆಂದರೆ ಅವನ ವಿರುದ್ಧ ಒಬ್ಬ ಹಣವಂತ ನಿಂತರೆ ಅವನು 150-200 ಓಟನ್ನು ಖರೀದಿ ಮಾಡುವುದೇನೂ ಕಷ್ಟವಾಗುವುದಿಲ್ಲ. ನೀವೆಲ್ಲರೂ mass contractor ಆದರಲ್ಲಿ ಪರಿಣಿತರಾಗಿದ್ದೀರಲ್ಲಾ, ಇತ್ತೀಚಿಗೆ ನಡೆದ ಪಾರ್ಲಿಮೆಂಟ್ ಮತ್ತು ವಿಧಾನಸಭೆಯ ಚುನಾವಣೆಯಲ್ಲಿ ಯಾವ ರೀತಿಯಲ್ಲಿ ಮತಗಳನ್ನು ಖರೀದಿ ಮಾಡಿದಿರಿ ಎಂಬುದು ತಮಗೆ ಗೊತ್ತಿದೆ. ಕೋಟಿಗಟ್ಟಲೆ ಹಣವನ್ನು ಕೊಟ್ಟು ಮತವನ್ನು ಖರೀದಿ ಮಾಡಿದಿರಿ. ಆದ್ದರಿಂದ ಆ ಕೆಲಸದಲ್ಲಿ ತಾವು ಪರಿಣಿತರಾಗಿದ್ದೀರಿ. ನೀವು ಅದರಲ್ಲಿ ಪರಿಣಿತರಾಗಿದ್ದರೂ ನಿಮ್ಮಲ್ಲಿನ ನಿಷ್ಠಾವಂತ ಕಾರ್ಯಕರ್ತನಿಗೆ ಟಿಕೆಟ್ಟು ಕೊಟ್ಟರೆ ಅವನನ್ನೂ ಕೂಡ ಸೋಲಿಸತಕ್ಕ ಸಾಧ್ಯತೆ ಇದೆ. ಏಕೆಂದರೆ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾಪಂಚಾಯಿತಿ ಸದಸ್ಯರುಗಳು ಸೀಮಿತವಾಗಿದ್ದಾರೆ. ಲಿಮಿಟೆಡ್ ಆಗಿದ್ದಾರೆ. ಇದರ ಬಗ್ಗೆ ಕೇಳಿದಾಗ ಪ್ರಧಾನ ಮಂತ್ರಿಯವರು ಒಂದು ಹೇಳಿಕೆಯನ್ನು ಕೊಟ್ಟರು, ಅದರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವುಕ್ಕೆ ಹೋಗುವುದಿಲ್ಲ. ಅದೇ ಹೇಳಿಕೆಯನ್ನು ತಾವೂ ಹೇಳಿದ್ದೀರಿ.

ಅವರನ್ನು ಹಿಡಿದಿಡಲು ಕಷ್ಟವಾಗುತ್ತದೆ, ಕೋಟಿಗಟ್ಟಲೆ ಖರ್ಚಾಗುತ್ತದೆಂದು ಹೇಳಿದ್ದೀರಿ. ಆದರೆ ಅದು ಹಾಗಲ್ಲ. ಕೆಳಗಿರುವ ಮನುಷ್ಯ ಪ್ರತಿ ಇನ್ನೂರು ಮತಗಳಿಗೆ ಒಬ್ಬ ಪಂಚಾಯಿತಿ ಸದಸ್ಯನಾಗಿದ್ದಾನೆ.

ಅಂಥ ಹಳ್ಳಿಯಿಂದ ಬರತಕ್ಕವರಿಗೆ ವಿಧಾನಪರಿಷತ್ತಲ್ಲಿ ರೆಪ್ರಸೆಂಟೇಷನ್ ಕೊಡುವ ಕೆಲಸ ಮಾಡದಿದ್ದರೆ, ಇದು ಯಾವ ಪ್ರಜಾಪ್ರಭುತ್ವ ಇದು ಯಾವ ನೀತಿ? ಯಾವ ಧರ್ಮ? ಅಧಿಕಾರ ವಿಕೇಂದ್ರೀಕರಣದ ಮೂಲವಾದ ಪಂಚಾಯಿತಿರಾಜ್ಯ ಬಗ್ಗೆ ನಿಮಗೆ ವಿಶ್ವಾಸವಿದೆಯೆಂದು ನಾವು ಹೇಗೆ ತಿಳಿದು ಕೊಳ್ಳಬೇಕು? ನಿಮ್ಮ ಕೈಯಲ್ಲಿರುವ ಅಧಿಕಾರವನ್ನೇ ಚಲಾಯಿಸಲು ತಾವು ಸಿದ್ಧರಿಲ್ಲ. ಅಂದರೆ ಅಧಿಕಾರ ಕೈಗೆ ಸಿಕ್ಕಿದಾಗ ಅದನ್ನು ಹೇಗೆ ಉಳಿಸಿಕೊಳ್ಳಬೇಕು ಎಂಬ ಬಗ್ಗೆ ಮಾತ್ರ ತಾವು ಚಿಂತನೆ ಮಾಡಿದ್ದೀರಿ. ಆದರೆ• ಪ್ರಜಾಪ್ರಭುತ್ವ ತತ್ವದ ಬೇರು ಭದ್ರವಾಗಿ ಊರಲಿ ಎಂಬ ಬಗ್ಗೆ ತಾವು ಯಾವುದೇ ಪ್ರಯತ್ನ ಮಾಡಲಿಲ್ಲ. ಅದರ ಬಗ್ಗೆ ಪ್ರಯತ್ನ ಮಾಡಿದ್ದರೆ ಸಾರಾಸಗಟಾಗಿ ಎಲ್ಲಾ ಸದಸ್ಯರಿಗೆ ಮತದಾರರಾಗಿ ಪರಿಗಣಿಸಿ ಅವರಿಗೆ ಆ ಹಕ್ಕನ್ನು ಕೊಟ್ಟು ಪತ್ರವನ್ನು ಬರೆಯುತ್ತಿದ್ದಿರಿ. ತಾವು ಪ್ರಧಾನ ಮಂತ್ರಿಯವರಿಗೆ, ಕೇಂದ್ರದ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಮನವೊಲಿಸುತ್ತೇವೆಂದು ಇಲ್ಲಿ ಇದೇ ಸದನದಲ್ಲಿ ಹೇಳಿದ್ದಿರಿ. ಆದರೆ ತಾವು ಅದರ ಬಗ್ಗೆ ಪತ್ರವನ್ನು ಬರೆದೇ ಇಲ್ಲ. ನಾವು ಅದರ ಬಗ್ಗೆ ಪರಿಶೀಲನೆ

ಮಾಡಿದ್ದೇವೆ. ಈ ಸದಸ್ಯರಿಗೆ ಮತದಾನದ ಹಕ್ಕನ್ನು ಕೊಡುವ ಬಗ್ಗೆ ಪ್ರಯತ್ನ ಮಾಡುತ್ತೇವೆಂದು ಸದನದಲ್ಲಿ ಹೇಳಿದ್ದಿರಿ.

ಆದರೆ ತಾವು ಸರ್ಕಾರದ ವತಿಯಿಂದ, ಸಂಬಂಧಪಟ್ಟ ಇಲಾಖೆಯ ವತಿಯಿಂದ ಈ ಸದಸ್ಯರಿಗೆ ಮತದಾನದ ಹಕ್ಕನ್ನು ಕೊಡಬೇಕು ಎಂಬ ಬಗ್ಗೆ ಪತ್ರವನ್ನು ಬರೆದೇ ಇಲ್ಲ. ಅಂದರೆ ಸದನಕ್ಕೆ ತಾವು ತಪ್ಪು ತಿಳುವಳಿಕೆಯನ್ನು ಕೊಟ್ಟಿದ್ದೀರಿ. ಆದ್ದರಿಂದ ನಾವು ಸರ್ಕಾರದ ಬಗ್ಗೆ ಪ್ರಿವಿಲೇಜ್ ಮೂವ್ ಮಾಡಬೇಕಾಗುತ್ತದೆ. ಈ ಮನೆಯಲ್ಲಿ ಹೇಳಿದಂಥ ಮಾತಿಗೆ ಬೆಲೆಯಿಲ್ಲವೇ? ನಾವು ಇದರ ಬಗ್ಗೆ ಇಲ್ಲಿ ಧರಣಿ ಮಾಡಿದಾಗ ತಾವು ಎಲ್ಲಾ ವಿರೋಧ ಪಕ್ಷದವರನ್ನು ಕರೆಯಿಸಿ ನಾವು ಇದನ್ನು ಸರಿಮಾಡುತ್ತೇವೆ. ಕೇಂದ್ರ ಸರ್ಕಾರದ ಜೊತೆ ಸಮಾಲೋಚನೆ ಮಾಡುತ್ತೇವೆ, ನೀವೂ ಸಹ ಪ್ರಯತ್ನ ಮಾಡಿ ಎಂದು ಹೇಳಿದ್ದಿರಿ. ನಿಮ್ಮ ಆ ಹೇಳಿಕೆಯ ಪ್ರಕಾರ ಪಾರ್ಲಿಮೆಂಟ್ನಲ್ಲಿ ನಮ್ಮ ಪಕ್ಷದವರ್ಯಾರ್ಯಾರಿದ್ದಾರೆ ಅವರೆಲ್ಲರಿಗೆ, ಚೀಫ್ ವಿಪ್, ಪಕ್ಷದ ಮುಖಂಡರು ಎಲ್ಲರಿಗೂ ಫ್ಯಾಕ್ಸ್‌ನ್ನು, ಟೆಲಿಗ್ರಾಂನ್ನು ಕೊಟ್ಟಿದ್ದೇನೆ.

ಈ Representation of the people's Act ನಲ್ಲಿ ಒಂದು ವೇಳೆ ಗ್ರಾಮ ಪಂಚಾಯಿತಿ ಸದಸ್ಯರನ್ನು ಬಿಟ್ಟುಹೋದರೆ ಅದನ್ನು ವಿರೋಧ ಮಾಡಬೇಕು, ಅವರನ್ನು ಸೇರಿಸುವವರಿಗೆ ಹಠ ಹಿಡಿಯಬೇಕು ಎಂದು ಹೇಳಿದ್ದೇನೆ. ಆದರೆ ತಾವು ಇದರ ಬಗ್ಗೆ ಪತ್ರವನ್ನು ಬರೆದಿದ್ದೀರೋ? ಆ ರೀತಿ ಪತ್ರವನ್ನು ಬರೆದಿದ್ದರೆ ಒಂದು ಬರೆದಿರೀ? ಎಂದು ಡಿಸ್ಪ್ಯಾಚ್ ಮಾಡಿದಿರಿ, ಆ ಪತ್ರವನ್ನು ಈ ಸದನದ ಮುಂದಿಡಬೇಕು. ಇಲ್ಲದಿದ್ದರೆ ತಾವು ಈ ಸದನವನ್ನು ತಪ್ಪುದಾರಿಗೆಳೆಯುವ ಪ್ರಯತ್ನ ಮಾಡದಂತಾಗುತ್ತದೆ. ಸದನಕ್ಕೆ ಕೊಟ್ಟ ಮಾತನ್ನು ಉಳಿಸಿಕೊಂಡಿಲ್ಲ. ಇದೇ ರೀತಿ ಒಂದಲ್ಲ ಒಂದು ಮೋಸವನ್ನು ಮಾಡಿಕೊಂಡು ತಾವು ಬರುತ್ತಿದ್ದೀರಿ ಎನ್ನತಕ್ಕ ಮಾತನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಸತ್ಯಕ್ಕೆ ದೂರವಾದ ಮಾತನ್ನು ಹೇಳುವುದಕ್ಕೂ ಮಿತಿ ಇರುತ್ತದೆ. ಪದೇ ಪದೇ ಈ ಸದನದಲ್ಲಿ ತಾವು ಅದನ್ನು ಮಾಡುತ್ತಿದ್ದೀರಿ. ಇಲ್ಲದಿದ್ದರೆ ಆ ಕೆಲಸವನ್ನು ಮಾಡಲು ಆಗುವುದಿಲ್ಲವೆಂದು ಹೇಳಿದ್ದರೆ ನಾವು ಅದನ್ನು ಬಿಟ್ಟುಬಿಡುತ್ತೇವೆ, ಆದರೆ ನಾವೂ ಪ್ರಯತ್ನ ಮಾಡುತ್ತೇವೆ, ಇದರ ಬಗ್ಗೆ ಪತ್ರವನ್ನು ಬರೆಯುತ್ತೇವೆಂದು ಹೇಳಿ ಪತ್ರವನ್ನೇ ಬರೆಯದಿದ್ದದ್ದು ಸರಿಯಲ್ಲ.

ಪ್ರಜಾಪ್ರಭುತ್ವದ ತತ್ವಕ್ಕೆ ಕೊಡಲಿ ಪೆಟ್ಟನ್ನು ಹಾಕತಕ್ಕ ಕೆಲಸವನ್ನು ತಾವು ಮಾಡುತ್ತಿದ್ದೀರಿ ಗ್ರಾಮ ಪಂಚಾಯಿತಿಯ ಸದಸ್ಯರನ್ನು ಇಗ್ನೋರ್ ಮಾಡಿ ಅವರನ್ನು ಓಟರ್ಸ್ ಪಟ್ಟಿಯಿಂದ ಕೈಬಿಡತಕ್ಕ ಪ್ರಯತ್ನ ಮಾಡುತ್ತಿದ್ದೀರಿ.

ಇನ್ನು ಕಬ್ಬುಬೆಳೆಗಾರರ ಬಗ್ಗೆ ಹೇಳುವುದಾದರೆ, ಅದರ ಬಗ್ಗೆ ಈ ಸದನದಲ್ಲಿ ನಿಲುವಳಿ ಸೂಚನೆಯನ್ನು ಕೊಟ್ಟು ಮಾನ್ಯ ಪುಟ್ಟಣ್ಣಯ್ಯನವರು, ಅನೇಕ ಜನ ಸದಸ್ಯರುಗಳು, ರೈತ ಸಂಘದ ವತಿಯಿಂದ, ನಮ್ಮ ಪಕ್ಷದ ವತಿಯಿಂದ ಡಿ.ಆರ್. ಪಾಟೀಲರು ಇನ್ನೂ ಅನೇಕರು ಇದರ ಬಗ್ಗೆ ಇಲ್ಲಿ ಮಾತನಾಡಿದರು. ಅವರು ಕೊಟ್ಟಂಥ ಅಂಕಿಅಂಶಗಳ ಪ್ರಕಾರ ನಮ್ಮ• ರಾಜ್ಯದಲ್ಲಿ ಒಟ್ಟು 30 ಸಕ್ಕರೆ ಕಾರ್ಖಾನೆಗಳಿವೆ. ಸಹಕಾರ ಕ್ಷೇತ್ರದಲ್ಲಿ 17, ಸಾರ್ವಜನಿಕ ವಲಯದಲ್ಲಿ 2, ಜಂಟಿ ವಲಯದಲ್ಲಿ 2, ಖಾಸಗಿ ವಲಯದಲ್ಲಿ 9 ಇದೆ. ಈ ಮೂವತ್ತು ಸಕ್ಕರೆ ಕಾರ್ಖಾನೆಗಳಲ್ಲಿ ಒಟ್ಟು ಅರೆಯತಕ್ಕ ಕಬ್ಬಿನ ಪ್ರಮಾಣ ಸುಮಾರು ಒಂದು ಕೋಟಿ 32 ಲಕ್ಷ ಟನ್. ಖಂಡಸಾರಿಗೆಗೆ 16 ಲಕ್ಷ ಟನ್, ಬೆಲ್ಲ ತಯಾರಿಕೆಗೆ 20 ಲಕ್ಷ ಟನ್, ಹೊರರಾಜ್ಯಕ್ಕೆ ಸಾಗಾಣಿಕೆ ಮಾಡಿರತಕ್ಕದ್ದು 3 ಲಕ್ಷ ಟನ್, ಒಟ್ಟಾರೆ ಸುಮಾರು ಒಂದು ಕೋಟಿ

83 ಲಕ್ಷ ಟನ್ ಕಬ್ಬನ್ನು ಅರೆದಿದ್ದಾರೆ. ಸುಮಾರು 20 ಲಕ್ಷ ಟನ್ ಕಬ್ಬನ್ನು ರೈತರು ಬೆಳೆಸಿ ಅದಕ್ಕೆ ಬೆಂಕಿಯನ್ನಿಟ್ಟು, ಒಣಗಿಸಿ ಕಂಗಾಲಾಗಿದ್ದಾರೆ.

ಅಂಥ ರೈತರಿಗೆ ಏನಾದರೂ ಮಾಡಿ ಪರಿಹಾರವನ್ನು ಕೊಡಿಯೆಂದು ತಮ್ಮ ಪಕ್ಷದ ಸದಸ್ಯರುಗಳು ಮತ್ತು ಎಲ್ಲಾ ಪಕ್ಷದ ಸದಸ್ಯರುಗಳು ಹಠ ಮಾಡಿದರು. ಆದರೆ ಅದರ ಬಗ್ಗೆ ಚಿಂತನೆಯೇ ಇಲ್ಲ. ನಿಮ್ಮ ಸರ್ಕಾರದಲ್ಲಿ ಪರಿಹಾರವನ್ನು ಇಂಥ ಪ್ರಸಂಗಗಳಲ್ಲಿ ಕೊಟ್ಟಿದ್ದೀರಾ ಎಂದು ಕೇಳಿದ್ದಿರಿ. ಅದಕ್ಕೆ ನಾನು ಒಂದು ಉದಾಹರಣೆಯನ್ನು ಕೊಟ್ಟೆ. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ತೊಗರಿ ಬೇಳೆಯು ನಾಶವಾಗಿ ಗುಲ್ಬರ್ಗಾ, ಬೀದರ್ ರಾಯಚೂರಿನ ಭಾಗಗಳಲ್ಲಿ, ಇಂಡಿ ಮತ್ತು ಸಿಂಧಗಿ ತಾಲ್ಲೂಕಿನಲ್ಲಾದ ಸೂರ್ಯಕಾಂತಿ ಬೆಳೆಯ ನಾಶವಾಗಿದ್ದಾಗ ನಾವು ಸುಮಾರು ಹತ್ತರಿಂದ ಹನ್ನೆರಡು ಕೋಟಿ ಹಣವನ್ನು ಬಿಡುಗಡೆ ಮಾಡಿ ಪರಿಹಾರವನ್ನು ಕೊಡತಕ್ಕ ಪ್ರಯತ್ನ ಮಾಡಿದ್ದೆವು. ಎಲ್ಲರಿಗೂ ಪರಿಹಾರವನ್ನು ಕೊಟ್ಟಿದ್ದೇವೆಂದು ನಾನು ಹೇಳುತ್ತಿಲ್ಲ. ಎಲ್ಲರೂ ಸಮಾಧಾನಪಟ್ಟರು ಎಂದು ನಾನು ಹೇಳುತ್ತಿಲ್ಲ.

ಆದರೂ ರೈತರು ಸಂಕಟದಲ್ಲಿದ್ದಾಗ, ಕಷ್ಟದಲ್ಲಿದ್ದಾಗ ಅವರ ನೆರವಿಗೆ ಹೋಗತಕ್ಕ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡಿ ಅವರಿಗೆ ಪರಿಹಾರವನ್ನು ಕೊಡಿಸಿದ್ದೇವೆ. ಅದೇ ರೀತಿ ತಾವೂ ನಿಗದಿ ಮಾಡಿ. ನಮ್ಮ ಎಂ.ಇ.ಎಸ್. ಸದಸ್ಯ ಮಿತ್ರರು ಮಹಾರಾಷ್ಟ್ರದಲ್ಲಿ ಈಗಾಗಲೇ ಒಂದು ಟನ್ಗೆ 200ರೂ.ಗಳ ಪರಿಹಾರವನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆಂದು ಹೇಳಿದ್ದಾರೆ. ಅದೇ ರೀತಿ ಇಲ್ಲೂ ಮಾಡಬೇಕೆಂದು ಅವರು ಹೇಳಿದರು. ಆದರೆ ಯಾವುದನ್ನೂ ಮಾಡಿಲ್ಲ. ತಾವು ಪಕ್ಕದ ರಾಜ್ಯದಲ್ಲೇನಾಗಿದೆ ಎಂಬುದನ್ನು ನೋಡಿಕೊಂಡಾದರೂ ಬಂದು ಕೊಡಿ, ಇಲ್ಲದಿದ್ದರೆ ಅವರಿಗೆ ಸಮಾಧಾನವಾಗತಕ್ಕ ರೀತಿಯಲ್ಲಿ ಏನಾದರೂ ಪರಿಹಾರವನ್ನು ಕೊಡಿಯೆಂದರೆ ಅದಕ್ಕೆ ಸ್ಪಂದಿಸತಕ್ಕ ಪ್ರಯತ್ನವನ್ನು ನಮ್ಮ ಸಕ್ಕರೆ ಸಚಿವರು ಮಾಡಲಿಲ್ಲ. ಸಕ್ಕರೆ ಸಚಿವರಾದ ಶ್ರೀ ಉಮೇಶ್‌ಕತ್ತಿಯವರಿಗೆ ಇದರಲ್ಲಿ ಅನುಭವವಿದೆ. ಸಂಕೇಶ್ವರ ಸಕ್ಕರೆ ಕಾರ್ಖಾನೆ ಅವರ ಕೈಯಲ್ಲಿ ಇಂದು ಇದೆ. ಬಹಳ ಹೋರಾಟ ಮಾಡಿ, ರಾಜಕೀಯ ಮಾಡಿ ಅದನ್ನು ಅವರು ತೆಗೆದುಕೊಂಡಿದ್ದಾರೆ.

ಆದಕ್ಕೆ ಕನಿಷ್ಟ ಪಕ್ಷ ಅವರಾದರೂ ಈ ಬಗ್ಗೆ ಸಹಾನುಭೂತಿ ತೋರಿಸಬೇಕಾಗಿತ್ತು. ಏಕೆಂದರೆ ಇವತ್ತು ನಮ್ಮಲ್ಲಿ ಕಬ್ಬು ಬೆಳೆಯತಕ್ಕವರು ಬೆಳಗಾಂ ಜಿಲ್ಲೆಯಲ್ಲಿ ಹೆಚ್ಚು ಜನ ಇದ್ದಾರೆ. ಮಾನ್ಯ ಸಕ್ಕರೆ ಮಂತ್ರಿಗಳು ಇದರ ಬಗ್ಗೆ ಚಿಂತನೆ ಮಾಡಿ 2-3 ಬಾರಿ ಮೀಟಿಂಗ್‌ಕರೆದರು, ಆದರೆ ಆ ಮೀಟಿಂಗ್‌ಗಳು ಪೋಸ್ಟ್‌ಪೋನ್ ಆಯಿತು. ಒಂದು ಸಾರಿ ಮಾನ್ಯ ಮುಖ್ಯ ಮಂತ್ರಿಗಳಿ ಆ ಸಭೆಗೆ ಬಂದರು, ಬಹುಶಃ ಸ್ಟಾರ್ಟ್ ಮಾಡಿ ಅಡ್ಜರ್ನ್ ಮಾಡಿ ಮತ್ತೆ ಅವರು ಇಲ್ಲಿಗೆ ಬಂದರು. ಅಲ್ಲಿ ಮೀಟಿಂಗ್ ಅನ್ನು ಮಾನ್ಯ ಸಕ್ಕರೆ ಮಂತ್ರಿಗಳು ನಡೆಸಿದರು. ಮುಂದೆ ಅದರ ಬಗ್ಗೆ ಚಿಂತನೆ ಏನೂ ಆಗಲಿಲ್ಲ. ಹೀಗೆ ಇದರ ಬಗ್ಗೆ ಕೂಡ ತಾವು ಆಸಕ್ತಿ ವಹಿಸಲಿಲ್ಲ. ಇದನ್ನೂ ಕೂಡ ಕೈ ಬಿಟ್ಟು ಇವತ್ತು ಕಬ್ಬು ಬೆಳೆಯತಕ್ಕ ರೈತರಿಗೆ ಅನ್ಯಾಯ ಮಾಡಿ ಯಾವ ಸಹಾಯವನ್ನೂ ಕೂಡ ಅವರಿಗೆ ಮಾಡದೇ,

ಇವತ್ತು ಕೈ ಕಟ್ಟಿಕೊಂಡು ಈ ಸರ್ಕಾರ ಕುಳಿತಿದೆ. ಅದಕ್ಕಾಗಿ ನಾವು ಈ ಒಂದು ಅವಿಶ್ವಾಸ ನಿರ್ಣಯವನ್ನು ತಂದೆವು. ಇದೂ ಒಂದು ಕಾರಣ. ಕಾರಣಗಳೇನೆಂದು ನೀವು ಕೇಳುತ್ತಿದ್ದಿರಲ್ಲಾ, ಇದೂ ಒಂದು ಕಾರಣ ಎಂದು ನಾನು ಹೇಳುತ್ತಿದ್ದೇನೆ, ಅಮೇಲೆ ಇಡೀ ರಾಜ್ಯದಲ್ಲಿ ಅಸಮಾನತೆಯನ್ನು, ರೀಜನಲ್ ಇಂಬ್ಯಾಲೆನ್ಸ್ ಅನ್ನು

ತೆಗೆದು ಹಾಕಬೇಕೆಂದು ಹೇಳಿ ಸರ್ಕಾರ ಪ್ರಯತ್ನ ಮಾಡುತ್ತಿದೆ. ಎಲ್ಲಾ ಸರ್ಕಾರಗಳು ಒಂದೊಂದು ರೀತಿಯಿಂದ ಸಹಾಯ ಮಾಡಬೇಕು ಎನ್ನತಕ್ಕಂತಹ ಒಂದು ಮಾತನ್ನು ಗಮನದಲ್ಲಿಟ್ಟುಕೊಂಡು ಹಿಂದೆ ನಮ್ಮ ಸರ್ಕಾರ ಇದ್ದಾಗ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಆಯಿತು, ಆಮೇಲೆ ಮಲೆನಾಡು ಡೆವಲಪ್‌ಮೆಂಟ್ ಬೋರ್ಡ್ ಆಯಿತು, ಇತ್ತೀಚೆಗೆ ಬಯಲು ಸೀಮೆ ಅಭಿವೃದ್ಧಿ ಮಂಡಳಿ ಕೂಡ ರಚನೆಯಾಯಿತು. ಆದರೆ ಇದರ ಪರಿಸ್ಥಿತಿ ಏನಾಗಿದೆ ಅಂದರೆ, ಯಾವ ಒಂದು ಉದ್ದೇಶದಿಂದ ಈ ಒಂದು ಬೋರ್ಡ್‌ಗಳನ್ನು ನಾವು ಮಾಡಿದ್ದೇವೆಯೋ, ಅದರ ಕೆಲಸ ನೋಡಿದರೆ ಮತ್ತು ತಾವು ಕೊಟ್ಟಂತಹ ಹಣ ಇವತ್ತು ನೋಡಿದಾಗ ಎಷ್ಟರಮಟ್ಟಿಗೆ ಇದರ ಬಗ್ಗೆ ನಿಮಗೆ ಆಸಕ್ತಿ ಇದೆ ಎಂಬುದು ಇದರಿಂದ ಗೊತ್ತಾಗುತ್ತದೆ.

ಹೆಚ್.ಕೆ.ಡಿ.ಬಿ.ಗೆ ಬಜೆಟ್ ಅಲೋಕೇಷನ್ 1996-97ರಲ್ಲಿ 60 ಕೋಟಿ ರೂ.ಗಳು. ಆದರೆ ಹಣ ಬಿಡುಗಡೆ ಮಾಡಿರುವುದು ಕೇವಲ 15 ಕೋಟಿ ರೂ.ಗಳು ಮಾತ್ರ. ಈಗಾಗಲೇ ಈ ಅರ್ಥಿಕ ವರ್ಷದಲ್ಲಿ ಆರು ತಿಂಗಳಾಗಿದೆ. ಹೋದ ವರ್ಷದ್ದು ಸುಮಾರು ಇನ್ನೂ ಖರ್ಚು ಮಾಡಿದ್ದ ಹಣವನ್ನೇ ಇವರು ಬಿಡುಗಡೆ ಮಾಡಿಲ್ಲ. ಇವರು ಏನು ಹೇಳುತ್ತಾರೆ ಎಂದರೆ, ಖರ್ಚು ಆಗಿಲ್ಲ ಎಂದು ಹೇಳುತ್ತಾರೆ. ಅಲ್ಲಿ ಖರ್ಚು ಆಗಿರುತ್ತದೆ, ಆದರೆ ಇವರು, ಏಕೆ ಬಿಡುಗಡೆ ಮಾಡಿಲ್ಲ ಎಂದರೆ ಎಲ್.ಒ.ಸಿ. ಕೊಟ್ಟಾಗಿದೆ. ನಮಗೆ ದುಡ್ಡಿನದೇನೂ ಕೊರತೆಯಿಲ್ಲ ಎಂದು ಮಾನ್ಯ ಅರ್ಥ ಮಂತ್ರಿಗಳು ಆಗಾಗ ಹೇಳುತ್ತಿರುತ್ತಾರೆ. ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳು ಆ ಸಭೆಗೆ ಬಂದಿದ್ದರು. ಆದ ಆದು ಮೇಲೆ ಮುಂದೆ ರಿವ್ಯೂ ಮಾಡತಕ್ಕಂತಹ ಕೆಲಸವನ್ನು ಮಾನ್ಯ ಉಪಮುಖ್ಯಮಂತ್ರಿಗಳೂ ಕೂಡ ಮಾಡಿದರು. ಅದರಲ್ಲಿ ಈ ವಿಚಾರ ಪ್ರಸ್ತಾಪವಾಯಿತು.

ಆದರೆ ಆಗ ಅವರು ಏನು ಪ್ರಸ್ತಾವ ಮಾಡಿದರು ಅಂದರೆ ಹಿಂದೆ ಕೊಟ್ಟಂತಹ ಹಣವನ್ನೇ ಖರ್ಚು ಮಾಡಿಲ್ಲ ಎಂಬ ವಾದವನ್ನು ಮುಂದಿಟ್ಟರು. ಆದರೆ ಪರಿಸ್ಥಿತಿ ಹಾಗಿಲ್ಲ. ಅನೇಕ ಬಿಲ್ಸ್ ಎಲ್ಲಾ ಇಲಾಖೆಗಳಲ್ಲಿ ಪೆಂಡಿಂಗ್ಸ್ ಇವೆ. ಆ ಪೆಂಡಿಂಗ್ ಬಿಲ್ಸ್ ಅನ್ನು ಹೆಚ್.ಕೆ.ಡಿ.ಬಿ. ಸೆಕ್ರೆಟರಿ ಏನು ಇರುತ್ತಾರೆ, ಅವರಿಗೆ ಅದು ಅಲ್ಲಿ ಬಂದ ಮೇಲೆ, ಅವರು ಇದನ್ನು ಪರಿಶೀಲಿಸಿ, ಹಣ ಪಾವತಿ ಮಾಡಿದಾಗ ಮಾತ್ರ ಅದು ಸರ್ಕಾರದಲ್ಲಿ ಲೆಕ್ಕಕ್ಕೆ ಬರುತ್ತದೆ. ಅದು ಏನೆಂದರೆ, ಅವರು ಬಿಲ್ಲನ್ನು ಮಂಜೂರೇ ಮಾಡುವುದಿಲ್ಲ, ಅವರು ಮಂಜೂರು ಮಾಡಲಿಲ್ಲ ಎಂದರೆ, ಇವರ ಹೇಳುವುದು ಏನೆಂದರೆ, ಸುಮ್ಮನೆ ಇನ್‌ಸ್ಟ್ರಕ್ಷನ್ಸ್ ಇಲ್ಲಿಂದ ಕೊಡುತ್ತಾರೆ. ಏನೆಂದರೆ ನಮ್ಮ ಹತ್ತಿರ ಹಣ ಇಲ್ಲ, ಅದಕ್ಕಾಗಿ ಎಲ್.ಓ.ಸಿ. ಕೊಡುವುದಕ್ಕಾಗುವುದಿಲ್ಲ, ನೀವು ಬಿಲ್ ಅಲ್ಲೇ ಇಟ್ಟುಕೊಂಡು ಬಿಡಿ ಎಂದು ಓರಲ್ ಇನ್‌ಸ್ಟ್ರಕ್ಷನ್ ಕೊಡುತ್ತಾರೆ. ಆ ರೀತಿ ಇವರು ಬರವಣಿಗೆಯಲ್ಲಿ ಕೊಡುವುದಿಲ್ಲ, ಬರೀ ಫೋನ್‌ನಲ್ಲಿ ಮಾತ್ರ ಹೇಳುತ್ತಾರೆ, ಹಣದ ತಾಪತ್ರಯ ಇದೆ, ಆದ್ದರಿಂದ ದಯವಿಟ್ಟು ನೀವು ಬಿಲ್ ಸಬ್‌ಮಿಟ್ ಮಾಡಬೇಡಿ, ಬಿಲ್ ' ಈ ಇಲಾಖೆಯಲ್ಲಿ ಪೆಂಡಿಂಗ್ ಇದೆ ಎನ್ನತಕ್ಕಂಥಾದ್ದು ಬರಬಾರದು,

ಅದಕ್ಕೆ ಯಾವ ಯಾವ ಇಲಾಖೆಗಳಲ್ಲಿ ಏನೇನು ಇದೆ, ಅಲ್ಲೇ ಇಟ್ಟುಕೊಳ್ಳಿ ನೀವು. ಆ ಸಂಬಂಧಪಟ್ಟ ಇಂಜಿನಿಯರ್ಸ್‌ಗಳಿಗೆ ನೀವು ಅದನ್ನು ಅಲ್ಲೇ ಇಟ್ಟುಕೊಳ್ಳಿ ಎಂದು ಹೇಳಿ ಅವರಿಗೆ ಓರಲ್ ಇನ್‌ಸ್ಟ್ರಕ್ಷನ್ಸ್ ಕೊಟ್ಟು ಅಲ್ಲಿ ಇಟ್ಟುಕೊಳ್ಳುತ್ತಾರೆ.

ಹೀಗಾಗಿ ಇಲ್ಲಿ ಏನಾಗುತ್ತದೆ ಎಂದರೆ, ಇಲ್ಲಿ ಕೇಳಿದಾಗ ಏನು ಹೇಳುತ್ತಾರೆ ಅಂದರೆ, ಯಾವ ಬಿಲ್ಲೂ ಕೂಡ ನಮ್ಮಲ್ಲಿ ಪೆಂಡಿಂಗೇ ಇಲ್ಲ, ಹಣ ಯಾವುದಕ್ಕೆ ಕೊಡಬೇಕಾಗಿದೆ ಎನ್ನುತ್ತಾರೆ. ಇದನ್ನು ರೆಕಾರ್ಡ್ ಮಾಡಬೇಡಿ, ಏಕೆಂದರೆ ರೆಕಾರ್ಡ್ ಮಾಡಿದರೆ ಬಿಲ್ ಅನ್ನು ಕೊಡಬೇಕಾಗಿ ಬರುತ್ತದೆ ಎಂದು ಹೇಳಿ ಇನ್ ಡೈರೆಕ್ಟಾಗಿ ಖಜಾನೆಗೂ ಕೂಡ ಟೆಲಿಫೋನ್ ಮಾಡಿ ಇನ್‌ಸ್ಟ್ರಕ್ಷನ್ ಕೊಡುತ್ತಾರೆ. ಖಜಾನೆಯಲ್ಲಿ ಟೋಕನ್ ಕೊಡುವುದಕ್ಕೂ ಕೂಡ ಕ್ಯೂ ಇರುತ್ತದೆ. ಟೋಕನ್ ತೆಗೆದುಕೊಳ್ಳುವುದಕ್ಕೂ ಕೂಡ ಅವನು ಅಲ್ಲೆ ಬಹಳ ದೊಡ್ಡ ರೆಕಮೆಂಡೇಷನ್ ಹಚ್ಚುತ್ತಾನೆ.

ಏಕೆಂದರೆ, ನೀವು ಅಲ್ಲೇ ಕುಳಿತುಕೊಂಡು ಕೇಳಿಕೊಂಡಾಗ ಗೊತ್ತಿರುತ್ತದೆ, ಏಕೆಂದರೆ ನೀವು ಫೈನಾನ್ಸ್ ಮಿನಿಸ್ಟರ್ ಆಗಿದ್ದೀರಲ್ಲಾ, ಅದಕ್ಕಾಗಿ ಸ್ವಲ್ಪ ಫೋನ್ ಮೇಲೆಯೇ ನಿಮಗೆ ಜಾಸ್ತಿ ಕೆಲಸ ಆಗುತ್ತವೆ. ಹಾಗಾಗಿ ನಿಮಗೆ ಆ ತಾಪತ್ರಯ ಬರುವುದಿಲ್ಲ. ಬಾಕಿ ಎಂ.ಎಲ್.ಎ.ಗಳೇನಿದ್ದಾರೆ, ಅವರಿಗೆ ಈ ನೋವು, ತೊಂದರೆ ಗೊತ್ತು, ಬೇಕಾದರೆ ಮಾನ್ಯ ಉದಾಸಿಯವರಿಗೆ, ಈ ಬಗ್ಗೆ ಎಲ್.ಓ.ಸಿ. ಬಿಡುಗಡೆ ಮಾಡಿದ್ದಾರೆಯೇ ಎಂದು ಕೇಳಿ. ಮಾನ್ಯ ಉಪಾಧ್ಯಕ್ಷರೇ, ಹೆಚ್.ಕೆ.ಡಿ.ಬಿ. ವಿಷಯವಂತೂ ಬಿಡಿ, ಪಿಡಬ್ಲ್ಯೂ.ಡಿ. ನಲ್ಲಿ ಹೈದರಾಬಾದ್ ಕರ್ನಾಟಕಕ್ಕೆ ಎಲ್.ಓ.ಸಿ.ಯೇ ಇಲ್ಲ. ಬೇಕಾದರೆ ಈ ಬಗ್ಗೆ ಅಲ್ಲಿನ ಚೀಫ್ ಇಂಜಿನಿಯರ್‌ನ ಎವಿಡೆನ್ಸ್ ಬೇಕು ಅಂದರೆ ಅವನ ಎವಿಡೆನ್ಸ್ ತೆಗೆದುಕೊಳ್ಳೋಣ. ಪಾಪ ಅವರೇನು ಮಾಡುತ್ತಾರೆ ಹೆದರಿ, ಎಲ್ಲಿಯಪ್ಪ ಈ ಕಿರಿಕಿರಿ, ಮತ್ತೆ ನಮಗೆ ಟ್ರಾನ್ಸ್‌ಫರ್ ಮಾಡುತ್ತಾರೆ, ಸಸ್ಪೆಂಡ್ ಮಾಡುತ್ತಾರೆ ಎಂದು ಒಬ್ಬರೂ ಹೇಳುವುದಕ್ಕೆ ಹೋಗುವುದಿಲ್ಲ.

ಮಾನ್ಯ ಉದಾಸಿಯವರೇ ಹೇಳುತ್ತಾರೆ, ಎಲ್.ಓ.ಸಿ.ಯೇ ಇಲ್ಲ, ನಾವೇನು ಮಾಡುವುದು ಎಂದು ಅದಕ್ಕೆ ಅವರಿಗೆ ಎಷ್ಟು ಬರುತ್ತದೆಯೇ ಏನೋ, ಅದಕ್ಕೆ ಅವರೇನು ಮಾಡುತ್ತಾರೆ ಪಾಪ. ಎಲ್.ಓ.ಸಿ. ಇಲ್ಲ ಎಂದು ಹೇಳಿ ಟಾರ್ ಪರ್ಚೇಸ್ ಮಾಡಿಲ್ಲ, ಟಾರ್ ಪರ್ಚೇಸ್ ಮಾಡುವುದಕ್ಕೂ ಹಣ ಇರಲಿಲ್ಲ, ತಾವು ಬೇಕಾದರೆ ಕೇಳಿಕೊಳ್ಳಿ. ಅರ್ಥ ಮಂತ್ರಿಯಾಗಿ ತಾವು ಡಿಫೆಂಡ್ ಮಾಡಿಕೊಳ್ಳಬೇಕಾಗುತ್ತದೆ, ಡಿಫೆಂಡ್ ಮಾಡಿಕೊಳ್ಳಿ. ಇದು ಎಲ್ಲಾ ಶಾಸಕರ ಅನುಭವ, ಆ ಕಡೆಯವರು ಇರಲಿ ಅಥವಾ ಈ ಕಡೆಯವರು ಇರಲಿ. ಇದು ಎಲ್ಲರ ಅನುಭವವಾಗಿದೆ.

ಶ್ರೀ ವೈ. ರಾಮಕೃಷ್ಣ : ಮಾನ್ಯ ಖರ್ಗೆಯವರು ಹೇಳುವುದು ಸತ್ಯ ಇದೆ. ಮಾನ್ಯ ಅರ್ಥ ಮಂತ್ರಿಗಳು ಇದನ್ನು ಒಪ್ಪಿಕೊಳ್ಳಲೇ ಬೇಕು. ನಿಮ್ಮ ಕಡೆ ಇರುವ ಎಂ.ಎಲ್.ಎ. ಗಳನ್ನೇ ಬೇಕಾದರೆ ಕೇಳಿ ನೋಡಿ. ಅವರೂ ಇದನ್ನೇ ಹೇಳುತ್ತಾರೆ. ಅದು ಯೂನಿವರ್ಸಲ್ ಟ್ರೂತ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ಹೆಚ್.ಕೆ.ಡಿ.ಬಿ. ಪರಿಸ್ಥಿತಿ ಈ ರೀತಿ ಇದೆ. ಹೆಚ್.ಕೆ.ಡಿ.ಬಿ.ಗೆ. ಈ ಸಾಲಿನಲ್ಲಿ ಇಟ್ಟಿರುವ 60 ಕೋಟಿ ರೂ.ಗಳಲ್ಲಿ ಕೇವಲ 15 ಕೋಟಿ ರೂ.ಗಳನ್ನು ಮಾತ್ರ ಏಕೆ ಬಿಡುಗಡೆ ಮಾಡಿದ್ದೀರಿ ಎಂದು ನಾನು ಅರ್ಥ ಮಂತ್ರಿಗಳನ್ನು ಕೇಳುತ್ತೇನೆ. ಈಗಾಗಲೇ ಆರು ತಿಂಗಳಾಗಿದೆ.

ಶ್ರೀ ಸಿದ್ಧರಾಮಯ್ಯ : 60 ಕೋಟಿ ರೂ.ಗಳಲ್ಲಿ ಮೊದಲನೇ ಕ್ವಾರ್ಟರ್, ಮೂರು ತಿಂಗಳಿಗೆ 15 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆ. ಮೂರು ತಿಂಗಳಿನಲ್ಲಿ 60 ಕೋಟಿ ರೂ.ಗಳಲ್ಲಿ ಮೊದಲನೇ ಕಂತಾಗಿ 15 ಕೋಟಿ ರೂ.ಗಳನ್ನು ಬಿಡುಗಡೆ

ಮಾಡಿದ್ದೇವೆ. ಒಟ್ಟು ನಾಲ್ಕು ಕಂತುಗಳಲ್ಲಿ ಬಿಡುಗಡೆ ಮಾಡುತ್ತೇವೆ. ಈಗ 15 ಕೋಟಿ ರೂ.ಗಳನ್ನು ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳಿಗೆ ಬಿಡುಗಡೆ ಮಾಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ನಾನು ಮೊನ್ನೆ ಪ್ಲಾನಿಂಗ್ ಇಲಾಖೆಗೆ ಹೋಗಿ ಅವರು ಕೊಟ್ಟಂತಹ ಅಂಕಿ ಅಂಶಗಳನ್ನೇ ಇಲ್ಲಿ ಹೇಳುತ್ತಿದ್ದೇನೆ. 15 ಕೋಟಿ ರೂ.ಗಳು ಅಂದರೆ ಬಜೆಟ್ ಆಲೋಕೇಷನ್ ನಾಲ್ಕನೇ ಒಂದು ಭಾಗ ಮಾತ್ರ ಆರು ತಿಂಗಳಲ್ಲಿ ಬಿಡುಗಡೆ ಮಾಡಿದ್ದೀರಿ. ಪ್ರತಿ ವರ್ಷ ರೀಜನಲ್ ಇಂಬ್ಯಾಲೆನ್ಸ್ ಕಡಿಮೆ ಮಾಡುವುದಕ್ಕೋಸ್ಕರ ಹಣ ಹೆಚ್ಚು ಮಾಡಬೇಕು. 60 ಕೋಟಿ ರೂ.ಗಳೇನು 1989 ಅಥವಾ 1990 ರಲ್ಲಿ ಕೊಟ್ಟಿದ್ದರೋ, ಅಷ್ಟೇ ಮೊತ್ತದ ಅಲೋಕೇಷನ್ ಅನ್ನು ಇವತ್ತಿಗೂ ಕೊಡುತ್ತಿದ್ದೀರಿ. ಅದನ್ನು ಹೆಚ್ಚಿಗೆ ಮಾಡಲಿಲ್ಲ. ಪ್ರಪೋರ್ಶನೇಟ್ಲಿ ಇವತ್ತು ನೀವು ಲೆಕ್ಕ ಹಾಕಿಕೊಂಡರೆ ಇವತ್ತಿನ ದಿವಸ ಈ 60 ಕೋಟಿ ರೂ. ಬೆಲೆ ಏನೆಂದರೆ, 40 ಕೋಟಿ ರೂ. ಮಾತ್ರವೇ ಆಗುತ್ತದೆ. ಇದಕ್ಕಿಂತಲೂ ಹೆಚ್ಚಿಗೆ ಆಗಲಿಕ್ಕೆ ಸಾಧ್ಯವೇ ಇಲ್ಲ. ಇನ್ನು ಮಲೆನಾಡು ಅಭಿವೃದ್ಧಿ ಮಂಡಳಿ ಬಗ್ಗೆ ಹೇಳುವುದಾದರೆ, ಅದರಲ್ಲಂತೂ ಬಹಳ...

ವೋಕಲ್ ಮೆಂಬರ್ಸ್ ಇದ್ದಾರೆ ಮತ್ತು ಮಾನ್ಯ ಮುಖ್ಯಮಂತ್ರಿಗಳು ಅದೇ ಜಿಲ್ಲೆಯಿಂದ ಬರುತ್ತಾರೆ ಮತ್ತು ಈ ಮಲ್ನಾಡು ಡೆವಲಪ್‌ಮೆಂಟ್ ಬೋರ್ಡ್ ಸೀಮಿತವಾದಂತಹ ಪ್ರದೇಶದಿಂದಲೂ ಕೂಡ ಬರುತ್ತಾರೆ. ಅಲ್ಲಿ ಏನಾಗಿದೆ. ಅಂದರೆ, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. 30 ಕೋಟಿ ರೂ. ಪ್ರಾವಿಷನ್ ಇದೆ, ಆದರೆ ಬಿಡುಗಡೆ ಮಾಡಿದಂತಹ ಹಣ ನಾಲ್ಕನೇಯ ಒಂದು ಭಾಗ ಮಾತ್ರ, ಅಂದರೆ ಏಳೂವರೆ ಕೋಟಿ ರೂ.ಗಳು ಆರು ತಿಂಗಳಿಗೆ ನಾಲ್ಕನೇ ಒಂದು ಭಾಗ ಬಿಡುಗಡೆಯಾಗಿದೆ. ಅಂದರೆ ವಾರ್ಷಿಕ ಕೇವಲ ಅರ್ಧದಷ್ಟು ಹಣ ಮಾತ್ರ ಬಿಡುಗಡೆಯಾಗುತ್ತದೆ. ಆಮೇಲೆ ಅವರು ಹೇಳುವ ಪ್ರಕಾರ 40 ಕೋಟಿ ರೂ. ಕೊಡತಕ್ಕಂಥದ್ದು, ಅಲ್ಲಿ 30 ಕೋಟಿ ರೂ. ಇಲ್ಲಿ ಸುಮಾರು 100 ಕೋಟಿ ರೂ. ಈ ಸಲ ಆಗಬೇಕಾಗಿತ್ತು, ಆದರೆ ಕೇವಲ 60 ಕೋಟಿ ರೂ. ಮಾತ್ರ ಆಗುತ್ತದೆ. ಇಷ್ಟೆಲ್ಲಾ ಹೀಗೆ ಇಟ್ಟುಕೊಂಡು, ಈ ರೀತಿಯಾಗಿ ಅಲೋಕೇಷನ್ ಮಾಡಿಕೊಂಡು, ಈ ರೀತಿಯಾಗಿ ಬಜೆಟ್ ಮಾಡಿಕೊಂಡು, ಇವರು ರೀಜನಲ್ ಇಂಬ್ಯಾಲೆನ್ಸ್ ಅನ್ನು ನಾವು ಸರಿಯಾದ ರೀತಿಯಿಂದ ಡೆವಲಪ್ ಮಾಡುತ್ತೇವೆ, ಈ ಇಂಬ್ಯಾಲೆನ್ಸ್ ಅನ್ನು ತೆಗೆದು ಹಾಕುತ್ತೇವೆ ಎಂದು ಹೇಳತಕ್ಕಂಥವರು ಯಾವ ರೀತಿಯಾಗಿ ಅಲೋಕೇಷನ್ ಕೊಟ್ಟಿದ್ದಾರೆ ಎಂಬ ಬಗ್ಗೆ ನೀವು ಉತ್ತರ ಕೊಡಿ.

ಇದೇನೂ ಉಡಾಫೆ ಮಾತಲ್ಲವಲ್ಲಾ. ಇದರಲ್ಲೇನೂ ಸತ್ಯಾಂಶವಿಲ್ಲ ಎಂದು ನಿಮಗೆ ಹೇಳುವುದಕ್ಕೆ ಆಗುವುದಿಲ್ಲ. ಅದಕ್ಕಾಗಿ ಈ ರೀತಿಯಾಗಿ ನೀವು ರಾಜ್ಯವನ್ನು ಆಳುತ್ತಿದ್ದೀರಿ. ಇದರಿಂದ ನಿಮ್ಮ ಕೈಯಿಂದ ಒಳ್ಳೆಯ ಸರ್ಕಾರ ಕೊಡುವುದಕ್ಕೆ ಸಾಧ್ಯವಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಇನ್ನು ಎಸ್.ಸಿ.ಪಿ. ಅಮೌಂಟ್ ಬಗ್ಗೆ ಹೇಳುವುದಾದರೆ, ಇದೊಂದು ಎಸ್.ಸಿ. ಮತ್ತು ಎಸ್.ಟಿ. ಜನಾಂಗಕ್ಕೆ ನೇರವಾಗಿ ಸಹಾಯ ಆಗತಕ್ಕಂತಹ ಒಂದು ಯೋಜನೆ. ಎಸ್.ಸಿ.ಪಿ. ಅಂದರೆ ಬರೀ ಷೆಡ್ಯೂಲ್ಡ್ ಕಾಸ್ಟ್‌ಗೆ ಮಾತ್ರ ಸೀಮಿತವಾಗಿದೆ. ಷೆಡ್ಯೂಲ್ಡ್ ಟ್ರೈಬಿಗೂ ಕೂಡ ಆ ಅಮೌಂಟ್ ಬರುವುದಿಲ್ಲ.

5.40 ಪಿ.ಎಂ.

ಈ ಅಮೌಂಟ್ ಎಸ್.ಟಿ.ಗೆ ಖರ್ಚು ಮಾಡತಕ್ಕಂಥದ್ದು. ಎಸ್.ಸಿ.ದು ಮಾತ್ರ ನಾನು ಹೇಳುತ್ತೇನೆ. ಇದು ಎಸ್.ಸಿ. ಜನಾಂಗಕ್ಕೆ ಇಟ್ಟಂತಹ ಹಣ. ಸುಮಾರು 159 ಕೋಟಿ ಸ್ಪೆಷಲ್ ಕಾಂಪೊನೆಂಟ್ ಪ್ಲಾನ್‌ನಲ್ಲಿ ಇಟ್ಟಿದ್ದೀರಿ. 159 ಕೋಟಿ ರೂ.ಗಳಲ್ಲಿ ಖರ್ಚು ಮಾಡಿದ್ದು ಎಷ್ಟು ಎಂದರೆ, 54 ಕೋಟಿ ರೂಪಾಯಿಗಳ ಅಂದರೆ 103 ಕೋಟಿ ರೂಪಾಯಿಗಳು ಹೋದ ವರ್ಷ ಲ್ಯಾಪ್ಸ್ ಮಾಡತಕ್ಕಂಥದ್ದಾಗಲಿ, ಅಥವಾ ಖರ್ಚು ಮಾಡದೆ ಇರತಕ್ಕಂಥದ್ದಾಗಲಿ, ಈ ಕೆಲಸವನ್ನು ಮಾಡಿದ್ದಾರೆ. ಅದಕ್ಕೆ ಈ ಸರ್ಕಾರಕ್ಕೆ ಏನು ಹೇಳಬೇಕು, ಅಧ್ಯಕ್ಷರೆ ತಾವೇ ಹೇಳಿ. 100 ಕೋಟಿ ನೀವು ಹೇಳಬಹುದು, ಏಕೆಂದರೆ ಈ 103 ಕೋಟಿ ರೂಪಾಯಿಗಳಲ್ಲಿ ನೀವು ಅದೇ ವರ್ಷ ಖರ್ಚು ಮಾಡಿದ್ದರೆ ಈ ವರ್ಷ ಸ್ಪೆಷಲ್ ಕಾಂಪೋನೆಂಟ್ ಪ್ಲಾನ್‌ನಲ್ಲಿ ಇರತಕ್ಕಂತಹ ಹಣ ಪುನಃ ಏನು 160-70 ಕೋಟಿ ರೂ ಇದೆ ಇದು ಖರ್ಚು ಮಾಡುವುದು ಸುಲಭ ಆಗುತ್ತಿತ್ತು.

ಆ ಹಣ ಈ ಹಣ ಎರಡೂ ಸೇರಿ ಸುಮಾರು ಮುನ್ನೂರು ಕೋಟಿ ರೂಪಾಯಿ ಹಣ ನಿಮಗೆ ಖರ್ಚು ಮಾಡುವುದಕ್ಕೆ ಸಾಧ್ಯವೇ? Is it possible? Can you do it? ಅಂದರೆ ಇದು ಕಣ್ಣೀರು ಒರಿಸತಕ್ಕಂಥದ್ದು ಅಷ್ಟೆ. ಸುಮ್ಮನೆ ಹೇಳುವುದು ಮೊಸಳೆ ಕಣ್ಣೀರು ಸುರಿಸತಕ್ಕಂಥದ್ದು, ನಾವು ಹಾಗೆ ಮಾಡುತ್ತೇವೆ, ನಾವು ಹೀಗೆ ಮಾಡುತ್ತೇವೆ ಎಂದು. ಈಗ ನಿಮ್ಮ ಕೈಯಲ್ಲಿ ಇದ್ದುದು ಆದರೂ ಮಾಡಿ. ನಾನು ಕೇಳುತ್ತೇನೆ, ನೀವು ಯಾವ ಮಂತ್ರಿಗಳು ಅದನ್ನು ರಿವ್ಯೂ ಮಾಡಿ ಇಂಪ್ಲಿಮೆಂಟ್ ಮಾಡದೇ ಇರತಕ್ಕಂತಹ ಅಧಿಕಾರಿ ಮೇಲೆ ಏಕೆ ಕ್ರಮ ಜರುಗಿಸಿಲ್ಲ? Why you have not taken action? What is the reason? Why you have not spent?

ನೀವು ಏನು ಮಾಡುತ್ತೀರಿ ಅಂದರೆ ಹಣ ಬಿಡುಗಡೆ ಮಾಡುತ್ತೇವೆ, ಮಾಡುತ್ತೇವೆಂದು ಹೇಳುವುದು, ಮಾರ್ಚ್‌ವರೆಗೆ ಇಟ್ಟುಕೊಳ್ಳುವುದು, ಮಾರ್ಚ್ ಕೊನೆಯ ದಿವಸ ಬಿಡುಗಡೆ ಕಾಗದದಲ್ಲಿ ತೋರಿಸುವುದು. ಆ ಮೇಲೆ ಖರ್ಚಾಗಿದೆ ಉಳಿದಿದೆ, ನಾವಂತೂ ಬಿಡುಗಡೆ ಮಾಡಿದ್ದೇವೆ ನೋಡಿ ಎಂದು ಹೇಳುತ್ತಾರೆ. ಇದು ಚೀಟಿಂಗ್ ಅದಕ್ಕಾಗಿ ಇವತ್ತು ಏನಾಗಿದೆ ಎಂದರೆ 159 ಕೋಟಿ ರೂಪಾಯಿಯಲ್ಲಿ ಬರೀ 54 ಕೋಟಿ ರೂಪಾಯಿ ಮಾತ್ರ ಖರ್ಚಾಗಿದೆ. ಸ್ಪೆಷಲ್ ಕಾಂಪೊನೆಂಟ್ ಪ್ಲಾನ್‌ನಲ್ಲಿ ಎಸ್.ಸಿ.ಎಸ್.ಟಿ.ಯವರಿಗೆ ಇಟ್ಟಿದ್ದರಲ್ಲಿ 100 ಕೋಟಿ ರೂಪಾಯಿ ಖರ್ಚು ಮಾಡದೆ ಹಣ ಹಾಗೆಯೇ ಉಳಿಯಿತು. ಅನು ಏನು ಮಾಡುತ್ತಾರೆಂದರೆ, ಮಾರ್ಚ್ ಕೊನೆಗೆ ನೀವು ಕೊಡುವುದರಿಂದ ಅದು ಖರ್ಚು ಮಾಡುವುದಕ್ಕೆ ಆಗುವುದಿಲ್ಲ, ನೀವು ಬಿಟ್ಟ ಹಾಗೆ ಆಯಿತು, ಅವರು ಖರ್ಚು ಮಾಡದೆ ಇರುವ ಹಾಗೆ ಆಯಿತು ಎಲ್ಲಾ ಕಾಲದಲ್ಲಿ ಇರಲಿ ನನಗೆ ಗೊತ್ತು ಅದಕ್ಕಾಗಿ, ಅವರು ಏನು ಹೇಳಿದರು ಇದು ಚೀಟಿಂಗ್ 420 ಎಂದು ನಾನು ಹೇಳುವುದಿಲ್ಲ ನೀವು ಹೇಳಿ ಎಂದು ಹೇಳಿದೆ. ನಾನು. ಅವರು ಹೇಳಿದ್ದುದು ಅವರಿಗೆ ಉತ್ತರ ಕೊಡಿ. ನಾನು ಕೇಳುವುದು ಇಷ್ಟೆ, 100 ಕೋಟಿ ರೂಪಾಯಿ ಇವತ್ತಿನ ದಿವಸ ಈ ಹಣ ......

ಶ್ರೀ ವೈ. ರಾಮಕೃಷ್ಣ : ಲ್ಯಾಪ್ಸ್ ಆಗಿರುವುದಕ್ಕೆ ನೀವು ನನಗೆ ಉತ್ತರ ಕೊಡುವುದಕ್ಕಾಗುವುದಿಲ್ಲ, ನೀವು ಹೇಳುತ್ತೀರಿ ಆಫೀಸರ್ಸ್ ಎಂದು, ನೀವು 22 ನೇ

ತಾರೀಖು ಮೂರನೇ ತಿಂಗಳು ಹಣ ಡಿಪಾರ್ಟ್‌ಮೆಂಟ್‌ಗೆ ಬಿಡುಗಡೆ ಮಾಡಿ 31ನೇ ತಾರೀಖು ನೀವು ಖರ್ಚು ಮಾಡಿ ಎಂದು ಹೇಳಿದರೆ ಇದು ನಾಟಕನೊ, ಸತ್ಯಾಂಶನಾ ಹೇಳಿ ನೋಡೋಣ ನಾನು ಹೇಳುತ್ತಿಲ್ಲ, ನಿಮ್ಮ ಕೊಟ್ಟಿರುವ ಪುಸ್ತಕ ಹೇಳುತ್ತಿದೆ.

ಶ್ರೀ ಸಿದ್ಧರಾಮಯ್ಯ : ನಾವು ಉತ್ತರ ಕೊಟ್ಟ ಮೇಲೆ ಯಾರದ್ದು ಸರಿ ಎಂದು ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ಜನಗಳಿಗೆ ಗೊತ್ತಾಗಬೇಕು ಎಷ್ಟು ಹಣ ಲ್ಯಾಪ್ಸ್ ಆಗಿದೆ ಎಂದು ಲ್ಯಾಪ್ಸ್ ಎಂದು ಹೇಳುತ್ತಿದ್ದಾರೆ, ಲ್ಯಾಪ್ಸ್ ಆಗುವ ಪ್ರಶ್ನೆ ಇಲ್ಲ ಅಲ್ಲಿ. ಈ ವರ್ಷಕ್ಕೆ ಬಿಡುಗಡೆ ಮಾಡಿದ ಹಣ ಪಿ.ಡಿ.ಎ. ಅಕೌಂಟ್‌ನಲ್ಲಿ ಇಟ್ಟು ಕೊಳ್ಳುತ್ತಾರೆ. ಲ್ಯಾಪ್ಸ್ ಹೇಗೆ ಆಗುತ್ತದೆ. ಇದು ಜನಗಳಿಗೆ ಪ್ರಚಾರಕ್ಕೋಸ್ಕರ ಅಲ್ಲ.ಆ ಹಣ ಈ ವರ್ಷ ಖರ್ಚಾಗದೆ ಇದ್ದ ಹಣ ಪಿ.ಡಿ. ಅಕೌಂಟ್‌ನಲ್ಲಿ ಇಟ್ಟುಕೊಳ್ಳುತ್ತಾರೆ. ಲ್ಯಾಪ್ಸ್ ಲ್ಯಾಪ್ಸ್ ಎಂದರೆ ಏನು ನೀವೂ ಅಧಿಕಾರದಲ್ಲಿದ್ದವರು, ಅಧಿಕಾರ ಮಾಡಿದವರು.

ಶ್ರೀ ವೈ. ರಾಮಕೃಷ್ಣ : ಏಕೆ ವಿಚಾರಣೆ ಮಾಡಲಿಲ್ಲ? ಹರಿಜನರ ದುಡ್ಡು ಇದು ಹರಿಜನರ ವಿಚಾರ, ಹರಿಜನರ ಮೇಲೆ ಅಟ್ರಾಸಿಟಿ ಯಾರು ನೋಡಿಕೊಳ್ಳುತ್ತಾರೆ? Who is in charge?

ಶ್ರೀ ಸಿದ್ಧರಾಮಯ್ಯ : ಪರಿಶಿಷ್ಟ ಜಾತಿ ಬಗ್ಗೆ ಇವರಿಗೆ ಎಷ್ಟು ಕಾಳಜಿ ಇದೆಯೋ ನಮಗೂ ಅಷ್ಟೇ ಕಾಳಜಿ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇನ್ನು ಒಂದು ಲ್ಯಾಪ್ಸ್ ಎಂದರೆ ಸ್ವಲ್ಪ ಕೇಳಿ, ನೀವು ಅಷ್ಟು ಲಘುವಾಗಿ ತೆಗೆದುಕೊಳ್ಳಬೇಡಿ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದುದು ಏನೆಂದರೆ ಒಂದು ವರ್ಷಕ್ಕೆ ನೀವು ಬಡ್ಜೆಟ್ ಇಡುತ್ತೀರಿ. What is the intention of that to spend that, not in the next year.

ಅದು ಏನು 20 ಪರ್ಸೆಂಟ್ ಉಳಿದಿದೆ, 10 ಪರ್ಸೆಂಟ್ ಉಳಿದಿದೆ ಎಂದರೆ ಒಪ್ಪಿಕೊಳ್ಳೋಣ. 54 ಕೋಟಿ ರೂಪಾಯಿ ಖರ್ಚು ಮಾಡಿ 100 ಕೋಟಿ ಸೇವಿಂಗ್ಸ್ ಅಥವಾ ಅನ್‌ಸ್ಪೆಂಟ್ ಎಂದರೆ that speaks about the administration or the man who is incharge of that portfolio or the government which is incharge.

ನಾವು ಒಪ್ಪಿಕೊಳ್ಳೋಣ. 10 ಪರ್ಸೆಂಟ್ 20 ಪರ್ಸೆಂಟ್ ಉಳಿದಿದೆ ಎಂದರೆ ಒಪ್ಪಿಕೊಳ್ಳೋಣ. ಉಳಿಯುವುದು 100 ಕೋಟಿ ರೂಪಾಯಿ. ನೀವು ಖರ್ಚು ಮಾಡಿರುವುದು 54 ಕೋಟಿ ರೂಪಾಯಿ ಎಂದರೆ, ಇದಕ್ಕೆ ಏನು ಉತ್ತರ ಕೊಡುವುದಕ್ಕಾಗುತ್ತದೆ? ನಾವು ಪದೇ ಪದೇ ಅದೇ ಹೇಳುವುದಕ್ಕಾಗುವುದಿಲ್ಲ. ಅದಕ್ಕೆ ನೀವು ಸ್ವಲ್ಪ ಮನಸ್ಸು ಬಿಚ್ಚಿ ನೋಡಿದರೆ ಗೊತ್ತಾಗುತ್ತದೆ. ಹಿಂದೆ ಸರ್ಕಾರ ಮಾಡಲಿಲ್ಲ, ಮುಂದೆ ಸರ್ಕಾರ, ಎಲ್ಲರೂ ಹೇಗೆ ಮಾಡಿಕೊಂಡು ಬಂದಿದ್ದಾರೆ ಎಂದರೆ, ಇದೇ ಎಕ್ಸ್‌ಪ್ಲನೇಷನ್ ಕೊಡಬೇಕಾಗಿದ್ದರೆ ನೀವು ಅಲ್ಲಿ ಅಧಿಕಾರಕ್ಕೆ ಬರಬೇಕಾಗಿಲ್ಲ, ಮಾಡಿಲ್ಲ ಎಂದು ನಾವು ಇಲ್ಲಿಗೆ ಬಂದಿದ್ದೇವೆಂದು ತಿಳಿದುಕೊಳ್ಳಿ, ನಿಮಗೆ ಏನು ನೈತಿಕ ಹಕ್ಕು ಇದೆ ಅಲ್ಲಿರುವುದಕ್ಕೆ? When you are also same. ನಾವು ಮಾಡಿದ ಹಾಗೆ ನೀವು ಮಾಡುತ್ತೇವೆಂದು ಹೇಳಿಕೊಂಡು ಬರುತ್ತಿದ್ದರೆ ನಿಮಗೆ ಏನು ಹಕ್ಕು ಇದೆ ಅಲ್ಲಿ ಕೂರುವುದಕ್ಕೆ? ಇವತ್ತು ಇನ್ನೊಂದು ವಿಶೇಷವಾದ

ಸಂಗತಿ ಏನೆಂದರೆ, ಉಪಾಧ್ಯಕ್ಷರೆ, ನಾನು ಹೋದ ಸಲ ಕೂಡ ಪ್ರಸ್ತಾಪ ಮಾಡಿದ್ದೆ. ಸ್ಪೆಷಲ್ ರಿಕ್ರೂಟ್‌ಮೆಂಟ್, ಆ ಮೇಲೆ. ಎಸ್.ಸಿ. ಎಸ್.ಟಿ. ರಿಕ್ರೂಟ್ ಮೆಂಟ್ ಆಗಬೇಕು ಎನ್ನತಕ್ಕಂಥದ್ದರ ಬಗ್ಗೆ ನಾನು ಇಲ್ಲಿ ಪ್ರಸ್ತಾಪ ಮಾಡಿದ್ದೇನೆ. ಆದರೆ ಇವತ್ತು ಎಲ್ಲಾ ಕಾನೂನನ್ನು ತಾವು ಬದಿಗಿಟ್ಟು ನಮಗೆ ಏನು ಹೇಳುತ್ತೀರಿ,

ಕಾನೂನು ಅಡಿಯಲ್ಲಿ ರಿಸರ್ವೇಷನ್ ಪ್ರಮೋಷನ್ ಕೊಡುವುದಕ್ಕೆ ಬರುವುದಿಲ್ಲ, ಕೆ.ಎ.ಟಿ. ಕ್ವಾಷ್ ಮಾಡಿದೆ. ಸುಪ್ರೀಂಕೋರ್ಟ್ ಅದಕ್ಕೆ ಇವತ್ತಿನ ದಿವಸ ಒಂದು ನಿರ್ಣಯ ಕೊಟ್ಟ ಮೇಲೆ ಅದು ಮಾಡುವುದಕ್ಕೆ ಬರುವುದಿಲ್ಲ ಎನ್ನತಕ್ಕಂತಹ ಮಾತನ್ನು ನಮಗೆ ಹೇಳಿದಿರಿ, ಒಪ್ಪಿಕೊಳ್ಳೋಣ. ಕಾನೂನು ಪ್ರಕಾರ ನೀವು ಎಲ್ಲಿಯವರೆಗೆ ಮನಸ್ಸು ಮಾಡುವುದಿಲ್ಲ, ತಿದ್ದುಪಡಿ ತರುವುದಿಲ್ಲ, ಸಂವಿಧಾನದ 77ನೇ ತಿದ್ದುಪಡಿ ಏನು ಬಂದಿದೆ, ಅದು ಆರ್ಟಿಕಲ್ 16 ಸಬ್ ಕ್ಲಾಸ್ 4 'ಎ' ಏನು ಬಂದಿದೆ ಅದರ ಪ್ರಕಾರ ನೀವು ಜಿ.ಒ. ಎಲ್ಲಿಯವರೆಗೆ ಇಷ್ಯೂ ಮಾಡುವುದಿಲ್ಲ, ಕ್ಯಾಟಗರಿ ವೈಸ್ ಮಾಡುವುದಿಲ್ಲ ಅಲ್ಲಿಯವರೆಗೆ ಅವರು ತೊಂದರೆಯಲ್ಲೇ ಇರುತ್ತಾರೆ. Scheduled caste people will saffer. ಅದನ್ನು ನೀವು ಒಂದು ಕ್ಯಾಬಿನೆಟ್ ನಿರ್ಣಯ ತೆಗೆದುಕೊಂಡು ಮಾಡಬೇಕು. ಆದರೆ ಅದರ ತದ್ವಿರುದ್ಧ ನೀವು ಏನು ಮಾಡಿದ್ದೀರಿ, ನಿಮಗೆ ಬೇಕಾದಂತಹ ಇಲಾಖೆಗಳಲ್ಲಿ ನೀವು

ರಿಕ್ರೂಟ್‌ಮೆಂಟ್ ಮಾಡಿ ರೆಗ್ಯುಲರೈಸ್ ಮಾಡಿದ್ದೀರಿ. ಇದು ಯಾವ ಕಾನೂನು ಕೆಳಗೆ? ಈ ಜಯದೇವ ಕಾರ್ಡಿಯಾಲಜಿ ಇನ್‌ಸ್ಟಿಟ್ಯೂಟ್‌ನಲ್ಲಿ 95 ಜನರಿಗೆ ರೆಗ್ಯುಲರೈಸ್ ಮಾಡಿದ್ದೀರಿ, ಯಾವ ಕಾನೂನಿನಲ್ಲಿ ಹೇಳಿ. ಯಾವ ಕಾನೂನು ಅಡಿಯಲ್ಲಿ ರೆಗ್ಯುಲರೈಸ್ ಮಾಡಿದ್ದೀರಿ? ಯಾವ ಕಾನೂನಿನ ಅಡಿಯಲ್ಲಿ ಅಪ್ಲಿಕೇಷನ್ ಕಾಲ್‌ಫಾರ್ ಮಾಡಿದ್ದೀರಿ? Just because you are the Chief Minister can you do anything violation all the rules? ಅದು ಬಡವರಿಗೆ ನೀವು ತಿದ್ದುಪಡಿ ತನ್ನಿ ಕ್ಯಾಬಿನೆಟ್‌ನಲ್ಲಿ ಮೀಟಿಂಗ್ ಮಾಡಿ ಬೇಗನೆ ಎಂದರೆ,ಎಕ್ಸಾಮಿನ್ ಮಾಡುತ್ತೇವೆ, ಲಾ ಡಿಪಾರ್ಟ್‌ಮೆಂಟ್ ನೋಡುತ್ತೇವೆ ಎಂದರೆ, ಇದಕ್ಕೆ ಯಾವ ಲಾ ಡಿಪಾರ್ಟ್‌ಮೆಂಟ್? ಇದಕ್ಕೆ ಯಾವ ಲಾ ಡಿಪಾರ್ಟ್‌ಮೆಂಟ್ ಇಲ್ಲ, ಇದು ಒಂದು ಎರಡನೆಯದು ಸೆಕ್ರೆಟೇರಿಯಟ್‌ನಲ್ಲಿ ಮಿನಿಸ್ಟೀರಿಯಲ್ ಕೇಡರ್‌ನಲ್ಲಿ ಸುಮಾರು.....

ನಿಜವಾದರೆ, you have to be prosecuted under the Act..

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷರೆ, ಖರ್ಗೆಯವರು ನಮ್ಮ ಸರ್ಕಾರದಲ್ಲಿ ರೋಸ್ಟರ್ ಸಿಸ್ಟಮ್ ಬಿಟ್ಟು ಜಯದೇವ ಕಾರ್ಡಿಯಾಲಜಿಯಲ್ಲಿ 80 ಜನರಿಗೆ ಕೆಲಸ ಕೊಟ್ಟಿದ್ದೇವೆ, ಸೆಕ್ರೆಟೇರಿಯರ್‌ನಲ್ಲಿ ಮಂತ್ರಿಗಳ ಆಫೀಸ್‌ನಲ್ಲಿ ಒಂದೂವರೆ ವರ್ಷ ಕೆಲಸ ಮಾಡಿದವರಿಗೆ ಕೆಲಸ ಕೊಟ್ಟಿದ್ದೇವೆ, ಅದರಲ್ಲಿ ರೋಸ್ಟರ್ ಸಿಸ್ಟಮ್ ಇಲ್ಲ, ಫಾಲೋ ಮಾಡಿಲ್ಲ ಎಂದು ಹೇಳುತ್ತಿದ್ದಾರೆ. ಇದು ಇದೆ. ನಾನು ಇಲ್ಲ ಎಂದು ಹೇಳುತ್ತಿಲ್ಲ. ಕೆಲಸ ನಾವು ಮಾಡಿರುವುದು ನಿಜ. ರೋಸ್ಟರ್ ಪ್ರಕಾರವಾಗಿ ನಾವು ಫಿಲ್ ಅಪ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ನಾವು ತೆಗೆದುಕೊಳ್ಳುತ್ತೇವೆ. ಸಾರಿಗೆ ಸಂಸ್ಥೆಯಲ್ಲಿ ಎರಡೂವರೆ ಸಾವಿರ ಜನರಿಗೆ ರೋಸ್ಟರ್ ಇಲ್ಲದೆ ಅಪಾಯಿಂಟ್ ಮಾಡಿಕೊಂಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತೆಗೆದು ಹಾಕಿ ಬಿಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಹೇಗೆ ತೆಗೆಯುತ್ತೀರಿ, ಮೂರರಿಂದ ನಾಲ್ಕು ವರ್ಷ ಕೆಲಸ ಮಾಡಿದ್ದಾರೆ. ಅದಕ್ಕೆ ಮಾನ್ಯ ಉಪಾಧ್ಯಕ್ಷರೆ, ಗಾಜಿನ ಮನೆಯಲ್ಲಿ ಇರತಕ್ಕಂಥವರು ಮಾತನಾಡುವಾಗ ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕೆಂದು ಹೇಳುತ್ತೇನ. ತಾವೂ ಆ ಸರ್ಕಾರದಲ್ಲಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇರಬಹುದು. I don't compromise on this. If it is illegal you remove it.

ಶ್ರೀ ಪಿ.ಜಿ.ಆರ್. ಸಿಂಧ್ಯ : ಎರಡೂವರೆ ಸಾವಿರ ಜನರನ್ನು ನೇಮಕ ಮಾಡಿಕೊಂಡಾಗ ತಾವು ಏಕೆ ಅದನ್ನು ವಾಯ್ಸ್ ಮಾಡಲಿಲ್ಲ ಆ ಸಂದರ್ಭದಲ್ಲಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಮರ್ಥನೆ ಮಾಡಿಕೊಳ್ಳಿ. ನೀವು ಕಾನೂನು ಪ್ರಕಾರ ಮಾಡಿಕೊಳ್ಳಿ.

SRI P.G.R. SINDHIA : I won't speak without facts I will place before the House also. I would like to bring to the notice of the hon. members....

ಯಾರೋ ಪಾಪ ಜಯದೇವ ಕಾರ್ಡಿಯಾಲಜಿಯಲ್ಲಿ ಕ್ಲಾಸ್ ಫೋರ್ ಸರ್ವೆಂಟ್ಸ್ ಸ್ವೀಪರ್ಸ್ ಆಗಿ ಕೆಲಸ ಮಾಡುವವರು 100ಜನ ಇದ್ದರು, ಅವರಿಗೆ ಅಪಾಯಿಂಟ್‌ಮೆಂಟ್ ಕೊಟ್ಟಿರತಕ್ಕಂಥದ್ದು. ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಸಂದರ್ಭದಲ್ಲಿ ಸೆಕ್ರೆಟೇರಿಯಟ್‌ನಲ್ಲಿ ಕೆಲಸ ಮಾಡಿದವರಿಗೆ ರೆಗ್ಯುಲರೈಸ್ ಮಾಡಿರಲಿಲ್ಲವೇ? ಮಾಡಿರುವುದು ನಿಜ, for which you are also a party for that I am not talking about Mr. veerappa Moily. ತಾವೂ ಸರ್ಕಾರದಲ್ಲಿದ್ದೀರಿ. ಬೆಳಿಗ್ಗೆ ಬೇಕಾದಷ್ಟು ವಿಚಾರಗಳನ್ನು ನಮ್ಮ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ. ನಾವು ಕೇಳಿದ್ದೇವೆ. ಉತ್ತರ ಕೊಡುತ್ತೇವೆ, ಸತ್ಯಕ್ಕೆ ದೂರವಾದ ಎಷ್ಟೊಂದು ವಿಚಾರಗಳನ್ನು ಹೇಳಿದ್ದಾರೆ. ಅದಕ್ಕೆಲ್ಲ ನಾವು ಉತ್ತರ ಹೇಳಬೇಕಾಗುತ್ತದೆ. ಇಲ್ಲದಿದ್ದರೆ ಒನ್ ಸೈಡೆಡ್ ಆಗಿ ಹೋಗಿ ಬಿಡುತ್ತದೆಯಲ್ಲ!

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದು ಒಂದು ಇಷ್ಯೂ Second instance I will give.

ಶ್ರೀಜೆ.ಹೆಚ್. ಪಟೇಲ್ : ನಿಮ್ಮ ಕಾಲದಲ್ಲಿ ....

ಶ್ರೀ ಕುಂಬ್ಳೆ ಸುಂದರ್‌ರಾವ್ : ಏನು ನಿಮ್ಮ ಕಾಲದಲ್ಲಿ, ನಮ್ಮ ಕಾಲದಲ್ಲಿ.....

ಶ್ರೀ ಜೆ.ಹೆಚ್. ಪಟೇಲ್ : ನಿಮ್ಮ ಕಾಲ ಬರುವುದಿಲ್ಲ, ನೀವು ಏತಕ್ಕೆ ಅದನ್ನು ಆಲೋಚನೆ ಮಾಡುತ್ತೀರಿ?

ಡಾ। ಎಂ.ಪಿ. ಕರ್ಕಿ : ಬರುವುದೇ ನಮ್ಮ ಕಾಲ.

ಶ್ರೀ ಜೆ.ಹೆಚ್. ಪಟೇಲ್ : ನಾನು ಅವರಿಗೆ ಹೇಳುತ್ತಿದ್ದೇನೆ, ಅವರ ಕಾಲದಲ್ಲಿ ಎಂದು ನಿಮ್ಮ ಕಾಲ ಎಲ್ಲಿದು, ನೀವು ಕಾಲಾತೀತರು ಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ಕಾಲ, ನಮ್ಮ ಕಾಲ ಯಾರು ಬರುತ್ತದೆ ಎಂದು ಜನ ತೀರ್ಮಾನ ಮಾಡುತ್ತಾರೆ. ನಿಮ್ಮ ಕಾಲ ಮುಗಿಯುತ್ತಾ ಬರುತ್ತಿದೆ. ಇರಲಿ ನೋಡೋಣ.

ಶ್ರೀ ಜೆ.ಹೆಚ್. ಪಟೇಲ್ : ನಾನು ಖರ್ಗೆಯವರಿಗೆ ಇಷ್ಟೇ ಹೇಳುವುದು. ಈಗ ಇರುವ ವ್ಯವಸ್ಥೆಯಲ್ಲಿ ಅವರ ಸರ್ಕಾರ ಇದ್ದಾಗ ಕೂಡ ಅಡ್ಡಿ ಆತಂಕ ಬರುತ್ತದೆ. ಮೊನ್ನೆ ನಾನು ಏನು ಹೇಳಿದೆ ಎಂದರೆ ಕಾನೂನು ಅಡ್ಡಿ ಬಂದಾಗ ನಾವು ಕಾನೂನನ್ನು ಓವರ್ ರೂಲ್ ಮಾಡಿ ಮಾಡುವುದು ಒಂದು ಕೆಲಸ ಅಥವಾ ಮಾಡಬೇಕು ಎಂದು ಇದ್ದಾಗ ಕಾನೂನು ತಿದ್ದುಪಡಿ ಮಾಡಿ ಮಾಡುವುದು ಒಂದು ಕೆಲಸ. ಆದರೆ ನಾವು ಮಾಡಿದ್ದುದು ನೀವು ಏತಕ್ಕೆ ಮಾಡಬಾರದು ಎಂದು ಮಾಡಬಾರದು. ನೀವು ಮಾಡಿದ್ದು ಕೆಲಸ ನಾವು ಮಾಡಬಾರದು. ನಿಮಗಿಂತ ಉತ್ತಮವಾಗಿ ಇರಬೇಕು. ಆದರೆ ಅದಕ್ಕೆ ಪ್ರೊಸಿಜರ್ ಬೇಡವೇ? ಹಾಗೆಯೇ ಮಾಡಿ ಬಿಡುವುದಕ್ಕೆ ಸಾಧ್ಯವೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸಿಂಧ್ಯರವರು ಬಹಳ ಸಮರ್ಥನೆ ಮಾಡಿಕೊಂಡರು. ಕಾರ್ಡಿಯಾಲಾಜಿ ಇನ್ಸಿಟಿಟ್ಯೂಟ್‌ನಲ್ಲಿ ಮಾಡಿದ್ದುದು ಒಂದು. ಎರಡನೇಯದು ಇದು 267 ಜನರದ್ದು. ಯಾವ ರೋಸ್ಟರ್ ಫಾಲೋ ಮಾಡಿದ್ದೀರಿ ಮತ್ತು ಕಾನೂನು ಏನು ಹೇಳುತ್ತದೆ.......

ಶ್ರೀ ಸಿದ್ಧರಾಮಯ್ಯ : ಬಡವರಿಗೆ ಮಾಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲಿ ಗ್ರೆಡೇಶನ್ ಸಿಸ್ಟಮ್ ಇದೆ ಸ್ವಾಮಿ, ಲ್ಯಾಡರ್ ಸಿಸ್ಟಮ ಇದೆ, ಈ ಲ್ಯಾಡರ್ ಸಿಸ್ಟಮ್‌ನಲ್ಲಿ ಲೋಯಸ್ಟ್ ಲ್ಯಾಡರನ್ನು ತೆಗೆದುಕೊಳ್ಳಬೇಕು, ಮಧ್ಯದಲ್ಲಿ ಇರುವವರನ್ನು ತೆಗೆದುಕೊಳ್ಳಬೇಕು, ಬಡವರು ಎಂದು ಬರೀ ನಿಮ್ಮ ಜಾತಿಯವರಿಗೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ, I mean not you. ಎಲ್ಲದಕ್ಕೂ ಡಿಫೆಂಡ್ ಮಾಡುವುದಕ್ಕೆ ಹೋಗಬೇಡಿ. ಉಪಾಧ್ಯಕ್ಷರೇ, the Karnataka Scheduled Castes and Scheduled Tribes and other Backward Classes Reservation of Appointment etc.) Act 1990..

ಈ ಕಾನೂನು ಅಸ್ತಿತ್ವದಲ್ಲಿದೆ. ಇದರ ಪ್ರಕಾರ ಅಪಾಯಿಂಟ್‌ಮೆಂಟ್‌ನಲ್ಲಿ ಉಲ್ಲಂಘನೆ ಮಾಡಿದರೆ ಏನಾಗುತ್ತದೆ? ಸೆಕ್ಷನ್ 4ರ ಪ್ರಕಾರ ಅಪಾಯಿಂಟ್‌ಮೆಂಟ್ ಮಾಡುತ್ತಾರೆ. After the appointed day, "Reservation of appointment or post etc. While making appointments to any office in a civil service of the State of Karnataka or to a civil post under the State of Karnataka, appointments or posts shall be reserved for the members of the scheduled castes/scheduled tribes and other backward classes to such extent and in such manner as may be specified from time to time in the order made by the Government under Clause 4 of the Article 16 of the Costitution of India."ಇದು ಬ್ಯಾಕ್ವರ್ಡ್ ಕ್ಲಾಸ್‌ಗೆ ಅನ್ವಯಿಸುತ್ತದೆ. ಬರೇ ಎಸ್‌ಸಿಯವರಿಗೆ ಅಲ್ಲ, ರೋಸ್ಟರ್ ಪ್ರಕಾರ ಅಪಾಯಿಂಟ್‌ಮೆಂಟ್ ಮಾಡದೇಹೋದರೆ penalty is there under Section 5 of this Act. It is not an executive order. The provision is mandatory. What is the penalty, it you don't act according to section 4 i.e., serservation of appointment or post etc.

ಅದರ ರೋಸ್ಟರ್ ಪ್ರಕಾರ ಬ್ಯಾಕ್ವರ್ಡ್ ಕ್ಲಾಸ್‌ಗೆ ಅಥವಾ ಎಸ್‌ಸಿಯವರಿಗೆ ಒಂದು ವೇಳೆ ನಾವು ಅದನ್ನು ಅನುಷ್ಠಾನಕ್ಕೆ ತರದೇ ಹೋದರೆ, ಅದರ ಪ್ರಕಾರ

ನಾವು ಮಾಡದೇಹೋದರೆ ಫೆನಾಲ್ಟಿ ಏನು? If any appointing authority makes a appointment or any authority making admission to a course of study in a university or any educational institution makes admission in contravention of the provisions of this Act or rules made there under, he shall be punishable with a fine which may extend upto Rs. 1000 and imprisonment not exceeding six months.

ಈ ರೀತಿಯಾಗಿ ಶಿಕ್ಷೆ ಕೊಡುವ ಉದ್ದೇಶ ಏನು ಎಂದರೆ ಇಂತಹ ಆರ್ಬಿಟ್ರೆರಿ ಒತ್ತಾಯಕ್ಕೆ ಮಣಿದು ಆರ್ಬಿಟ್ರೆರಿ ಅಪಾಯಿಂಟ್‌ಮೆಂಟ್ಸ್ ಆಗಬಾರದು ಎಂದು ಇದನ್ನು ತರತಕ್ಕಂಥ ಅವಕಾಶ ಏಕೆ ಬಂತು ಎಂದರೆ ಸುಪ್ರೀಮ್ ಕೋರ್ಟಿನಲ್ಲಿ ಹಿಂದೆ ಮಿಸ್ಟರ್ ಶರ್ಮಾ ಎಂದು ಹುಬ್ಬಳ್ಳಿಯವರು ಡೈಲಿ ವೇಜಸ್ ಕೆಲಸದಲ್ಲಿರತಕ್ಕಂಥವರು ಈ ಕೇಸನ್ನು ಒಯ್ದು, ಯಾರು 240 ದಿವಸ ಕಂಟಿನ್ಯುಯಸ್ಸಾಗಿ ಸೇವೆಯನ್ನು ಸಲ್ಲಿಸಿದ್ದಾರೋ ಅವರೆಲ್ಲರಿಗೂ ರೆಗ್ಯೂಲರೈಸ್ ಮಾಡಬೇಕು ಎಂದು ಅಂದಾಗ ಸುಮಾರು 50-60 ಸಾವಿರ ಜನರಿಗೆ ರೆಗ್ಯೂಲರೈಸ್ ಮಾಡಿದರು. ಅದು ನಮ್ಮ ಸರ್ಕಾರದಲ್ಲಿ ಆಯಿತು. ಸುಪ್ರೀಂ ಕೋರ್ಟ್‌ನ ಆದೇಶದ ಪ್ರಕಾರ. ಆಗ ನಾವು ನಮ್ಮ ಸರ್ಕಾರದಲ್ಲೂ ಕೂಡ ಅಬ್ಜೆಕ್ಷನ್ ಮಾಡಿದೆವು. ಕ್ಯಾಬಿನೆಟ್‌ನಲ್ಲಿ ಚರ್ಚೆಯಾಗುವಾಗ ಅಥವಾ ಡಿಸಿಷನ್ ತೆಗೆದುಕೊಳ್ಳುವಾಗ ಬಹುಶಃ ಅಲ್ಲೂ ಕೂಡ ಡಿಸೆಂಟಿಂಗ್ ನೋಟ್ ಕೊಡತಕ್ಕಂಥ ಪದ್ಧತಿ ಇದ್ದಿದ್ದರೆ ನಾನು ಮಾನ್ಯ ಸಿಂಧ್ಯರವರಿಗೆ ತಂದು ತೋರಿಸುತ್ತಿದ್ದೆ. ಆದರೆ ವಾದ ಮಾಡುತ್ತೇವೆ, ಪ್ರತಿವಾದ ಮಾಡುತ್ತೇವೆ, ಹೇಳುತ್ತೇವೆ, ನಮ್ಮ ಅನೇಕ ನೋವುಗಳನ್ನು ಕ್ಯಾಬಿನೆಟ್ ಮುಂದೆ ಹೇಳುತ್ತೇವೆ, ಮುಖ್ಯಮಂತ್ರಿಗಳ ಮುಂದೆ ಹೇಳುತ್ತೇವೆ, ಕೊನೆಗೆ ಸದನದ ಮುಂದೆ ಕೂಡ ಹೇಳುತ್ತೇವೆ.

ಆದರೆ ಅದನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡತಕ್ಕಂಥವರು ಬೇಕಲ್ಲಾ. ಇದು ಮಾಡಬೇಕೆಂದು 1990ರಲ್ಲಿ ಈ ಕಾನೂನನ್ನು ತರಬೇಕಾಯಿತು. ಅದಕ್ಕೆ ಪನಿಷ್‌ಮೆಂಟ್ ಕೂಡ ಮಾಡಿಯಾಯಿತು. ಬೇರೆ ಯಾವ ರಾಜ್ಯದಲ್ಲೂ ಕೂಡ ಇದನ್ನು ಮಾಡಿಲಿಲ್ಲ, ನಮ್ಮ ರಾಜ್ಯದಲ್ಲೇ ಮಾತ್ರ ಮಾಡಿದ್ದುದು ಏತಕ್ಕೆಂದರೆ ಎಸ್‌ಸಿಎಸ್‌ಟಿಯವರಿಗೆ ಮತ್ತು ಬ್ಯಾಕ್ವರ್ಡ್ ಕ್ಲಾಸ್‌ನವರಿಗೆ ರೋಸ್ಟರ್ ಸಿಸ್ಟಮ್ ಪ್ರಕಾರ ವಯೋಲೇಟ್ ಮಾಡಬಾರದು ಎನ್ನತಕ್ಕಂಥ ದೃಷ್ಟಿಯಿಂದ, ಯಾವುದೇ ಒತ್ತಡಕ್ಕೆ ಯಾರೂ ಕೂಡ ಮಣಿಯಬಾರದು ಎಂದು ಇದನ್ನು ತರಲಾಯಿತು. ತಂದ ಮೇಲೂ ಕೂಡ ಏನಾಗುತ್ತಿದೆ ಎಂಬುದನ್ನು ಹೇಳುತ್ತೇನೆ. ಅವರಿಗೂ ಪ್ರಾಸಿಕ್ಯೂಟ್ ಮಾಡಿ, ಇದಕ್ಕೂ ಪ್ರಾಸಿಕ್ಯೂಟ್ ಮಾಡಿ ನಾನು ಇದ್ದರೆ ನನಗೂ ಮಾಡಿ, ಈಗ ಹೊಸದಾಗಿ ಸೆಕ್ರೆಟರಿಯೇಟ್‌ನಲ್ಲಿ ಹೊಸದಾಗಿ ಇನ್ನೊಂದು ತೆಗೆದುಕೊಂಡಿದ್ದೀರಿ,

ಡಿಪಿಎಆರ್‌ನಲ್ಲಿ 267ಅಪಾಯಿಂಟ್‌ಮೆಂಟ್ಸ್ ಮತ್ತು ಕಾರ್ಡಿಯಾಲಾಜಿ ಇನ್ಸಿಟಿಟ್ಯೂಟ್‌ನಲ್ಲಿ 95 ಇದಕ್ಕೆ ಯಾವ ರೋಸ್ಟರ್ ಕೂಡ ಇಲ್ಲ, ಒಂದು ಮಾಡಿದರೆ ಆಯಿತು ಎಂದು ಒಪ್ಪಿಕೊಳ್ಳಬಹುದು, ಆದರೆ ಒಂದು, ಎರಡು, ಮೂರು ಕಾನೂನು ವಿರುದ್ಧವಾಗಿ ರೋಸ್ಟರ್ ಇಲ್ಲದೆ ಅವರು ಏನೋ ಮಾಡಿದ್ದಾರೆ, ನಾವು ಮಾಡುತ್ತೇವೆಂದು ಅದನ್ನೇ ಡಿಫೆಂಡ್ ಮಾಡಿಕೊಂಡು 27-30 ಜನ ಸದಸ್ಯರು ನಿಮ್ಮಲ್ಲಿ ಏನು ಆರಿಸಿ ಬಂದಿದ್ದಾರೆ ಅವರಿಗೆ ಇದೇ ಸಮಾಧಾನ ಹೇಳಬೇಕಾಗಿತ್ತು ಮತ್ತು ಜನರಿಗೆ ಇದೇ ಮೆಸೇಜ್ ಕಳುಹಿಸಬೇಕಾದರೆ ಕಳುಹಿಸಿ ನನ್ನದೇನು ಅಭ್ಯಂತರವಿಲ್ಲ. ಆದರೆ ಕಾನೂನು

ಏನು ಹೇಳುತ್ತದೆ? ಅದಕ್ಕಾಗಿ ಈ ಫನಾಲ್ಟಿ ಇದೆ, ಹಾಗಾದರೆ ನಾನು ಕೇಳುತ್ತೇನೆ ಹಿಂದಿನ ಮುಖ್ಯಮಂತ್ರಿಗಳಿಗೆ ಪ್ರಾಸಿಕ್ಯೂಟ್ ಮಾಡಿ, ಇದು ಕಾನೂನಿನಲ್ಲಿ ರೀಸೆಂಟ್ಲಿ ಮಾಡಿದ್ದು, ಹಿಂದಿನ ಸರ್ಕಾರದವರು ಮಾಡಿದ್ದರೆ ಅವರಿಗೂ ಮಾಡಿ, ಕಾರ್ಪೊರೇಷನ್ ಚೇರ್ಮನ್ನೇ ಇರಲಿ, ಕೆಎಸ್‌ಆರ್‌ಟಿಸಿ ಮಂತ್ರಿಗಳೇ ಇರಲಿ ಅವರಿಗೂ ಮಾಡಿ, ಮತ್ತು ಹಿಂದಿನ ಮುಖ್ಯಮಂತ್ರಿಗಳು ಇವೆರಡೂ ಇನ್ಸಿಟಿಟ್ಯೂಟ್‌ನಲ್ಲಿ ಏನು ಮಾಡಿ ಹೋಗಿದ್ದಾರೆ ಇದಕ್ಕೂ ಕೂಡ ಪ್ರಾಸಿಕ್ಯೂಟ್ ಮಾಡಿ ಅಂಡರ್ ಸೆಕ್ಷನ್ 5ರಲ್ಲಿ, ಇದು ಕಾನೂನು ಇದೆಯಲ್ಲಾ. ಬಹುಶಃ ನಾಳೆ ಯಾರಾದರೂ ಕೋರ್ಟಿಗೆ ಹೋದರೆ ಏನಾಗುತ್ತದೆ? ನ್ಯಾಚುರಲ್ಲಿ ಆಗುತ್ತದೆ. ಏಕೆಂದರೆ ಶಕ್ತಿ ಇಲ್ಲ, ತಿಳಿವಳಿಕೆ ಇಲ್ಲ, ಅನೇಕ ಜನ ಹೋದರು ಅವರ ದುರ್ಬಲತೆಯ ಲಾಭವನ್ನು ನೀವು ಪಡೆದುಕೊಳ್ಳಬೇಕಾದರೆ, ಇದು ಸರಿಯಲ್ಲ. ನೀವು ಏಕೆ ಹೋಗಿಲ್ಲ, ಕೋರ್ಟಿಗೆ ಹೋಗಿ ಕೋರ್ಟ್ ಇದೆ ಅಲ್ಲಿ ಫೈಟ್ ಮಾಡಿ, ಸುಪ್ರೀಮ್ ಕೋರ್ಟ್ ಇದೆ, ಈ ಮಾತನ್ನು ಹೇಳಿಕೊಂಡು ನೀವು ನಿಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವಂಥದ್ದು ಮಾಡಿದರೆ ಖಂಡಿತವಾಗಿ ಇದು ಸಾಮಾಜಿಕ ನ್ಯಾಯ ಕೊಡತಕ್ಕಂಥ ಸರ್ಕಾರವಿಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇದು ಆಂಟಿ ಸೋಷಿಯಲ್ ಎಲಿಮೆಂಟ್ ಎನ್ನತಕ್ಕಂಥದನ್ನು ಹೇಳಬೇಕಾಗುತ್ತದೆ. ಆದರೆ ನೀವು ಬೇರೆಯವರ ವೀಕನೆಸ್‌ನ ಲಾಭ ಪಡೆದುಕೊಳ್ಳಬೇಡಿ. ನಿಮ್ಮ ಕೆಲಸ ಏನು ಎಂದರೆ you must educate them.

ತಪ್ಪು ಇದೆ ಎಂದು ನೀವು ಕಂಡು ಹಿಡಿದುಕೊಡಬೇಕು. ಇನ್ನೊಂದು ಸರ್ಕಾರ ಮಾಡಲಿಲ್ಲವೇನು ನಿಮ್ಮದು ಮಾಡಲಿಲ್ಲವೇನು ನೀವು ಮಾಡಿದ ಹಾಗೆ ನಾವು ಮಾಡಿದ್ದೇವೆ, ಇದನ್ನೇ ಹೇಳಿಕೊಂಡು ಹೋಗಬೇಕಾದರೆ ಮತ್ತೆ ನೀವು ಇಷ್ಟು ದಿವಸ ಶ್ರಮಪಟ್ಟು 30-35 ವರ್ಷ ರಾಜಕಾರಣದಲ್ಲಿದ್ದು ತತ್ವಜ್ಞಾನ ಹೇಳಿಕೊಂಡು ಬಂದಿದ್ದು ಏನು ಲಾಭ ಇದೆ ಸ್ವಾಮಿ? ಬೇರೆಯವರು ಮಾಡಿದ ಹಾಗೆ ನಾನು ಮಾಡುತ್ತೇನೆ, ಹಿಂದಿನ ಮುಖ್ಯಮಂತ್ರಿಗಳು ಮಾಡಿದ ಹಾಗೆ ನಾನು ಮಾಡುತ್ತೇನೆ, ನಿಮ್ಮ ಸರ್ಕಾರ ಇದ್ದ ಹಾಗೆ ನಾನು ಮಾಡುತ್ತೇನೆ ಎಂದು ಹೇಳುತ್ತಾ ಹೋದರೆ ಏನೂ ಪ್ರಯೋಜನವಿಲ್ಲ. Then don't claim that you are superior or that you have got high qualities or principles.

ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) : ಮಾನ್ಯ ಉಪಾಧ್ಯಕ್ಷರೇ, ಹರಿಜನ-ಗಿರಿಜನರಿಗೆ ಇದರಿಂದ ತುಂಬಾ ಅನ್ಯಾಯವಾಗಿದೆ. ಏಕೆಂದರೆ ಹಿಂದೆ ಕೆ.ಎಸ್.ಆರ್.ಟಿ.ಸಿ.ಯಲ್ಲಿ 4 ಸಾವಿರ ಜನರನ್ನು ನೇಮಕ ಮಾಡಿಕೊಂಡಾಗಲೂ ಕೂಡ ಈ ಪರಿಶಿಷ್ಟ ಜನ ಮತ್ತು ಪರಿಶಿಷ್ಟ ವರ್ಗದವರ ಬಗ್ಗೆ ರೋಸ್ಟರ್ ಸಿಸ್ಟಂನ್ನು ಫಾಲೋ ಮಾಡಲಿಲ್ಲ. ಇದಲ್ಲದೇ ಈಗ ವಿಧಾನಸೌಧದಲ್ಲಿ 257 ಮಂದಿಯ ನೇಮಕ, ಜಯದೇವ ಆಸ್ಪತ್ರೆಯಲ್ಲಿ 90 ಜನರ ನೇಮಕವಾಗುತ್ತಿದೆ. ಇವರು ಮಾತಿಗೆ ಮುಂಚೆ ಪತ್ರಿಕೆಯಲ್ಲಿ ದೊಡ್ಡದಾಗಿ ಹೇಳಿಕೊಳ್ಳುತ್ತಾರೆ, ನಮ್ಮ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಉದ್ಧಾರಕ್ಕಾಗಿ ಇರುವ ಸರ್ಕಾರ ನಮ್ಮದು ಎಂದು ನಿಮ್ಮ ಸರ್ಕಾರದಲ್ಲಿ ಇವರ ಬಗ್ಗೆ ಏನು ಮಾಡಿದ್ದೀರಿ? ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಖರ್ಗೆಯವರೇ, ನಾನು ಈ ಹಿಂದೆ ಇದೇ ಸದನದಲ್ಲಿ ಕೆ.ಎಸ್.ಆರ್.ಟಿ.ಸಿ.ಯಲ್ಲಿ 4 ಸಾವಿರ ಜನರನ್ನು ನೇಮಕ ಮಾಡಿಕೊಂಡಿದ್ದಕ್ಕೆ ಸಂಬಂಧ ಪಟ್ಟಂತೆ ಪ್ರಶ್ನೆಯನ್ನು ಹಾಕಿದ್ದೆ. ಈ ರೀತಿಯಲ್ಲಿ ನೇಮಕ ಮಾಡಿ ಕೊಂಡವರಿಗೆ

ಏನಾದರೂ ಕ್ರಮ ತೆಗೆದುಕೊಳ್ಳುತ್ತೀರೋ ಎಂದು ಕೇಳಿದ್ದೆ, ಇದರ ಬಗ್ಗೆ ಕ್ರಮವನ್ನೇನಾದರೂ ಕೈಗೊಂಡಿದ್ದೀರೋ? ಎಲ್ಲಿ ನೀವು ಕ್ರಮವನ್ನು ಕೈಗೊಳ್ಳುತ್ತೀರಾ ಏಕೆಂದರೆ ಇಲ್ಲಿ ನೀವು ಆ ರೀತಿಯಲ್ಲಿ ಕೆಲಸ ಮಾಡುತ್ತಿರುವಾಗ ಅವರ ಮೇಲೆ ನೀವು ಕ್ರಮ ಕೈಗೊಳ್ಳುವುದಕ್ಕೆ ಆಗುತ್ತದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು) : ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಹೆಚ್.ಡಿ. ಬಸವರಾಜು : ಹಾಗಾದರೆ ಈಗ ವಿಧಾನಸೌಧದಲ್ಲಿ 257 ಜನರನ್ನು ಮಾಡಿದ್ದೀರಲ್ಲಾ ಇಲ್ಲೂ ಕೂಡ ಕ್ರಮವನ್ನು ಕೈಗೊಳ್ಳುತ್ತೀರಾ? ಮತ್ತು ಜಯದೇವ ಆಸ್ಪತ್ರೆಯಲ್ಲಿ 95 ಜನರನ್ನು ನೇಮಕ ಮಾಡಿಕೊಂಡಿದ್ದಾರಲ್ಲಾ, ಅಲ್ಲೂ ಕೂಡ ಕ್ರಮ ಕೈಗೊಳ್ಳುತ್ತೀರಾ? ಇವೊತ್ತು ನೀವು ಒಬ್ಬೊಬ್ಬರನ್ನೂ ಆರಾರು ತಿಂಗಳು ಜೈಲಿಗೆ ಕಳುಹಿಸಿದರೆ ಮಾತ್ರ ಅವರಿಗೆ ಗೊತ್ತಾಗುತ್ತದೆ, ಯಾವುದೇ ರಿಕ್ರೂಟ್‌ಮೆಂಟ್ ಮಾಡಬೇಕಾದರೂ ಕೂಡ ಜನರು ಇದರ ಬಗ್ಗೆ ಬಹಳ ಯೋಚನೆ ಮಾಡುತ್ತಾರೆ. ಸಾಮಾಜಿಕ ನ್ಯಾಯದ ಬಗ್ಗೆ ಕೇವಲ ಬಾಯಿಯಲ್ಲಿ ಇಲ್ಲಿ ಮಾತನಾಡುವುದಲ್ಲ, ನಿಜವಾಗಿಯೂ ಇದನ್ನು ಹೇಳಿದ ರೀತಿಯಲ್ಲಿ ಜಾರಿಗೆ ತೆಗೆದುಕೊಂಡು ಬನ್ನಿ, ಆಗ ಜನರು ನಿಮ್ಮನ್ನು ಅಪ್ರಿಷಿಯೇಟ್ ಮಾಡುತ್ತಾರೆ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ಯಾವುದೋ ವಿಷಯವನ್ನು ತೆಗೆದುಕೊಂಡು ಯಾವ್ಯಾವುದೋ ಕಡೆಗೆ ಹೋಗುತ್ತಿದೆ. ಈಗಾಗಲೇ ಸಾಮಾಜಿಕ ನ್ಯಾಯದ ಬಗ್ಗೆ ಮಾನ್ಯ ಖರ್ಗೆಯವರು ಹೇಳಿದ್ದಾರಲ್ಲಾ ಆ ಮಾತಿನ ಒಳಾರ್ಥದ ಬಗ್ಗೆ ಇರುವ ವಿಷಯವನ್ನು ನಾವೆಲ್ಲರೂ ಒಪ್ಪುತ್ತೇವೆ, ಅದಕ್ಕೆ ನಾವು ವಿರುದ್ಧರಲ್ಲ. ಆದರೆ ನೀವೆಲ್ಲಾ ಏಕೆ ಮಾತನಾಡುವುದಕ್ಕೆ ಹೋಗುತ್ತೀರಿ.?

(ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜ್ : ಗುತ್ತಿಗೆ ಇಟ್ಟುಕೊಂಡಿರುವುದಕ್ಕೇ ಈ ಕೆಲಸ ಮಾಡಿರುವುದು. ನೀವು ಗುತ್ತಿಗೆ ಇಟ್ಟುಕೊಂಡಿದ್ದೀರೋ ಎಂದು ಜನಕ್ಕೆ ಹೇಳಿ ಹೇಳಿ ಈ ರೀತಿಯಲ್ಲಿ ಮೋಸ ಮಾಡುತ್ತಿದ್ದೀರಿ. ಇದರ ಬಗ್ಗೆ ಮಾತನಾಡುವುದಕ್ಕೆ ಬಿ.ಜೆ.ಪಿ.ಯವರೂ ಕೂಡ ಒಬ್ಬರಿದ್ದಾರೆ ಎನ್ನುವಂಥದ್ದನ್ನು ನೀವು ತಿಳಿದುಕೊಳ್ಳಬೇಕು. ಏಕೆಂದರೆ ಬಿ.ಜೆ.ಪಿ.ಯವರಿಗೆ ಇರುವಷ್ಟು ಕಳಕಳಿ ಬೇರೆ ಯಾರಿಗೂ ಇಲ್ಲ. ನೀವು ಗುತ್ತಿಗೆ ಇಟ್ಟುಕೊಂಡಿದ್ದೀರಿ ಎನ್ನುವಂಥ ಸುಳ್ಳು ಹೇಳಿ ಹೇಳಿ, ಈ ಹಿಂದೆ ಕೆ.ಎಸ್.ಆರ್.ಟಿ.ಸಿ.ಯಲ್ಲಿ 4 ಸಾವಿರ ಜನರನ್ನು ನೇಮಕ ಮಾಡಿಕೊಂಡಿದ್ದಾರೆ, ಇದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಾ? ಈಗ ವಿಧಾನಸೌಧದಲ್ಲಿ 257 ಜನರನ್ನು ತೆಗೆದುಕೊಂಡಿದ್ದಾರೆ, ಇದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಾ? ಈಗ ಜಯದೇವ ಆಸ್ಪತ್ರೆಯಲ್ಲಿ 95 ಜನರನ್ನು ನೇಮಕ ಮಾಡಿದ್ದೀರಿ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಸಾಮಾಜಿಕ ನ್ಯಾಯದ ಬಗ್ಗೆ ನೀವು ನಮ್ಮ ಬಿ.ಜೆ.ಪಿ.ಯವರಿಗೆ ಏನೋ ಮಾತನ್ನು ಹೇಳುತ್ತೀರಲ್ಲಾ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ ಇವುಗಳ ಬಗ್ಗೆ?

ಶ್ರೀ ಜೆ.ಹೆಚ್. ಪಟೇಲ್ : ನೀವು ಜೋರಾಗಿ ಮಾತನಾಡಿದ ಕೂಡಲೇ ಏನೂ ಆಗುವುದಿಲ್ಲ. ಈಗ ಪಾರ್ಟಿ ವಿಷಯ ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ(ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೇ, ಮಾರಿ ಕಣ್ಣು ಹೋತನ ಮೇಲೆ ಎನ್ನುವ ಗಾದೆ ಇದೆಯಲ್ಲಾ ಆ ರೀತಿಯಲ್ಲಿ ಬಿ.ಜೆ.ಪಿ.ಯವರು ಎದ್ದ ತಕ್ಷಣ ಏನಾದರೂ ಒಂದನ್ನು ಹೇಳಬೇಕೆಂದು ಎದ್ದುನಿಂತುಕೊಳ್ಳುತ್ತೀರಲ್ಲಾ ಏಕೆ? ಏನು ವಿಷಯ? ನಮಗೇನು ಸಾಮಾಜಿಕ ನ್ಯಾಯದ ಬಗ್ಗೆ ನಂಬಿಕೆ ಇಲ್ಲವೇ? ನಮಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಅಭಿವೃದ್ಧಿಯ ಬಗ್ಗೆ ನಂಬಿಕೆ ಇಲ್ಲವೇ?

ಶ್ರೀ ಜೆ.ಹೆಚ್.ಪಟೇಲ್ : ತಮಗೆ ಸಾಮಾಜಿಕ ನ್ಯಾಯದ ಬಗ್ಗೆ ಕಲ್ಪನೆ ಇಲ್ಲ ಎಂದು ನಾನು ಹೇಳಲಿಲ್ಲ. ಈ ಹಿಂದೆ ಮಾನ್ಯ ಸದಸ್ಯರು ಹೇಳಿದ್ದಾರಲ್ಲಾ ಆ ನೇಮಕಾತಿಗಳು ಈ ಹಿಂದೆಯೇ ಆಗಿ ಹೋಗಿವೆ. ಅವರೆಲ್ಲರೂ ಕೂಡ ಬಡ ಜನರೇ, ಈಗಾಗಲೇ ರಿಸರ್ವೇಷನ್ ತತ್ವವನ್ನು ಒಪ್ಪದೇ ಈ ಹಿಂದೆ ಏನು ನೇಮಕಾತಿ ಆಗಿದೆಯೋ ಅದರಲ್ಲಿರುವವರೆಲ್ಲರೂ ಕೂಡ ಬಡವರೇ ಹೊರತು ಅವರೇನೂ ಶ್ರೀಮಂತ ವರ್ಗದವರಲ್ಲ. ಅವರೂ ಕೂಡ ಬಡವರೇ ಆಗಿದ್ದರೂ ಈ. ಬಡತನದವರಲ್ಲೂ ಏನು ನಾವು ಆದ್ಯತೆಯನ್ನು ಕೊಡಬೇಕಾಗಿತ್ತೋ ಅದನ್ನು ಆಗ ಕೊಟ್ಟಿಲ್ಲ. ಅದನ್ನು ಆ ಕಾರಣದಲ್ಲಿ ಕೊಟ್ಟಿಲ್ಲ ಮತ್ತು ಕೊಡುವುದಕ್ಕೂ ಆಗಿಲ್ಲ ಆಗ. ಅದನ್ನು ನಾವು ಈಗ ಏಕಾಏಕಿ ತಿದ್ದುಪಡಿ ಮಾಡುವುದು show us a practical and pragmatic way ನಾನೂ ಅದೇ ಭಾವನೆಯಲ್ಲಿ ಮಾತನಾಡಬಹುದು. ಆದರೆ ಆ ರೀತಿ ಆಗುವುದಿಲ್ಲ. ತಾವೂ ಕೂಡ ಈ ಹಿಂದೆ ಸರ್ಕಾರ ನಡೆಸಿದ್ದೀರಿ, What I desire to do is samething what I can do. The samething to you. ಆಮೇಲೆ ಮಾನ್ಯ ಸದಸ್ಯರಿಗೆ ನಾನು ಹೇಳುತ್ತೇನೆ, ನೀವು ಸ್ವಲ್ಪ ವಕೀಲರವರನ್ನು ಮಾತನಾಡಿಸಿಕೊಂಡು ಬನ್ನಿ ಮತ್ತು ಮಾಯಾವತಿಯವರನ್ನು ಕೇಳಿ ಕೊಂಡು ಬನ್ನಿ.

ಶ್ರೀ ಬಿ.ಬಿ. ಶಿವಪ್ಪ : ನೀವು ಅದರ ಬಗ್ಗೆ ಮಾತನಾಡುವ ಅವಶ್ಯಕತೆ ಇಲ್ಲ. ನೀವು ಏನು ಕೆಲಸ ಮಾಡಬೇಕೋ ಅಷ್ಟನ್ನು ಮಾಡಿ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜ್ : ಕೇವಲ ಒಂದೂವರೆ ವರ್ಷಗಳ ಕಾಲ ಕೆಲಸ ಮಾಡಿದವರಿಗೆ ಪರ್ಮನೆಂಟ್ ಮಾಡುವಂಥ ಆತುರ ಇವರಿಗೇನಿತ್ತು? ನಾನು ಇದನ್ನೇ ಕೇಳುತ್ತಿದ್ದೇನೆ, ಏಕೆಂದರೆ ಇವರು ವಕೀಲರವರಿಗಿಂತ ಅತ್ಯುತ್ತಮರಲ್ಲವೇ? ಆದ್ದರಿಂದ ನೀವು ಈ 267 ಜನರನ್ನು ಮತ್ತು ಜಯದೇವ ಆಸ್ಪತ್ರೆಯಲ್ಲಿ 95 ಜನರನ್ನು ಪರ್ಮನೆಂಟ್‌ಮಾಡುವ ಆತುರವೇನಿತ್ತು? ನೀವು ಪತ್ರಿಕೆಯಲ್ಲಿ ಜಾಹೀರಾತನ್ನು ಈ ಹುದ್ದೆಗಳ ಬಗ್ಗೆ ಕೊಡಬಹುದಾಗಿತ್ತಲ್ಲವೇ?

ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ. ಮಾಮನಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಬಿ.ಸ್. ಯಡಿಯೂರಪ್ಪ : ನೀವು ಹೇಳುವುದು ಸರಿ ಇದೆ. ಈ ವಕೀಲಾ ಸಂಸ್ಕೃತಿ ಇವೆಯಲ್ಲಾ ಅದನ್ನು ನೀವು ಹಾಕಿಕೊಟ್ಟಂಥ ಸಂಸ್ಕೃತಿಯಾಗಿದೆ.

ನಾವು ಅಧಿಕಾರವನ್ನು ಬಿಡುವುದಕ್ಕೆ ಸಿದ್ಧರಿದ್ದೇವೆ, ಅಧಿಕಾರವನ್ನು ಕಳೆದುಕೊಳ್ಳುವುದಕ್ಕೆ ಸಿದ್ಧರಿದ್ದೇವೆ ಆದರೆ ವಘೇಲಾ ಸಂಸ್ಕೃತಿಯನ್ನು ಬೆಳೆಸಿಕೊಳ್ಳುವುದಕ್ಕೆ ನಾವು ಸಿದ್ಧರಿಲ್ಲ. ಇದನ್ನು ನಮ್ಮ ಹಾಗೆ ಬೆಳೆಸುವುದಕ್ಕೆ ನಾವು ಸಿದ್ಧರಿಲ್ಲ. We are ready to sacrifice for it. ಗುಜರಾತ್‌ನಲ್ಲಿ ಸರ್ಕಾರ ಹೋದರೂ ಚಿಂತೆಯಿಲ್ಲ, ಈ ರೀತಿಯ ಸಂಸ್ಕೃತಿಯನ್ನು ನಾವು ಕಿತ್ತುಹಾಕುತ್ತೇವೆ ಮತ್ತು ಹೊಸ ಸಂಸ್ಕೃತಿಯನ್ನು ರಾಜಕಾರಣದಲ್ಲಿ ನಾವು ತರುತ್ತೇವೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೇ, ಆತ್ಮರಾಮ್ ಎನ್ನುವಂಥ ಗ್ರಾಮೀಣಾಭಿವೃದ್ಧಿ ಮಂತ್ರಿ ವಘೇಲಾ ಸರ್ಕಾರದಲ್ಲಿ ಇರಲಿಲ್ಲ, ಅವರನ್ನು ಬೆತ್ತಲೆ ಮಾಡಿ ವಾಜಪೇಯಿಯವರ ಸಭೆಯಲ್ಲಿ ಹೊಡೆಯುವುದು ಎಂದರೆ ಅದಕ್ಕಿಂತ ಈ ಹೊಸ ಸಂಸ್ಕೃತಿ ಇನ್ನು ಯಾವುದಿದೆ?

(ಗೊಂದಲ)

ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ಉಪಾಧ್ಯಕ್ಷರೇ, ಡಿಸೆಂಬರ್ 11ನೇ ತಾರೀಖು ವಿಧಾನಸೌಧದ ಹತ್ತಿರ ಚಪ್ಪಲಿಯಲ್ಲಿ ಒಬ್ಬರಿಗೆ ಹೊಡೆದರಲ್ಲಾ, ಆ ರೀತಿ ಯಾರು ಹೊಡೆದವರು ಮತ್ತು ಏಕೆ ಹೊಡೆದರು?

ಶ್ರೀ ಹೆಚ್.ಡಿ. ಬಸವರಾಜು : ಹೆಗಡೆಯವರಿಗೆ ಹೊಡೆದು ವಿಧಾನಸೌಧದ ಹತ್ತಿರ ಗ್ಲಾಸ್ ಎಲ್ಲಾ ಒಡೆದು ಪುಡಿ ಪುಡಿ ಮಾಡಿದರಲ್ಲಾ, ಅವೊತ್ತು ನಿಮಗೆ ವಘೇಲಾ ಬೇಕಾಗಿರಲಿಲ್ಲವೇ? ಇವೊತ್ತು ವಘೇಲಾ ದೊಡ್ಡವರಾಗಿಬಿಟ್ಟರೆ ನಿಮಗೆ?

(ಗೊಂದಲ)

ಶ್ರೀ ಎಂ. ಶ್ರೀನಿವಾಸ್ : ಮಾನ್ಯ ಉಪಾಧ್ಯಕ್ಷರೇ, ಪ್ರಕಾಶ್‌ರವರು ಮಾತನಾಡುತ್ತಾ ವಘೇಲಾರವರದ್ದು ಏನಾಯಿತು ಮತ್ತೊಂದು ಏನಾಯಿತು ಎಂದು ಹೇಳಿದರು. 1994ರಲ್ಲಿ ಚುನಾವಣೆಯಾಗಿ ನಿಮ್ಮ ಸರ್ಕಾರದಲ್ಲಿ ಮೊದಲನೇ ಮುಖ್ಯ ಮಂತ್ರಿಯಾಗುವ ಸಂದರ್ಭದಲ್ಲಿ ದಳದ ಕಛೇರಿಯಲ್ಲಿ ರಾಮಕೃಷ್ಣ ಹೆಗಡೆಯವರಿಗೆ ಹೊಡೆದಿರಿ. ಅನಂತ್‌ನಾಗ್‌ರವರನ್ನೂ ಕೂಡ ಪಾಪ ಹೊಡೆದಿರಿ. ಇದೆಲ್ಲವನ್ನೂ ನಾವೇನು ನೋಡಿಲ್ಲವೇ, ನೀವೇ ಹೊಡೆದಿರಿ, ನಿಮ್ಮನ್ನು ಸಾಕಿದಂಥ ರಾಮಕೃಷ್ಣ ಹೆಗಡೆಯವರಿಗೆ ಚಪ್ಪಲಿಯಲ್ಲಿ ಹೊಡೆದಿರಿ, ಕಲ್ಲುಗಳಲ್ಲಿ ಹೊಡೆದಿರಿ, ನಿಮ್ಮ ಆಫೀಸ್ ತುಂಬಾ ಕಲ್ಲುಗಳು ತೂರಾಡಿದವು. ಅದೇನು ನಮಗೆ ಗೊತ್ತಿಲ್ಲವೇನು. ನಿಮ್ಮ ಬಂಡವಾಳ ಎಲ್ಲಾ ಗೊತ್ತಿದೆ.

ಉಪಾಧ್ಯಕ್ಷರು : ಆಯಿತು ಶ್ರೀನಿವಾಸ್‌ರವರೇ ಕುಳಿತುಕೊಳ್ಳಿ, ಮೊಯಿಲಿಯವರೇನೋ ಮಾತನಾಡಬೇಕಂತೆ.

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಉಪಾಧ್ಯಕ್ಷರೇ, ನಾನು ಈ ವಘೇಲಾ ವಿಚಾರದಲ್ಲಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಸನ್ಮಾನ್ಯ ಸಾರಿಗೆ ಸಚಿವರು ಮಾತನಾಡುತ್ತಾ ಕೆ.ಎಸ್.ಆರ್.ಟಿ.ಸಿ.ಯಲ್ಲಿ ನೀವು 4 ಸಾವಿರ ಜನರನ್ನು ನೇಮಕ ಮಾಡಿದಿರಿ ಎನ್ನುವ ರೀತಿಯಲ್ಲಿ ಹೇಳಿದರು ಮತ್ತು ಸನ್ಮಾನ್ಯ ಬಸವರಾಜುರವರು ಕೂಡ ಇದೇ ಅಭಿಪ್ರಾಯದಲ್ಲಿ ಹೇಳಿದ್ದಾರೆ. ಈ ಅಭಿಪ್ರಾಯದಲ್ಲಿ ಏನಾಗುತ್ತದೆಂದರೆ

ನಾವೇನೋ ನಮ್ಮ ಸರ್ಕಾರದಲ್ಲಿ ಕೆ.ಎಸ್.ಆರ್.ಟಿ.ಸಿ.ಯಲ್ಲಿ 4 ಸಾವಿರ ಜನರನ್ನು ರೋಸ್ಟರ್ ಸಿಸ್ಟಂನ್ನು ವಯೋಲೇಟ್ ಮಾಡಿ ನೇಮಕಾತಿ ಮಾಡಿದ್ದೇವೆ ಅಥವಾ ರೆಗ್ಯುಲರೈಸ್ ಮಾಡಿದ್ದೇವೆ ಎನ್ನುವ ಇಂಪ್ರೆಷನ್ ಬರಬಾರದು. ಏಕೆಂದರೆ ನನಗೆ ತಿಳಿದ ಮಟ್ಟಿಗೆ ನನ್ನ ಸರ್ಕಾರವಿದ್ದಾಗ 4 ಸಾವಿರ ಜನರನ್ನು ಇದರಲ್ಲಿ ಯಾವುದೇ ನೇಮಕವನ್ನು ಮಾಡಿಲ್ಲ ಮತ್ತು ರೆಗ್ಯುಲರೈಸ್ ಮಾಡಿಲ್ಲವಾದರೂ ಕೂಡ ಒಂದು ಸಾವಿರ ಜನರನ್ನು ಪರಿಶಿಷ್ಟ ಜಾತಿಯವರನ್ನು ನೇಮಕ ಮಾಡಿದ್ದನ್ನು ನಾನು ರೆಗ್ಯುಲರೈಸ್ ಮಾಡಿದ್ದೇನೆ. ಕೆ.ಎಸ್.ಆರ್.ಟಿ.ಸಿ.ಯಲ್ಲಿ ಈ ರೀತಿಯಲ್ಲಿ ರೆಗ್ಯಲರೈಸ್ ಮಾಡಿರುವುದು ನನಗೆ ಜ್ಞಾಪಕವಿದೆ. ಆದರೆ ಈ 4 ಸಾವಿರ ಜನರನ್ನು ವಯೋಲೇಟ್ ಮಾಡಿಕೊಂಡು ನೇಮಕ ಮಾಡಿದ್ದಾರೆ ಎನ್ನುವುದು ಸರಿಯಲ್ಲ ಮತ್ತು ನನ್ನ ಸರ್ಕಾರ ಇದ್ದಾಗ ಈ ವಿಚಾರ ನಮ್ಮ ಕ್ಯಾಬಿನೆಟ್‌ನಲ್ಲಿ ಈ ಪ್ರಸ್ತಾವ ಬಂದದ್ದೂ ಇಲ್ಲ. ಆದ್ದರಿಂದ ಈ ಬಗ್ಗೆ ಸರಿಯಾದ ಮಾಹಿತಿ ಕೊಟ್ಟು ಬೇಕಾದರೆ ನಾಳೆ ಉತ್ತರ ಕೊಡಿ. ಏಕೆಂದರೆ ಈ ಮೇಲಿನ ಇಂಪ್ರೆಷನ್ ಹಾಗೇ ಮುಂದೆ ಹೋಗಬಾರದು.

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಅಲ್ಲಿ ಏನಾಗಿದೆ ಎಂಬುದನ್ನು ನಾನು ಹೇಳುತ್ತೇನೆ. ಕಾರ್ಪೊರೇಷನ್ ವಿಚಾರ ಕ್ಯಾಬಿನೆಟ್‌ನಲ್ಲಿ ಬರುವುದಿಲ್ಲವೆಂದು ನನಗೂ ಗೊತ್ತಿದೆ. ನಾನು ಹೇಳಿದ್ದು ಕಾಂಗ್ರೆಸ್ ಸರ್ಕಾರ ಇದ್ದಾಗ ಈ ರೀತಿಯ ನೇಮಕ ಆಗಿದೆ ಎಂದು ಮಾತ್ರ ಹೇಳಿದ್ದುದು.

ಉಪಾಧ್ಯಕ್ಷರು : ಮೊಯಿಲಿಯವರ ಸರ್ಕಾರ ಇದ್ದಾಗ ಈ ರೀತಿ ನೇಮಕ ಆಗಿದ್ದು ಎಂದು ಸಾರಿಗೆ ಸಚಿವರು ಹೇಳಲಿಲ್ಲ. ಅವರು ಹೇಳಿದ್ದುದು ಹಿಂದಿನ ಕಾಂಗ್ರೆಸ್ ಸರ್ಕಾರ ಇದ್ದಾಗ ಎಂದು ಹೇಳಿದ್ದುದು

ಶ್ರೀ ಎಂ. ವೀರಪ್ಪಮೊಯಿಲಿ : ಯಾರ ಸರ್ಕಾರದಲ್ಲಿ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕಲ್ಲವೇ?

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಉಪಾಧ್ಯಕ್ಷರೇ, ಈಗ ವಿಧಾನ ಸೌಧದಲ್ಲಿ ಮಂತ್ರಿಗಳ ಕಛೇರಿಯಲ್ಲಿ ಇರುವಂಥವರನ್ನು ಖಾಯಂಗೊಳಿಸುವಂಥ ಕೆಲಸವನ್ನೇನು ನೀವು ಮಾಡಿದ್ದೀರಲ್ಲಾ, ಈ ರೀತಿಯಲ್ಲಿ ಮಾಡುವುದಕ್ಕೆ ಹೊರಟಿರುವಂಥ ಸಂದರ್ಭದಲ್ಲಿ ಅಲ್ಲಿ ಕೆಲಸದಲ್ಲಿರುವವರೆಲ್ಲರೂ ಬಡವರು ಎಂದೇನೋ ಹೇಳಿದ್ದಾರೆ. ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ 'ಸಿ' ಗ್ರೂಪ್‌ನಲ್ಲಿ 9 ಜನರನ್ನು ಮತ್ತು 'ಡಿ' ಗ್ರೂಪ್‌ನಲ್ಲಿ 56 ಜನರನ್ನು ಖಾಯಂಗೊಳಿಸಿದ್ದಾರೆ. ಆದರೆ ಅದರಲ್ಲಿ ಇನ್ನೂ ಸುಮಾರು 200 ರಷ್ಟು ಜನರನ್ನು ಖಾಯಂಗೊಳಿಸಿಲ್ಲ, ಅವರು ಹಾಗೇ ಇದ್ದಾರೆ, ಶ್ರೀಮಾನ್ ಮೊಯಿಲಿಯವರ ಕಾಲದಲ್ಲಿ ಕೆಲಸ ಮಾಡಿದಂಥ ಸುಮಾರು 125 ಜನ 'ಸಿ' ಗ್ರೂಪ್ ದರ್ಜೆಯವರಿದ್ದಾರೆ ಮತ್ತು 'ಡಿ' ಗ್ರೂಪ್‌ನಲ್ಲಿ ಕೆಲಸ ಮಾಡಿದಂಥವರು 197 ಜನರಿದ್ದಾರೆ. ಇವರನ್ನು ಏಕೆ ನೀವು ಖಾಯಂ ಮಾಡಲಿಲ್ಲ?

ಶ್ರೀ ಎಂ.ಪಿ. ಪ್ರಕಾಶ್ : ಅವರುಗಳು ನಡುವೆ ಕೆಲಸದಲ್ಲಿ ಇರಲಿಲ್ಲ

ಶ್ರೀ ಕಾಗೋಡು ತಿಮ್ಮಪ್ಪ : ಅದು ಬೇರೆ ಮಾತು, ಈಗ ಮುಖ್ಯಮಂತ್ರಿಗಳ ಕಛೇರಿಯಲ್ಲಿದ್ದವರು ಕಿವಿನಲ್ಲಿ ಹೇಳುತ್ತಾರೆ ಎಂದು ಮಾಡಿಬಿಡುವುದು, ಯಾರು ಕಿವಿನಲ್ಲಿ ಹೇಳಲಿಲ್ಲ ಎಂದು ಹೇಳಿ ಮಾಡದೇ ಬಿಟ್ಟುಬಿಡುವುದು, ಈ ರೀತಿ ಆಗುತ್ತದೆಯೇ? ಅವರೂ ಕೂಡ 240 ದಿವಸಗಳ ಕಾಲ ಕೆಲಸ ಮಾಡಿದ್ದಾರೆ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯ ಮಂತ್ರಿಗಳು) : ಇವರನ್ನು ರೆಗ್ಯುಲರೈಸ್ ಮಾಡಿದಾಗ ನೀವು ಹೇಳುವಂಥವರು ಯಾರೂ ಕೂಡ ಕೆಲಸದಲ್ಲಿ ಇರಲಿಲ್ಲ.

6.10 ಪಿ.ಎಂ.

ಶ್ರೀ ಕಾಗೋಡು ತಿಮ್ಮಪ್ಪ : ಯಾರು?

ಶ್ರೀ ಸಿದ್ಧರಾಮಯ್ಯ : ನೀವು ಹೇಳಿದಿರಲ್ಲಾ, ಬಂಗಾರಪ್ಪನವರ ಇದ್ದಂತಹ ಕಾಲದಲ್ಲಿ ಇದ್ದವರಾಗಲಿ ಶ್ರೀಮಾನ್ ವೀರಪ್ಪಮೊಯಿಲಿ ಕಾಲದಲ್ಲಿ ಇದ್ದವರಾಗಲಿ ಅವರು ಯೂರೂ ಇರಲಿಲ್ಲ. ಅವರಲ್ಲಾ ಮನೆಗೆ ಹೋಗಿದ್ದರು.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಉಪಾಧ್ಯಕ್ಷರೇ, ಇವರು ಖಾಯಂಗೊಳಿಸಿದ ಮೇಲೆ ಎಲ್ಲಾ ಜನರನ್ನು ಖಾಯಂಗೊಳಿಸಬೇಕಾಗುತ್ತದೆ. ನಿಮಗೆ ಬೇಕಾದರೆ ಮಾಡಿಕೊಳ್ಳುವುದು, ಇಲ್ಲದಿದ್ದರೆ ಬೇಡ ಎಂದು ಹೇಳುವುದಲ್ಲ. ಮಾನ್ಯ ದೇವೇಗೌಡರು ಮಾಡಿದಂತಹ ಕೆಲಸ ಮಾಡುವುದಾದರೆ ಮಾನ್ಯ ಮೊಯಿಲಿ ಮತ್ತು ಬಂಗಾರಪ್ಪನವರ ಕಾಲದಲ್ಲಿ ಯಾರು ಕೆಲಸ ಮಾಡಿದ್ದರು ಅವರನ್ನು ಬೀದಿಗೆ ಏನು ಬಿಟ್ಟಿದ್ದೀರಿ, ಈಗ ಅವರನ್ನು ನೀವು ಖಾಯಂಗೊಳಿಸಬೇಕಾಗುತ್ತದೆ. ಏಕೆಂದರೆ ನಿಮ್ಮ ಅಧಿಕಾರವಧಿಯಲ್ಲಿ ಕೂಡ ಲೆಕ್ಕ ಇದೆ. ಸುಮಾರು 'ಸಿ' ಗ್ರೂಪ್‌ನವರು 71 ಜನ ಕೆಲಸ ಮಾಡುತ್ತಿದ್ದಾರೆ. 'ಡಿ' ಗ್ರೂಪ್‌ನವರು 117 ಜನ ಕೆಲಸ ಮಾಡುತ್ತಿದ್ದಾರೆ. ನಾಳೆ ಇವರನ್ನು ಏನು ಮಾಡಬೇಕು? ಈಗ ನೀವು ಅಧಿಕಾರಕ್ಕೆ ಬಂದಮೇಲೆ ಇದೇ ತರಹದ ಕಂಟ್ರಾಕ್ಟ್ ಬೇಸಿಸ್ ಮೇಲೆ 71 ಜನ 'ಸಿ' ಗ್ರೂಪ್‌ನಲ್ಲಿ, 117 ಜನ 'ಡಿ' ಗ್ರೂಪ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರನ್ನು ಏನು ಮಾಡುತ್ತೀರಿ? 240 ದಿವಸ ಆದಮೇಲೆ ಖಾಯಂ ಮಾಡುತ್ತೀರೋ?

ಶ್ರೀ ಸಿದ್ಧರಾಮಯ್ಯ : ಈಗ ಮಾಡಿರತಕ್ಕಂಥಾದ್ದು ಒಂದು ಸಲ ಸಕ್ರಮ ಗೊಳಿಸತಕ್ಕಂಥಾದ್ದು ಎಂದು ಹೇಳಿ ಅದನ್ನು ರೆಗ್ಯೂಲರೈಸ್ ಮಾಡಬೇಕು ಎಂದು ಮಾಡಿರುವುದು.

ಶ್ರೀ ಕಾಗೋಡು ತಿಮ್ಮಪ್ಪ : ಸ್ವಾಮಿ ಕಥೆ ಹೇಳಿ......

ಶ್ರೀ ಸಿದ್ಧರಾಮಯ್ಯ : ಹೌದು ತೀರ್ಮಾನ ಆಗಿರತಕ್ಕಂಥಾದ್ದು ಹಾಗೆಯೇ?

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಮಾನ್ಯ ಖರ್ಗೆಯವರು ಹೇಳತಕ್ಕಂಥ ಮಾತು ಏನಿದೆ ಎಸ್‌ಸಿಯವರಿಗೆ ಈ ರೀತಿ ಮಾಡಿರುವುದರಲ್ಲಿ ಅವಕಾಶವಾಗಿಲ್ಲ ಎಂದು ಹೇಳಿದ್ದಾರೆ. ಅದರ ಬಗ್ಗೆ ನಾವು ಒಪ್ಪಿಕೊಳ್ಳುತ್ತೇವೆ. ಅಲ್ಲಿ ಕೆಲವರು ಇದ್ದಾರೆ, ಆದರೆ ಯಾವ ಪ್ರಮಾಣದಲ್ಲಿ ಇರಬೇಕಾಗಿತ್ತೋ ಆ ಪ್ರಮಾಣದಲ್ಲಿ ಇಲ್ಲ ಎನ್ನುವ ಮಾತನ್ನು ಅವರು ಹೇಳುತ್ತಿದ್ದಾರೆ ಅದರ ಬಗ್ಗೆ ನಮ್ಮದೂ ಕೂಡ ಸಹಮತ ಇದೆ. ಒಂದು ವೇಳೆ ಆ ತರಹ ಇದ್ದರೆ ಕಡಿಮೆ ಇದ್ದರೆ ಅದನ್ನು ಬ್ಯಾಕ್‌ಲಾಗ್ ಫಿಲಪ್ ಮಾಡತಕ್ಕಂಥ ಕೆಲಸ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ : ಇಂತಹ ಕೆಲಸ ಮಾಡುವ ಪ್ರತಿ ಸಂದರ್ಭದಲ್ಲಿ ಕೂಡ ಒನ್‌ಟೈಂ ಆಪರೇಷನ್ ಎನ್ನುವ ಶಬ್ದವನ್ನು ಬಳಸಿಕೊಂಡು ಮಾಡಿದ್ದೀರಿ. ಬಂಗಾರಪ್ಪನವರು ಮಾಡುವಾಗಲೂ ಅದೇ ಶಬ್ದ ಬಳಸಿಕೊಂಡಿದ್ದರು, ದೇವೇಗೌಡರು ಮಾಡುವಾಗಲೂ ಅದೇ ಶಬ್ದ ಬಳಸಿಕೊಂಡಿದ್ದಾರೆ.

ಶ್ರೀ ಸಿದ್ಧರಾಮಯ್ಯ : ನೀವೇ ಮಾಡಿರುವುದು........

ಶ್ರೀ ಕಾಗೋಡು ತಿಮ್ಮಪ್ಪ : ಅದೇ ಹೇಳಿದ್ದುದು, ನಾನು ಇಲ್ಲ ಎಂದು ಹೇಳಲಿಲ್ಲ, ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಅವರೂ ಕೂಡ ಬಡವರು ಇದ್ದಾರೆ ಎಂದು ಹೇಳಿದರಲ್ಲಾ, ಹಾಗಿದ್ದರೆ ಬಡವರು ಈ ರೀತಿ ಕೆಲಸ ಮಾಡಿದವರು ಕೆಲವರಿಗೆ ಆಗಿದೆ, ಕೆಲವರಿಗೆ ಆಗಲಿಲ್ಲವಲ್ಲಾ, ಆಗದೇ ಇದ್ದವರಿಗೆ ಮಾಡಿಬಿಡಿ ಸಾಮಾಜಿಕ ನ್ಯಾಯಸಿಗುತ್ತದೆ.

ಉಪಾಧ್ಯಕ್ಷರು : ಆಗಲಿ, ಈಗ ಖರ್ಗೆಯವರು ಮಾತನಾಡಿ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಉಪಾಧ್ಯಕ್ಷರೇ, ಈಗ ಎಷ್ಟು ಗಂಟೆಯವರೆಗೆ ಕುಳಿತುಕೊಳ್ಳಬೇಕು? ಬೆಳಿಗ್ಗೆ 10 ಗಂಟೆಗೆ ನಾವು ಬಂದಿದ್ದೇವೆ.

ಉಪಾಧ್ಯಕ್ಷರು : ಎಂಟು ಗಂಟೆಯವರೆಗೆ ಕುಳಿತುಕೊಳ್ಳೋಣ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಉಪಾಧ್ಯಕ್ಷರೇ, ಚರ್ಚೆಗೆ ನಾಳೆ ಮಧ್ಯಾಹ್ನದವರೆಗೆ ತಾವು ಅಲೋ ಮಾಡಿದ್ದೀರಿ. ನಾನು ಒಪ್ಪಿಕೊಂಡಿದ್ದೇನೆ. ಮಧ್ಯಾಹ್ನ ಮೂರು ಗಂಟೆ ನಂತರ ಚರ್ಚೆ ಮುಗಿಯಬೇಕು. ಎಷ್ಟೊತ್ತಾದರೂ ಕುಳಿತುಕೊಳ್ಳೋಣ. ಯಾರಾದರೂ ಮಾತನಾಡಲಿ. ನಾಳೆ ಉತ್ತರ ಮುಗಿಯಬೇಕು. ಯಾವುದೇ ಕಾರಣದಿಂದ ನಾಳೆ ಉತ್ತರ ಮುಗಿದು ಹೋಗಬೇಕು.

ಉಪಾಧ್ಯಕ್ಷರು : ಈಗ ಖರ್ಗೆಯವರು ತಾವು ಮಾತನಾಡಿ.

ಶ್ರೀ ಜಿ.ಬಿ. ಶಿವಕುಮಾರ್ : ಮಾನ್ಯ ಉಪಾಧ್ಯಕ್ಷರೇ, ಏನು ಮಾಡಬೇಕು ಸದಸ್ಯರನ್ನು ಎಂದು ಇದ್ದೀರಿ ಮಾನಸಿಕ ರೋಗಿಯಾಗಿ ಆಸ್ಪತ್ರೆಗೆ ಸೇರಿಸಬೇಕು ಎಂದು ಇದ್ದೀರೋ? ದಯಮಾಡಿ ನಿಯಂತ್ರಣ ಮಾಡಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ನಾಳೆ 10 ಗಂಟೆಗೆ ಸೇರೋಣ.

ಉಪಾಧ್ಯಕ್ಷರು : ತಾವು ಮುಕ್ತಾಯ ಮಾಡಿ, ಟೈಂ ಸಾಲುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಕ್ಸೈಜ್ ಇದೆ, ಲಾ ಅಂಡ್ ಆರ್ಡರ್ ಇದೆ.

ಉಪಾಧ್ಯಕ್ಷರು : ಟೈಂ ಸಾಲುವುದಿಲ್ಲ, ಬಹಳ ಜನ ಮಾತನಾಡುವವರು ಇದ್ದಾರೆ, ತಾವು ಮಾತನಾಡಿ ಮುಗಿಸಿಬಿಡಿ. ಮಾನ್ಯ ಸದಸ್ಯರುಗಳು ತಾವೇ ಮಾತನಾಡಿ ಗಲಾಟೆ ಮಾಡಬೇಡಿ. ಖರ್ಗೆಯವರು ಮಾತನಾಡುವುದನ್ನು ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ಎಕ್ಸೈಜ್ ಡಿಪಾರ್ಟ್‌ಮೆಂಟ್ ಬಗ್ಗೆ ಮಾತನಾಡುವಾಗ ಕೆಲವು ವಿಷಯಗಳನ್ನು ಮಾನ್ಯ ಯಡಿಯೂರಪ್ಪನವರು ಹೇಳಿದ್ದಾರೆ. ಈ ಡಿಪಾರ್ಟ್‌ಮೆಂಟ್‌ನಲ್ಲಿ ಯಾವ ರೀತಿಯಾಗಿ ಲುಕ್ಸಾನು ಆಗುತ್ತಿದೆ, ಮತ್ತು ಪ್ರತಿ ದಿವಸ ಒಂದು ಕೋಟಿ ರೂಪಾಯಿ ಲುಕ್ಸಾನು

ಆಗುತ್ತಿದೆ ಎನ್ನುವ ವಾದವನ್ನು ಹಿಂದೆ ಶ್ರೀಮಾನ್ ಬೈರೇಗೌಡರು ಈ ಸದನದ ಮುಂದೆ ಇಟ್ಟಿದ್ದರು. ಇವತ್ತು ಅದನ್ನು ಪ್ರಸ್ತಾಪ ಮಾಡುವಾಗ ಸ್ವಲ್ಪ ಗಲಾಟೆ ಅಲ್ಲಿಂದ ಪ್ರಾರಂಭವಾಯಿತು.

ಆದರೆ ಇದಕ್ಕೆ ಉತ್ತರ ಏನು ಎಂದು ಕೇಳಿದಾಗ ಬಹುಶಃ ಅವರು ಆಗಸ್ಟ್ 23ನೇ ತಾರೀಖಿನ ಒಂದು ರಿಪೋರ್ಟ್ ನೋಡಿರಬೇಕು ಎಂದು ನಾನು ತಿಳಿದುಕೊಂಡಿದ್ದೇನೆ. ಅದು ಡೆಕ್ಕನ್ ಹೆರಾಲ್ಡ್‌ನಲ್ಲಿ ಬಂದಿರುವಂತಹ ರಿಪೋರ್ಟ್. ಅದರಲ್ಲಿ ಏನು ಹೇಳಿದ್ದಾರೆಂದರೆ "The Sate Government sleeping over supreme court verdict on MSIL" ಅಂದರೆ ಹಿಂದೆ ಈ ಎಲ್ಲಾ ಡಿಸ್ಟಿಲರೀಸ್ ನಮ್ಮ ಕರ್ನಾಟಕ ರಾಜ್ಯದಲ್ಲಿ ಇರತಕ್ಕಂಥ 89 ಡಿಸ್ಟಿಲರೀಸ್ ಏನಿದೆ ಅದರ ಪ್ರಾಡಕ್ಟ್ ಐ.ಎಂ.ಎಫ್.ಎಲ್ ಇದನ್ನು ನೇರವಾಗಿ ಎಂ.ಎಸ್.ಐ.ಎಲ್. ಮುಖಾಂತರ ಸೇಲ್ ಮಾಡಬೇಕು. ಅವರು ಈ ರಾಜ್ಯದಲ್ಲಿ ಇರತಕ್ಕಂಥ ಹೋಲ್‌ಸೇಲ್ ಏಜೆಂಟ್ಸ್‌ನ್ನು ಏನು ಅಪಾಯಿಂಟ್ ಮಾಡುತ್ತಾರೋ ಅವರ ಮುಖಾಂತರ ಇದನ್ನು ಮಾಡಬೇಕು ಎನ್ನುವ ಮಾತು ಅದರಲ್ಲಿ ಇತ್ತು. ಅಂದರೆ ಎಂ.ಎಸ್.ಐ.ಎಲ್.ದು ಮನಾಪಲಿ ಇದರಲ್ಲಿ ಈ ಕೆಲಸವನ್ನು ನಾವು ಮಾಡುತ್ತೇವೆ ಎಂದು ಹೇಳಿ ಹಿಂದೆ ಹಿಂದಿನ ಮಾನ್ಯ ಮುಖ್ಯಮಂತ್ರಿಗಳು ಫೆಬ್ರವರಿ 26ನೇ ತಾರೀಖು ಅಸೆಂಬ್ಲಿಯಲ್ಲಿ ಘೋಷಣೆ ಮಾಡಿದ್ದರು. ಮತ್ತೆ ಅವರು ಏನು ಮಾಡಿದರು ಎಂದರೆ ಲಿಕ್ಕರ್ ಸೋಲ್ ಡಿಸ್ಟ್ರಿಬ್ಯೂಟರ್ ಇನ್ನು ಮುಂದೆ ಜುಲೈ ಒಂದರಿಂದ ಎಂ.ಎಸ್.ಐ.ಎಲ್. ಬಿಟ್ಟು ಬೇರೆ ಯಾರಿಗೂ ನಾವು ಕೊಡುವುದಿಲ್ಲ ಎಂದು ಹೇಳಿದರು.

ಅದರ ಉದ್ದೇಶ ಏನೆಂದರೆ ಎಂ.ಎಸ್.ಐ.ಎಲ್. ಮುಖಾಂತರ ನಾವು ಈ ಒಂದು ವಹಿವಾಟನ್ನು ಮಾಡಿದ್ದರೆ ಸೆಕೆಂಡ್ಸ್ ಆಗುವುದಿಲ್ಲ, ಎಲ್ಲಾ ಡಿಸ್ಟಿಲರಿಸ್‌ನವರು ನೇರವಾಗಿ ತಮ್ಮ ಪ್ರಾಡಕ್ಟ್‌ನ್ನು ಎಂ.ಎಸ್.ಐ.ಎಲ್.ಗೆ ತಂದುಕೊಡುತ್ತಾರೆ, ಅದಕ್ಕಾಗಿ ಎಂ.ಎಸ್.ಐ.ಎಲ್.ಗೆ ನಾವು ಸೋಲ್ ಡಿಸ್ಟ್ರಿಬ್ಯೂಟರ್ ಎಂದು ಅಪಾಯಿಂಟ್ ಮಾಡಬೇಕು ಎಂದು ಹೇಳಿ ಅವರು ಘೋಷಣೆ ಮಾಡಿದರು. ಆದರೆ ಅದರ ಪ್ರಕಾರ ನಡೆಯಲಿಲ್ಲ. ಅದಕ್ಕಾಗಿ ತಮ್ಮ ಗಮನಕ್ಕೆ ಆ ರಿಪೋರ್ಟ್ ಅನ್ನು ತರುತ್ತೇವೆ. ಏಕೆಂದರೆ ಯಾವ ರೀತಿ ಎಷ್ಟು ಕೇಸಸ್ ನೇರವಾಗಿ ಎಂ.ಎಸ್.ಐ.ಎಲ್. ಮುಖಾಂತರ ಮಾರುತ್ತಾರೋ, ಎಷ್ಟು ಕೇಸಸ್, ಬಾಕ್ಸ್ ಸೆಕೆಂಡ್ಸ್‌ನಲ್ಲಿ ಹೋಗುತ್ತವೋ ಎಷ್ಟು ಬೇಡಿಕೆ ಇವತ್ತು ಇದೆ ಎನ್ನುವುದರ ಬಗ್ಗೆ ಒಂದು ಸ್ಪಷ್ಟ ಚಿತ್ರ ಇಲ್ಲಿ ಇದೆ. ಅದು ಅಲ್ಲದೆ ಏನು ಸುಮಾರು 1967ರ ಎಕ್ಸೈಜ್ ರೂಲ್ಸ್ ಏನು ಇತ್ತು ಆ ರೂಲ್ಸ್‌ಗೆ ತಿದ್ದುಪಡಿ ತಂದಮೇಲೆ ಸುಪ್ರೀಂಕೋರ್ಟ್ ಅದಕ್ಕೆ ಏನು . ಸ್ಟೇ ಕೊಟ್ಟಿತ್ತು, ಆ ಸ್ಟೇ ವೆಕೇಟ್ ಆಗಿದೆ. ವೆಕೇಟ್ ಆದ ಮೇಲೆ ನೀವು ಇವತ್ತು ಏನು ವಹಿಸಿಕೊಳ್ಳಬೇಕಾಗಿತ್ತು ಈ ಕೆಲಸವನ್ನು ಎಂ.ಎಸ್.ಐ.ಎಲ್.ಗೆ ವಹಿಸಿಕೊಡಬೇಕಾಗಿತ್ತು. ಅದು ವಹಿಸಿಕೊಡದೇ ಇದ್ದ ಕಾರಣ ಇವತ್ತು ಕೋಟ್ಯಾಂತರ ರೂಪಾಯಿ ಲುಕ್ಸಾನಾಗುತ್ತಿದೆ ಎನ್ನುವ ಮಾತನ್ನು ನೀವು ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಸುಮಾರು ಇವತ್ತು 1,75,000 cases are being sold in the State through permitted stockists but the sale of seconds is as high as 4 to 5 lakhs.

ಅಂದರೆ ನಾಲ್ಕರಿಂದ ಐದು ಲಕ್ಷ ಇವತ್ತು ಸೇಲ್ಸ್ ಇದ್ದಾಗ ಕೇವಲ ಎಂ.ಎಸ್.ಐ.ಎಲ್. ಮುಖಾಂತರ ಒಂದು ಲಕ್ಷ ಎಪ್ಪತ್ತೈದು ಕೇಸ್ ಮಾತ್ರ ಮಾಡುತ್ತಿದ್ದೀರಿ. ಅಂದರೆ ಸುಮಾರು ಉಳಿದಂತಹ 3,25,000 ಕೇಸಸ್ ಡಿಸ್ಟಿಲರೀಸ್

ಓನರ್ಸ್ ನೇರವಾಗಿ ಬ್ಲಾಕ್‌ನಲ್ಲಿ ಅಥವಾ ಸೆಕೆಂಡ್ಸ್‌ನಲ್ಲಿ ಕೊಡುತ್ತಾರೆ. ಸರ್ಕಾರಕ್ಕೆ ಅದರಿಂದ ರೆವಿನ್ಯೂ ಬರುವುದಿಲ್ಲ. ಆದುದರಿಂದ ಸರ್ಕಾರ ಇವತ್ತು ಒಂದು ಕಡೆ ಸೇಲ್‌ಟ್ಯಾಕ್ಸ್ ಕಳೆದುಕೊಳ್ಳುತ್ತಿದೆ, ಇನ್ನೊಂದು ಕಡೆ ಎಕ್ಸೈಸ್ ಡ್ಯೂಟಿ ಕಳೆದುಕೊಳ್ಳುತ್ತಿದೆ.

ಸುಮಾರು ಟ್ಯಾಕ್ಸ್ ಇವೇಷನ್ - ಇದರಲ್ಲಿ 40 ಡಿಸ್ಟಿಲರಿಯಿಂದ "Over 40 distillers are selling their products directly to wholesalers evading sales and excise tax. For each ease, a tax of Rs. 800/- is being levied. ಅಂದರೆ 800x3,25000 ಕೇಸಸ್ ಎಂದರೆ ಎಷ್ಟು ಲುಕ್ಸಾನು ಆಗುತ್ತದೆ ಎನ್ನತಕ್ಕಂಥದ್ದನ್ನು ನೀವೇ ಹೇಳಿ. ಹೀಗೆ ಹೇಳಿದಾಗ ತಾವು ಆಗ ಏನು ಹೇಳಿದಿರಿ, ಪ್ರೂಫ್‌ಬೇಕು ಪ್ರೂಫ್ ಎಂದು ಪ್ರೂಫ್ ಅಂದರೆ ಅದೇನು ನಮ್ಮ ಜೇಬಿನಲ್ಲಿ ಇರುತ್ತದೆಯೇ? ನಾವು ಏನು ಪ್ರಯತ್ನ ಮಾಡಬೇಕು, ಯಾವ್ಯಾವ ಕಾಗದಪತ್ರ ಅಥವಾ ಹಿಂದೆ ನೀವು ಕೊಶ್ಚನ್ ಆನ್ಸರ್‌ನಲ್ಲಿ ಕೊಟ್ಟಂಥ ರಿಪ್ಲೈಗಳು ಇವೆಲ್ಲಾ ಕಲೆಕ್ಟ್‌ಮಾಡಿ ತಂದುಕೊಡತಕ್ಕಂಥದ್ದು ಆದರೆ ನಾವು ಇದನ್ನು ಪಾಯಿಂಟ್‌ಔಟ್ ಮಾಡಿದ ಮೇಲೆ ತಮ್ಮ ಕರ್ತವ್ಯ ಏನೆಂದರೆ ಇದು ಸರಿಯೇ ತಪ್ಪೋ ಎನ್ನತಕ್ಕಂಥದ್ದು ನೋಡಿ ತಾವು ಹೇಳಬೇಕಾಗುತ್ತದೆ. ಇವೊತ್ತು 5 ಲಕ್ಷ ಕೇಸಸ್ ಮಾರುವಾಗ ನಿಮ್ಮ ಮುಖಾಂತರ ಕೇವಲ ಒಂದು ಲಕ್ಷ 75 ಸಾವಿ ಕೇಸಸ್ ಮಾತ್ರ ಎಂ.ಎಸ್.ಐ.ಎಲ್. ಮುಖಾಂತರ ಹೋಗುವಾಗ ಉಳಿದೆಲ್ಲಾ ಕೂಡ 40 ಡಿಸ್ಟಿಲರಿ ಓನರ್ಸ್ ಔಟ್ ಆಫ್ 89 ಡಿಸ್ಟಿಲರಿ ಓನರ್ಸ್ 40 Distillery owners are selling their seconds like this. Is it not a loss?

ಅದು ಬೈರೇಗೌಡರಿಗೆ ಚೆನ್ನಾಗಿ ಗೊತ್ತಿದೆ. 800 ರೂಪಾಯಿ ಒಂದು ಕೇಸಿಗೆ ಅಂದಾಗ ಸುಮಾರು ಕೋಟ್ಯಾಂತರ ರೂಪಾಯಿ ಒಂದು ಕೋಟಿ ರೂಪಾಯಿಯಿಂದ ಎರಡು ಕೋಟಿ ರೂಪಾಯಿಗಳವರೆಗೆ ಸೆಕೆಂಡ್ಸ್‌ನಲ್ಲಿ ಹೋಗುತ್ತಿದೆ. ಅದೆಲ್ಲವೂ ರೆವಿನ್ಯೂ ಹಿಂದೆ ಥ್ರೂ ಕಲೆಕ್ಟ್ ಆಗುತ್ತಿತ್ತು ಎಂದು ನಾಮ ಹೇಳುವುದಿಲ್ಲ, ಲೀಕೇಜ್ ಇರಬಹುದು. ಆದರೆ ಇಷ್ಟೊಂದು ಪ್ರಮಾಣದಲ್ಲಿ ಯಾವ ಕಾಲದಲ್ಲೂ ಇಲ್ಲ. ಇದು ಒಂದು ಎರಡನೆಯದಾಗಿ, ಸುಪ್ರೀಂಕೋರ್ಟ್ ಡೈರೆಕ್ಷನ್ ಇದ್ದರೂ ಕೂಡ ತಾವು ಏತಕ್ಕೆ ಉಲ್ಲಂಘನೆ ಮಾಡಿದಿರಿ, ಇವೊತ್ತು ತಮ್ಮ ಮುಂದೆ ಇದೆ ಏನು ಈ ಐ.ಎಂ.ಎಫ್.ಎಲ್. ಅನ್ನು ನೀವೇ ನೇರವಾಗಿ ಮಾಡಬೇಕು ಎನ್ನತಕ್ಕಂಥ ನೀವು ಮಾಡಿದಂಥ ಅಮೆಂಡ್‌ಮೆಂಟ್‌ಗೆ ಇವೊತ್ತು 2ನೇ ಡಿಸೆಂಬರ್ 1995ರಲ್ಲೇ ದಿ ಕಾನ್‌ಸ್ಟಿಟ್ಯೂಷನಲಿ ವ್ಯಾಲಿಡ್ ಅಮೆಂಡ್‌ಮೆಂಟ್ ಎಂದು ಹೇಳಿ ಅಫ್-ಹೆಲ್ಡ್ ಆಗಿದೆ ಮಾಡಿದಮೇಲೂ ಕೂಡ ಇವೊತ್ತಿನವರೆಗೆ ಈ ಉಳಿದಂಥ ಏನು ಸೆಕೆಂಡ್ಸ್ 40 ಡಿಸ್ಟಿಲರಿಯಿಂದ ಹೋಗುತ್ತಾ ಇದೆ,

ಇದನ್ನು ಸಂಪೂರ್ಣವಾಗಿ ತಡೆಗಟ್ಟಿ ಅವರಿಂದ ನೀವೇ ನೇರವಾಗಿ ಪರ್ಚೇಸ್ ಮಾಡಿ ಏತಕ್ಕೆ ಎಂ.ಎಸ್.ಐ.ಎಲ್.ನಿಂದ ಮಾಡಬಾರದು? ಯಾವಾಗ ಆ ಮಾತನ್ನು 26ನೇ ಫೆಬ್ರವರಿ 1996ರಂದು ಇದೇ ಸದನದಲ್ಲಿ ತಾವು ಕೊಟ್ಟಿರಿ. ನಿಮ್ಮ ಮಾತಿನ ಪ್ರಕಾರ ಏಕೆ ನಡೆದುಕೊಂಡಿಲ್ಲ? ಅಂದಾಗ ಸುಮಾರು 300 ಕೋಟಿ ರೂಪಾಯಿ ಸೋರಿಕೆ ಇದರಲ್ಲಿ ಇದೆ. ನಾನು ಈ ಲೆಕ್ಕದ ಪ್ರಕಾರ 2 ಕೋಟಿ 24 ಲಕ್ಷ ರೂಪಾಯಿ ಆಗುತ್ತದೆ. ಅದು ಎಗ್ಸಾಜಿರೇಟೆಡ್ ಫಿಗರ್ ಎಂದು ಹೇಳಿ ನಾವು ತಿಳಿದುಕೊಂಡರೂ ಕೂಡ ಅದರ 50 ಪರ್ಸೆಂಟ್ ನಾವು ಇಟ್ಟುಕೊಳ್ಳೋಣ. ಯಾರೇ ನಮಗೆ ಕೊಟ್ಟಂಥ ಮಾಹಿತಿ ಅಥವಾ ಈ ಬರೆದಂಥ ಆರ್ಟಿಕಲ್‌ನಲ್ಲಿ 50 ಪರ್ಸೆಂಟೇ ಟ್ರೂತ್ ಇದೆ ಎಂದು ತಿಳಿದುಕೊಳ್ಳೋಣ. 50 ಪರ್ಸೆಂಟ್ ಟ್ರೂತ್ ಅಂದರೆ

ಮಿನಿಮಂ ಇವೊತ್ತು 300 ಕೋಟಿ ರೂಪಾಯಿ ಸೋರಿ ಹೋಗುತ್ತಾ ಇದೆ. ಮತ್ತೆ ನೀವೇನು ಶಹಭಾಷ್‌ಗಿರಿ ಮಾಡಿದ ಹಾಗೆ? ನೀವೇನು ಹೇಳಿದಿರಿ ಇದರ ಬಗ್ಗೆ ನಾವು ಸಾಕಷ್ಟು ಪ್ರಯತ್ನ ಮಾಡುತ್ತಿದ್ದೇವೆ. ನಮ್ಮ ಸರ್ಕಾರಕ್ಕೆ ಸೋರಿಹೋಗತಕ್ಕಂಥ ಹಣ ಎಕ್ಸೈಜನ್ನು ಇವೊತ್ತು ಉಳಿಸುತ್ತಾ ಇದ್ದೇವೆ.

ನಾವು ಎಕ್ಸೈಜ್ ಲಾಬಿಗೆ ಮಣಿದಿಲ್ಲ, ಇವೊತ್ತು ನಾವು ಬಹಳ ಫೇರ್ ಅಂಡ್ ಫ್ರಾಂಕ್ ಆಗಿದ್ದೇವೆ ಎಂದು ತಾವು ಇನ್ನೂ ಕೂಡ ಅದೇ ಖೋಡೆ, ಅದೇ ಮಲ್ಯ, ಅದೇ ಕೇಶವಲು ಅದೇ ಏನು ಎಕ್ಸೈಜ್ ಲಾಬಿ ಹಿಂದೆ ಇದ್ದರು ಅದರಲ್ಲಿ ಇನ್ನೂ ನೀವು ಒಳ ಹಿಡಿತದಲ್ಲೇ ಜಾಸ್ತಿ ಇದ್ದೀರೇ ಹೊರತಾಗಿ ಬಿಡಿಸಿಕೊಂಡೇನು ಬಂದಿಲ್ಲ ಎಂಬುದು ಇದರಿಂದ ಸ್ಪಷ್ಟವಾಗಿದೆ. ಮತ್ತು ಇಷ್ಟಕ್ಕೆ ನಿಂತಿಲ್ಲ ನೀವು ಎಲ್ಲಿಯವರೆಗೆ ಹೋಗಿದ್ದೀರಿ ಎಂದರೆ ಡಿಫಾಲ್ಟರ್ ಎಂದು ಗೊತ್ತಿದ್ದರೂ ಕೂಡ ಅವರಿಗೆ ಮತ್ತೆ ಎಕ್ಸೈಜ್ ಕಾಂಟ್ರಾಕ್ಟ್ ಕೊಡುವುದು. ಏನು ಸ್ವಾಮಿ ಅವರೇನು ನಿಮ್ಮ ಬೀಗರಾ ನೆಂಟರಾ? ಏನು ಫೇವರ್ ಮಾಡುತ್ತೀರಿ? ಅರೇ ಅಂತಹವರು ಬರುತ್ತಾರೆ ಹೋಗುತ್ತಾರೆ. ಅವನಿಗೆ ಇವೊತ್ತು ಸರ್ಕಾರಕ್ಕೆ 7-8 ಕೋಟಿ ರೂಪಾಯಿ ಬಾಕಿ ಇದ್ದರೂ ಕೂಡ ಇವೊತ್ತು ಪುನಃ ಬೆಂಗಳೂರು ಕಾಂಟ್ರಾಕ್ಟ್ ದಾಸಪ್ಪನವರಿಗೆ ಇದೆ. ದಾಸಪ್ಪ ಅಂದರೆ ಏನು? ಅನ್‌ಛಾಲೆಂಜಬಲ್ ವ್ಯಕ್ತಿಯೆ? ನಮಗೆ ಇಡೀ ಸದನಕ್ಕೆ ಮಣಿಯುವುದಿಲ್ಲವೇ? ತೆಗೆದು ಬಿಸಾಕಿಬಿಟ್ಟು ಇನ್ನೊಬ್ಬರಿಗೆ ಕೊಡಿ,

ಬೇರೆಯವರಿಗೆ ಕಾಂಟ್ರಾಕ್ಟನ್ನು ಕೊಡಿ ಕಾನೂನು ಬದ್ಧವಾಗಿ, ನ್ಯಾಯಬದ್ಧವಾಗಿ ಇನ್ನೊಬ್ಬರಿಗೆ ಕೊಡಿ. ಅವನ ದಾಕ್ಷಿಣ್ಯದಲ್ಲಿ ಏಕೆ ಇರಬೇಕಾಗಿದೆ? ಅಂದಾಗ ನೀವು ಅದನ್ನು ಮಾಡುವುದಕ್ಕೆ ತಯಾರಿಲ್ಲ ಎಂದು ಅಂದರೆ ಯಾವುದೋ ಒಂದು ನೆಪಕ್ಕಾಗಿ, ಯಾವುದೋ ಒಂದು ಕಾರಣ ಹುಡುಕಿ ಇವೊತ್ತಿಗೂ ಸಹಿತ ಆ ಕಾಂಟ್ರಾಕ್ಟರ್‌ಗಳಿಗೆ ಪುನಃ ನೀವು ಬೆಳೆಸುತ್ತಾ ಇದ್ದೀರಿ. ಮತ್ತು ಒಂದು ಕಡೆ ಹೇಳುತ್ತೀರಿ ನಾವು ಯಾವ ಎಕ್ಸೈಜ್ ಲಾಬಿಗೂ ಮಣಿದಿಲ್ಲ, ಯಾವ ಗ್ರಾನೈಟ್ ಲಾಬಿಗೂ ಮಣಿದಿಲ್ಲ, ಆ ಗ್ರಾನೇಟ್ ಕಮಿಟಿಯ ವರದಿ ಇನ್ನೂ ಬಂದಿಲ್ಲ, ಅದು ಬಂದು ಏನಾಗುತ್ತದೋ ನೋಡಬೇಕು. ಅದಕ್ಕೆ ಇವೊತ್ತು ಏನೆಂದರೆ ಹೇಳುವುದೇ ಹೇಳುವುದು. ಅಂದರೆ ಬೇರೆ ಸೋರ್ಸ್‌ಗಳಿಗೆ ಡ್ಯಾಮೇಜ್ ಮಾಡುವುದಕ್ಕೋಸ್ಕರ, ಅವರಿಗೆ ನೀವು ಕೆಟ್ಟ ಹೆಸರನ್ನು ತರುವುದಕ್ಕೋಸ್ಕರ ಎಲ್ಲಾ ಪದ ಉಪಯೋಗ ಮಾಡುವುದು, ಎಲ್ಲಾ ಚಾರ್ಜಸ್ ಮಾಡುವುದು. ಮಾಡಿ ಅಧಿಕಾರಕ್ಕೆ ಬರುವುದು. ಬಂದಮೇಲೆ ಏನು ಮಾಡುವುದು ಆ ಹಿಂದೆ ಏನಿತ್ತು ಅದಕ್ಕಿಂತ ಮೂರು ಪಟ್ಟು ಹೊಲಸು ಮಾಡಿದ್ದಾರೆ. ಇವೊತ್ತು ಯಾವುದೇ ಕ್ಷೇತ್ರದಲ್ಲಿ ತೆಗೆದುಕೊಳ್ಳಿ, ನಾನು ಈಗಾಗಲೇ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದೆ, ನಾನು ಬೇರೆ ಭಾಷೆಯನ್ನು ಉಪಯೋಗ ಮಾಡಿಲ್ಲ, ನಮಗೆ ಬರತಕ್ಕಂಥ ಭಾಷೆಯಲ್ಲೇ ನಿಮಗೆ ಹೇಳಿದೆ. ಅದು ಎಷ್ಟರಮಟ್ಟಿಗೆ ಅರ್ಥ ಆಯಿತೋ ನನಗೆ ಗೊತ್ತಾಗಲಿಲ್ಲ. ಆದರೆ ಇವೊತ್ತಿನ ದಿವಸವೂ ಕೂಡ 300 ಕೋಟಿ ರೂಪಾಯಿ ಎಕ್ಸೈಜ್‌ನಲ್ಲಿ ಹೋಗುತ್ತಾ ಇದೆ.

ಮತ್ತು ಅದಕ್ಕಾಗಿ ಇದರಲ್ಲಿ ಅವರು ಸ್ಪಷ್ಟಪಡಿಸಿದ್ದಾರೆ. ಅದಕ್ಕೆ ನಿಮ್ಮ ಗಮನಕ್ಕೆ ನಾನು ತರುತ್ತೇನೆ, ಅದು ಹೇಗೆ ನೀವು ರಕ್ಷಿಷ್ಟೆ ಮಾಡುತ್ತೀರಿ, ಹೇಗೆ ಇದರಲ್ಲಿ ನೀವು ಸಿಕ್ಕಿಹಾಕಿ ಕೊಂಡು ಬಿದ್ದೀರಿ ಎನ್ನತಕ್ಕಂಥದ್ದರ ಬಗ್ಗೆ ತಾವು ತಿಳಿಸಿ ಹೇಳಬೇಕು. ಇದು ನಿಮ್ಮ ಬಜೆಟ್ ಭಾಷಣದಲ್ಲೇ ಇದೆ,

"The revenue expected by the Government from excise this year is Rs. 830 crores including Rs. 500 crore from the sale of arrack. The earnings from IMPL is only 25 percent as there are many loopholes in the present system of sellings, Though there is a move to ban the sale of arrack in the state, still the Government could ensure maximum revenus from the excise sector, provided MSIL is appointed as the sole distributor for IMPL. In the present system, there is a lot of scope for evasion of taxes. In case the distribution task is entrusted to MSIL. the revenue could be increased by atleast 90 percent, the source says. ಅದಕ್ಕೇ ನಾನು ಹೇಳಿದೆ, 90 ಪರ್ಸೆಂಟ್ ಅವರು ಹೇಳಿದರೂ ಕೂಡ ನಾನು 50 ಪರ್ಸೆಂಟೇ ಇಟ್ಟಿದ್ದು. ಅದರಲ್ಲಿ 300 ಕೋಟಿ ರೂಪಾಯಿ ಹೋಗುತ್ತಾ ಇದೆ, ಎಲ್ಲಿ ಹೋಗುತ್ತಾ ಇದೆ, ಏಕೆ ಹೋಗುತ್ತಾ ಇದೆ? ಅದಕ್ಕೆ ನಿಮ್ಮ ಕಾಂಟ್ರಿಬ್ಯೂಷನ್ ಏನು? ಅದಕ್ಕೆ ಇವೆಲ್ಲಾ ಲೂಪ್‌ಹೋಲ್ಸ್ ಗೊತ್ತಿದ್ದು ಬೈರೇಗೌಡರಿಗೆ ನಾನು ಕೇಳಬೇಕಾಗುತ್ತದೆ. ಈ ಲೂಪ್‌ಹೋಲ್ಸನ್ನು ಕಂಡುಹಿಡಿದು ಇದು ದುರಸ್ತಿ ಮಾಡುವುದಕ್ಕೆ ನೀವು ಏನು ಮಾಡಿದಿರಿ? ಏನು ಸಲಹೆ ಕೊಟ್ಟಿದ್ದು, ಆ 300 ಕೋಟಿ ರೂಪಾಯಿಯನ್ನು, ಇವೊತ್ತು ಭರ್ತಿ ಮಾಡುವುದಕ್ಕೆ ನೀವು ಏನು ಪ್ರಯತ್ನವನ್ನು ಮಾಡಿದಿರಿ?

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೇ, ಈ ವಿಚಾರ ಅಂದರೆ ಎಂ.ಎಸ್.ಐ.ಎಲ್.ನ ಸೋಲ್ ಸೆಲ್ಲಿಂಗ್ ಏಜೆಂಟ್ ಆಗಿ ಅಪಾಯಿಂಟ್ ಮಾಡಬೇಕೇ ಬೇಡವೇ ಎನ್ನತಕ್ಕಂಥದ್ದು ಸಂಪುಟದ ಸಭೆಯ ಮುಂದೆ ಪರಿಶೀಲನೆಗೆ ಇದೆ ಆದಷ್ಟು ಜಾಗ್ರತೆಯಾಗಿ ನಾವು ಅದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಂದರೆ ಜಾಗ್ರತೆ, ಜಾಗ್ರತೆ ಎಂದರೆ ಎರಡು ವರ್ಷ ಆಗಲೇ ಕಳೆದುಹೋಯಿತು, ಅಂದರೆ ನಾನು ಏಕೆ ಹೇಳುತ್ತಿದ್ದೇನೆ ಎಂದರೆ ಇವರು ಪ್ರೂಫ್ ಕೇಳುತ್ತಿದ್ದರು ಲೀಕೇಜ್ ಎಲ್ಲಿ ಆಗುತ್ತಾ ಇದೆ ಎಂಬ ಬಗ್ಗೆ ಪಾಪ ಯಡಿಯೂರಪ್ಪನವರು ಪ್ರತಿದಿನ ಇದರಿಂದ ಒಂದು ಕೋಟಿ ರೂಪಾಯಿ ರೆವಿನ್ಯೂ ಲಾಸಾಗುತ್ತಿದೆ ಎಂದರೆ ಪ್ರೂಫ್ ಕೊಟ್ಟು ಮಾತನಾಡಿ ಎಂದು ಹೇಳಿ ಸಿಂಧ್ಯಾರವರು ಹೇಳಿದರು. ಆಮೇಲೆ ಅವರು ಹೇಳಿದರು.

ಶ್ರೀ ಸಿ. ಬೈರೇಗೌಡ : ಅವರು ಇವರು ಹೇಳಿದಷ್ಟು ವೇಗ್ ಆಗಿ ಏನು ಹೇಳುತ್ತಾ ಇಲ್ಲ, ನೀವು ಸ್ವಲ್ಪ ಆಧಾರವನ್ನು ಇಟ್ಟುಕೊಂಡು ಹೇಳುತ್ತಾ ಇದ್ದೀರಿ. ಅದಕ್ಕೇ ನಾನು ಉತ್ತರವನ್ನು ಹೇಳಿದ್ದುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ಪರ್ಟಿಕ್ಯುಲರ್‌ಲಿ ಅಲ್ಲಿ ಅಬಕಾರಿ ಸಚಿವರು ಸ್ಪಂದಿಸಿದರು, ಹಾಗೆ ಏನಾದರೂ ಆಧಾರವನ್ನು ಕೊಟ್ಟರೆ, ಅಥವಾ ಸ್ವಲ್ಪವಾದರೂ ಸತ್ಯಾಂಶ ಇದ್ದರೆ ನಾನು ಈಗಲೇ ಹೊರಗೆ ಹೋಗುತ್ತೇನೆ ಎಂದರು. ಈಗ ಹೋಗುತ್ತಾರೆಯೇ ಅದಕ್ಕೆ ಇಂತಹವುಗಳಿಗೆ ಸ್ವಲ್ಪ ತಿಳಿದು ಉತ್ತರವನ್ನು ಕೊಡಬೇಕು, ಹೇಳಬೇಕು, ನಾನು ಮೊನ್ನೆಯೂ ಕೂಡ ಹೇಳಿದೆ, ವಸತಿ ಸಚಿವರೂ ಕೂಡ ಮೊನ್ನೆ ಮಾತನಾಡುವಾಗ ಹೇಳಿದರು. ಅದಕ್ಕಾಗಿ ಸುಪ್ರೀಂಕೋರ್ಟ್ ಇವೊತ್ತು ಈ ನಿರ್ಣಯ ಕೊಟ್ಟಮೇಲೆ ಮತ್ತು ಡಿಸೆಂಬರ್‌ನಲ್ಲಿ ಈ ನಿರ್ಣಯ ಬಂದಮೇಲೂ ಕೂಡ ಸರ್ಕಾರ ಇವೊತ್ತು ಡಿಲೇ ಮಾಡತಕ್ಕಂಥ ಕಾರಣ ಏನು? ಇವೊತ್ತು ಬರೀ ನೀವು ಕ್ಯಾಬಿನೆಟ್ ಮುಂದೆ ಇದೆ ಎಂದು ಹೇಳಿ ಆರು ತಿಂಗಳನ್ನು ಕಳೆದಿರಿ,

ಇನ್ನು ಉಳಿದಿದ್ದೇ ಆರು ತಿಂಗಳು. ಅಂದರೆ ಈ ರೀತಿಯಾಗಿ ನೀವು ನಡೆದುಕೊಂಡು ಹೋದರೆ ಈ ವರ್ಷವೂ ಕೂಡ ನಿಮಗೆ ಏನೂ ಕೂತ ಮಾಡುವುದಕ್ಕೆ ಆಗುವುದಿಲ್ಲ. ಇದು ಒಂದು. ಎರಡನೆಯದು ನಿಮ್ಮ ಪ್ರಣಾಳಿಕೆಯಲ್ಲೂ ಕೂಡ ನೀವೇನು ಹೇಳಿದಿರಿ, ನೀವು ಅರಾಕ್ ಬ್ಯಾನ್ ಮಾಡುತ್ತೇವೆ, ಸೇಂದಿ ಸರಾಯಿ ಬ್ಯಾನ್ ಮಾಡುತ್ತೇವೆ ಎಂದು ಅಂದರೆ ಒಟ್ಟಾರೆ ಪಾನನಿರೋಧವನ್ನು ತರುತ್ತೇವೆಂದು ಅವಾಗ ಹೇಳಿದಿರಿ. ಈಗೇನು ಅಂದರೆ ಇಂಟರ್ ಪ್ರಿಟೇಷನ್, ಅರಾಕ್ಕೋ, ಸೇಂದಿನೋ, ಐ.ಎಂ.ಎಫ್.ಎಲ್. ಇವೆಲ್ಲವೂ ಕೂಡ ವಿಸ್ಕಿನೋ, ಬ್ರಾಂದಿನೋ ಈಗ ಹೊರಟಿವೆ ಇವೆಲ್ಲಾ ಮೊನ್ನೆ ಗುಲ್ಬರ್ಗಾದಲ್ಲಿ ನಮ್ಮ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆಂದರೆ "The Govemment had no intention of banning the sale of Beer, Brandy, and whisky. Both Mr. Patel and Mr. Siddaramaiah siad."

ಮೊದಲು ಏನು ಹೇಳಿದರು, ನಾವು ಪ್ರಾಹಿಬಿಷನ್ ತರುತ್ತೇವೆ ಎಂದು. ಈಗ ಏನು ಹೇಳುತ್ತಾರೆ ಬೀರ್, ಬ್ರಾಂದಿ, ವಿಸ್ಕಿ ಇದು ಯಾವುದಕ್ಕೂ ಕೂಡ ಬ್ಯಾನ್ ಇಲ್ಲ, ಅರಾಕ್‌ಗೆ ಮಾತ್ರ ಬ್ಯಾನ್ ಮಾಡುತ್ತೇವೆ ಎಂದು ಒಂದು ಕಡೆ ಹೇಳುತ್ತಾರೆ. ಹೋದ ವರ್ಷದ ರೇಟ್ ಕಂಟ್ರಾಕ್ಟ್ ಮೇಲೆ ಇನ್ನೊಂದು ಕಡೆ ರಿನ್ಯೂ ಮಾಡುತ್ತಾರೆ. ಇದು ಎಂಥಾದ್ದು? ನೀವು ಮಾಡಬಾರದು ಎನ್ನುವ ಒಂದ ನಿರ್ಧಾರ ಇದ್ದರೆ ಅದನ್ನು ನಿಲ್ಲಿಸಿ.

ನೀವು ರಿನ್ಯೂವೆಲ್ ಕೊಡುತ್ತೀರಲ್ಲಾ 6-7 ಪರ್ಸೆಂಟ್ ಪ್ಲೆಸ್ ಮಾಡಿಕೊಂಡು ಅಥವಾ ಮೈನಸ್ ಮಾಡಿಕೊಂಡು ಏನು ಇವತ್ತಿನ ದಿವಸ ಅನೇಕ ಕಡೆ ಹಳೇ ಕಂಟ್ರಾಕ್ಟ್‌ಗಳಿಂದ ರಿನ್ಯೂವಲ್ ಮಾಡಿಕೊಡುತ್ತಿದ್ದೀರಲ್ಲಾ, ಹಾಗೆ ರಿನ್ಯೂವಲ್ ಮಾಡುವ ಬದಲು ಅದನ್ನು ನಿಲ್ಲಿಸಿಬಿಡಿ. ನಿಮ್ಮ ಮಾತಿನ ಪ್ರಕಾರ ನಡೆದುಕೊಳ್ಳಿ. ಅದೂ ಇಲ್ಲ, ಒಂದು ಕಡೆ, ಮಾತಿನ ಪ್ರಕಾರ ನಡೆದುಕೊಳ್ಳುವುದಿಲ್ಲ, ಇನ್ನೊಂದು ಕಡೆ ಅದೇ ಕಂಟ್ರಾಕ್ಟ್‌ಗಳಿಗೆ ಪುನಃ ರಿನ್ಯೂ ಮಾಡಿಕೊಡತಕ್ಕಂಥ ಅವಶ್ಯಕತೆ ಏನಿದೆ? ಅವರದ್ದು ಮುಲಾಜು ಏನು ನಿಮಗೆ? ಅವರ ಮುಲಾಜಿನಲ್ಲಿ ಏಕೆ ಇದ್ದೀರಿ ಎನ್ನುವಂತಹ ಮಾತನ್ನು ನಾನು ಕೇಳುತ್ತೇನೆ. ಎಂದರೆ ಏನಾಗುತ್ತದೆ ನೇರವಾಗಿ ಎಕ್ಸೈಜ್ ಲಾಬಿ, ನಿಮಗೆ ನೆಂಟಸ್ತನ ಇದೆ. ಗಂಟು ಇದೆ. ಅದಕ್ಕಾಗಿ ಇವತ್ತಿನ ದಿವಸ ಆ ಧೈರ್ಯ ಇನ್ನೂ ನಿಮಗೆ ಬಂದಿಲ್ಲ. ಅದೇ ಜನರಿಗೆ ನೀವು ನೇರವಾಗಿ ಏಳು ಪರ್ಸೆಂಟ್, ಎಂಟು ಪರ್ಸೆಂಟ್ ಎಂದು ಹೇಳಿ ರೌಂಡ್ ಅಪ್ ಮಾಡಿ ಇವತ್ತಿನ ದಿವಸ ಅವರಿಗೆ ಕಂಟ್ರಾಕ್ಟ್‌ನ್ನು ಕೊಡತಕ್ಕಂಥ ಕೆಲಸ ಮಾಡುತ್ತಿದ್ದೀರಿ. ಸುಮಾರು ಸಾವಿರಾರು, ನೂರಾರು ಜನ ಇವತ್ತಿನ ದಿವಸ ಡೀಫಾಲ್ಟರ್ಸ್ ಇದ್ದಾರೆ, ನಾನು ಮೊದಲು ಹೇಳಿದಂತೆ ನೆಂಟಸ್ತನ ಎಂದರೆ ಅವರ ಪ್ರೀತಿಗೆ ಇವರು ಪಾತ್ರರು, ಇವರ ಪ್ರೀತಿಗೆ ಅವರು ಪಾತ್ರರು.

ಸುಮಾರು 279 ಕೋಟಿ ರೂಪಾಯಿ ಡ್ಯೂಸ್ ಇರತಕ್ಕಂಥ ಜನರಿಗೆ ನೀವು ಇವತ್ತಿನ ದಿವಸ ಇದರಲ್ಲಿ ಸುಮಾರು 10 ಜನರಿಗೆ ರಿನ್ಯೂ ಮಾಡಿಕೊಟ್ಟಿದ್ದೀರಿ. ಯಾರಿಗೆ ಎಂದರೆ ಡಿಫಾಲ್ಟರ್ ಇದ್ದವರಿಗೆ. ಈ ಲಿಸ್ಟ್ ನಿಮ್ಮ ಚುಕ್ಕೆ ಗುರುತಿನ ಪ್ರಶ್ನೆಗೆ ನೀವು ಕೊಟ್ಟಂಥ ಉತ್ತರ. ಅದರಲ್ಲಿ ಇರತಕ್ಕಂಥಾದ್ದು. ಎಂದರೆ ನೀವು ಮಾತನಾಡುವುದನ್ನು ಬಿಡಿ. ನೀವು ಪ್ರೀಚ್ ಮಾಡುವುದು ಒಂದು, ಆಕ್ಟ್ ಮಾಡುವುದು ಒಂದು ಮಾಡಬೇಡಿ. ಹಿಂದಿನ ಸರ್ಕಾರವನ್ನು ಬಯ್ದು ನೀವು ಅಧಿಕಾರಕ್ಕೆ ಬಂದಿರಿ. ಅಂದರೆ ನೀವು ಬಹಳ ಉತ್ತಮವಾದ ಕೆಲಸ ಮಾಡುತ್ತೇವೆ ಎಂದು ಬಂದಿರಿ.

ಮತ್ತೇ ನೀವು ಮಾಡಿದ್ದುದು ಏನು ಅದಕ್ಕಿಂತ ಹೊಲಸು. ಅದಕ್ಕಿಂತ ಕೆಟ್ಟ ಕೆಲಸ ಮಾಡಿದಿರಿ. ಚೆನ್ನಾಗಿ ಯಾವುದನ್ನು ಮಾಡಿದ್ದೀರಿ? ಇವತ್ತಿನ ದಿವಸ ಅವರ ಡ್ಯೂಸ್ ಎಷ್ಟಿದೆ ಎಂದರೆ 279 ಕೋಟಿ ರೂಪಾಯಿಗಳು. ತಾಲ್ಲೂಕು ವೈಜ್‌ಫಿಗರ್ಸ್ ನಾನು ಕೊಡುತ್ತೇನ, ಯಾರ್‍ಯಾರು ಡಿಫಾಲ್ಟರ್ಸ್ ಇದ್ದರು ಅದರಲ್ಲಿ ಅನೇಕ ಜನ ಬಂದಿದ್ದಾರೆ. ಅಷ್ಟೇ ಅಲ್ಲ, ಎಕ್ಸೈಜ್ ಲಾಬಿ ಬಗ್ಗೆ, ಡಿಫೆಂಡ್ ಮಾಡತಕ್ಕಂಥ ಜನ ಅದರ ಬಗ್ಗೆ ಮಾತನಾಡತಕ್ಕಂಥ ಜನ ಒತ್ತಡ ತರತಕ್ಕಂಥ ಜನ ನಿಮ್ಮ ಸರ್ಕಾರದಲ್ಲಿ ಹೆಚ್ಚಿನ ರೀತಿಯಲ್ಲಿ, ಹೆಚ್ಚಿನ ಪ್ರಮಾಣದಲ್ಲಿ ಇದ್ದಾರೆ. ಎಲ್ಲಾ ಸರ್ಕಾರದಲ್ಲಿ ಇಲ್ಲ, ಹರಿಶ್ಚಂದ್ರ ಇದ್ದರು ಎಂದು ನಾನು ಹೇಳುವುದಿಲ್ಲ. ಆದರೆ ನಿಮ್ಮ ಸರ್ಕಾರದಲ್ಲಿ ನೇರವಾಗಿ ಹಸ್ತಕ್ಷೇಪ ಮಾಡತಕ್ಕಂಥ ಜನ ಇದ್ದಾರೆ. ನೇರವಾಗಿ ಕೈಯಾಡಿಸತಕ್ಕಂಥ ಜನ ಇದ್ದಾರೆ. ಅವರ ಶಕ್ತಿ ಮೇಲೆ ನೀವೂ ಕೂಡ ಅಡ್ಡಾಡುತ್ತಿದ್ದೀರಿ. ಏಕೆಂದರೆ ಅವರು ಉಪಯೋಗ ಮಾಡಿಕೊಡಬೇಕಲ್ಲಾ. ಈಗ ಹೆಗಡೆಯವರು ಒಂದು ಕಡೆ, ದೇವೇಗೌಡರು ಒಂದು ಕಡೆ, ಜೆ.ಹೆಚ್. ಪಟೇಲ್ ಒಂದು ಕಡೆ ಆದ ಮೇಲೆ ಅವರಿಗೆ....

ಶ್ರೀ ವೈ. ರಾಮಕೃಷ್ಣ : ಬೈರೇಗೌಡರು...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲ, ದೇವೇಗೌಡರು ಬೈರೇಗೌಡರು ಎಲ್ಲಾ ಒಂದೇ ಕಡೆ. ನೀವು ಸುಮ್ಮನೆ ನನ್ನ ತಲೆಗೆ ಬೇರೆ ಬೇರೆ ಹಾಕಿ ಡಿವೈಡ್ ಮಾಡಬೇಡಿ. ದೇವೇಗೌಡರು, ಬೈರೇಗೌಡರು ಇನ್‌ಸೆಪರಬಲ್. ಪಾರ್ಟಿ ಒಡೆದರೂ ಕೂಡ, ಮಾನ್ಯ ನಾಗೇಗೌಡರು ನಮ್ಮ ಹತ್ತಿರ ಇದ್ದರು, ನಮ್ಮ ಜೊತೆ ಪ್ರೀತಿ ಮಾಡಿದದ್ದು, ಆದರೆ ಲಗ್ನ ಅವರ ಜೊತೆಯಲ್ಲಿ ಮಾಡಿಕೊಂಡರು.

ಶ್ರೀ ಎಂ.ಪಿ. ಪ್ರಕಾಶ್ : ಡೈವರ್ಸ್ ಮಾಡಿ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈವತ್ತು ಏನೋ ಸ್ಪೆಷಲ್ ಮ್ಯಾರೇಜ್ ಆಕ್ಟ್ ಮೇಲೆ ಹೋಗಿದ್ದಾರೆ, ಮಾಡಿಕೊಳ್ಳಲಿ, ಮುಂದೆ ನೋಡೋಣ. ಸ್ಪೆಷಲ್ ಮ್ಯಾರೇಜ್ ಆಕ್ಟ್‌ನಲ್ಲಿ ಸೆಪರೇಟ್ ಎಂಟಿಟಿ ಇರುತ್ತದೆ. ಯಾವಾಗಲಾದರೂ ಅವರು ಡೈವರ್ಸ್ ಕೊಟ್ಟು ಮತ್ತೆ ನಮ್ಮ ಕಡೆ ಬರಬಹುದು. ಅದಕ್ಕೆ ಮುಂದೆ ನೋಡೋಣ. ಈಗ ಬೇಡ.

ಶ್ರೀ ಕೆ.ಎನ್. ನಾಗೇಗೌಡ : ನನ್ನ ಬಗೆ ಡೈವರ್ಸ್, ಸ್ಪೆಷಲ್ ಮ್ಯಾರೇಜ್ ಆಕ್ಟ್ ಎಂದೆಲ್ಲಾ ಹೇಳಿದಿರಿ. ನೀವು ಡೆಲ್ಲಿಯಲ್ಲಿ ಯಾವುದು ಅದು, ನರಸಿಂಹರಾಯರದ್ದು, ದೇವೇಗೌಡರದು ಯಾವುದು ಅದು? ನಾನು ಮಾಡಿದ ಮ್ಯಾರೇಜ್ ನೀವು ಫಾಲೋ ಮಾಡಿರುವುದು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅದು ಮ್ಯಾರೇಜ್ ಆಫ್ ಕನ್‌ವೀನಿಯೆನ್ಸ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಒಳಗೆ ಸೇರುವುದೇ ಬೇರೆ, ಹೊರಗಿನಿಂದ ಸಪೋರ್ಟ್ ಕೊಡುವುದೇ ಬೇರೆ. ಅದಕ್ಕಾಗಿ ಈಗ ನಾವಾಗಲಿ, ಸಿ.ಪಿ.ಎಂ. ನವರಾಗಲಿ ಹೊರಗಡೆ ಇದ್ದು ಸಪೋರ್ಟ್ ಮಾಡತಕ್ಕಂಥವರು. ನಮ್ಮ ಶಕ್ತಿ ಮೇಲೆ ನೀವು ನಿಂತಿದ್ದೀರಿ. ಆದರೆ ಅದರ ಅರಿವು ನಿಮಗೆ ಇಲ್ಲ.

SRI M.P. PRAKASH : Without the institution of the marriage, you want to have a love affair?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇವತ್ತಿನ ದಿವಸ ನೀವೇನೋ ನಮ್ಮ ಶಕ್ತಿ ಮೇಲೆ ನಿಂತಿದ್ದೀರಿ. ಅದು ಕೊನೆಗಾದರೂ ಪಾಪ ನಮಗೂ ಬಡಿಯುತ್ತದೆ ಮುಂದೆ ಅದರ ಅರಿವು ಇದೆ. ಇದ್ದರೂ ಕೂಡ ದೊಡ್ಡ ದುರಂತವನ್ನು ತಪ್ಪಿಸಬೇಕು ಎಂದು ನಿಮಗೆ ಸಪೋರ್ಟ್ ಮಾಡಿದ್ದೇನೆ. ಅದನ್ನು ತಾವು ನೆನಪಿನಲ್ಲಿ ಇಟ್ಟುಕೊಳ್ಳಿ. You should be grateful to us.

ಶ್ರೀ ಸಿ. ಬೈರೇಗೌಡ : ಕೃತಜ್ಞಾತಪೂರ್ವಕವಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

ಮಾನ್ಯ ಸದಸ್ಯರು : ದೇಶದಲ್ಲಿ ದೊಡ್ಡ ದುರಂತ ತಪ್ಪಿಸುವುದಕ್ಕಾದರೂ ನಮಗೆ ಸಪೋರ್ಟ್ ಕೊಟ್ಟಿದ್ದೀರಿ ಎಂದು ಒಪ್ಪಿಕೊಳ್ಳುತ್ತೀರಲ್ಲಾ, ದುರಂತ ತಪ್ಪಿದೆ ಅಲ್ಲಾ.

ಶ್ರೀ ಕೆ.ಎನ್. ನಾಗೇಗೌಡ : ಇನ್ನು ಇರತಕ್ಕಂಥ ನಾಲ್ಕೂವರೆ ವರ್ಷ ಏನಿದೆ, ಇದೇ ರೀತಿ ನಡೆದುಕೊಳ್ಳುವಂತಹ ಸದ್ಬುದ್ಧಿ ಬರಲಿ.

ಮಾನ್ಯ ಸದಸ್ಯರು : ಸ್ವಲ್ಪ ಬಿಡಿಸಿ ಹೇಳಿ, ದುರಂತ ಯಾವುದು, ಏತಕ್ಕೋಸ್ಕರ ಸಪೋರ್ಟ್ ಕೊಟ್ಟಿದ್ದೀರಿ, ವಿವರಿಸಿ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ತಾವು ಇತ್ತೀಚೆಗೆ ಬಾಳಠಾಕ್ರೆ ಭೇಟಿ ಮಾಡುವುದಕ್ಕೆ ಹೋಗಿದ್ದೀರಲ್ಲಾ, ಅದು ಹೇಗೆ ಇವರ ಹಣೆಬರಹ, ಅದು ಏನು ಎಂದು ಸ್ವಲ್ಪ ಹೇಳಿ.

ತಾವು ಅವರನ್ನು ಭೇಟಿ ಮಾಡುವುದಕ್ಕೆ ಹೋಗಿದ್ದೀರಲ್ಲಾ, ಏಕೆಂದರೆ ಎಂದು ಸ್ವಲ್ಪ ಹೇಳಿಬಿಟ್ಟರೆ ಇಲ್ಲಿ ಒಳ್ಳೆಯದು. ನಾಲ್ಕೂವರೆ ವರ್ಷ ನಿಮ್ಮ ಸಹಕಾರ ಇರಲಿ ಎಂದು ಕಾಂಗ್ರೆಸ್ಸ್‌ನವರ ಆಶೀರ್ವಾದವನ್ನು ಕೇಳಿದ್ದೀರಿ. ಒಂದು ಕಡೆ ಇವರ ಆಶೀರ್ವಾದ ಕೇಳುತ್ತೀರಿ, ಮತ್ತೊಂದು ಕಡೆ ಬಾಂಬೆಯಲ್ಲಿ ಬಾಳಠಾಕ್ರೆ ಭೇಟಿ ಮಾಡುತ್ತೀರಲ್ಲಾ, ಪರಿಸ್ಥಿತಿ ಏನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇವತ್ತು ಒಂದು ರಾಷ್ಟ್ರದ ಮಟ್ಟದಲ್ಲಿ ರಾಷ್ಟ್ರದ ಹಿತದೃಷ್ಟಿಯಿಂದ ಮತ್ತು ಪ್ರಜಾಪ್ರಭುತ್ವದ ಒಂದು ತತ್ವವನ್ನು ಬಲಪಡಿಸಬೇಕು ಎನ್ನುವ ದೃಷ್ಟಿಯಿಂದ ಆದಾಗಿದೆ. ಅದನ್ನು ಬಿಡಿ. ಆದರೆ ನೀವು ಎಕ್ಸೈಜ್ ಇಲಾಖೆಯಲ್ಲಿ ಕೊಟ್ಟಂತಹ ಮಾತಿನ ಪ್ರಕಾರ ನಡೆದುಕೊಂಡಿಲ್ಲ. ಇವತ್ತು ಕೋಟ್ಯಾಂತರ ರೂಪಾಯಿ ಲಾಸ್ ಆಗುತ್ತಿದೆ. ಸುಮಾರು 300 ಕೋಟಿ ರೂಪಾಯಿ ಮೇಲೆ ಇವತ್ತಿನ ದಿವಸ ಹೋಗುತ್ತಿದೆ. ಅದಕ್ಕಾಗಿ ನೀವು ಎಂ.ಎಸ್.ಐ.ಎಲ್.ಗೆ ಸೋಲ್ ಡಿಸ್ಟ್ರಿಬ್ಯೂಟರ್ ಎಂದು ಮಾಡದೇ ಇರುವ ಕಾರಣ ಏನೆಂದರೆ ಪ್ರೈವೇಟ್ ಡಿಸ್ಟಿಲರೀಸ್ ಓನರ್ಸ್ ಜೊತೆ ನಿಮ್ಮ ಮಾತುಕತೆ ನಡೆದಿದೆ ಎನ್ನುವ ಅಪಾದನೆಯನ್ನು ಮಾಡಬೇಕಾಗುತ್ತದೆ. 89 ಡಿಸ್ಟಿಲರೀಸ್‌ನಲ್ಲಿ 40 ಡಿಸ್ಟಿಲರೀಸ್ ಇವತ್ತು ಏನು ಎಂ.ಎಸ್.ಐ.ಎಲ್‌ಗೆ ನೇರವಾಗಿ ತಮ್ಮ ಹೋಲ್‌ಸೇಲ್ ಪ್ರಾಡಕ್ಟ್ ಕೊಡುತ್ತಿಲ್ಲ, ಅವರು ಏನು ಬಜಾರ್‌ನಲ್ಲಿ ತಮ್ಮ ಪ್ರಾಡಕ್ಟ್‌ನ್ನು ತಾವೇ ಮಾರಿಕೊಳ್ಳುತ್ತಿದ್ದಾರೆ. ಅವರು ಎಕ್ಸೈಜ್ ತಪ್ಪಿಸುತ್ತಾರೆ., ಸೇಲ್ ಟ್ಯಾಕ್ಸ್ ತಪ್ಪಿಸುತ್ತಾರೆ ಹೀಗಾಗಿ ಇವತ್ತು ಏನು ಸುಮಾರು ಐದು ಲಕ್ಷ ಕೇಸಸ್ ಹೋಗುತ್ತಿದೆ ಅದರ ಜೊತೆಯಲ್ಲಿ ಸೇಲ್ಸ್ ಟ್ಯಾಕ್ಸ್, ಎಕ್ಸೈಜ್ ಡ್ಯೂಟಿ ಕೂಡ ಹೋಗುತ್ತಿದೆ. ಅದಕ್ಕೆ ತಾವು ಸಬ್ ಕಮಿಟಿ ಮಾಡಿದ್ದೇವೆ ಎಂದು ಹೇಳುತ್ತಿದ್ದೀರಿ. ಸಬ್ ಕಮಿಟಿ ಮಾಡದೇ ಈ ಆರು ತಿಂಗಳಲ್ಲಿ 150 ಕೋಟಿ ರೂಪಾಯಿ ಹೋಯಿತು. ಇದಕ್ಕೆ ಜವಾಬ್ದಾರರು ಯಾರು? ಅದಕ್ಕೆ ತಾವು ಜವಾಬ್ದಾರಿಯನ್ನು

ಹೊತ್ತುಕೊಳ್ಳಬೇಕಾಗುತ್ತದೆ. ಮತ್ತು ಸುಪ್ರೀಂ ಕೋರ್ಟ್ 12ನೇ ಡಿಸೆಂಬರ್ 1991 ರಲ್ಲಿ ಕೊಟ್ಟಂತಹ ಆದೇಶದ ಪ್ರಕಾರ ನೀವು ತಕ್ಷಣ ಟೇಕ್ ಓವರ್ ಮಾಡಿ ಡಿಸ್ಟ್ರಿಬ್ಯೂಷನ್ ಕೆಲಸ ವಹಿಸಿಕೊಳ್ಳಬೇಕು. ಇಲ್ಲದೆ ಇದ್ದರೆ ಸುಮ್ಮನೆ ಸದನದಲ್ಲಿ ಘೋಷಣೆ ಮಾಡುವುದು, ಹಾಗೆ ಬಿಟ್ಟು ಬಿಡುವುದು, ಇದು ಅನೇಕ ಸಲ ನಡೆದಿದೆ. ಒಂದಕ್ಕೆ ಸೀಮಿತವಾಗುವುದಿಲ್ಲ. ಇದೇ ಸದನದಲ್ಲಿ ಇನ್ನು ಮುಂದೆ ಯಾರಿಗೂ ಕೂಡ ಕಂಟ್ರಾಕ್ಟ್ ಕೊಡುವುದಿಲ್ಲವೆಂದು ಹೇಳಿದರು. ಪಿಡಬ್ಲ್ಯೂಡಿ ಆಗಲಿ, ಯುಕೆಪಿಯಾಗಲಿ, ಹೇಮಾವತಿಯಲ್ಲಾಗಲಿ, ಹಾರಂಗಿಯಲ್ಲಾಗಲಿ ಇಂತಹ ಎಲ್ಲಾ ಕಂಟ್ರಾಕ್ಟ್ ನಾವು ಮುಂದೆ ಟೆಂಡರ್ ಕಾಲ್‌ಫಾರ್ ಮಾಡಿ ಕೊಡುತ್ತೇವೆ ಎಂದು ಹೇಳಿದರು.

ಈಗ ಏನು ಹೇಳಿದರು, ವರ್ಕ್ ಸ್ಪೀಡ್ ಅಪ್ ಮಾಡುವುದಕ್ಕೋಸ್ಕರ ಮತ್ತು ಎರಡು ಸಾವಿರ ಇಸವಿಯೊಳಗೆ ಮುಗಿಸಬೇಕಾಗುತ್ತದೆ ಅದಕ್ಕೋಸ್ಕರ ನಾವು ಡಿಪಾರ್ಟ್‌ಮೆಂಟಲಿ ತೆಗೆದುಕೊಳ್ಳುತ್ತೇವೆ. ಪೀಸ್ ವರ್ಕ್ ಕೊಡುತ್ತೇವೆ ಎಂದು ಹೇಳಿದರು. ಏನಾಗಿದೆ ಪೀಸ್ ವರ್ಕ್‌ನಲ್ಲಿ, ನಾನು ಈ ಸದನದಲ್ಲಿ ಹೇಳಿದ್ದೇನೆ,

78 ಕಿಲೋಮೀಟರ್ ಇಂಡಿ ಬ್ರಾಂಚ್, ಜೇವರ್ಗಿ ಬ್ರಾಂಚ್, ರಾಯಚೂರು ಬ್ರಾಂಚ್‌ನಲ್ಲಿ ಎಲ್ಲಾ ಕಡೆ ಕೂಡ ಒಬ್ಬೊಬ್ಬರಿಗೆ ಒಂದು ಕಿಲೋಮೀಟರ್ ಹಾಗೆ ಅಲಾಟ್‌ಮೆಂಟ್ ಮಾಡಿ ಅದಕ್ಕೆ ಕೃಷ್ಣಾ ಜಲ ಭಾಗ್ಯ ನಿಗಮದ ಅಧಿಕಾರಿಗಳು ಬೆಂಗಳೂರಿನಲ್ಲಿ ಕುಳಿತು, ನಿರ್ಣಯ ಮಾಡಿ ಪಟ್ಟಿ ತಯಾರು ಮಾಡಿ ಇಂತಿಂತಹವರಿಗೆ ಕೊಡಬೇಕು ಎಂದಾಗಿದೆ. ಅವರಿಗೆ ಅರ್ಹತೆ ಇರಲಿ, ಇಲ್ಲದೆ ಇರಲಿ, ಅವರಿಗೆ ಶಕ್ತಿ ಇರಲಿ, ಇಲ್ಲದೆ ಇರಲಿ, ಅವರಿಗೆ ಕೊಡಬೇಕು ಎಂದು ನಿರ್ಧಾರ ಮಾಡಿ ಮೂರು ದಿವಸದಲ್ಲಿ ಒಂದು ಸಾವಿರ ಕೋಟಿ ರೂಪಾಯಿಗಳ ಟೆಂಡರ್ ಕೆಲಸವನ್ನು ಕೊಡತಕ್ಕಂಥಾದ್ದು, ಅಲಾಟ್‌ಮೆಂಟ್ ಮಾಡತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಒಂದು ಸಾವಿರ ಕೋಟಿ ರೂಪಾಯಿ ಎಂದತಕ್ಷಣ ತಾವು ಗಾಬರಿ ಪಡಬೇಡಿ. ಸಾವಿರ ಕೋಟಿ ರೂಪಾಯಿ ಎಸ್ಟಿಮೇಟ್ ಇರತಕ್ಕಂಥ ಕೆಲಸ. ಜೇವರ್ಗಿ ಬ್ರಾಂಚ್ ಕೆನಾಲ್, ರಾಯಚೂರು ರೈಟ್ ಬ್ಯಾಂಕ್ ಕೆನಾಲ್ ಇಂಡಿ ಬ್ರಾಂಚ್ ಕೆನಾಲ್, ಮುಳವಾಡ ಏತ ನೀರಾವರಿ ಕೆನಾಲ್. ಇದನ್ನೆಲ್ಲಾ ಕೂಡ ಕೊಟ್ಟರು, ನಾನು ಅವರ ಹೆಸರನ್ನು ಹೇಳುವುದಿಲ್ಲ, ಏಕೆಂದರೆ ಪುನಃ ನೀವು ಅವರ ಹೆಸರು ತರಬಾರದು ಎಂದು ಹೇಳುತ್ತೀರಿ. 29-30ನೇ ತಾರೀಖಿನ ದಿವಸ ಮೀಟಿಂಗ್ ಎಲ್ಲಿ ಮಾಡಿದಿರಿ? ಯಾರು ಮಾಡಿದರು? ಎಷ್ಟು ಹಣ ಕೊಟ್ಟರು? ಯಾರ್‍ಯಾರು ಕೊಟ್ಟರು? ಅವರ ಹೆಸರು ಏನು? ಕಂಟ್ರಾಕ್ಟ್ ತೆಗೆದುಕೊಂಡವರು ಯಾರು? ಅವರ ಅರ್ಹತೆ ಏನು? ಯಾವ ಆಧಾರದ ಮೇಲೆ ನೀವು ಇವತ್ತಿನ ದಿವಸ ಅವರಿಗೆ ಕಂಟ್ರಾಕ್ಟ್ ಕೊಟ್ಟಿದ್ದೀರಿ ಎಂಬುದನ್ನು ಕೇಳುತ್ತೇನೆ. ಆ ಪಟ್ಟಿಯನ್ನು ಸದನದ ಮುಂದೆ ಇರಬೇಕು. ಅವರಿಗೆ ಅಲಾಟ್‌ಮೆಂಟ್ ಮಾಡತಕ್ಕಂಥಾದ್ದು ಒಂದು ಡಿಸ್ಕಷನ್.

6.40 ಪಿ.ಎಂ.

ಎಕ್ಸ್‌ಪರ್ಟ್ ಕಮಿಟಿ ಮಾಡಿದ್ದೀರೋ, ಮಾಡಿದ್ದರೆ ಎಷ್ಟು ದಿವಸಗಳು ತೆಗೆದುಕೊಂಡಿದ್ದೀರಿ. ಆ ಅಪ್ಲಿಕೇಷನ್‌ಗಳ ಪರಿಶೀಲನೆಗಾಗಿ ಎನ್ನುವಂಥಾದಕ್ಕೆ ತಾವು ತನಿಖೆ ಮಾಡಿ, ಲೋಕಾಯುಕ್ತಕ್ಕೆ ತಾವು ಒಪ್ಪಿಸಿ, ಆಗ ತಮಗೆ ಎಲ್ಲಾ ಗೊತ್ತಾಗುತ್ತದೆ. ಇದರಲ್ಲಿ ಯಾವ ಯಾವ ಅಧಿಕಾರಿಗಳು ಇನ್‌ವಾಲ್ವ್ ಆಗಿದ್ದಾರೆ, ಅಥವಾ ವಿಧಾನಸೌಧದಿಂದ ಏನು ಕೆಲಸವಾಗಿದೆ ಅಥವಾ ಬಾಲಬ್ರೂಯಿಯಿಂದ ಏನು ಕೆಲಸ ಆಗಿದೆ. ಎಲ್ಲೆಲ್ಲಿ ಕೆಲಸವಾಗಿದೆ ಎಂಬುದು ಹೊರಗೆ ಬರುತ್ತದೆ.

ಆ ಪೂರ್ತಿ ಹೆಸರುಗಳು ನನ್ನ ಹತ್ತಿರವಿಲ್ಲ. ಅದನ್ನು ನಾನು ಕಲೆಕ್ಟ್ ಮಾಡುವಂತಹ ಪ್ರಯತ್ನವನ್ನು ಮಾಡುತ್ತಿದ್ದೇನೆ. ಆ ಲಿಸ್ಟ್ ದೊರೆತ ತಕ್ಷಣ ತಮಗೆ ಕೊಡುತ್ತೇನೆ. ನೇರವಾಗಿ ಲೋಕಾಯುಕ್ತಕ್ಕೆ ಬೇಕಾದರೆ ಕಳುಹಿಸಿ ಎಂದು ಕಳುಹಿಸಿಕೊಡುತ್ತೇನೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ನೀವು ಲಕ್ಷ್ಯ ಕೊಡದೆ ಸಾವಿರಾರು ಕೋಟಿ ರೂಪಾಯಿಗಳ ಕೆಲಸವನ್ನು ನೀವು ಮನಸ್ಸು ಬಂದವರಿಗೆ ಕೊಟ್ಟುಕೊಂಡು ಹೋಗುವುದು ನಡೆಯುತ್ತಿದೆ. ಆಮೇಲೆ ಹೋದ ಸಲ ಏನಾಯಿತೆಂದರೆ ಮಾನ್ಯ ಯಡಿಯೂರಪ್ಪನವರು ಒಂದೆರಡು ಲೆಟರ್ ಬರೆದಿದ್ದಾರೆಂದು ಮಾನ್ಯ ಮುಖ್ಯಮಂತ್ರಿಯವರಿಗೆ ತೋರಿಸಿದರು. ಅದು ಟ್ರಾನ್ಸ್‌ಫರ್‌ದು ನೀವು ಎಲ್ಲಾ ಕಾನೂನು ಬಾಹಿರವಾಗಿ ಮಾಡುತ್ತೀರಿ ಎನ್ನುವುದು, ನೀವು ಕೊಟ್ಟಿಲ್ಲವೇನು ಎನ್ನುವುದು. ಈ ಬ್ಲಾಕ್‌ಮೈಲ್ ಮಾಡಿ ಮೇಲೆ ಬರುವಂಥದ್ದು, ಅಪಾದನೆಯನ್ನು ಮಾಡಿ ನೀವು ಉಳಿಯಬೇಕೆನ್ನುವಂಥಾದ್ದನ್ನು ಮಾಡಿದರೆ ಅದು ಸರಿಯಾಗುವುದಿಲ್ಲ.

ಆದುದರಿಂದ ದಯಮಾಡಿ ರಾಜ್ಯದ ಹಿತದೃಷ್ಟಿಯಿಂದ ಮತ್ತು ಕೆಲಸದ ದೃಷ್ಟಿಯಿಂದ ಮತ್ತು ಕ್ವಾಲಿಟಿಯ ದೃಷ್ಟಿಯಿಂದ ಮತ್ತು ಹಣ ಸೋರಿ ಹೋಗಬಾರದು ಎಂಬುದು ನಿಮ್ಮ ಮನಸ್ಸಿನಲ್ಲಿರಬೇಕಾದರೆ ಇದನ್ನು ಲೋಕಾಯುಕ್ತರಿಂದ ತನಿಖೆ ಮಾಡಿಸಿ. ಅಥವಾ ಜ್ಯೂಡಿಷಿಯರಿ ಪ್ರೊಬ್ ಮಾಡಿ ಆಗ ಎಲ್ಲಾ ಹೊರಗೆ ಬರುತ್ತದೆ. ಕಂಟ್ರಾಕ್ಟ್‌ದಾರರೂ ಕೂಡ ಮನಸ್ಸು ಬಿಚ್ಚಿ ಹೇಳುತ್ತಾರೆ. ಅವರು ಹೇಳುವುದಕ್ಕೆ ಇವತ್ತಿಗೂ ತಯಾರಿಲ್ಲ, ಏಕೆ ತಯಾರಿಲ್ಲವೆಂದರೆ ಕೆಲಸ ಹೋಗುತ್ತದೆ ಎಂಬ ಭೀತಿಯಿಂದ. ತಾವು ದಯಮಾಡಿ ಹಿಂದೆ ಕೂಡ ಇದರ ಬಗ್ಗೆ ತನಿಖೆ ಮಾಡಿಸುತ್ತೇವೆಂದು ಹೇಳಿದ್ದೀರಿ. ತಾವು ತನಿಖೆ ಮಾಡಿಸಬೇಕು. ತಾವು ಇದರ ಬಗ್ಗೆ ಸ್ಪಷ್ಟವಾದ ನಿಲುವನ್ನು ಹೇಳಬೇಕು. ಇನ್ನು ಎಕ್ಸೈಜ್ ಬಗ್ಗೆ ಮಾತನಾಡುವಾಗ ನಾನು ರೆಫರ್ ಮಾಡಿದೆ. ಇದರ ಬಗ್ಗೆ ಕೂಡ ತಾವು ಸಬ್ ಕಮಿಟಿ ಮಾಡುತ್ತೇವೆಂದು ಹೇಳುತ್ತೀರಿ. ಆದರೆ ಅಲ್ಲಿಯವರೆಗೆ ಕಾಯುವಂತಹ ಮತ್ತು ಚರ್ಚೆಯ ಅವಶ್ಯಕತೆ ಇಲ್ಲ. ಸುಪ್ರೀಂ ಕೋರ್ಟಿನ ಡಿಷಿಷನ್ ಪ್ರಕಾರ ಎಂ.ಎಸ್.ಐ.ಎಲ್.ಗೆ ನೇರವಾಗಿ ಇದನ್ನು ಒಪ್ಪಿಸಿಬಿಡಿ, ಕೆಲಸ ನಡೆಯಲಿ ಮತ್ತೆ ಅರ್‍ರ್ಯಾಕ್ ನಿಲ್ಲಿಸಬೇಕು, ಮಾಡಬೇಕು ಮತ್ತು ಅದರ ಹಣವನ್ನು ಯಾವ ರೀತಿಯಾಗಿ ಕಲೆಕ್ಟ್ ಮಾಡಬೇಕು, ಮತ್ತೆ ಆ್ಯಕ್ಷನ್ ಬಗ್ಗೆ ಕೂಡ ಮಾಡದೆ ಮುಂದುವರೆಸುವ ಬಗ್ಗೆ ಕೂಡ ನಾನು ಕೇಳಿದೆ.

ಅದಕ್ಕೆ ತಾವು ಎಲ್ಲಿ ಆಕ್ಷನ್ - ಮಾಡುವುದು ನಾವು ಇದ್ದವರಿಗೆ ಕೊಡುತ್ತೇವೆ. ಜನರು ಬರುತ್ತಾ ಇಲ್ಲ ಅಂದರೆ ಜನ ಬರುತ್ತಾ ಇಲ್ಲವೆಂದಲ್ಲ. ಕಂಟ್ರಾಕ್ಟ್‌ದಾರರು ಏನು ಮಾಡುತ್ತಿದ್ದಾರೆಂದರೆ ಒಂದು ಸಿಂಡಿಕೇಟ್ ಮಾಡಿಕೊಂಡು ಲಾಬಿಯನ್ನು ಮಾಡಿಕೊಂಡು ಅವರವರ ತಾಲ್ಲೂಕುಗಳಲ್ಲಿ ಇನ್ನೊಬ್ಬರು ಕಾಲನ್ನು ಇಡಬಾರದು. ಹಾಗೆ ಮಾಡಿಕೊಂಡು ಅವರು ಜಾಗೀರ್‌ದಾರ್ಸ್ ಆಗಿಬಿಟ್ಟಿದ್ದಾರೆ. ಒಂದು ಸಾರಿ ಈ ಮೊನಾಪಲಿಯನ್ನು ಬ್ರೇಕ್ ಮಾಡದೆ ಹೋದರೆ ಯಾವ ಸರ್ಕಾರಕ್ಕೂ ಇದು ತಪ್ಪಿದ್ದಲ್ಲ, ಅದು ನಿಮ್ಮ ಸರ್ಕಾರವಿರಬಹುದು, ನಮ್ಮ ಸರ್ಕಾರವಿರಬಹುದು, ಮುಂದೆ ಬರುವಂತಹ ಯಾವುದೇ ಸರ್ಕಾರವಿರಬಹುದು. ಆದರೆ ಇವರು ಸಿಂಡಿಕೇಟ್ ಮಾಡಿಕೊಂಡು ಸರ್ಕಾರವನ್ನು ಮಣಿಸತಕ್ಕಂಥ ಕೆಲಸವನ್ನು ಇದೇ ರೀತಿಯಲ್ಲಿ ಮುಂದುವರೆಸಿಕೊಂಡು ಹೋದರೆ if power and money goes together, definitely...

ಮುಂದೆ ಬರತಕ್ಕಂಥ ಬಡವರಿಗೆ ಕಾಲ ಇಲ್ಲವೆನ್ನುವ ಮಾತನ್ನು ಹೇಳುತ್ತೇನೆ. ಈ ಮಾತನ್ನಾದರೂ ಒಂದು ಕಡೆ ಹೃದಯದಲ್ಲಿಟ್ಟುಕೊಂಡು ಕೆಲಸವನ್ನು ಮಾಡಿ. ಹಣ ಮತ್ತು ಅಧಿಕಾರ ಎರಡನ್ನು ಒಂದು ಕಡೆ ಸೇರಿಸುವಂತಹ ಕೆಲಸವನ್ನು

ನೀವು ಮಾಡಿದರೆ ಈ ರಾಜ್ಯವನ್ನು ಸಮಾಜವನ್ನು ಹಾಳು ಮಾಡುತ್ತೀರಿ ಎನ್ನುವಂತಹ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಆದುದರಿಂದ ಈ ಕೆಲಸಕ್ಕಾದರೂ ತಾವು ಪ್ರಾಹಿಬಿಷನ್ ತಂದು ಎಂ.ಎಸ್.ಐ.ಎಲ್.ನಿಂದ ಐ.ಎಂ.ಎಲ್‌ಗೆ ಡಿಸ್ಟ್ರಿಬ್ಯೂಟ್ ಮಾಡುತ್ತೇವೆಂದು ಹೇಳುತ್ತೀರಿ. ಆ ಕೆಲಸವನ್ನು ಮಾಡುತ್ತೀರೆನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಅದಕ್ಕಾಗಿ ನಾವು ಈ ಎಲ್ಲಾ ಲ್ಯಾಪ್ಸಸ್‌ಗೆ ಇವತ್ತು ಈ ನಿರ್ಣಯವನ್ನು ತಂದಿದ್ದೇವೆ. ಇಂದಿನ ವಿಶೇಷವೇನು ನಡೆದಿದೆ ಎಂದರೆ ಲಾಯಲ್ಟಿ ಕ್ವೊಶ್ಚನ್ ಬಹಳ ಪ್ರಾರಂಭವಾಗಿದೆ. ಇದು ನಮ್ಮ ರಾಜ್ಯದ ದುರ್ದೈವವೆಂದು ನಾನು ಹೇಳಬಹುದು.

ಏಕೆಂದರೆ ಇವತ್ತು ಎಲ್ಲಿ ಹೋದರೂ ಡಿವಿಜನ್‌ನಲ್ಲಿ ಪ್ರತಿಯೊಂದು ಪೊಲೀಟಿಕಲ್ಸ್ ಪಾರ್ಟಿಗಳಲ್ಲೂ ಹೆಚ್ಚು ಕಡಿಮೆ ಡಿವೈಡ್, ಡಿವಿಜನ್ ಆಗಿರುವುದರಿಂದ ಏನು ಆಗಿದೆ ಎಂದರೆ ಸಾಮಾನ್ಯ ಜನರಲ್ಲಿ ಒಂದು ಕೆಟ್ಟ ಭಾವನೆ ಮೂಡುವಂತಹ ರೀತಿಯಲ್ಲಿ ಇವತ್ತು ನಾವು ನಡೆದುಕೊಳ್ಳುತ್ತಿದ್ದೇವೆ. ಅದು ಕಾಂಗ್ರೆಸ್ ಇರಬಹುದು, ಬಿಜೆಪಿ ಇರಬಹುದು, ಜನತಾದಳವಿರಬಹುದು, ಇಡೀ ದೇಶದ ವಾತಾವರಣವನ್ನು ನೋಡಿದಾಗ ಒಬ್ಬರ ವಿರುದ್ಧ ಒಬ್ಬರನ್ನು ನೋಡುತ್ತಿದ್ದೇವೆ.

ಒಂದು ಕಡೆ ನಮ್ಮ 'ಪಾರ್ಟಿ ಇರಬಹುದು, ಒಂದು ಕಡೆ ಆ ಪಾರ್ಟಿ ಇರಬಹುದು, ಆದರೆ ಇವತ್ತು ಇಲ್ಲಿ ಏನು ನಡೆದಿದೆ ಎಂದರೆ ಒಂದು ವಿಚಿತ್ರ, ಇವತ್ತು ನೀವು ಯಾವ ಮ್ಯಾನಿಫೆಸ್ಟೋವನ್ನು ಇಟ್ಟುಕೊಂಡು ಚುನಾವಣೆಯಲ್ಲಿ ಬಂದಿರಿ, ಯಾವ ಕಾರ್ಯಕ್ರಮವನ್ನು ಇಟ್ಟುಕೊಂಡು ಅದನ್ನು ಜನರ ಮುಂದೆ ಹೇಳಿಕೊಂಡು ಆರಿಸಿ ಬಂದಿದ್ದೀರಿ. ಅವರೇ ಇವತ್ತಿನ ದಿವಸ ಚಪ್ಪಲಿ ಎಸೆಯುತ್ತಿದ್ದಾರೆ, ಕುರ್ಚಿಗಳನ್ನು ಹಾರಿಸುತ್ತಿದ್ದಾರೆ, ಇದು ಏನು ತೋರಿಸುತ್ತದೆ ಎಂದರೆ ಈ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಇಲ್ಲ, ಏಕೆಂದರೆ ಯಾರಿಗೋ ಇವತ್ತು ತನ್ನ ಅಭಿಪ್ರಾಯ ಕೊಡಬೇಕೆಂದರೆ ಅವರು ನಿಷ್ಪಕ್ಷಪಾತವಾಗಿ ಕೊಡುವ ಹಾಗೆ ಇಲ್ಲ, ಕೊಡಬೇಕೆಂದರೆ ಅವರು ಚಪ್ಪಲಿ ಏಟನ್ನು ತಿನ್ನಬೇಕು, ಇಲ್ಲ ಕುರ್ಚಿಗಳನ್ನು ಮೈಮೇಲೆ ಹಾಕಿಸಿಕೊಳ್ಳಬೇಕು, ಇಲ್ಲ ಶರ್ಟ್‌ಗಳನ್ನು ಹಿಡಿದು ಜಗ್ಗಿಸಿಕೊಳ್ಳಬೇಕು. ಈ ರೀತಿಯಾಗಿ ನಾವು ರಾಜಕೀಯ ಮಾಡಿಕೊಂಡು ಹೋದರೆ

ಇದು ಏನು? ಬೇರೆ ನಿಮ್ಮ ಕಾರ್ಯಕ್ರಮಗಳು ನಿಮಗೆ ಇಲ್ಲವೇ? ನಿಮ್ಮ ಕಾರ್ಯಕ್ರಮಗಳನ್ನು ಹೇಳಿಕೊಂಡು ಹೋಗಿ, ಅದನ್ನು ಬಿಟ್ಟು ಇವತ್ತಿನ ದಿವಸ .....

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೇ, ತಾವು ಒಂದು ನಿಮಿಷ ಈಲ್ಡ್ ಆಗಿ, ನೀವು ದಾರಿ ತಪ್ಪುತ್ತಿದ್ದೀರಿ, ಒಂದು ಪಾಯಿಂಟ್ ಆಫ್ ಆರ್ಡರ್ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ದಾರಿ ತಪ್ಪುತಾ ಇಲ್ಲ, ಇದು ಅಡ್ಮಿನಿಸ್ಟ್ರೇಷನ್ ಮೇಲೆ.....

(ಗೊಂದಲ)

ಉಪಾಧ್ಯಕ್ಷರು : ಅವರದು ಪಾಯಿಂಟ್ ಆಫ್ ಆರ್ಡರ್ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಉಪಾಧ್ಯಕ್ಷರೆ, ಸಂಸದೀಯ ವ್ಯವಹಾರದಲ್ಲಿ ನಮಗೆ ಹಕ್ಕು ಇದೆ. ನಾನು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುವುದಕ್ಕೆ ಪರ್ಮಿಷನ್ ತೆಗೆದುಕೊಂಡು ಮಾಡುತ್ತಿದ್ದೇನೆ. ಇದನ್ನು ಯಾರೂ ಟೀಚ್ ಮಾಡುವಂತಹ

ಅವಶ್ಯಕತೆ ಇಲ್ಲ. ನಾನೂ ಸಹ 13 ವರ್ಷಗಳ ಕಾಲ ಶಾಸಕನಾಗಿ ಇಲ್ಲಿ ಕೆಲಸ ಮಾಡಿದ್ದೇನೆ. ಇಲ್ಲಿಯ ವ್ಯವಹಾರಗಳನ್ನು ನಾನು ತಿಳಿದುಕೊಂಡಿದ್ದೇನೆ. ಪ್ರಜಾಪ್ರಭುತ್ವದ ಎಸೆನ್ಸ್ ಏನು ಪ್ರಜಾಪ್ರಭುತ್ವದಲ್ಲಿ ಎಂದರೆ ನಾವು ಬೇರೆಯವರ ಅಭಿಪ್ರಾಯಕ್ಕೆ ರೆಸ್ಪೆಕ್ಟ್ ಕೊಡಬೇಕಾಗುತ್ತದೆ. ಆದ್ದರಿಂದ ಯಾರೂ ದಯಮಾಡಿ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದಾಗ ಲಘುವಾಗಿ ಪರಿಗಣಿಸತಕ್ಕಂಥದ್ದು ಸೂಕ್ತವಲ್ಲವೆಂದು ನಾನು ಬಹಳ ನಮ್ರತೆಯಿಂದ ಹೇಳಬಯಸುತ್ತೇನೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಏನು ಹೇಳುತ್ತಿದ್ದಾರೆ. ಈಗ ಅವರು ಅವಿಶ್ವಾಸ ನಿರ್ಣಯದ ಬಗ್ಗೆ ಇಲ್ಲಿ ಚರ್ಚೆ ಮಾಡುತ್ತಿದ್ದಾರೆ. ನಮ್ಮ ಸರ್ಕಾರದಲ್ಲಿ ನಿಮಗೆ ವಿಶ್ವಾಸವಿಲ್ಲ. ಈ ಸದನಕ್ಕೆ ವಿಶ್ವಾಸವಿದೆಯೇ ಇಲ್ಲವೋ ಎನ್ನುವುದರ ಬಗ್ಗೆ ತಾವು ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಅವರು ಮಾತನಾಡುತ್ತಿದ್ದಾರೆ, ಈ ಸರ್ಕಾರ ಆಡಳಿತವನ್ನು ನಡೆಸುವುದಕ್ಕೆ ಯೋಗ್ಯತೆ ಇಲ್ಲ, ಲಾ ಅಂಡ್ ಆರ್ಡರ್ ಇಲ್ಲ, ನಾವು ಪ್ರೊಟೆಕ್ಷನ್ ಕೊಡುವುದಕ್ಕೆ ಆಗುವುದಿಲ್ಲವೆನ್ನುವಂತಹ ಮಾತನ್ನು ಹೇಳಲಿ, ಅದರ ಬಗ್ಗೆ ಏನೂ ತಕರಾರು ಇಲ್ಲ. ಆದರೆ ಮಾತು ಎತ್ತಿದ ತಕ್ಷಣವೇ, ಯಾವುದೇ ಮಾತನ್ನು ಆಡಬೇಕಾದರೂ ಸಹ ನಾಮ ಪ್ರಧಾನಿಗಳ ಹೆಸರನ್ನು ತೆಗೆದುಕೊಳ್ಳ ಬೇಕಾಗುತ್ತದೆ, ಏಕೆಂದರೆ ಅವರು ಇಲ್ಲಿ ಮುಖ್ಯಮಂತ್ರಿಗಳಾಗಿದ್ದರು, ಆದರೆ ಇದನ್ನು ಮಾಡಿದ್ದುದು, ಬೇರೆ ಏನೂ ಮಾತನಾಡಲೇ ಇಲ್ಲ. ಈಗ ನಾನು ಹೇಳುವುದೇನೆಂದರೆ ಇದು ಬಹಳ ದುರ್ದೈವದ ವಿಚಾರ, ನಾನು ಯಾರ ಬಗ್ಗೆಯೂ ಲಘುವಾಗಿ ಮಾತನಾಡಬೇಕೆಂದು ಬಯಸುವುದಿಲ್ಲ. ಅವರು ಅನೇಕ ವಿಚಾರಗಳನ್ನು ಹೇಳಿದ್ದಾರೆ.

ಕುರ್ಚಿಗಳನ್ನು ತೆಗೆದುಕೊಂಡು ಯಾರೂ ಹೊಡದಾಟ ಮಾಡುವುದಕ್ಕೆ ಹೋಗಲಿಲ್ಲ. ಅಲ್ಲಿ ಮಳೆ ಬಂದಿತ್ತು, ನೆಲದ ಮೇಲೆ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಕುರ್ಚಿಗಳನ್ನು ಎತ್ತಿಕೊಂಡು ಬರುತ್ತಿದ್ದರು. ಯಾವ ನಮ್ಮ ಸಭೆಗಳಲ್ಲಿಯೂ ಗಲಭೆಗಳು ಆಗಲಿಲ್ಲ. ಇದನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇನ್ನು ಮಾನ್ಯ ಪ್ರಧಾನಮಂತ್ರಿಯವರು ಹಾಸನವಿರಬಹುದು, ಗುಲ್ಬರ್ಗಾಇರಬಹುದು, ಹುಬ್ಬಳ್ಳಿ ಇರಬಹುದು ಅಥವಾ ಬೆಂಗಳೂರು ಇರಬಹುದು, ನಮ್ಮ ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ಕಾರ್ಯಕ್ರಮಗಳನ್ನು ನಮ್ಮ ಪಕ್ಷದ ಸಭೆಯಲ್ಲಿ ಸರ್ಕಾರದ ಕಾರ್ಯಕ್ರಮಗಳು ಮತ್ತು ರಾಜ್ಯ ಸರ್ಕಾರದ ಕಾರ್ಯಕ್ರಮ, ಕೇಂದ್ರ ಸರ್ಕಾರದ ಕಾರ್ಯಕ್ರಮ, ಜನಗಳು ನಮಗೆ ಕೊಟ್ಟಿರುವಂತಹ ಬೆಂಬಲ ಇವೆಲ್ಲವುಗಳ ಬಗ್ಗೆ ನಾವು ಮಾತನಾಡಿದ್ದೇವೆ. ಟೀಕೆ ಮಾಡುವಂತಹ ಸಂದರ್ಭದಲ್ಲಿ ಹೇಳಲೇಬೇಕಾಗುತ್ತದೆ. ನಮ್ಮ ಬಗ್ಗೆ ನಾವು ರಾಜಕೀಯ ಸಭೆಗಳಲ್ಲಿ ಹೇಳಲೇ ಬೇಕಾಗುತ್ತದೆ. ಮಾನ್ಯ ಪ್ರಧಾನಮಂತ್ರಿಯವರಾದ ದೇವೇಗೌಡರು ಇಲ್ಲಿ ಬಂದು ಅವರನ್ನು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಆದುದರಿಂದ ದಯಮಾಡಿ ನನ್ನ ಪಾಯಿಂಟ್ ಆಫ್ ಆರ್ಡರ್ ಏನೆಂದರೆ ನಿಮ್ಮ ಡಿಸ್‌ಕಷನ್‌ನಲ್ಲಿ ಪ್ರಧಾನಿಗಳನ್ನು ಡಿಫೆಂಡ್ ಮಾಡಿಕೊಳ್ಳದೆ ಇರುವಂತಹ ವಿಚಾರಗಳನ್ನು ಇಲ್ಲಿ ರೈಸ್ ಮಾಡುವುದಕ್ಕೆ ತಾವು ಅವಕಾಶವನ್ನು ಕೊಡಬಾರದು.

ಉಪಾಧ್ಯಕ್ಷರು : ಆಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ನಾನು ಈಗ ಪೇಪರ್ ಸ್ಟೇಟ್‌ಮೆಂಟ್‌ನಲ್ಲಿರುವಂತಹ ಮಾತನ್ನು ಹೇಳಿದ್ದೇನೆಯೇ ಹೊರತಾಗಿ... I have not made any allegation extra other than what is stated in the newspapers and in all the media. ಇದು ಯಾವುದೋ ಒಂದು ಪೇಪರ್‌ನಲ್ಲಿ ಬಂದಿದ್ದರೆ......

ಉಪಾಧ್ಯಕ್ಷರು : ಅವರು ಹೇಳುವಂಥಾದ್ದು ಅವಿಶ್ವಾಸ ನಿರ್ಣಯಕ್ಕೆ ಸೀಮಿತವಾಗಿ ಮಾತನಾಡಿ ಎಂದು......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹೌದು, ಅದನ್ನೇ ನಾನು ಹೇಳುತ್ತಿದ್ದೇನೆ. How the administration has collapsed, ಹೇಗೆ ಗೌವರ್ನಮೆಂಟ್ ಮೆಷನರಿ ಮಿಸ್ ಯೂಸ್ ಆಗುತ್ತಿದೆ ಎನ್ನುವುದು, ಮಾನ್ಯ ರಾಮಕೃಷ್ಣ ಹೆಗಡೆಯವರು ಬಂದು ಒಂದು ರೌಂಡ್ ಮೀಟಿಂಗ್ ಮಾಡಿಕೊಂಡು ಹೋದರು. ಅವರು "ರಾಷ್ಟ್ರೀಯ ನವ ನಿರ್ಮಾಣ ವೇದಿಕೆ" ಎಂದು ಪ್ರಚಾರ ಮಾಡಿಕೊಂಡು ಹೋದರು. ಇವತ್ತು ಅದು ಒಂದು ಕೌಂಟರ್ ಮಾಡುವುದಕ್ಕೆ ಶುರುವಾಗಿದೆ. ಅವರು ಏನು ಹೇಳಿದರು.

SRI C. BYRE GOWDA : This cannot go on recard,...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇವತ್ತಿನ ದಿವಸ ಈ ರೀತಿಯಾಗಿ ನಮ್ಮ ರಾಜ್ಯದಲ್ಲಿ ......

SRI C. BYRE GOWDA : I seriously object to that,...

(INTERRUPTIONS)

ಉಪಾಧ್ಯಕ್ಷರು : ಈ ಸದನದಲ್ಲಿ ಯಾರು ಉತ್ತರ ಕೊಡಲು ಸಾಧ್ಯವಿಲ್ಲ, ಅವರ ಹೆಸರನ್ನು ಇಲ್ಲಿ ತರುವುದು ಬೇಡ.

ಸಿ. ಬೈರೇಗೌಡ : ಈ ಸರ್ಕಾರದಲ್ಲಿರತಕ್ಕಂಥವರು ಯಾರಾದರೂ ನೋಡಿದ್ದರೇ ಅಲ್ಲಿ? ಪತ್ರಿಕೆಗಳಲ್ಲಿ ಏನೇನೋ ಬರುತ್ತದೆ.

ಉಪಾಧ್ಯಕ್ಷರು : ಈ ಸದನದಲ್ಲಿ ಯಾರು ಉತ್ತರ ಕೊಡಲು ಸಾಧ್ಯವಿಲ್ಲ ಅವರ ಹೆಸರನ್ನು ತಾವು ದಯಮಾಡಿ ತೆಗೆದುಕೊಳ್ಳಬಾರದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರ ಹೆಸರನ್ನು ತೆಗೆದುಕೊಳ್ಳಬಾರದು ಎಂದರೆ ಅವರು ಇವತ್ತಿಗೂ ಈ ಸದನದ ಸದಸ್ಯರು.

SRI C. BYRE GOWDA : Whatever may be he cannot sit in this Assembly as prime Minister ......

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ನಿಮ್ಮನ್ನು ಕೇಳುತ್ತೇನೆ, ಅವರು ಈ ಸದನದ ಸದಸ್ಯರು ಹೌದೋ, ಅಲ್ಲವೋ ಎನ್ನುವುದನ್ನು ಹೇಳಿ ತಾವು. ಅವರು ರಾಜೀನಾಮೆ ಕಳುಹಿಸಿದ್ದಾರೆಯೇ? ಇವತ್ತಿಗೂ ಈ ಸದನದ ಸದಸ್ಯರು ಅವರು. ಇದು ಒಂದು ವಿಶೇಷ ಸಂದರ್ಭ.

ಉಪಾಧ್ಯಕ್ಷರು : ಸಂದರ್ಭ ಇರಲಿ. ಅವರು, ಇಲ್ಲದ ಸಮಯದಲ್ಲಿ ಅವರ ಹೆಸರನ್ನು ಏಕೆ ತರಬೇಕು.

ಶ್ರೀ ವೈ. ರಾಮಕೃಷ್ಣ : ಅವರು ಈ ಮನೆಯ ಸದಸ್ಯರು ಹೌದೋ, ಇಲ್ಲವೋ ಎನ್ನುವುದನ್ನು ದಯಮಾಡಿ ಹೇಳಿ. ಒಂದು ವೇಳೆ ಇಲ್ಲ ಎಂದರೆ ಅವರು ರಾಜೀನಾಮೆ ಕಳುಹಿಸಿದ್ದಾರೆಯೇ? ಅದನ್ನು ಮೊದಲು ಸ್ಪಷ್ಟಪಡಿಸಿ. ಇಲ್ಲದಿದ್ದರೆ ಟೀಕೆ ಮಾಡಲು ಅವರಿಗೆ ಹಕ್ಕು ಎಲ್ಲಿತ್ತು?

ಮಾನ್ಯ ಸದಸ್ಯರು : ಸಭಾಧ್ಯಕ್ಷರು- ಅನುಮತಿ ತೆಗೆದುಕೊಂಡೇ ಅಂಥ ವಿಷಯಗಳನ್ನು ಕೇಳಬೇಕು. ಅವಿಶ್ವಾಸ ನಿರ್ಣಯದ ಸಮಯದಲ್ಲಿ ಇದು ಅವಶ್ಯಕತೆ ಇಲ್ಲ ಎಂದು ನಾನು ಭಾವಿಸುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಖರ್ಗೆಯವರು ಟೆಕ್ನಿಕಲಿ ಕರೆಕ್ಟ್ ಆಗಿರಬಹುದು. ಏಕೆಂದರೆ I also know something abour parliamentary procedure, but.,

ಹಾಗೆಯೇ ನಾನೂ ಸಹ ರಾಜೇಶ್ ಪೈಲಟ್‌ರವರು ಪಿ.ವಿ. ನರಸಿಂಹರಾವ್‌ರವರಮೇಲೆ ಹಾಕಿರುವ ಕೇಸನ್ನು ಉಲ್ಲೇಖ ಮಾಡಿ 420 ಎಂದು ಬರೆದ ಪತ್ರವನ್ನು ನಾನು ಸುತ್ತಿಬಳಸಿ ಉಪಯೋಗಿಸಿದರೆ ಏನು ಪ್ರಯೋಜನವಾಗುತ್ತದೆ? ಏನೂ ಪ್ರಯೋಜನವಾಗುವುದಿಲ್ಲ, ಅದಕ್ಕೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲಿಗೆ ಅದು ಸಂಬಂಧ ಇದ್ದರೆ ಹೇಳಿ. I am talking here how it is goint to create an impact on the administration because a highest autharity if he comes and says. ಹಾದಿ ಮೇಲೆ, ಬೀದಿಮೇಲೆ ನೋಡಿಕೊಳ್ಳಿ ಎಂದರೆ ಇದರ ಪರಿಣಾಮ ಏನಾಗುತ್ತದೆ. ಏಕೆ ಇದನ್ನು ಮಾಡಬೇಕು ಎನ್ನತಕ್ಕಂಥ ಪ್ರಶ್ನೆಯೇ ನನ್ನದು ಹೊರತು, ಹೀಗೆ ಮಾತನಾಡಿರತಕ್ಕಂಥಾದ್ದು ಸರಿ ಎಂದು ಅವರು ಮಾತನಾಡಿರತಕ್ಕಂಥಾದ್ದನ್ನು ಡಿಫೆಂಡ್ ಮಾಡಿಕೊಂಡರೆ ಮಾಡಿಕೊಳ್ಳಿ. ನೀವು ರಾಜೇಶ್ ಪೈಲಟ್ ಬಗ್ಗೆಯಾದರೂ ಹೇಳಿ, ಇನ್ನೊಬ್ಬರ ಬಗ್ಗೆಯಾದರೂ ಹೇಳಿ.

ಶ್ರೀ ಜೆ.ಹೆಚ್. ಪಟೇಲ್ : ನಾನು ಹೇಳುವುದು ಏನೆಂದರೆ, ರಾಜ್ಯ ಸರ್ಕಾರದ ಹತೋಟಿಯಲ್ಲಿರತಕ್ಕಂಥ ಯಾವುದೇ ಸಂಘ ಸಂಸ್ಥೆಗಳು, ಪೋಲೀಸ್ ಅಥವಾ ಮತ್ತೊಂದು.....ಈಗ ಇರುವ ಚಾರ್ಜ್ ಏನೆಂದರೆ, ಕೆಲವು ಕಡೆ ಗಲಾಟೆಯಾದಾಗ ಪೋಲೀಸಿನವರು ರಕ್ಷಣೆ ಮಾಡಲಿಲ್ಲ ಎಂದು. ಆದರೆ ಇವತ್ತು ನಾನು ಖಚಿತವಾಗಿ ಹೇಳುತ್ತೇನೆ ಎಲ್ಲಾ ಕಡೆ ಎಲ್ಲಾ ಪೋಲೀಸ್ ರಕ್ಷಣೆಯಾದರೂ ಕೆಲವು ಸಲ ಘಟನೆಗಳು ಕೈಮೀರಿ ಹೋಗುತ್ತವೆ. ಅದು ತಮ್ಮೆಲ್ಲರಿಗೂ ಗೊತ್ತು. ಅದನ್ನು ನಿಂತು ಮಾಡಿಸುವುದು ಬೇರೆ, ಪ್ಲಾನ್ ಮಾಡಿ ಮಾಡಿಸುವುದು ಬೇರೆ, ಪ್ಲಾನ್ ಇಲ್ಲದೇ ಸ್ಪೋರ‍್ಯಾಡಿಕ್ ಆಗಿ ಆಗುವುದು ಬೇರೆ. ನೀವು ಮಾಡಿದ್ದುದು ಪ್ಲಾನ್ ಮಾಡಿಸಿ. ನಾವು ಇದ್ದಾಗ ಅದು ಆಕಸ್ಮಾತ್ ಆಗುತ್ತದೆ. ಅದಕ್ಕೆ ಈಗ ಮಾನ್ಯ ಖರ್ಗೆಯವರು ಒಳ್ಳೆಯ ದಾರಿಯಲ್ಲಿದ್ದಾರೆ. ಮತ್ತೆ ಎಲ್ಲೆಲ್ಲಿಗೆ ತಾವು ಹೋಗುತ್ತೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಆ ದೃಷ್ಟಿಯಿಂದ ಹೇಳಲೇ ಇಲ್ಲ, ನಾನು ಹೇಳುವುದು ಏನೆಂದರೆ ದೊಡ್ಡವರು ಆ ಮಾತನ್ನು ಹೇಳಿದ ಮೇಲೆ ಅದರ ಪರಿಣಾಮ ಏನಾಗುತ್ತದೆ ಅಂದರೆ ಪೋಲೀಸಿನವರು ಲಾಠಿಯನ್ನು ತಮ್ಮ ಕೈಯಲ್ಲಿ ತೆಗೆದುಕೊಳ್ಳುತ್ತಾರೆ, ನಾಳೆ ಅವರು ನಿಮ್ಮ ಮೇಲೆ ಬರಬಹುದು, ಇನ್ನೊಬ್ಬರ ಮೇಲೆ ಬರಬಹುದು....

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ತಾವು ಅದನ್ನು ಒಪ್ಪುತ್ತೀರಿ, ಯಾವುದೇ ಕಾರಣಕ್ಕೆ? ಅಚಾತುರ್ಯದಿಂದ ಆ ಮಾತು ಬಂದಿದ್ದರೆ ಸರಿ ಮಾಡೋಣ. ಆದರೆ ಇವತ್ತು ಆ ಘಟನೆಯ ಹಿನ್ನಲೆಯಲ್ಲಿ ಒಂದು ದೂರನ್ನು ಕೊಟ್ಟಿದ್ದಾರೆ. ಹೋಂ ಮಿನಿಸ್ಟರ್, ತಾವೇ ಆಗಿದ್ದೀರಿ ಅದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ, ಯಾರನ್ನೂ

ಅರೆಸ್ಟ್ ಮಾಡಿಲ್ಲ. ಎರಡನೆಯದು, ರಸ್ತೆಯಲ್ಲಿ ಬುದ್ಧಿ ಕಲಿಸಿ ಎಂದರೆ ಇದು ಒಂದು ಪ್ರಚೋದನೆಯಾಗುವುದಿಲ್ಲವೇ? ಇದು ಸರಿಯಲ್ಲ ಎಂದು ಖರ್ಗೆಯವರು ಹೇಳಿದ್ದಾರೆ. ನಾನೂ ಅದನ್ನೇ ಹೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇವೆಲ್ಲಾ ಆಫ್ಟರ್ ಥಾಟ್ ಬರುವಂಥವು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾಳೆ ಹೆಚ್ಚು ಕಡಿಮೆಯಾದರೆ ಹೇಗೆ? ಇದನ್ನು ಹೇಗೆ ಒಪ್ಪುತ್ತೀರಿ? ನಿಮ್ಮ ಕಾನೂನು ಹೇಗೆ ಪರ್ಮಿಟ್ ಮಾಡುತ್ತದೆ? ಅದು ಯಾರೇ ಇರಬಹುದು. ದೇಶದ ಅತ್ಯುನ್ನತ ಸ್ಥಾನದಲ್ಲಿರುವಂಥವರು ಈ ಅಪರಾಧವನ್ನು ಮಾಡುವುದಕ್ಕೆ ಆಗುತ್ತದೆಯೇ? ಈ ಮಾತು ಅವರ ಬಾಯಿಂದ ಬರಲು ಸಾಧ್ಯವೇ? ಇದನ್ನು ಒಪ್ಪುತ್ತೀರೋ?

ಉಪಾಧ್ಯಕ್ಷರು : ಈಗ ಜೆ.ಹೆಚ್. ಪಟೇಲರ ಸರ್ಕಾರದ ಬಗ್ಗೆ ಅವಿಶ್ವಾಸ ನಿರ್ಣಯದ ಮೇಲೆ ಮಾತನಾಡಿ. ತಾವು ದಯಮಾಡಿ ಮಾತನಾಡುವುದನ್ನು ಕೇಳಬೇಕು. ನಾನು ವಿನಂತಿ ಮಾಡಿಕೊಳ್ಳುವುದು ಏನೆಂದರೆ ಜೆ.ಹೆಚ್. ಪಟೇಲರ ಸರ್ಕಾರದ ಮೇಲೆ ತಾವು ಅವಿಶ್ವಾಸ ನಿರ್ಣಯ ತಂದಿದ್ದೀರಿ. ಅದಕ್ಕೆ ಸೀಮಿತವಾಗಿ ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆ ಚರ್ಚೆಯಲ್ಲಿ ಅವರೂ ಇದ್ದರು. ಅದರ ಬಗ್ಗೆಯೇ ಮಾತನಾಡುತ್ತೇನೆ.

ಶ್ರೀ ಸಿ. ಬೈರೇಗೌಡ :ಮಾನ್ಯ ಉಪಾಧ್ಯಕ್ಷರೇ, ನಾನು ಎತ್ತಿದಂಥ ಆಕ್ಷೇಪಣೆಗೆ ತಾವು ಏನು ಅಪ್ಪಣೆ ಕೊಡಿಸುತ್ತೀರಿ ಎನ್ನುವುದನ್ನು ದಯವಿಟ್ಟು ತಿಳಿಸಿ. ಈಗ ಅವರು ಪ್ರಧಾನ ಮಂತ್ರಿಗಳ ಬಗ್ಗೆ ಕೆಲವು ಪದಗಳನ್ನು ಬಳಸಿದ್ದಾರೆ. ನಾನು ಅದಕ್ಕೆ ತೀವ್ರವಾದಂಥ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದೇನೆ. ಅದು ಕಡತದಲ್ಲಿ ಹೋಗಬಾರದು ಎನ್ನತಕ್ಕಂಥ ಮನವಿಯನ್ನು ನಾನು ತಮ್ಮಲ್ಲಿ ಮಾಡಿದ್ದೇನೆ. ಅದು ಏನಾಯಿತು ಎನ್ನುವುದನ್ನು ತಾವು ದಯವಿಟ್ಟು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದರ ಮೇಲೆ ನಾಳೆ ರೂಲಿಂಗ್ ಕೊಡಲಿ.

ಶ್ರೀ ಸಿ. ಬೈರೇಗೌಡ : ನಾಳೆ ಏಕೆ? ಈಗಲೇ ಹೇಳಬೇಕಾಗುತ್ತದೆ. ಮಾನ್ಯ ಖರ್ಗೆಯವರು ಪ್ರಧಾನ ಮಂತ್ರಿಗಳನ್ನು ಕುರಿತು ಕೆಲವು ಪದಗಳನ್ನು ಬಳಸಿದ್ದಾರೆ. ಅದು ಕಡತಕ್ಕೆ ಹೋಗಬಾರದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಏನೆಂದು ಹೇಳಿ.

(ಗೊಂದಲ)

ಶ್ರೀ ಸಿ. ಬೈರೇಗೌಡ : ನೀವು ಹೇಳಿರತಕ್ಕಂಥಾದ್ದನ್ನು ನಾನು ಏಕೆ ಹೇಳಲಿ? ನಮಗೆ ಗೊತ್ತಿದೆ. ಅಷ್ಟೂ ಗೊತ್ತಿಲ್ಲವೇ?

ಉಪಾಧ್ಯಕ್ಷರು : ನಮ್ಮ ಸದನದ ನಡವಳಿಕೆಗೆ ವಿರುದ್ಧವಾಗಿ ಏನಾದರೂ ಮಾತನಾಡಿದ್ದರೆ ಅದನ್ನು ಕಡತದಿಂದ ತೆಗೆದು ಹಾಕೋಣ.

(ಗೊಂದಲ)

ಉಪಾಧ್ಯಕ್ಷರು : ದಯಮಾಡಿ ತಾವೆಲ್ಲರೂ ಕೂಡಿ.

ಶ್ರೀ ಸಿ. ಬೈರೇಗೌಡ : ಪ್ರಧಾನ ಮಂತ್ರಿಗಳ ಬಗ್ಗೆ ಆಡಿರತಕ್ಕ ಮಾತುಗಳು ಕಡತದಲ್ಲಿ ಹೋಗಬಾರದು ಎಂದು ನಾನು ಹೇಳಿದೆನಲ್ಲಾ, ಅದಕ್ಕೆ ತಾವು ಏನು ತೀರ್ಮಾನ ಕೊಟ್ಟಿರಿ ಎನ್ನುವುದನ್ನು ದಯವಿಟ್ಟು ತಿಳಿಸಿ.

ಉಪಾಧ್ಯಕ್ಷರು : ಈಗಾಗಲೇ ಅದನ್ನು ಹೇಳಿದ್ದೇನಲ್ಲಾ, ಒಂದು ವೇಳೆ ಅದು ಅನ್‌ಪಾರ್ಲಿಮೆಂಟರಿ ಪದವಾಗಿದ್ದರೆ ಅದನ್ನು ಎಕ್ಸಾಮಿನ್ ಮಾಡಿ ನಾಳೆಗೆ ನಾನು ರೂಲಿಂಗ್ ಕೊಡುತ್ತೇನೆ.

SRI J.H. PATEL : Whatever has gone on record if it is unparliamentary, you can examine. If it is derogatory to the highest office of the country then also you will have to,....

ಉಪಾಧ್ಯಕ್ಷರು : ಈಗ ವಾಟಾಳ್ ನಾಗರಾಜ್‌ರವರು ಬಹಳ ಹೊತ್ತಿನಿಂದ ಕೈ ಎತ್ತುತ್ತಿದ್ದಾರೆ. ಅವರು ಮಾತನಾಡಲಿ.

ಶ್ರೀ ವಾಟಾಳ್ ನಾಗರಾಜ್ : ಸಂಸದೀಯ ನಡವಳಿಕೆಯ ಬಗ್ಗೆ, ಸಂಸದೀಯ ಭಾಷೆ ಅಲ್ಲದಿದ್ದುದನ್ನು ಉಪಯೋಗಿಸಿದ್ದಾರೆ ಎನ್ನುವ ಮಾನತ್ತು ಏನು ಹೇಳಿದ್ದಾರೆ, ಅದನ್ನು ಹೇಗೆ ಹೇಳಿದ್ದಾರೆ. ನಮ್ಮ ಸರ್ಕಾರ ಹೇಳತಕ್ಕಂಥಾದ್ದನ್ನು ನೋಡಿದರೆ ಕುರುಡರ ಸಂತೆಯಲ್ಲಿ ಮಾತನಾಡಿದ ಹಾಗೆ ಕಾಣುತ್ತದೆ. ಈಗ ಅವರು ಪತ್ರಿಕೆಯಲ್ಲಿ ಬಂದಿರತಕ್ಕಂಥಾದ್ದನ್ನು ಓದಿದರು. ಪತ್ರಿಕೆಯಲ್ಲಿ ಏನು ಬಂದಿದೆ ಅದನ್ನು ಓದಿದರು. ಹಾಗೆ ಓದಿಬಿಟ್ಟು ಈ ರೀತಿಯಾಗಿ ಹೇಳಬಹುದೇ ಎಂದು ಹೇಳಿದರೇ ಹೊರತು ಅವರು ನೇರವಾಗಿ ಪ್ರಧಾನ ಮಂತ್ರಿಗಳ ಬಗ್ಗೆಯಾಗಲೀ ಇನ್ನೊಬ್ಬರ ಬಗ್ಗೆ ಯಾಗಲೀ ಏನೂ ಮಾತನಾಡಲೇ ಇಲ್ಲ. ಪತ್ರಿಕೆಯಲ್ಲಿ ಏನು ಬಂದಿದೆ ಎನ್ನುವುದನ್ನು ಅವರು ಹೇಳಿದರು. ಆದ್ದರಿಂದ, ತಾವು ಏನು ಹೇಳಿದಿರಿ, ಸಂಸದೀಯ ಭಾಷೆ ಅಲ್ಲದೇ ಇರುವುದನ್ನು ನಾನು ಕಡತದಿಂದ ತೆಗೆಯುತ್ತೇನೆ ಎಂದು ಹೇಳಿದಿರಿ. ಯಾವುದನ್ನು ಸ್ವಾಮಿ ತೆಗೆದು ಹಾಕುವುದು ತಾವು?

ಉಪಾಧ್ಯಕ್ಷರು : ಅದರಲ್ಲಿ ಇದ್ದರೆ ತೆಗೆಯುತ್ತೇನೆ. ಇಲ್ಲದಿದ್ದರೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಏನಿದೆ ಅದರಲ್ಲಿ? ಏನೇನೂ ಇಲ್ಲ.

ಶ್ರೀ ವೈ. ರಾಮಕೃಷ್ಣ : ಅವರು ಪೇಪರ್‌ನಲ್ಲಿ ಇದ್ದುದ್ದನ್ನು ಓದಿದರು. ಬೀದಿಯಲ್ಲಿ ಜನ ನೋಡಿಕೊಳ್ಳುತ್ತಾರೆ ಎಂದು ಹೇಳಿದರು. ಜನ ಇದರಿಂದ ಪ್ರಚೋದನೆಗೊಂಡು ರಾಮಕೃಷ್ಣ ಹೆಗಡೆಯವರ ಲೈಫ್‌ಗೆ ಇದರಿಂದ ಏನಾದರೂ ತೊಂದರೆ ಆದರೆ, will the Home Minister, be held responsible? This is a very most important fact ಏಕೆಂದರೆ ನಮ್ಮ ಪ್ರಧಾನ ಮಂತ್ರಿಯವರೇ ಹೇಳಿಬಿಟ್ಟಿದ್ದಾರೆ, ಮುಂದೆ ಜನ ನೋಡಿಕೊಳ್ಳಲಿ ದಾರಿಯಲ್ಲಿ ಎಂದು. ಅವರು ನೋಡಿಕೊಂಡು ಅವರಿನ್ನು ಮುಗಿಸಿಬಿಟ್ಟರು ಎಂದು ಇಟ್ಟು ಕೊಳ್ಳಿ, Don't you think that you will be held responsible as Home Minister for that incident? ಇದನ್ನು ದಯವಿಟ್ಟು ಹೇಳಿ.

ಶ್ರೀ ಜೆ.ಹೆಚ್. ಪಟೇಲ್ : ನೀವು ಹೈಪೋಥೆಟಿಕಲ್ ಆ ತರಹ ಸಂಸ್ಕೃತಿಯವರು ಅಲ್ಲ, ನಮ್ಮ ಪ್ರಧಾನಿಗಳೂ ಅಲ್ಲ, ಹೆಗಡೆಯವರೂ ಅಲ್ಲ.

(ಗೊಂದಲ)

ಉಪಾಧ್ಯಕ್ಷರು : ಖರ್ಗೆಯವರೇ, ಈಗ ತಾವು ಮುಂದುವರೆಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನ್ನ ಬಾಯಿಂದ ಬಂದಿಲ್ಲ ಅದು. ಮಾನ್ಯ ಪ್ರಧಾನ ಮಂತ್ರಿಗಳೇ ತಮ್ಮ ಬಾಯಿಂದ ಅದನ್ನು ಹೇಳಿದ್ದಾರೆ, ಇನ್ನು ಮೇಲೆ ಈ ರೀತಿ ಮಾತನಾಡುವುದಕ್ಕೆ ಹೋಗಬೇಡಿ ಎಂದು ಅವರೇ ಕೈ ಜೋಡಿಸಿದ್ದಾರೆ. ನಾನು ಹೇಳುವುದನ್ನು ಬಿಡಿ. ಅದು ನಿಜವಾದುದು. ಈಗ ಸುಮ್ಮನೆ ಹೇಳಲು ಹೋಗುತ್ತಾರೆ, ಹೇಳಲಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಅವರೇ ಸುಮ್ಮನೇ ಕುಳಿತಿದ್ದಾರೆ, ನೀವು ಏಕೆ ಹೇಳುತ್ತೀರಿ ?

ಉಪಾಧ್ಯಕ್ಷರು : ಈಶ್ವರಪ್ಪನವರೇ, ತಾವು ಕುಳಿತುಕೊಳ್ಳಿ. ಖರ್ಗೆಯವರು ಮಾತನಾಡಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ತಕ್ಕಂತೆ ಹೇಳತಕ್ಕಂಥ ರೀತಿಯಲ್ಲಿ ಅವರು ಹೇಳಿದ್ದಾರೆ. ನಾನು ಹೇಳತಕ್ಕಂಥಾದ್ದು ಇಷ್ಟೇ, ಇದರಿಂದ ಏನಾಗುತ್ತದೆ ಎಂದರೆ, ಇಂಥ ಹೇಳಿಕೆಗಳಿಂದ ಒಂದು ತಪ್ಪು ಮಾಹಿತಿ ಸಾರ್ವಜನಿಕರಿಗೆ ಹೋಗುತ್ತದೆ. ಇವತ್ತು ಅವರು ಮಾತನಾಡಬಹುದು ಅಥವಾ ಹೆಗಡೆಯವರೇ ಮಾತನಾಡಬಹುದು. ಏಕೆಂದರೆ ಸಾಮಾನ್ಯ ಎಂ.ಎಲ್.ಎ.ಗಳಿಗೆ ಹೋಲಿಸಿದಾಗ ಹೆಗಡೆಯವರೂ ಕೂಡ ಅವರು ಒಂದು ಎತ್ತರದ ಸ್ಥಾನದಲ್ಲಿದ್ದಾರೆ. ನಾಳೆ ಅವರನ್ನೂ ನೋಡಿಕೊಳ್ಳಿ ಎಂದು ಅವರ ಶಿಷ್ಯರು ಹೇಳುವುದು. ಇವರನ್ನು ನೋಡಿಕೊಳ್ಳಿ ಎಂದು ಇವರ ಶಿಷ್ಯರು ಹೇಳುವುದು. ಇದರಿಂದ ಏನಾಗುತ್ತದೆ ಎಂದರೆ ಜನರಲ್ಲಿ ಈ ರೀತಿಯಾದ ಒಂದು ರಾಜಕೀಯ ವಾತಾವರಣ ಬೆಳೆದರೆ ನಾಳೆ ಪ್ರಿಪ್ಲಾನ್ಡ್ ಆಗಿ ಯಾವ ಚುನಾವಣೆಯನ್ನೂ ಮಾಡಲು ಸಾಧ್ಯವಿಲ್ಲ, ಕೊನೆಗೆ ಅಧಿಕಾರಿಗಳು ಏನು ಮಾಡಲು ಪ್ರಾರಂಭ ಮಾಡುತ್ತಾರೆ ಎಂದರೆ, ಅಡ್ಮಿನಿಸ್ಟ್ರೇಷನ್‌ನಲ್ಲಿ ಏನು ಮಾಡುತ್ತಾರೆ ಎಂದರೆ, ನಮಗೆ ಮೇಲಿನಿಂದಲೇ ಆದೇಶ, ಇದೆ ಎಂದು ಅವರು ಲಾಕಪ್‌ನಲ್ಲಿ ಹಾಕಿ ಸಾಯುವವರೆಗೂ ಹೊಡೆಯುತ್ತಾನೆ.

ಇದೇ ನಾನು ಅವನಿಗೆ. ಆಮೇಲೆ ಜಗಳಗಳನ್ನು ಮಾಡುವುದು, ಯಾರು ಮಾಡಿದರೂ ಏನು ಮಾಡಿದರೂ ರಕ್ಷಿಸಿಕೊಳ್ಳತಕ್ಕಂಥವರು ನಮ್ಮ ಹಿಂದೆ ಇದ್ದಾರೆ ಎನ್ನತಕ್ಕಂಥ ಒಂದು ಅಭಿಪ್ರಾಯ ಬಂದಾಗ ಇದೆಲ್ಲದಕ್ಕೂ ಕೂಡ ರಕ್ಷಣೆ ಸಿಗುತ್ತದೆ ಎನ್ನತಕ್ಕಂಥದ್ದು ಗೊತ್ತಾದಾಗ ಇವೆಲ್ಲವೂ ಕೂಡ ನಡೆಯುತ್ತದೆ. ಅದಕ್ಕೆ ದಯವಿಟ್ಟು ಕರ್ನಾಟಕದ ದೃಷ್ಟಿಯಿಂದ ಅವರ ಗೌರವ ಮತ್ತು ನಮ್ಮ ಕರ್ನಾಟಕದ ಗೌರವ ಎರಡೂ ಒಂದೇ. ಏಕೆಂದರೆ ಅವರು ಗೌರವ ಕಾಪಾಡಿಕೊಂಡರೆ ನಮಗೂ ಕೂಡ ಒಳ್ಳೆಯ ಹೆಸರು ಬರುತ್ತದೆ. ನಿಮಗೆ ಪಾರ್ಟಿ ದೃಷ್ಟಿಯಿಂದ ಒಳ್ಳೆಯ ಹೆಸರು ಬರುತ್ತದೆ. ನಮಗೆ ರಾಜ್ಯದ ದೃಷ್ಟಿಯಿಂದ ಒಳ್ಳೆಯ ಹೆಸರು ಬರುತ್ತದೆ. ಆದರೆ ಇದನ್ನು ನಾವು ನೀವು ಮಾತನಾಡುವುದು ಬೇಡ, ಆದರೆ ಇದರ ಬಗ್ಗೆ ಹೊರರಾಜ್ಯದವರು ಏನು ತಿಳಿದುಕೊಳ್ಳುತ್ತಾರೆ ಅಂದರೆ ಏನಪ್ಪಾ, ಕರ್ನಾಟಕದಿಂದ ಬಂದು ಈ ರೀತಿಯಾಗಿ ಮಾಡುತ್ತಿದ್ದಾರಲ್ಲಾ ಎಂದು ಅಂದುಕೊಳ್ಳುತ್ತಾರೆ. ನಿಮಗೆ ಗೊತ್ತಿದ್ದ ಹಾಗೆ ಹಿಂದೆ ಅವರನ್ನು ಕರ್ನಾಟಕದ ಪ್ರಧಾನಮಂತ್ರಿಗಳು ಎಂದು ಅನೇಕ ಪತ್ರಿಕೆಯಲ್ಲಿ ಬರೆದರು, still he is the Chief Minsiter of Karnataka, ಎನ್ನತಕ್ಕಂಥ ಅಭಿಪ್ರಾಯ ಬರತಕ್ಕಂಥ ರೀತಿಯಲ್ಲಿ ಅನೇಕ ಆರ್ಟಿಕಲ್‌ಗಳು ಬಂದವು.

ಆದ್ದರಿಂದ ಇವತ್ತು ಇದರ ಪ್ರಭಾವ ಆಡಳಿತದ ಮೇಲೆ ಬೀಳುತ್ತದೆ ಮತ್ತು ಬಿದ್ದಿದೆ. ಅದರಿಂದ ಅನೇಕ ಅಧಿಕಾರಿಗಳು ಡಿವೈಡ್ ಆಗುತ್ತಾರೆ. ಅದಕ್ಕೆ ನೀವು ಇಂತಹ ಒಂದು ಸಿಚ್ಯುಯೇಷನ್‌ಗೆ ಅವಕಾಶ ಮಾಡಿಕೊಡುವುದರಿಂದ, ಈಗ ಏನೋ ಒಂದು ಸುತ್ತು ಹೋದಿರಿ, ಅರ್ಧ ಯಶಸ್ವಿಯಾಯಿತು, ಅರ್ಧ ಯಶಸ್ವಿಯಾಗಲಿಲ್ಲ, ಕೊನೆಗೆ ನೀವು ಏನೋ ಎಲ್ಲಾ ಸುತ್ತಾಡಿಕೊಂಡು ಬಂದಿರಿ. ಆ ಮಾತು ಬೇರೆ. ಈಗ ಅಲ್ಲಿ ಹೆಗಡೆಯವರು ದೂರು ಮಾಡುತ್ತಾರೆಂದು ಹೇಳಿ ಕೌಂಟರ್ ಮಾಡುವುದಕ್ಕೆ ಕಾಂಪಿಟಿಷನ್ ಮಾಡುತ್ತಿದ್ದೀರಿ. ಅವರು ಒಂದು ಮಾತು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳೇ ಪ್ರಧಾನಮಂತ್ರಿಗಳಿಗಾಗಲಿ, ನಿಮಗಾಗಲಿ, ಎಷ್ಟರಮಟ್ಟಿಗೆ ನೋವು ಆಗಿದೆಯೋ ಗೊತ್ತಿಲ್ಲ. ಆದರೆ ಅವರಿಗೆ ನೋವು ಏಕೆ ಆಯಿತು ಎಂದರೆ ಇಂಗ್ಲೀಷ್ ಬರುವುದಿಲ್ಲ, ದೇಶದ ಮ್ಯಾಪ್ ಗೊತ್ತಿಲ್ಲ, ಇವರು ಏನು ಮಾಡುತ್ತಾರೆ ಹಿಂದಿ ಮಾತನಾಡುವುದಕ್ಕೆ ಬರುವುದಿಲ್ಲ, ಇದು ಎಲ್ಲಾ ಆದ ಮೇಲೆ ಅವರಿಗೆ ಸ್ವಲ್ಪ ನೋವು ಆಯಿತು. ಅದಕ್ಕೆ ಅವರು ನನಗೆ ಒಳ್ಳೆಯ ಇಂಗ್ಲೀಷ್ ಬರುವುದಿಲ್ಲ, ನಾನೇನೂ ಅಲ್ಲಿ ಕಲಿತಿಲ್ಲ, ಎನ್ನತಕ್ಕಂಥದ್ದಕ್ಕೆ ಅವರು ರಿಟಾರ್ಟ್ ಮಾಡಿದರು. ಪ್ಲಾನಿಂಗ್ ಕಮಿಷನ್‌ನಲ್ಲಿ ಇದ್ದಾಗ ಅವರು ಏನು ಕೆಲಸ ಮಾಡಿದರು ಎಂದು ಹೇಳಿ ಅವರು ಹೇಳಿಕೊಂಡು ಬಂದರು. ಈಗ ಇಲ್ಲಿ ಏನಾಗುತ್ತಿದೆಯೆಂದರೆ ಉತ್ತರಕ್ಕೆ ಪ್ರತ್ಯುತ್ತರ ಕೊಡುತ್ತಿದ್ದಾರೆ. ಅಂದರೆ ನಾನು ಈ ಅಧಿಕಾರ ಸ್ಥಾನದಲ್ಲಿ ಇದ್ದೀನೆಂದು ಕೆಲವು ಜನ ಸಹಿಸುತ್ತಿಲ್ಲವೆಂದು ಹೇಳಿ ನೋವಿನಿಂದ ಈ ಮಾತುಗಳನ್ನು ಹೇಳುತ್ತಿದ್ದಾರೆ. ಹೌದಾ, ಅದೇ ರೀತಿಯಾಗಿ ಸಾವಿರಾರು ಜನ, ಕೋಟ್ಯಾಂತರ ಜನ ಈ ನೋವಿನಿಂದ ನರಳುತ್ತಿದ್ದಾರಲ್ಲ ಅವರ ಬಗ್ಗೆಯೂ ಸಹ ಸ್ವಲ್ಪ ಚಿಂತನೆ ಮಾಡಿ.

ಅವರ ಬಗ್ಗೆಯೂ ಸ್ವಲ್ಪ ಅನುಕಂಪ ಇಟ್ಟುಕೊಂಡು ಕೆಲಸ ಮಾಡಿರಿ. ಅದನ್ನು ಮಾಡಿ, ಅದರ ಬಗ್ಗೆ ನಿಮಗೆ ಪ್ರಧಾನಮಂತ್ರಿಗಳು ಆಗಿಲ್ಲವೆಂದು ಹೇಳಿ ಸಹಿಸುವುದಿಲ್ಲ ಎನ್ನತಕ್ಕಂಥ ಮಾತು ನಿಮಗೆ ಏನು ಬಂದಿದೆಯಲ್ಲಾ ಹಾಗೆಯೇ ಅನೇಕ ಸಮಾಜ ಜನ ಇದ್ದಾರೆ, ನಾವು ಈ ಸ್ಥಾನಕ್ಕೆ ಬಂದರೆ ನಮಗೆ ಇದು ಸಹಿಸುವುದಿಲ್ಲವೆಂದು ಹೇಳಿ ದಿನವೂ ಎದ್ದು ಹೋರಾಟ ಮಾಡುತ್ತಾರಲ್ಲಾ ಅವರಿಗೆ ಸುಮ್ಮಸುಮ್ಮನೆ ಟೀಕೆ ಮಾಡಿ ಒಂದು ಚುಕ್ಕೆ ಇಡುವುದಕ್ಕೆ ಹೋಗಬೇಡಿ. ಅದಕ್ಕಾಗಿ ಈ ರೀತಿಯಾಗಿ ನೀವು ನಡೆಸಿಕೊಂಡು ಹೋಗುತ್ತಿರುವುದರಿಂದ ಆಡಳಿತ ಕುಸಿದು ಬಿದ್ದಿದೆ

ಯಾರದ್ದೋ ಲಾರಿ ಇದೆ ಅವನೇ ಹೊಡೆದುಕೊಂಡು ಹೋಗುವುದು. ಆ ರೀತಿಯಾಗಿ ಇಲ್ಲಿ ನಡೆದಿದೆ. ಯಾರೂ ಹೇಳುವವರು ಇಲ್ಲ, ಕೇಳುವವರು ಇಲ್ಲ. ಮುಖ್ಯಮಂತ್ರಿಗಳು ತಾವು ಇರುವಾಗ ಒಬ್ಬ ರಾಜ್ಯಸಭಾಸದಸ್ಯರು, ಮಾಜಿ ಮುಖ್ಯಮಂತ್ರಿಗಳು ಆಗಿದ್ದ ರಾಮಕೃಷ್ಣ ಹೆಗ್ಗಡೆಯವರ ಸಭೆಗಳು ನಡೆಯುವಾಗ ಚನ್ನಪಟ್ಟಣದಲ್ಲಿ ಗಲಾಟೆ ಆಯಿತು. ಅಲ್ಲಿ ಕ್ಷೇತ್ರ ಇಂಥದ್ದು, ಅಲ್ಲಿಗೆ ಹೋದರೆ ಗಲಾಟೆ ಆಗುತ್ತದೆಂದು ನಿಮ್ಮ ಪೋಲೀಸರಿಗೆ ಗೊತ್ತಿರಲಿಲ್ಲವೇ? ರಾಮನಗರಕ್ಕೆ ಹೋದಾಗ ಗಲಾಟೆ ಆಗುತ್ತದೆಂದು ಪೋಲೀಸರಿಗೆ ಗೊತ್ತಿರಲಿಲ್ಲವೇ? ಮುನ್ನೆಚ್ಚರಿಕೆ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲವೇ? ಪೋಲೀಸರು ಏನಾದರೂ ನಿದ್ದೆ ಮಾಡುತ್ತಿದ್ದರೆ? ಹಾಗೆಯೇ ಹಾಸನದಲ್ಲಿಯೂ ಸಹ ಗಲಾಟೆ ಆಗುತ್ತದೆಂದು ಗೊತ್ತಿರಲಿಲ್ಲವೇ? ಇಲ್ಲದಿದ್ದರೆ ಮೀಟಿಂಗ್ ಮಾಡುವ ಅವಶ್ಯಕತೆ ಇಲ್ಲ ಎಂದು ಬ್ಯಾನ್ ಮಾಡಬೇಕಾಗಿತ್ತು. ಏಕೆಂದರೆ 144 ಸೆಕ್ಷನ್ ಜಾರಿ ಮಾಡಿದ್ದೇವೆ, ಇಲ್ಲಿ ಗಲಾಟೆ ಆಗತಕ್ಕಂಥ ಸಂಭವವಿದೆ, you should not go to the meeting ಎಂದು ಹೇಳಬೇಕಾಗಿತ್ತು. ಆದರೆ ಆಡಳಿತ ಚೆನ್ನಾಗಿ ಇದೆ, ಲಾ ಅಂಡ್ ಆರ್ಡರ್ ಚೆನ್ನಾಗಿದೆಯೆಂದು ಹೇಳಿಕೊಂಡು ಮೀಟಿಂಗ್

ಮಾಡಬಹುದೆಂದು ಹೇಳಿ ಕಳುಹಿಸುವುದು, ರಾಮನಗರದಲ್ಲಿ ಗಲಾಟೆ, ಚನ್ನಪಟ್ಟಣದಲ್ಲಿ ಗಲಾಟೆ, ಮಂಡ್ಯದಲ್ಲಿ ಗಲಾಟೆ, ಹಾಸನದಲ್ಲಿ ಗಲಾಟೆ, ಹೀಗೆ ಗಲಾಟೆ ಮಾಡುವುದಕ್ಕೋಸ್ಕರ ನೀವು, ಅಂದರೆ ಇವತ್ತಿನ ದಿವಸ......

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಉಪಾಧ್ಯಕ್ಷರೆ, ಒಂದೂವರೆ ಲಕ್ಷ ಜನರನ್ನು ಜೈಲಿಗೆ ಹಾಕಿ ಈ ದೇಶವನ್ನೇ ಒಂದು ಜೈಲು ಮಾಡಿದಂಥ ಪ್ರಧಾನಿಗಳ ಕೆಳಗೆ ಬೆಳೆದವರು ಇವರು ಎಲ್ಲೋ ಒಂದು ಮಾತು ಹೇಳಿದರು ಎಂದ ಕೂಡಲೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮ್ಮ ಆಡಳಿತ ಬಗ್ಗೆ ನಾನು ಹೇಳುವುದಾದರೆ ಒಂದು ಲಕ್ಷ ಜನ ಜೈಲಿಗೆ ಹಾಕಿ ಆ ಒಂದು ಪ್ರಜಾಪ್ರಭುತ್ವ ಅಂದರೆ ನೀವು ......

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಈಗ 25 ನಿಮಿಷದ ಹಿಂದೆ ನಿಮ್ಮ ಆಶೀರ್ವಾದ ನಮಗೆ ಬೇಕು ಎಂದು ಅವರನ್ನು ಇವರೆಲ್ಲಾ ಕೇಳಿದರು. ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು, ನೀವು ಅವರ ಕೈಕೆಳಗೆ ಬೆಳೆದರು ಎಂದು ಹೇಳಿದರು. ಯಾರ ಮಾತನ್ನು ಇಲ್ಲಿ ನಂಬಬೇಕು? ಏನು ಇವರ ನಾಟಕಗಳು? 20-20ನಿಮಿಷಕ್ಕೆ ಬದಲಾವಣೆ ಆಗುತ್ತಿದ್ದಾರಲ್ಲಾ. ಈಗತಾನೇ ನಾಗೇಗೌಡರು, ಬೈರೇಗೌಡರು ಎಲ್ಲರೂ ನಿಮ್ಮ ಆಶೀರ್ವಾದ ಬೇಕು ಎಂದು ಮುಕ್ತ ಕಂಠದಿಂದ ಕೇಳಿ ತಕ್ಷಣ ಬದಲಾವಣೆ ಆಗಿಬಿಟ್ಟಿದ್ದಾರಲ್ಲಾ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ನಮ್ಮ ಮುಖ್ಯಮಂತ್ರಿಗಳು ಮತ್ತು ನಾವೆಲ್ಲ ಕೇಳಿದ್ದುದು ಏನೆಂದರೆ ನಿಮ್ಮ ಆಶೀರ್ವಾದ ಬೇಕು ಎನ್ನುವ ಪ್ರಶ್ನೆಗಿಂತ ನಿಮ್ಮ ಉಪದೇಶ ಬೇಡ ಎಂದು ಅಷ್ಟೇ ಕೇಳಿದ್ದು... ಆಶೀರ್ವಾದ ಬೇಕು, ಸಹಾಯ ಬೇಕು. ಆದರ ಉಪದೇಶ ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಮೊನ್ನೆ ಮುಖ್ಯಮಂತ್ರಿಗಳು ಒಂದು ಭಾಷಣವನ್ನು ಕೇಳಿದೆ. ಅದು ಏನೆಂದರೆ - ದೇವರಾಜು ಅರಸುರವರು ಬಹಳ ಒಳ್ಳೆಯವರು, ಸಾಮಾಜಿಕ ನ್ಯಾಯ ಕೊಡತಕ್ಕಂಥ ಪ್ರಯತ್ನ ಮಾಡಿದರು. ಆದರೆ ಅವರು ಇದ್ದಂಥ ರೈಲಿಗೆ ಬಾಂಬ್ ಇಡಬೇಕು ಆ ಕಲ್‌ವರ್ಟ್ ಹಾರಿಸಬೇಕು ಎನ್ನುವ ಪ್ರಯತ್ನ ನಡೆದಿತ್ತುಕ ಎಂದು ಹೇಳಿದಿರಿ.

(ಗೊಂದಲ)

ಅದಕ್ಕೆ ಉಪದೇಶ ಬೇಡವೆಂದು ನೀವು ಏನೋ ಹೇಳಿದ್ದೀರಲ್ಲಾ. ಕೆಲವು ಸಲ ಇದಕ್ಕೆಲ್ಲಾ ಉಪದೇಶ ಬೇಕಾಗುತ್ತದೆ. ನೀವು ಮಾಡದವರ ಹತ್ತಿರ ಬಂದಿದ್ದೀರಿ. ನಾವೂ ಅಲ್ಲಿಯೇ ಇದ್ದೇವೆ. ನಾವು ಈ ಕಡೆ ಬಂದೆವು. ನೀವು ಆ ಕಡೆ ಹೋದಿರಿ, ಅದಕ್ಕಾಗಿ ಮಾನ್ಯ ಉಪಾಧ್ಯಕ್ಷರೆ, ಇವರೆಲ್ಲಾ ಮಾಡುವುದನ್ನು ಮಾಡುತ್ತಾರೆ, ಹೇಳುವಾಗ ಏನೋ ಹೇಳಿ ಆ ಮೇಲೆ ಎಡವಿ ಬೀಳುತ್ತಾರೆ. ಹಾಗೆ ಸಿಕ್ಕಿಹಾಕಿಕೊಂಡು ಬೀಳತಕ್ಕಂಥ ಕೆಲಸಗಳನ್ನು ಅವರು ಹೇಳಿದ್ದನ್ನು ಮಾಡಿ ಮಾಡಿ. ದೆಹಲಿಯಿಂದ ಫೋನ್‌ಮೇಲೆ ಫೋನ್ ಮಾಡಿಯೇ ಅವರು ಸಿಕ್ಕಿಹಾಕಿಕೊಂಡು ಬಿಡುವುದು. ಅದರಿಂದ ಅವರು ಹೋದರೆ ಫೋನ್‌ನಿಂದಲೇ ಹೋಗಬಹುದೇ ಹೊರತಾಗಿ ಬೇರೆ ಯಾವುದರಿಂದ ಅಲ್ಲ. ಅದನ್ನು ನೀವು ನೋಡಿಕೊಳ್ಳಿ. ಲಾಯಲ್ಟಿ ಎಷ್ಟರಮಟ್ಟಿಗೆ ಇರಬೇಕು ಎನ್ನುವುದನ್ನು ಹೇಳುತ್ತೇನೆ.

ಲಾಯಲ್ಟಿ ಎಷ್ಟರಮಟ್ಟಿಗೆ ಇರಬೇಕು ಎನ್ನತಕ್ಕಂಥದ್ದರ ಬಗ್ಗೆ John staurt Mill ಅವರಿಗೆ ಚೆನ್ನಾಗಿ ಗೊತ್ತಿದೆ. He is a political thinker, philosepher and constitutional expert, ಅವರು ಒಂದು ಮಾತು ಏನು ಹೇಳಿದ್ದಾರೆಂದರೆ, ಇದು Constituent Assembly ಯಲ್ಲಿ ಕೋಟ್ ಆಗಿದೆ. John Stuart Mill, who warned the defenders of democracy not to lay their liberties at the feet of even a great man, or trust him with powers which enabled him to subvert their institution. striking a note of warning against the spirit of irrational blind here-worship which prevalied in the country, he observed: "Tthere is nothing wrong in being grateful to great men who have rendered life-long service to the country, but there are limits to gratefulness. As has been well said by the Irish patriot Daniel O' Cannelll, 'No man acan be grateful at the cost of his honour. no women can be grateful at the cost of her chastity; and no nation can be grateful at the cost of its liberty." This caution is far more necessary in the case of India than in the case of any other country,.

7.10 ಪಿ.ಎಂ.

ಎಂದು ಹೇಳಿ ಇದು ಕಾನ್ಸಿಟ್ಯೂಟುಯೆಂಟ್ ಅಸೆಂಬ್ಲಿಯಲ್ಲಿ ಅಂದಿನ ದಿವಸ ಹೇಳಿದರು. ಅದಕ್ಕೆ ನಾನು ಹೇಳುವುದೇನೆಂದರೆ ಎಷ್ಟು ಗ್ರೇಟ್ಫುಲ್ನೆಸ್ ಇಟ್ಟುಕೊಳ್ಳಬೇಕು ಅಷ್ಟನ್ನು ಇಟ್ಟುಕೊಳ್ಳಿ, ಬೀದಿಯಲ್ಲಿ ಜಗಳವಾಡುವುದಕ್ಕೆ ಲಾಠಿಯನ್ನು ಹಿಡಿದುಕೊಂಡು ಅವರ ಪರವಾಗಿ ಹೋಗಬೇಡಿ, ಅದಕ್ಕಾಗಿ ಎಷ್ಟು ಗ್ರೇಟ್ಫುಲ್ನೆಸ್ಸು ಆ ಬಗ್ಗೆ ಇಟ್ಟುಕೊಳ್ಳಿ. ಇನ್ಸಿಟ್ಯೂಷನ್ ಡೆಸ್ಟ್ರಾಯ್ಡ್ ಮಾಡುವುದಕ್ಕೆ, ಲಾ ಅಂಡ್ ಆರ್ಡರನ್ನು ಆಳುವುದಕ್ಕೆ, ಕಚ್ಚಾಡುವುದಕ್ಕೆ ಈ ರಾಜ್ಯದಲ್ಲಿರತಕ್ಕಂತಹ ಸುವ್ಯವಸ್ಥೆ, ಕಾನೂನು ವ್ಯವಸ್ಥೆಯನ್ನು ಹಾಳು ಮಾಡುವುದಕ್ಕೆ ನಿಮ್ಮ ಅಧಿಕಾರವನ್ನು ಉಪಯೋಗ ಮಾಡಿಕೊಳ್ಳಬೇಡಿ, ಅಷ್ಟರ ಮಟ್ಟಿಗೆ ನೀವು ಸರೆಂಡರ್ ಆಗಬೇಡಿ, ನಿಮ್ಮ ಗೌರವವನ್ನು ಕಾಪಾಡಿಕೊಳ್ಳಿ ಎಂದು ಈ ಮಾತನ್ನು ತಮಗೆ ಹೇಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : It applies to Congress functionaries and the Congress High Command. It applies to you only...

SRI M. MALLIKARJUNA KHARGE : It applies to Everybody.

(ಗೊಂದಲ)

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ನೀವು ಒಳ್ಳೆಯ ಮಾತಗಳನ್ನು ಹೇಳಿದ್ದೀರಿ, ಆದರೆ ನಿಮ್ಮ ಬಾಯಿಯಿಂದ ಈ ಮಾತುಗಳು ಬರಬಾರದಿತ್ತು, ಕಾರಣವೇನೆಂದರೆ, ಇದು ರೆಕಾರ್ಡ್ನಲ್ಲಿದೆ. ಅಲ್ಲಿ ಕುಳಿತಿರತಕ್ಕಂಥವರು ನನ್ನ ಪ್ರಾಣದ ಮೇಲೆ ಮೂರು ಬಾರಿ ಅಟೆಮ್ಪ್ಟ್ ಆಯಿತು ಎಂದು ಮುಖ್ಯಮಂತ್ರಿಗಳ ಸ್ಥಾನದಲ್ಲಿ ಕುಳಿತಿರತಕ್ಕಂಥವರು ಹೇಳಿರುವುದು ಈ ಸದನದ ಕಡತದಲ್ಲಿದೆ. ಅದರಿಂದ ಇದು ನಿಮ್ಮ ಬಾಯಿಂದ ಬರಬಾರದಿತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇರಲಿ, ಕೇಳೋಣ. ಅದಕ್ಕೆ ನೀವು ಮಾಡಿಕೊಂಡೇ ಹೋಗಿ.

ಶ್ರೀ ಸಿ. ಬೈರೇಗೌಡ : ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ ಏನಾಯಿತು ಸ್ವಾಮಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಜನತಾ ದಳ ಸರ್ಕಾರ ಅಧಿಕಾರಕ್ಕೆ ಬಂದ ಮೊದಲನೆ ದಿವಸ ಏನಾಯಿತು, ಅದು ಆಯಿತು.

ಮಾನ್ಯ ಸದಸ್ಯರು : ನಿಮ್ಮಲ್ಲಿ ಏನಾಗಿತ್ತು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಮೇಲೆ ಇನ್ನೊಂದು ಮಾತನ್ನು ತಮಗೆ ಏಕೆ ಹೇಳುತ್ತಿದ್ದೇನೆಂದರೆ, ಈ ತತ್ವದ ಮೇಲೆ ತಾವು ನಂಬಿಕೆಯನ್ನು ಇಟ್ಟುಕೊಂಡು ಕೆಲಸವನ್ನು ಮಾಡಿಕೊಂಡು ಬಂದಿದ್ದೀರಿ. ಈ ತತ್ವದ ಪರವಾಗಿ ತಾವು ನಡೆದುಕೊಂಡು ತಮ್ಮದೇ ಆದಂತಹ ಕಾರ್ಯಕ್ರಮವನ್ನು ರೂಪಿಸುತ್ತೀರಿ, ಈ ರಾಜ್ಯವನ್ನು ಆಳುತ್ತೀರಿ ಎಂಬ ನಂಬಿಕೆ ಇತ್ತು. ಏನು ಆ ತತ್ವ ಎಂದರೆ,

"Democracy, he said, was that they must not be content with mere political democracy but that they should make the political democracy a social and economic democracy. He added that political democracy could not last unless there lay at the base of it social democracy which recognised liberty, equality and fraternity as the principles of life. They formed an inseparable trinity. Without equality, liberty would not produce the supremacy of the few over the many. Equality, without liberty would kill individual initiative. Without fraternity, liberty and equality could not become a natural course of things. They must acknowledge, he continued, the fact that there was complete absence of two things in Indian society equality in social and equality in economic life".

ಈ ಕೊರತೆ ಏನಿದೆ, ಈ ಕೊರತೆಯನ್ನು ನೀವು ತುಂಬಬಹುದು, ಇದರ ಬಗ್ಗೆ ನಿಮ್ಮ ಚಿಂತನೆಯಾಗಬಹುದು, ಇದರ ಬಗ್ಗೆ ವಿಚಾರಣೆಯನ್ನು ಮಾಡಿ 15ನೇ ಆಗಸ್ಟ್ 1996ರಂದು ಕಾರ್ಯಕ್ರಮಗಳನ್ನು ಹಾಕಿಕೊಂಡು ಕೊಡಬಹುದು ಎನ್ನತಕ್ಕಂಥದ್ದನ್ನು ನಾವು ನಂಬಿದ್ದೆವು. ಆದರೆ ನೀವು ಆ ದಿವಸ ಏನು ಹೇಳಿಬಿಟ್ಟಿರಿ ಧಿಡೀರನೆ ಹಿಂದೆ ಏನು ನಡೆದಿತ್ತು ಅದೇ ನನ್ನ ಕಾರ್ಯಕ್ರಮ. ಹೊಸದಾಗಿ ನಾವು ಏನು ಅನೌನ್ಸ್ ಮಾಡುವುದಿಲ್ಲ, ಏನೂ ಹೇಳುವುದಕ್ಕೆ ಹೋಗುವುದಿಲ್ಲ, ಹಿಂದೆ ಅನೇಕ ಜನರು ಅನೌನ್ಸ್ ಮಾಡಿ ಹೋಗಿದ್ದಾರೆ, ಪುನಃ ಪುನಃ ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲವೆಂದು ಹೇಳಿದರಲ್ಲಾ, ಇದರಿಂದ ಏನಾಯಿತು ಈಕ್ವಾಲಿಟಿ ಇನ್ ಇಕಾನಾಮಿಕ್ ಲೈಫ್ ಮತ್ತು ಈಕ್ವಾಲಿಟಿ ಇನ್ ಸೋಷಿಯಲ್ ಲೈಫ್ ಏನಿದೆ ಇದನ್ನು ತರುವುದಕ್ಕೆ ನಿಮ್ಮ ಪ್ರಯತ್ನ ಏನೂ ನಡೆದಿಲ್ಲ, ಮತ್ತೆ ಇದರ ಏನು ಹೆಜ್ಜೆಯನ್ನು ತಾವು ಇಟ್ಟಿಲ್ಲ ಮತ್ತು ಇದರ ಬಗ್ಗೆ ತಾವು ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿಲ್ಲವೆಂದು ಈ ಸಂದರ್ಭದಲ್ಲಿ ಹೇಳಿ, ಕೊನೆಯ ಮಾತನ್ನು ಅವರು ಪ್ರಸ್ತಾಪ ಮಾಡಿದ್ದು, ಡಾ. ಅಂಬೇಡ್ಕರ್‌ರವರು 26ನೇ ಜನವರಿ 1950ರಲ್ಲಿ if the

same situation continues .... ಈ ದೇಶದಲ್ಲಿ ಏನಾಗಬಹುದು ಎನ್ನುವುದಕ್ಕೆ ಅವರು ಏನು ಹೇಳಿದರು ಎಂದರೆ :

"We are going to enter into life of contradictions. In politics we will have equality and in social and economic life, we will have inequality. We must remove this contradiction at the earliest moment, or else those who suffer from inequality will blow up the structure of political democracy which is this Assembly or parliament"....

ಅಂದರೆ ಇವತ್ತೂ ಸಹ ಇದರ ಕೊರತೆ ಇದೆ, Inequality ಇವತ್ತೂ ಸಹ ಸಮಾಜದಲ್ಲಿದೆ. ಅದನ್ನು ತೆಗೆದು ಹಾಕುವುದಕ್ಕೆ ನಾವು ಸಮಾಜವಾದಿ ಮುಖಂಡರಾದ ಶ್ರೀಮಾನ್ ಜೆ.ಹೆಚ್. ಪಟೇಲ್ರಿಂದ ಅಪೇಕ್ಷೆಯನ್ನು ಪಟ್ಟಿದ್ದೆವು. ಆದರೆ ಇದು ಏನೂ ಆಗಲಿಲ್ಲ, ಕೊನೆಗೆ ಜೈಸೆದೇ ಅಂದ ಹಾಗೆ, "ಅಂಧೇರಿ ನಗರಿ ಚೌಪಟ್ ರಾಜ", "ಕಟೇಶೇರ್ ಕಾಯೇ ಕಟಶೇರ್ ಬೆಚೇ" ಅಂದ ಹಾಗೆ, ಹಿಂದೆ ಯಾವ ರೀತಿಯಲ್ಲಿ ಇತ್ತೋ ಅದೇ ರೀತಿಯಲ್ಲಿ ತಾವು ಆಡಳಿತವನ್ನು ನಡೆಸಿಕೊಂಡು ಬಂದಿದ್ದೀರಿ, ತಾವು ಯಾವುದೇ ಹೊಸ ಕಾರ್ಯಕ್ರಮವನ್ನು ಕೊಟ್ಟಿಲ್ಲ, ಆಲಮಟ್ಟಿ ಇರಬಹುದು, ಜುರಾಲಾ ಇರಬಹುದು, ಅಥವಾ ಯು.ಕೆ.ಪಿ. ಇರಬಹುದು, ಅಬಕಾರಿ ಇರಬಹುದು, ಇವುಗಳನ್ನೆಲ್ಲವನ್ನೂ ನಾವು ನೋಡಿದಾಗ ಈ ಸಾಮಾಜಿಕ ಪರಿವರ್ತನೆಯನ್ನು ತರಬೇಕು, ಸಾಮಾಜಿಕ ನ್ಯಾಯವನ್ನು ಕೊಡಬೇಕು ಎನ್ನತಕ್ಕಂಥಹ ಮನಸ್ಸನ್ನು ಈ ಸರ್ಕಾರ ಇನ್ನೂ ಸಹ ಮಾಡಿಲ್ಲ, ಅದಕ್ಕಾಗಿ ಈ ಸರ್ಕಾರಕ್ಕೆ ಅಧಿಕಾರದಲ್ಲಿ ಮುಂದುವರೆಯುವಂತಹ ನೈತಿಕ ಹೊಣೆ ಇಲ್ಲ; ಅವರು ಇದನ್ನು ಕಳೆದುಕೊಂಡಿದ್ದಾರೆ; ಇದರಿಂದ ರಾಜ್ಯದ ರೈತರ ರಕ್ಷಣೆಯನ್ನು ಮಾಡುವುದಕ್ಕೂ ಈ ಸರ್ಕಾರಕ್ಕೆ ಸಮರ್ಥನೆ ಇಲ್ಲ, ಅದು ಕಾನೂನಿನ ದೃಷ್ಟಿಯಿಂದಾಗಲಿ, ಅದು ನೀರಾವರಿಯ ದೃಷ್ಟಿಯಿಂದಾಗಬಹುದು, ಎಲ್ಲಾ ದೃಷ್ಟಿಯಿಂದಲೂ ಕೂಡ ಈ ಸರ್ಕಾರ ವಿಫಲವಾಗಿದೆ. ಅದಕ್ಕಾಗಿ ದಯವಿಟ್ಟು ತಮ್ಮೆಲ್ಲರಿಗೂ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಆತ್ಮಸಾಕ್ಷಿಯಾಗಿ ತಾವುಗಳು ಕೂಡ ನಮ್ಮ ಜೊತೆಯಲ್ಲಿ ಸೇರಿ ಈ ನಿರ್ಣಯಕ್ಕೆ ಬೆಂಬಲವನ್ನು ನೀಡಬೇಕು. ಈ ಅವಿಶ್ವಾಸ ನಿರ್ಣಯಕ್ಕೆ ಬೆಂಬಲವನ್ನು ಸೂಚಿಸಬೇಕೆಂದು ತಮ್ಮ ಮುಖಾಂತರ ಅವರಿಗೂ ಕಳಕಳಿಯಿಂದ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಉಪಾಧ್ಯಕ್ಷರು, ಬಹಳ ದುಃಖದಿಂದ ಇವೊತ್ತು ಈ ಅವಿಶ್ವಾಸ ನಿರ್ಣಯವನ್ನು ವಿರೋಧ ಪಕ್ಷಗಳು ಸೇರಿ ಮಂಡನೆ ಮಾಡಬೇಕಾಗಿದೆ. ಏಕೆಂದರೆ 6.6.1996ನೇ ದಿನಾಂಕ ಮಾನ್ಯ ಜೆ.ಹೆಚ್. ಪಟೇಲ್ರು ಮುಖ್ಯಮಂತ್ರಿ ಸ್ಥಾನವನ್ನು ಪದಗ್ರಹಣವನ್ನು ಮಾಡಿದ್ದಾರೆ. 5ನೇ ತಾರೀಖಿನಂದು ಬಹಳ ತೀವ್ರ ಆಂತರಿಕ ಗೊಂದಲದಿಂದ ಅವರು ಮುಖ್ಯಮಂತ್ರಿ ಆಗುತ್ತಾರೆಯೋ ಅಥವಾ ಬೇರೆಯವರು ಆಗುತ್ತಾರೆಯೋ ಎಂದು ಹೇಳಿಕೊಂಡು ಅಂತೂ ಅವರೇ 6ನೇ ತಾರೀಖಿನಂದು ಪದಗ್ರಹಣ ಮಾಡಿದರು. ಅವರು ಪದಗ್ರಹಣ ಮಾಡಿದಾಗ ನಮಗಂತೂ ಬಹಳ ಒಂದು ಆಸೆ ಇತ್ತು, ಏಕೆಂದರೆ ಒಬ್ಬ ಸಮಾಜವಾದಿ ತತ್ವದ ಮೇಲೆ ಹೋರಾಟ ಮಾಡಿ ಇಷ್ಟೊಂದು ವರ್ಷಗಳ ಕಾಲ, ಇಷ್ಟೊಂದು ರಾಜಕೀಯ ಹಿನ್ನೆಲೆ ಇದ್ದಂತಹ ವ್ಯಕ್ತಿ, ಸಾಮಾಜಿಕ ನ್ಯಾಯಕ್ಕಾಗಿ, ಸಮಾಜವಾದದ ಧೋರಣೆಗಳ ಮೇಲೆ ತತ್ವದ ನಂಬಿಕೆಯನ್ನು ಇಟ್ಟುಕೊಂಡು ಬಂದಂತಹ ಒಬ್ಬ ವ್ಯಕ್ತಿ ಮುಖ್ಯಮಂತ್ರಿಗಳಾದರು.

ಈ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಒಂದು ಸಮರ್ಥವಾದಂತಹ ಸರ್ಕಾರ ಬರುತ್ತದೆ, ಒಂದು ನಿರ್ದಿಷ್ಟವಾದಂತಹ ಧೋರಣೆ ಇರುತ್ತದೆ, ಎಂದು ಹೇಳುವಂತಹ ಅಭಿಪ್ರಾಯ ಜನಸಮಾನ್ಯರಲ್ಲೂ, ನಮ್ಮಲ್ಲಿಯೂ ಎಲ್ಲರಲ್ಲಿಯೂ ಸಹ ಇತ್ತು. ಆದರೆ ದುರ್ದೈವವಶಾತ್ ಯಾವ ದಿನದಿಂದ ಮುಖ್ಯಮಂತ್ರಿಯಾಗಿ ಪದಗ್ರಹಣ ಮಾಡಿದರೋ, ಅಂದಿನಿಂದ ಇಂದಿನವರೆಗೆ ನಾನಾ ರೀತಿಯ ಅಡ್ಡಿ ಅಡಚಣೆಗಳು ಅವರ ಪಕ್ಷದಿಂದಲೇ ಬಂತು. ಎಲ್ಲರಿಗೂ ಸಮಾಧಾನವನ್ನು ಮಾಡಬೇಕೆಂದು ಹೇಳಿಕೊಂಡು 45 ಜನರ ಒಂದು ಜಂಬೋಜೆಟ್ ಮಂತ್ರಿ ಮಂಡಲವನ್ನು ಅವರು ಮಾಡಿಬಿಟ್ಟರು. ಹಿಂದಿನ ಸರ್ಕಾರದವರು ಜಂಬೋಜೆಟ್ ಮಂತ್ರಿಮಂಡಲವನ್ನು ಮಾಡಿದರು ಎಂದು ಹೇಳಿ ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಆರೋಪವನ್ನು ಮಾಡಿದವರು, ಅವರೆಲ್ಲರಿಗಿಂತಲೂ ಮೀರಿ, ಪ್ರತಿಯೊಬ್ಬರಿಗೂ ಸಮಾಧಾನಪಡಿಸಬೇಕೆಂಬ ಒಂದೇ ದೃಷ್ಟಿಯಿಂದ ಯಾವುದೇ ರೀತಿಯ ವಿಚಾರವನ್ನು ಮನಗಾಣದೆ ಯಾರಿಂದ ಹೆಚ್ಚು ಶಿಫಾರಸ್ಸು ಹಾಗೂ ಹೆಚ್ಚು ಒತ್ತಡ ಬರುತ್ತದೆ, ಅವರೆಲ್ಲರನ್ನೂ ಮಂತ್ರಿಮಂಡಲಕ್ಕೆ ಸೇರಿಸಿಕೊಂಡ 45 ಜನರ ಒಂದು ಜಂಬೋಜೆಟ್ ಮಂತ್ರಿಮಂಡಲವನ್ನು ಸೇರಿಸಿದರೆ, ಆ 45 ಜನರಲ್ಲಿ ಅರ್ಧಕ್ಕಿಂತಲೂ ಹೆಚ್ಚು ಜನರು ಮಂತ್ರಿಗಳಿಗೆ ಅವರ ಇಲಾಖೆಯ ವಿಷಯದ ಬಗ್ಗೆ ಮಾಹಿತಿಯೇ ಗೊತ್ತಿಲ್ಲ.

ಇದು ಒಂದು ದುರಂತ. ತಮ್ಮ 80 ದಿನಗಳ ಅವಧಿಯಲ್ಲಿ 40 ದಿನಗಳ ಕಾಲದ ಅವಧಿಯನ್ನು ವಿರೋಧಪಕ್ಷದವರು ಅನಾವಶ್ಯಕವಾದುದನ್ನು ಮಾತನಾಡಿ ಹಾಳು ಮಾಡಿಕೊಂಡರು ಎಂದು ತಾವು ಹೇಳುವುದಾದರೆ ಇವತ್ತು 80 ದಿನಗಳ ಕಾಲ ನಿಮ್ಮ 45 ಮಂದಿ ಸದಸ್ಯರ ಜಂಬೋಜೆಟ್ ಮಂತ್ರಿಮಂಡಲ ಏನಿದೆ ಅವರೆಲ್ಲರೂ ಅಧಿಕಾರವನ್ನು ದುರುಪಯೋಗ ಮಾಡಿದ್ದೀರಿ. ಭ್ರಷ್ಟಾಚಾರವನ್ನು ಮತ್ತಷ್ಟು ಹೆಚ್ಚಿಗೆ ಮಾಡಿದಿರಿ, ಸ್ವಜನಪಕ್ಷಪಾತ ಮಾಡಿದಿರಿ, ಲಂಚಗುಳಿತನಕ್ಕೆ ಪ್ರೋತ್ಸಾಹ ಕೊಟ್ಟರಿ, ರಾಜ್ಯದಲ್ಲಿ ಅರಾಜಕತೆಯನ್ನು ತಂದಿದ್ದೀರಿ, ಈ ವಿಚಾರದಲ್ಲಿ ನೀವು ನಮ್ಮ ಕರ್ನಾಟಕ ರಾಜ್ಯದ ಜನತೆಯ ಕ್ಷಮೆಯನ್ನು ಯಾಚನೆ ಮಾಡಬೇಕಾಗಿದೆ. ಈ ದೃಷ್ಟಿಯಲ್ಲಿ ನಮ್ಮ ಎಲ್ಲಾ ವಿರೋಧ ಪಕ್ಷದವರೂ ಸೇರಿಕೊಂಡು ನಿಮ್ಮ ವಿರುದ್ಧ ಹೋರಾಟ ಮಾಡಬೇಕಾಗಿದೆ. ಏಕೆಂದರೆ ಒಂದು ಕಡೆ ಕಾವೇರಿ ನದಿಯ 5 ಟಿ.ಎಂ.ಸಿ. ನೀರನ್ನು ಯಾರಿಗೂ ತಿಳಿಸದಂತೆ ಕೇವಲ ಅವರ ಒಂದು ಸ್ವಾರ್ಥಕ್ಕಾಗಿ ಅವರು ಆ ದೇಶದ ಉನ್ನತ ಗದ್ದುಗೆಯನ್ನು ಏರಿರುವುದರಿಂದ ಅಲ್ಲಿ ಅವರನ್ನು ಉಳಿಸಿಕೊಳ್ಳಬೇಕು ಎನ್ನುವ ಉದ್ದೇಶದಿಂದ ತಮಿಳ್ನಾಡಿಗೆ ತಲೆ ತಗ್ಗಿಸಿಕೊಂಡು 5 ಟಿ.ಎಂ.ಸಿ. ನೀರನ್ನು ಬಿಟ್ಟಿರಿ. ಮಾನ್ಯ ಸದಸ್ಯರಾದ ಖರ್ಗೆಯವರು ಆಲಮಟ್ಟಿಯ ಬಗ್ಗೆ ಬಹಳಷ್ಟು ಮಾತನಾಡಿರುವುದರಿಂದ ಅದರ ಬಗ್ಗೆ ನಾನೇನೂ ಹೆಚ್ಚಿಗೆ ಹೇಳಬೇಕಾಗಿಲ್ಲ. ಆಲಮಟ್ಟಿ ಡ್ಯಾಂನ ವಿಚಾರದ ಹಿನ್ನೆಲೆಯನ್ನು ನಾವು ವಿಮರ್ಶೆ ಮಾಡಿ ನೋಡುವುದಾದರೆ, ಈ ರಾಷ್ಟ್ರದಲ್ಲಿ....

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಪತ್ರಿಕೆಯವರು ಒಬ್ಬರೂ ಇಲ್ಲ. ನಾವು ಮಾತನಾಡುವುದಾದರೂ ಏತಕ್ಕೆ? ಮಾನ್ಯ ಸದಸ್ಯರು ಮಾತನಾಡುವಾಗ ....

ಉಪಾಧ್ಯಕ್ಷರು : ರೆಕಾರ್ಡ್ಸ್‌ನಲ್ಲಿರುತ್ತದೆ ....

(ಗೊಂದಲ)

ಶ್ರೀ ಯು.ಆರ್. ಸಭಾಪತಿ : ಮಾನ್ಯ ಉಪಾಧ್ಯಕ್ಷರೆ, ನಾನು ಒಂದು ಮಾತನ್ನು ಮಾತ್ರ ಸ್ಪಷ್ಟವಾಗಿ ಹೇಳುತ್ತೇನೆ. ನಾನು 7.30 ಗಂಟೆಯವರೆಗೆ ಮಾತನಾಡುತ್ತೇನೆ, ಮತ್ತೆ ನಾಳೆ ಬೆಳಿಗ್ಗೆ ಮುಂದುವರೆಸುತ್ತೇನೆ. ದಯವಿಟ್ಟು ಅದಕ್ಕೆ ಅವಕಾಶ ಕೊಡಬೇಕು. ಏಕೆಂದರೆ, ಇಲ್ಲಿ ನಾವು ಮಾತನಾಡುವುದಕ್ಕೆ ಒಂದು ಮಹತ್ವ ಇದೆ. ಮಹತ್ವ ಪೂರ್ಣವಾಗಿ ಅದು ಪತ್ರಿಕೆಗಳಲ್ಲಿ ಬರಬೇಕು. ಇದು ಎಲ್ಲಾ ಕಡೆಯಲ್ಲೂ ಪ್ರಚಾರವಾಗಬೇಕು.

ಮಾನ್ಯ ಸದಸ್ಯರು : ಹಾಗಾದರೆ ನೀವು ಪತ್ರಿಕೆಗಳಲ್ಲಿ ಬರೆಸಿಕೊಳ್ಳುವುದಕ್ಕಾಗಿಯೇ ಮಾತನಾಡುತ್ತೀರೋ?

(ಗೊಂದಲ)

ಶ್ರೀ ಯು.ಆರ್. ಸಭಾಪತಿ : ದಯವಿಟ್ಟು ಕುಳಿತುಕೊಳ್ಳಿ. ನಾವು ಏನು ಮಾತನಾಡಬೇಕೆಂದು ನಮಗೂ ಗೊತ್ತಿದೆ. ಮಾನ್ಯ ಉಪಾಧ್ಯಕ್ಷರೆ, ಈ ದೃಷ್ಟಿಯಿಂದ ವಿರೋಧಪಕ್ಷದವರಾದ ನಾವು ಈ ಒಂದು ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಬೇಕಾದ ಒಂದು ದುರದೃಷ್ಟಕರವಾದ ವಾತಾವರಣ ಬಂದಿದೆ. ಈ ಅವಿಶ್ವಾಸ ನಿರ್ಣಯವನ್ನು ನಾವು ಮಂಡಿಸುವುದಕ್ಕೆ ಕಾರಣ ಶ್ರೀ ಜೆ.ಹೆಚ್. ಪಟೇಲರ 80 ದಿನಗಳ ಅಧಿಕಾರಾವಧಿಯಲ್ಲಿ ಆದಂಥ ಘಟನೆಗಳನ್ನು ಪ್ರತಿಯೊಂದನ್ನೂ ನಾವು ಇಲಾಖಾವಾರು ವಿಮರ್ಶೆ ಮಾಡುವುದಾದರೆ, ಇಲಾಖಾವಾರು ಮಂತ್ರಿಗಳ ಬಗ್ಗೆ ಚರ್ಚೆ ಮಾಡುವುದಾದರೆ, ಇವತ್ತು ಇವರು ಮಾಡಿರುವಂಥ ಭ್ರಷ್ಟಾಚಾರದ ಬಗ್ಗೆ ಹೇಳುವುದಾದರೆ, ಇದು ಕೇವಲ ಎರಡು ದಿನಗಳಲ್ಲಿ ಮುಗಿಯುವುದಿಲ್ಲ, ಇದಕ್ಕೆ ಇನ್ನೂ 40 ದಿನಗಳ ಕಾಲಾವಕಾಶ ಬೇಕಾಗುತ್ತದೆ. ಪ್ರತಿಯೊಂದು ಇಲಾಖಾವಾರು ಮಾತನಾಡುವುದಕ್ಕೆ ಬಹಳ ಕಾಲ ಬೇಕಾಗುತ್ತದೆ.

ನಾನು ತಮಗೆ ಹೇಳುವುದಾದರೆ, ಇವತ್ತು ನಾವು ಪ್ರತಿಯೊಂದು ಇಲಾಖಾ ಬೇಡಿಕೆಗಳ ಬಗ್ಗೆ ಇಲ್ಲಿ ಮಾತನಾಡಬೇಕಾಗಿತ್ತು. ನಾವು ಆ ಬೇಡಿಕೆಗಳ ಬಗ್ಗೆ ಮಾತನಾಡುವುದಕ್ಕೆ ನಮಗೆ ಅವಕಾಶವನ್ನು ಕೊಡದೆ ಏಕಾಏಕಿಯಾಗಿ ಮತಕ್ಕೆ ಹಾಕಿಕೊಂಡು ಬೇಡಿಕೆಗಳನ್ನು ಮುಗಿಸುವಂಥ ವಾತಾವರಣವನ್ನು ಸರ್ಕಾರದವರು ಕಲ್ಪಿಸಿಕೊಂಡರು. ಮಾನ್ಯ ಖರ್ಗೆಯವರು ಇವತ್ತು ಬಹಳ ವಿಸ್ತಾರವಾಗಿ ಪ್ರಸ್ತಾಪ ಮಾಡಿದ್ದಾರೆ. ಹಾಗಾದರೆ ಕಳೆದ 40 ದಿನಗಳ ಅವಧಿಯಲ್ಲಿ ಈ ಸರ್ಕಾರದ ಆಗುಹೋಗುಗಳ ಬಗ್ಗೆ ನಾವು ಏನು ಮಾತನಾಡಿದ್ದೇವೆ? ಇವರು ಅನಾವಶ್ಯಕವಾಗಿ 40 ದಿನಗಳ ಕಾಲಾವಕಾಶವನ್ನು ಬಹಳ ಸುಲಭವಾಗಿ ಹಾಳು ಮಾಡಿಕೊಂಡರು ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ತಮಗೆ ಹೇಳುವುದಾದರೆ ಇತ್ತೀಚೆಗೆ ವಿದ್ಯುತ್ ದರವನ್ನು ಏರಿಸಿದ್ದರ ಬಗ್ಗೆ ನಾವು ಮಾತನಾಡಿದಾಗ, ಆ ಸಂದರ್ಭದಲ್ಲಿ ನಾವು ಇಲ್ಲಿ ಧರಣವನ್ನು ಮಾಡಿದಾಗ ಮಾನ್ಯ ಮುಖ್ಯ ಮಂತ್ರಿಗಳು ನಮ್ಮನ್ನು ಕರೆದು, ನೀವು ಧರಣ ಮಾಡುತ್ತೀರಾ, ಮ್ಹಾಡಿ ನಮಗೇನೂ ತೊಂದರೆ ಇಲ್ಲ, ನಾನು ಸಭೆಯನ್ನು ಅಡ್ಜರ್ನ್ ಮಾಡಿಕೊಂಡು ಹೋಗುತ್ತೇನೆ. ಎಲ್ಲದಕ್ಕೂ ನಾನೇನೂ ಮನ್ನಣೆಯನ್ನು ಕೊಡಬೇಕಾಗಿಲ್ಲ. ನನಗೆ ಹಣ ಬೇಕು ಎನ್ನುವ ಲಘುವಾದ ಮನೋಭಾವನೆಯನ್ನು ತೋರಿಸಿದರು.

ಆದರೆ ಇದು ಒಬ್ಬ ಸಮಾಜವಾದಿ ನಾಯಕರ ತಲೆಯಲ್ಲಿ ಬರುವಂಥ ವಿಚಾರಗಳಲ್ಲ. ಇಲಾಖೆಗಳಿಗೆ ಸಂಬಂಧಪಟ್ಟ ಬೇಡಿಕೆಗಳ ಮೇಲೆ ಉತ್ತರವನ್ನು

ಕೊಡುವಾಗ ಮಹಾಭಾರತ, ವಷಿಷ್ಠರು, ಮಹರ್ಷಿಗಳು, ಆಕಾಲ, ಈಕಾಲ ಹೀಗೆ ಎಲ್ಲವನ್ನೂ ಹೇಳಿ ನಮಗೆ ಫಿಲಾಸಫಿಯನ್ನು ಬೋಧನೆ ಮಾಡಿದರು. ನಮ್ಮ ಯಾವುದೇ ಒಂದು ನಿರ್ಧಿಷ್ಟ ಪ್ರಶ್ನೆಗೂ ಅವರು ಸರಿಯಾದ, ಸಮಂಜಸವಾದ ಉತ್ತರವನ್ನು ಕೊಡಲಿಲ್ಲ, ಇರತಕ್ಕ ಎಲ್ಲಾ ಮಂತ್ರಿಗಳ ಪೈಕಿ ಕೇವಲ 2-3 ಜನ ಮಂತ್ರಿಗಳು ಸಮರ್ಥವಾಗಿ ಉತ್ತರವನ್ನು ಕೊಟ್ಟರೂ ಕೂಡ ಇನ್ನು ಮುಂದೆ ಇಂಥಾದ್ದು ಆಗದಂತೆ ಸರಿಪಡಿಸುತ್ತೇವೆ, ಈಗ ಏನೋ ಆಗಿರಬಹುದು. ಆದರೆ ಇನ್ನು ಮುಂದೆ ಇಂಥಾದ್ದು ಮುಂದುವರಿದುಕೊಂಡು ಹೋಗದಂತೆ ನೋಡಿಕೊಳ್ಳುತ್ತೇವೆಂದು ಹೇಳಿದ್ದಾರೆ. ನಾನಾದರೂ ಪ್ರಾಮಾಣಿಕವಾಗಿ ಹೇಳುವುದೇನೆಂದರೆ, ಮಾನ್ಯ ಜೆ.ಹೆಚ್. ಪಟೇಲ್ರವರು ಇರಲಿ, ಅಥವಾ ಹಿಂದಿನ ಮುಖ್ಯ ಮಂತ್ರಿಗಳೇ ಇರಲಿ, ಇಲ್ಲಿರತಕ್ಕ 45 ಜನ ಮಂತ್ರಿಗಳೇ ಇರಲಿ, ಪ್ರತಿಯೊಬ್ಬರೂ ಪ್ರಾಮಾಣಿಕವಾಗಿ ಹೇಳಬೇಕು. ಎಷ್ಟು ಜನ ಮಂತ್ರಿಗಳು ಸರಿಯಾಗಿ ಕೆಲಸ ಮಾಡುತ್ತಿದ್ದಾರೆ, ಅವರವರ ಇಲಾಖೆಯ ಬಗ್ಗೆ ಎಷ್ಟರ ಮಟ್ಟಿನ ಮಾಹಿತಿ ಗೊತ್ತಿದೆ, ಎಂಬುದನ್ನು ಹೇಳಬೇಕು. ಅವರಿಗೆ ಎಲ್ಲ ಮಾಹಿತಿಗಳೂ ಗೊತ್ತಿರಬೇಕು. ಆದರೆ ಈ ರೀತಿಯ ಯಾವುದೇ ಮಾಹಿತಿಯೂ ಗೊತ್ತಿಲ್ಲದೆ, ಕೇವಲ ನಾನು ಮಂತ್ರಿಯಾಗಿದ್ದೇನೆ ಎಂಬ ದೃಷ್ಟಿಯಿಂದ, ನಮ್ಮಲ್ಲಿ ಬಹುಮತ ಇದೆ ಎಂಬ ಒಂದೇ ದೃಷ್ಟಿಯಿಂದ,

ಇವರು ಇರುವುದಾದರೆ ಖಂಡಿತವಾಗಿ ಇವರು ಈ ಸರ್ಕಾರವನ್ನು ನಡೆಸಿಕೊಂಡು ಹೋಗುವುದಕ್ಕೆ ಅರ್ಹರಲ್ಲ ಎನ್ನತಕ್ಕ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇದು 80 ದಿನಗಳ ಅಧಿಕಾರಕ್ಕೆ ಸಂಬಂಧಪಟ್ಟಿದ್ದು. ಡಾ: ರಾಜ್‌ಕುಮಾರ್‌ರವರ ಚಿತ್ರ 100 ದಿನ ನಡೆದಂತೆ ನಡೆಯುತ್ತದೆಯೆ? ಇವರ ಅಧಿಕಾರ 100 ದಿನ ನಡೆಯಬೇಕಾದರೆ ಇನ್ನೂ 20 ದಿನಗಳ ಅವಧಿಯಲ್ಲಿ ಇನ್ನೂ ಏನೇನು ನಡೆಯುತ್ತದೋ ಗೊತ್ತಿಲ್ಲ. ಇವತ್ತಿನ ಅವಿಶ್ವಾಸ ನಿರ್ಣಯದಲ್ಲಿ ನೀವು ಮುಂದೆ ಹೋಗಬಹುದು ಇನ್ನುಳಿದ 20 ದಿನಗಳ ಅವಧಿಯಲ್ಲಿ ನಿಮ್ಮ ಪಕ್ಷದಲ್ಲಿ ಇನ್ನೂ ಏನೇನು ಘಟನೆಗಳು ನಡೆಯಬಹುದೆಂಬ ಭವಿಷ್ಯವನ್ನು ಈಗಲೇ ನಾನು ಹೇಳುವುದಕ್ಕೆ ಹೋಗುವುದಿಲ್ಲ, 100 ದಿನಗಳ ಅವಧಿಯನ್ನು ನೀವು ಪೂರ್ಣವಾಗಿ ಮುಗಿಸುವುದಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ನಿಮ್ಮ ಅನೇಕ ಮಂತ್ರಿಗಳು, ಅನೇಕ ಜನ ಶಾಸಕರು ನಮ್ಮನ್ನು ಗುಟ್ಟಾಗಿ ಭೇಟಿಯಾಗಿ ಏನೇನು ಹೇಳುತ್ತಾರೆ ಎಂಬುದು ನನಗೆ ಗೊತ್ತಿದೆ. ಅವರ ವೇದನೆ ಏನೆಂದು ಯೋಚನೆ ಮಾಡಿದರೆ, ನಿಮ್ಮಲ್ಲಿ ಒಬ್ಬರಲ್ಲೂ ಸರಿಯಾದ ತೂಕವಿಲ್ಲ; ಒಬ್ಬರ - ಮುಖ ಕಂಡರೆ ಇನ್ನೊಬ್ಬರಿಗೆ ಆಗುವುದಿಲ್ಲ, ಅಧಿಕಾರದ ಕುರ್ಚಿ ಉಳಿಸಿಕೊಳ್ಳುವುದಕ್ಕಾಗಿ, ನಾವು ಒಗ್ಗಟ್ಟಾಗಿದ್ದೇವೆಂದು ತೋರಿಸಿಕೊಳ್ಳುವುದಕ್ಕಾಗಿ ಇಲ್ಲಿ ನೀವೆಲ್ಲರೂ ಒಟ್ಟಿಗೇ ಬಂದು ಕೂತುಕೊಂಡಿದ್ದೀರಿ.

ಮಾನ್ಯ ಪ್ರಧಾನ ಮಂತ್ರಿಗಳ ಬಗ್ಗೆ ನಾವೇನಾದರೂ ಹೇಳಿದ ಕೂಡಲೇ ನಮ್ಮ ಮೇಲೆ ಹಾರಿ ಬೀಳುತ್ತೀರಿ. ಆದರೆ ನಿಮ್ಮಲ್ಲಿ ಎಷ್ಟು ಜನ ಮಂತ್ರಿಗಳು ಪರಸ್ಪರ ಐಕಮತ್ಯದಿಂದಿದ್ದೀರಿ? ನಿಮ್ಮ ಜೊತೆ ಎಷ್ಟು ಜನ ಶಾಸಕರು ಐಕಮತ್ಯದಿಂದಿದ್ದಾರೆ ಎಂಬುದನ್ನು ಪ್ರಾಮಾಣಿಕವಾಗಿ ಹೇಳಬೇಕೆಂದರೆ, ಖಂಡಿತವಾಗಿ ನಿಮ್ಮಲ್ಲಿ ಐಕಮತ್ಯವಿಲ್ಲ. ನಾನು ಈ ವಿಚಾರದಲ್ಲಿ ತಮಗೆ ಖಡಾಖಂಡಿತವಾಗಿ ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳೇ ನಿಮ್ಮ ಪದವಿಯನ್ನು ನೀವಾಗಿ ಬಿಟ್ಟು ಕೊಡುವುದು ಒಳ್ಳೆಯದು. ಏಕೆಂದರೆ, ಈಗ ನೀವು ಬಹಳ ಸುಸ್ತಾಗಿ ಹೋಗಿದ್ದೀರಿ. ಕಳೆದ 80 ದಿನಗಳ ನಿಮ್ಮ ಅಧಿಕಾರಾವಧಿಯಲ್ಲಿ ನಿಮ್ಮ ಮಾನಸಿಕ ಹಿಂಸೆ ಎಷ್ಟು ಇದೆ ಎಂಬುದನ್ನು ನಾವು ನೋಡುತ್ತಿದ್ದೇವೆ. ಒಂದೊಂದು ಕಡೆಯಲ್ಲೂ ಒಂದೊಂದು ರೀತಿಯಲ್ಲಿ ನಿಮ್ಮ

ಹೇಳಿಕೆಗಳಿವೆ. ಅದು ಗುಲ್ಬರ್ಗಾದಲ್ಲಿ ಹೇಳಿರುವ ಮಾತಿರಲಿ, ಹುಬ್ಬಳ್ಳಿಯಲ್ಲಿ ಹೇಳಿರುವ ಮಾತಿರಲಿ,

ಹಾಸನದಲ್ಲಿ ಹೇಳಿರುವ ಮಾತಿರಲಿ, ನಿಮ್ಮ ಹೇಳಿಕೆಗಳು ಯಾವ ರೀತಿ ಇವೆ, ನಿಮ್ಮ ಮನಸ್ಸಿನ ತುಮುಲತೆ ಏನಿದೆ ಎಂಬುದನ್ನು ಅದು ತೋರಿಸಿಕೊಡುತ್ತದೆ. ಇಬ್ಬರೂ ಜೊತೆಯಲ್ಲಿ ನಿಂತುಕೊಂಡು ಒಬ್ಬರಿಗೊಬ್ಬರು ಪೇಟಗಳನ್ನು ಇಟ್ಟುಕೊಂಡು, ಒಬ್ಬರಿಗೊಬ್ಬರು ಪರಸ್ಪರ ಸಮಾಧಾನವನ್ನು ಮಾಡಿಕೊಳ್ಳುವುದನ್ನು ಟಿ.ವಿ.ಯಲ್ಲಿ ನಾವು ನೋಡಿದ್ದೇವೆ. ಅದನ್ನು ನೋಡಿದಾಗ ನಮಗೆ ಎಷ್ಟು ಜಿಗುಪ್ಸೆ ಬರುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಕೈಯಲ್ಲಿ ಹಿಂದೆ ಚೂರಿಯನ್ನು ಹಿಡಿದುಕೊಂಡು ಮುಂದುಗಡೆ ಮಾತ್ರ ಒಬ್ಬರಿಗೊಬ್ಬರು ಪೇಟಗಳನ್ನು ಇಡುವುದು. ಈ ರೀತಿ ಪೇಟಗಳನ್ನು ಇಟ್ಟುಕೊಂಡವರು ಏನಾದರೂ ಎಂಬುದನ್ನು ನೋಡಿ. ಎಲ್ಲೆಲ್ಲಿ ಪೇಟ ಇಟ್ಟುಕೊಂಡರು, ಎಲ್ಲೆಲ್ಲಿ ಗದೆ ಕೊಟ್ಟರು, ಎಲ್ಲೆಲ್ಲಿ ಕತ್ತಿ ಕೊಟ್ಟರು, ಅಲ್ಲಲ್ಲೇ ಸರ್ಕಾರಗಳು ಬಿದ್ದು ಹೋದಂಥ ಹಿನ್ನೆಲೆ ಇದೆ. ಅದೇ ರೀತಿ ಇನ್ನೂ 20 ದಿನಗಳ ನಿಮ್ಮ ಮುಂದಿನ ಅಧಿಕಾರಾವಧಿಯಲ್ಲಿ.

ಮಾನ್ಯ ಸದಸ್ಯರು : ವಿಷಯದ ಮೇಲೆ ಮಾತನಾಡಿ.

ಶ್ರೀ ಯು.ಆರ್. ಸಭಾಪತಿ : ಅದನ್ನೇ ಮಾತನಾಡುತ್ತೇನೆ. ಹೆದರಬೇಡಿ. ಎಲ್ಲಾ ಖಾತೆಗಳ ಬಗ್ಗೆಯೂ ಮಾತನಾಡುತ್ತೇನೆ. ಮಾನ್ಯ ಉಪಾಧ್ಯಕ್ಷರೆ, ಈಗ 7.30 ಗಂಟೆ ಆಗಿದೆ. ನಾಳೆ ನಾನು ಎಲ್ಲ ಇಲಾಖೆಗಳ ಬಗ್ಗೆಯೂ ಮಾತನಾಡಬೇಕಾಗಿದೆ.

ಉಪಾಧ್ಯಕ್ಷರು : ನೀವು 8 ಗಂಟೆಯವರೆಗೆ ಮಾತನಾಡಿ. ನಿಮ್ಮ ಭಾಷಣವನ್ನು ಮುಗಿಸಿಬಿಡಿ. ಇನ್ನೂ ಬಹಳ ಜನರು ಮಾತನಾಡುವವರಿದ್ದಾರೆ. 8 ಗಂಟೆಯವರೆಗೂ ತಾವು ಮಾತನಾಡಿ.

ಶ್ರೀ ಯು.ಆರ್. ಸಭಾಪತಿ : ನಾಳೆ ನಾನು ಮುಂದುವರೆಸುತ್ತೇನೆ.

ಉಪಾಧ್ಯಕ್ಷರು : ನೀವು 8 ಗಂಟೆವರೆಗೂ ಮಾತನಾಡಿ. ನಾಳೆ ಮಧ್ಯಾಹ್ನ ಅವರು ಉತ್ತರವನ್ನು ಕೊಡಬೇಕಾಗಿದೆ.

ಶ್ರೀ ಎಂ.ಸಿ. ನಾಣಯ್ಯ : ನಮಗೇನೂ ಸುಸ್ತಾಗಿಲ್ಲ. ನಿಮಗೇನಾದರೂ ಸುಸ್ತು ಆಯಿತೇ?

ಶ್ರೀ ಯು.ಆರ್. ಸಭಾಪತಿ : ನನಗೆ ಖಂಡಿತವಾಗಿ ಸುಸ್ತಾಗಿಲ್ಲ.

ಶ್ರೀ ಎಂ.ಸಿ. ನಾಣಯ್ಯ : ಸುಸ್ತಾಗಿಲ್ಲದಿದ್ದರೆ ಮಾತನಾಡಿ. ನಮಗೆ ಸುಸ್ತಾಗಿಲ್ಲ.

ಶ್ರೀ ಯು.ಆರ್. ಸಭಾಪತಿ : ವಿಧಾನ ಪರಿಷತ್ತಿನಲ್ಲಿ ನೀವು ಬೊಬ್ಬೆ ಹೊಡೆದು ಇಲ್ಲಿಗೆ ಬರುವಾಗಲೇ ನಿಮ್ಮ ಮುಖ ಸುಸ್ತಾಗಿ, ಸಣ್ಣಗಾಗಿದೆ. ನಿಮ್ಮನ್ನು ನೋಡಿದರೆ ಗ್ರಹಚಾರ ಹಿಡಿದಂತಿತ್ತು.

(ಗೊಂದಲ)

ಉಪಾಧ್ಯಕ್ಷರು : ವಿಷಯಕ್ಕೆ ಬನ್ನಿ.

ಶ್ರೀ ಯು.ಆರ್. ಸಭಾಪತಿ : ನಾನು ಏನೇ ಹೇಳಬೇಕಾದರೂ, ನಿಮ್ಮ ಭ್ರಷ್ಟಾಚಾರ, ಲಂಚಗುಳಿತನ, ಸ್ವಜನಪಕ್ಷಪಾತ, ಇತ್ಯಾದಿಯನ್ನು ದೊಡ್ಡ ದೊಡ್ಡ

ಇಲಾಖೆಗಳ ಬಗ್ಗೆ ನಾನು ಹೇಳುವುದಿಲ್ಲ. ಕೇವಲ 5 ಇಲಾಖೆಗಳ ಬಗ್ಗೆ ಅತ್ಯಂತ ಪ್ರಮುಖವಾದ ಮಾತುಗಳನ್ನು ಹೇಳಬಯಸುತ್ತೇನೆ. ಮೊದಲನೆಯದು ಮೀನುಗಾರಿಕಾ ಇಲಾಖೆ, ಎರಡನೆಯದು ಪರಿಸರ ಇಲಾಖೆ, ಮೂರನೆಯದು ಬೃಹತ್ ಕೈಗಾರಿಕಾ ಇಲಾಖೆ ಈ ಮೂರು ಇಲಾಖೆಗಳೂ ಒಟ್ಟಿಗೇ ಸೇರಿಕೊಂಡು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಡಿರತಕ್ಕ ಅನಾಹುತಗಳ ಬಗ್ಗೆ ನಾನು ಕೆಲವು ಪ್ರಾಮಾಣಿಕ ವಿಷಯಗಳನ್ನು ಈ ಸಭೆಯ ಮುಂದೆ ಹೇಳಬಯಸುತ್ತೇನೆ. ನಾಲ್ಕನೆಯದು ತೋಟಗಾರಿಕಾ ಇಲಾಖೆ. ತೋಟಗಾರಿಕಾ ಇಲಾಖೆಯ ಬಗ್ಗೆ ನಾನು ಕಳೆದ ಅಧಿವೇಶನದಲ್ಲಿ ಪ್ರಸ್ತಾಪ ಮಾಡುತ್ತಾ ಬಹಳ ಪ್ರಾಮುಖ್ಯವಾದ ಆರೋಪಗಳನ್ನು ಮಾಡಿದ್ದೆ. ತೋಟಗಾರಿಕಾ ಇಲಾಖೆಯಲ್ಲಿ ಒಬ್ಬ ಗಾರ್ಡನರ್ ಇದ್ದಾನೆ. ಒಬ್ಬ ಲ್ಯಾಬ್ ಅಸಿಸ್ಟೆಂಟ್ ಇದ್ದಾನೆ. ಇವರಿಬ್ಬರ ವೇತನ ಶ್ರೇಣಿಯನ್ನೂ ಒಂದೇ ಶ್ರೇಣಿಯಾಗಿ ಮಾಡಿದ್ದಾರೆ. ಗಾರ್ಡನರ್ ಆಗಿ 20 ವರ್ಷಗಳ ಆ ವ್ಯಕ್ತಿ ಕೆಲಸಕ್ಕೆ ಸೇರಿದ್ದ. ಅವನು ಗಾರ್ಡನರ್ ಆಗಿ ಕೆಲಸಕ್ಕೆ ಸೇರಿದ ದಿನಾಂಕದಿಂದ ಇದುವರೆಗೆ ಅವನಿಗೆ ಅರಿಯರ್ಸ್‌ನ್ನು ಕೊಟ್ಟಿದ್ದಾರೆ. ಆದರೆ ಈ ರೀತಿಯ ಅರಿಯರ್ಸ್ ಸ್ಕ್ಯಾಂಡಲ್ ಬಗ್ಗೆ ಅತಿ ಪ್ರಾಮುಖ್ಯವಾದ ದಾಖಲಾತಿಗಳನ್ನು ಮಾನ್ಯ ಜೆ.ಹೆಚ್. ಪಟೇಲರಿಗೂ, ಮಾನ್ಯ ಜಾಲಪ್ಪನವರಿಗೂ ಕೊಟ್ಟಿದ್ದೆ. ಇವತ್ತು ನಾನಾದರೂ ಕೇಳುತ್ತೇನೆ, ಆ ತೋಟಗಾರಿಕೆ ಇಲಾಖೆಯಲ್ಲಿ ನಡೆದಿರುವಂಥ ಸ್ಕ್ಯಾಂಡಲ್ ಬಗ್ಗೆ ನೀವು ಏನು ತನಿಖೆಯನ್ನು ಮಾಡಿಸಿದಿರಿ? ಏನಾದರೂ ತನಿಖೆ ಮಾಡಿಸಿದಿರಾ? ಸಂಬಂಧಪಟ್ಟ ತಪ್ಪಿತಸ್ಥ ಅಧಿಕಾರಿಯ ವಿರುದ್ಧ ಏನಾದರೂ ಕ್ರಮ ತೆಗೆದುಕೊಂಡಿರಾ? ಕೋಟ್ಯಾಂತರ ರೂ. ಲೂಟಿ ಮಾಡಿದಂಥ ಒಬ್ಬ ಅಧಿಕಾರಿಗೆ ತಕ್ಕ ಶಿಕ್ಷೆಯನ್ನು ಕೊಟ್ಟಿರಾ? ನೀವು ಎನ್ಕ್ವೈರಿ ಕಮಿಟಿಯನ್ನು ಏನಾದರೂ ಮಾಡಿದಿರಾ? ನೀವು ಏನನ್ನೂ ಮಾಡಿಲ್ಲ. ನೀವೇ ಬಂದು ನನ್ನ ಹತ್ತಿರ ಹೇಳಿದಿರಿ. ಸ್ವಾಮಿ, ಅಲ್ಲಿ ಜಾತಿಯ ಪ್ರಶ್ನೆ ಬಂದಿದೆ, ಅಲ್ಲಿ ಒಂದು ರೀತಿಯ ಒತ್ತಡ ಬಂದಿದೆ ಎಂದು ನೀವೇ ನನ್ನ ಹತ್ತಿರ ಬಂದು ಹೇಳಿದ್ದೀರಿ. ಅದು ನನಗೆ ಗೊತ್ತಿದೆ. ನಿಮ್ಮ ಪ್ರಾಮಾಣಿಕತೆ ಎಲ್ಲಿಯವರೆಗೆ ಇದೆ ಎಂಬುದು ನನಗೆ ಗೊತ್ತಿದೆ. ಕೋಟ್ಯಾಂತರ ರೂ. ಲೂಟಿ ಮಾಡಿದಂಥ ತೋಟಗಾರಿಕಾ ಇಲಾಖೆಯ ಹಗರಣ ಏನಿದೆ.....

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಖಾಸಗಿಯಾಗಿ ಮಾತನಾಡಿರುವಂಥ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿ ಹೊಸ ಸಂಪ್ರದಾಯವನ್ನು ಸೃಷ್ಟಿ ಮಾಡುವುದಾದರೆ ಇದು ಸರಿಯಲ್ಲ. ಆದರೆ ಸತ್ಸಂಪ್ರದಾಯಗಳನ್ನು ಈ ಸದನದಲ್ಲಿ ಮಾಡುವಂಥದ್ದು ಒಂದು ಪರಿಪಾಠ ಇದೆ. ತಾವು ಹೊಸಬರು. ಖಾಸಗಿಯಾಗಿ ಯಾವುದೋ ಸಂದರ್ಭದಲ್ಲಿ ಆಡಿದಂಥ ಮಾತುಗಳನ್ನು ಇಲ್ಲಿ ಉದಾಹರಿಸುವುದು ಸರಿಯಾದುದಲ್ಲ.

ಶ್ರೀ ಯು.ಆರ್. ಸಭಾಪತಿ : ಇದು ರಾಜಕೀಯದ ಪ್ರಶ್ನೆ ಅಲ್ಲ. ಅನೇಕ ರೀತಿಯ ಒತ್ತಡಗಳಿಂದಾಗಿ ನಾನು ಏನನ್ನೂ ಮಾಡುವುದಕ್ಕಾಗಲಿಲ್ಲ ಎಂಬುದನ್ನು ಅವರೇ ಒಪ್ಪಿಕೊಂಡಿದ್ದಾರೆ. ನಾನು ಹೇಳಿದ ವಿಚಾರದಲ್ಲಿ ಇದುವರೆಗೂ ಅವರು ಯಾವುದೇ ರೀತಿಯ ತನಿಖೆಯನ್ನೂ ಮಾಡಿಸಿಲ್ಲ. ಕೋಟ್ಯಾಂತರ ರೂ. ಲೂಟಿ ಮಾಡಿದಂಥ ಅಧಿಕಾರಿಯ ವಿರುದ್ಧ ನೀವು ಯಾವುದೇ ಕ್ರಮವನ್ನೂ ತೆಗೆದುಕೊಂಡಿಲ್ಲ. ಆ ಹಗರಣದ ವಿಚಾರದಲ್ಲಿ ನೀವು ತನಿಖೆಯನ್ನೂ ಪ್ರಾರಂಭಿಸಿಲ್ಲ. ತನಿಖೆಯನ್ನು ಮಾಡಲೇ ಇಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇಲ್ಲಿ ತೋಟಗಾರಿಕಾ ಇಲಾಖೆಯ ಮಂತ್ರಿಗಳಿದ್ದಾರೆ, ಅವರೇ ಹೇಳಲಿ. ಅವರು ಏನು ತನಿಖೆ ಮಾಡಿಸಿದ್ದಾರೆಂಬುದನ್ನು ತೋರಿಸಲಿ.

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕಾ ಖಾತೆ ಸಚಿವರು) : ರೀ ಪ್ಯಾಟ್ರಿಯೇಷನ್ಗೆ ಸಂಬಂಧಪಟ್ಟಂತೆ ಹೇಳುತ್ತಿದ್ದೀರಿ? ಸ್ಯಾಲರಿಯ ಬಗ್ಗೆ ....

ಶ್ರೀ ಯು.ಆರ್. ಸಭಾಪತಿ : ಅರಿಯರ್ಸ್ಗೆ ಸಂಬಂಧಪಟ್ಟಂತೆ... ಒಂದೇ ದಿನದಲ್ಲಿ ಪ್ರೊಮೋಷನ್ ಕೊಟ್ಟಿದ್ದರ ಬಗ್ಗೆ.

ಶ್ರೀ ಡಿ.ಟಿ. ಜಯಕುಮಾರ್ : ಆ ರೀತಿ ಒಂದೇ ಸಾರಿ ಕ್ರಮ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಅದರ ಬಗ್ಗೆ ಡಿಪಾರ್ಟ್ಮೆಂಟ್ನಿಂದ ಎನ್ಕ್ವೈರಿ ನಡೆಯುತ್ತಿದೆ. ಅವರಿಂದ ರಿಪೋರ್ಟ್ ಬಂದಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಯು.ಆರ್. ಸಭಾಪತಿ : ನಾನು ಹೇಳಿದ್ದು ಇಷ್ಟು ದೊಡ್ಡ ಹಗರಣ, ಕೋಟ್ಯಾಂತರ ರೂಪಾಯಿ ಲೂಟಿ ಆದಾಗ ನೀವು ಇಲಾಖಾ ತನಿಖೆ ನಡೆಯುತ್ತಿದೆ ಎಂದು ಹಾರಿಕೆ ಉತ್ತರ ಕೊಡುವುದಕ್ಕಾಗುವುದಿಲ್ಲ. ಸಂಬಂಧಪಟ್ಟ ಅಧಿಕಾರಿಯನ್ನು ಅಮಾನತ್ತಿನಲ್ಲಿಡಬೇಕೆಂದು ನಾನು ಹೇಳಿದ್ದೆ. ಪ್ರಾರಂಭಿಕವಾಗಿ ಅದರಲ್ಲಿ ಬಂದಿರತಕ್ಕ ಆರೋಪಗಳು ಮೇಲ್ನೋಟಕ್ಕೆ ಸಾಬೀತು ಆದಾಗ ನೀವು ಸಂಬಂಧಪಟ್ಟ ಅಧಿಕಾರಿಯನ್ನು 'ಅಮಾನತ್ತಿನಲ್ಲಿಟ್ಟು ಆಮೇಲೆ ತನಿಖೆ ನಡೆಸಬೇಕು. ಅದನ್ನು ನೀವು ಮಾಡಲಿಲ್ಲ. ಅದನ್ನು ನಾನು ಹೇಳುವುದು. ಇಲಾಖಾ ತನಿಖೆ ನಡೆಯುತ್ತಿದೆ ಎಂದು ಪ್ರತಿಯೊಂದಕ್ಕೆ ನೀವು ಇಲಾಖಾ ತನಿಖೆ ಮಾಡಿದರೆ ಹೇಗೆ? ಕೆ.ಎಸ್.ಆರ್.ಟಿ.ಸಿ. ಸ್ಕ್ಯಾಂಡಲ್ ಬಗ್ಗೆ ನಾನು ಹೇಳಿದೆ. ಅದಕ್ಕೂ ಇಲಾಖಾ ತನಿಖೆ ನಡೆಯುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳನ್ನು ಅಲ್ಲೇ ಇರಿಸಿ ನೀವು ಇಲಾಖಾ ತನಿಖೆ ಮಾಡುವುದೇ? ಇದು ಯಾವ ರೀತಿ ನ್ಯಾಯ? ಇದರಲ್ಲಿ ನ್ಯಾಯ ಸಿಗುತ್ತದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಬಹಳ ದುಃಖದಿಂದ ಮತ್ತು ನೋವಿನಿಂದ ಈ ಮಾತು ಹೇಳುತ್ತಿದ್ದೇನೆ. ಇವತ್ತು ಅನೇಕ ಸಂದರ್ಭಗಳಲ್ಲಿ ನಾವು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಲೇ ಬೇಕು ಎಂದು ಹೇಳುವುದರಲ್ಲಿ ವೆಸ್ಟೆಡ್ ಇಂಟರೆಸ್ಟ್ ಇರುತ್ತದೆ. ಅದರಲ್ಲಿ ಜಾತೀಯತೆ, ಹಣದ್ದು ಮತ್ತೊಂದು ಇರುವುದಿಲ್ಲವೆಂದು ಇಲ್ಲಿ ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ನಮ್ಮ ಸಾಮಾಜಿಕ ವ್ಯವಸ್ಥೆ ಹಾಗಿದೆ ಆಳುವ ಪಕ್ಷ ಎಂದು ನಮಗೆ ಡಿಸ್ಕ್ರಿಷನ್ ಇಲ್ಲವೇ? ಇವರು ಹೇಳುತ್ತಿದ್ದಾರೆ, ಕೆ.ಎಸ್.ಆರ್.ಟಿ.ಸಿ ಬಗ್ಗೆ ನಾನು ದೊಡ್ಡ ಹಗರಣವನ್ನು ಹೊರಗಡೆ ತಂದೆ ಎಂದು. ಯಾರು ತಂದವರು? ನಮ್ಮ ಸಹೋದ್ಯೋಗಿಯಾದಂಥ ಶ್ರೀಮಾನ್ ಬೀಳಗಿಯವರು ಅವತ್ತಿನ ಮುಖ್ಯ ಮಂತ್ರಿಗಳಿಗೆ ಒಬ್ಬ ಉನ್ನತ ಮಟ್ಟದ ಐ.ಎ.ಎಸ್. ಅಧಿಕಾರಿಯ ಬಗ್ಗೆ ಆಪಾದನೆ ಮಾಡಿ ಕಾಗದ ಬರೆದಿದ್ದರು. ಅದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಸಿಓಡಿ ತನಿಖೆ ಮಾಡಿದ್ದಾರೆ. ಆ ಐಎಎಸ್ ಅಧಿಕಾರಿ ಅಲ್ಲಿ ವಿ.ಸಿ. ಅಂಡ್ ಎಂ.ಡಿ ಆಗಿಲ್ಲ. ನಾವೇನೂ ಇಲ್ಲ ಸುಮ್ಮನೆ ಕುಳಿತುಕೊಂಡಿಲ್ಲ. ನಾವು ಕೆಲಸ ಮಾಡುತ್ತಿದ್ದೇವೆ, ನಮಗೂ ಜವಾಬ್ದಾರಿ ಇದೆ. ಕೋಟ್ಯಾಂತರ ರೂಪಾಯಿ ಅಂದರೆ ಏನು 150 ಕೋಟಿ ರೂಪಾಯಿಗಳನ್ನು ಕ್ಲರ್ಕ್ ಹೊಡೆದುಬಿಟ್ಟನೇ? ಅದನ್ನು ಅವರು ಹೇಳಿದ್ದಾರೆ. ಇಲಾಖಾ ತನಿಖೆ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ನಾನು ಹೇಳುತ್ತೇನೆ ಸ್ವಾಮಿ ನೀವು ಈ ರೀತಿ ಇನ್ಸಿಸ್ಟ್ ಮಾಡಬೇಕಾಗಿದ್ದರೆ ವೆಸ್ಟೆಡ್ ಇಂಟರೆಸ್ಟ್ ಇರಬಹುದು. I can also make that allegation. ಏಕೆ ಇರಬಾರದು

(ಗೊಂದಲ)

ಶ್ರೀ ಯು.ಆರ್. ಸಭಾಪತಿ : ಅದನ್ನು ನಾನು ಒಪ್ಪುವುದಿಲ್ಲ. ಇದು ಸರಿಯಲ್ಲ. ನನ್ನ ಯಾರೂ ಸಂಬಂಧಿಕರು, ಜಾತಿಯವರು ಇದರಲ್ಲಿ ಇಲ್ಲ. ನೀವು ಆ ಮಾತು ಸುಮ್ಮನೆ ಹೇಳಬೇಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಿಂಧ್ಯ ಅದರ ಬಗ್ಗೆ ನಮಗೆ ಗೌರವ ಇದೆ. ಆದರೆ ಅವರು ಆದೇಶದಲ್ಲಿ ಆ ರೀತಿ ಮಾತನಾಡಬಾರದು. ಅದು ಸರಿಯಲ್ಲ. ಅದು ರೆಕಾರ್ಡಿಗೆ ಹೋಗುವುದು ಬೇಡ.

SRI P.G.R. SINDHIA : It should be on records. It is not unparliamentary. I stand by that conviction. It is my conviction. I know the instances. I can quote several instances. I have been a Minister for seven years.

ಶ್ರೀ ಕೆ.ಎಸ್. ಈಶ್ವರಪ್ಪ : ವಿರೋಧ ಪಕ್ಷದಲ್ಲಿದ್ದಾಗ ಅನೇಕ ಆಪಾದನೆಗಳನ್ನು ಮಾಡಿದ್ದರಲ್ಲಾ? ಆಗಲೂ ಇದೇ ರೀತಿ ಆಸೆ ಇಟ್ಟುಕೊಂಡು ಮಾಡಿದ್ದೀರೋ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಹೌದು ಮಾಡಿದ್ದೇನೆ. ಅದು ನಿಮ್ಮ ಅಭಿಪ್ರಾಯ.

ಶ್ರೀ ಕೆ.ಎಸ್. ಈಶ್ವರಪ್ಪ : ತನಿಖೆ ಮಾಡಿಸಿ ಎಂದು ಹೇಳಿದಿರಿ? ಅಲ್ಲಿಯೂ ವೆಸ್ಟೆಡ್ ಇಂಟರೆಸ್ಟ್ ಇರಬಹುದು.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ನೀವು ಹೇಳಿದ ಮೇಲೆ ನಾನು ಗೆದ್ದು ಬಂದಿರುವುದು. ನೀವು ಇವೆಲ್ಲಾ ಹೇಳಿ, ಎಲ್ಲಾ ಆಪಾದನೆಗಳನ್ನು ಮಾಡಿದ ಮೇಲೆಯೇ ನಾನು ಗೆದ್ದು ಬಂದಿರುವುದು.

ಶ್ರೀ ಸಿದ್ಧರಾಮಯ್ಯ : ನೀವು ಹೇಳಿದ ತಕ್ಷಣ ಒಬ್ಬ ಅಧಿಕಾರಿಯನ್ನು ಸಸ್ಪೆಂಡ್ ಮಾಡಿಬಿಡುವುದು ಸರಿಯೆ? ಅದಕ್ಕೆ ಕಾನೂನು ಕಟ್ಟಲೆ ಏನೂ ಇಲ್ಲವೆ? ವಿಚಾರಣೆ ಮಾಡುತ್ತಿದ್ದೇವೆ ಎಂದರೆ, ಎಷ್ಟು ದಿನ ವಿಚಾರಣೆ ಮಾಡುವುದು, ಯಾವಾಗ ಶಿಕ್ಷೆ ಮಾಡುವುದು ಎಂದು ಕೇಳಿದರೆ ಉತ್ತರ ಹೇಳುವುದಕ್ಕಾಗುತ್ತದೆಯೇ?

ಶ್ರೀ ಕೆ.ಎಸ್. ಈಶ್ವರಪ್ಪ : ಇದೇ ರೀತಿ ಮಾಡಿದ್ದು ನಿಜವೆಂದು ಒಪ್ಪಿಕೊಂಡಿದ್ದಾರೆ. ಮಂತ್ರಿಯಾಗುವುದಕ್ಕೆ ಯೋಗ್ಯತೆ ಇಲ್ಲದಿದ್ದರೆ ರಾಜೀನಾಮೆ ಕೊಟ್ಟುಹೋಗು....

(ಗೊಂದಲ)

ಅದನ್ನು ಅವರು ಒಪ್ಪಿಕೊಂಡಿದ್ದಾರೆ. ನನ್ನ ಕಾಲದಲ್ಲಿ ಹಾಗೆ ಮಾಡಿದ್ದು ಎಂದು ಒಪ್ಪಿಕೊಂಡಿರಬೇಕಾದರೆ ರಾಜೀನಾಮೆ ಕೊಟ್ಟು ಹೋಗಲಿ. ಅವರಿಗೆ ಮಂತ್ರಿಯಾಗಿರುವುದಕ್ಕೆ ಯೋಗ್ಯತೆ ಇಲ್ಲ.

ಶ್ರೀ ಸಿದ್ಧರಾಮಯ್ಯ : ತಪ್ಪಿತಸ್ಥರಿಗೆ ಕಾನೂನು ಚೌಕಟ್ಟಿನಲ್ಲಿ ವಿಚಾರಣೆ ಮಾಡಿ ಶಿಕ್ಷೆ ಮಾಡಬೇಕಾಗುತ್ತದೆ. ಆರೋಪ ಮಾಡಿದ ತಕ್ಷಣ ಶಿಕ್ಷೆ ಕೊಡುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಏನಾಯಿತೆಂದರೆ, ಮಾನ್ಯ ಸಿಂಧ್ಯ ಅವರು ನಮ್ಮ ಜೊತೆಯಲ್ಲೇ ವಿರೋಧ ಪಕ್ಷದಲ್ಲಿದ್ದರು. ಇಂಥದ್ದು ಅನೇಕ ಸಾರಿ ಇಲ್ಲಿ ಚರ್ಚೆ ನಡೆದಿದೆ, ಅವರು ಮಾತನಾಡಿದ್ದಾರೆ, ನೇರವಾಗಿ ಆಪಾದನೆ ಮಾಡಿದ್ದಾರೆ. ಆದರೆ ಸದನ ಆ ರೀತಿ ಮಾಡಿಕೊಂಡು ಹೋಗುವುದಕ್ಕಾಗುವುದಿಲ್ಲ. ನಿಮ್ಮದು ಏನು

ಹಿತಾಸಕ್ತಿ ಇದೆ. ನಮ್ಮದು ಏನು ಇದೆ ಎಂದು ಆ ರೀತಿ ಮಾಡಿಕೊಂಡು ಹೋದರೆ ನಾವು ಎಲ್ಲಿ ಹೋಗಿ ತಲುಪೋಣ? ಮಾನ್ಯ ಸಿದ್ಧರಾಮಯ್ಯನವರು ನೀವು ಹೇಳಿದ ತಕ್ಷಣ ಮಾಡುವುದಕ್ಕಾಗುತ್ತದೆಯೇ ಅಂದರು. ಮಾಡಿ ಎಂದು ನಾವು ಹೇಳುತ್ತೇವೆ. ಮಾಡುವುದು ಬಿಡುವುದು ನಿಮಗೆ ಸೇರಿದ್ದು ಅಲ್ಲವೆ? ನಿಮಗೆ ಏನು ಇದೆ ಅದು ಮಾಡಿ.

ಶ್ರೀ ಸಿದ್ಧರಾಮಯ್ಯ : ಕಾನೂನು ಪ್ರಕಾರ ಮಾಡಬೇಕೇ ಬೇಡವೇ?

ಶ್ರೀ ವಾಟಾಳ್ ನಾಗರಾಜ್ : ಹೀಗೆ ಸಿಟ್ಟು ಮಾಡಿಕೊಂಡು ಆಕಾಶ ಭೂಮಿಗೆ ಇಳಿದರೆ ಪರಿಸ್ಥಿತಿ ಏನು, ಆದುದರಿಂದ ಹೇಳುತ್ತಿದ್ದೇನೆ, ನಿಮಗೆ ಏನು ಹಿತಾಸಕ್ತಿ ಇದೆ ಎಂದರೆ ಹಿತಾಸಕ್ತಿ ಬಗ್ಗೆ ಅಲ್ಲ, ಹಾಗಾದರೆ ಇಲ್ಲಿ ಏನೂ ಮಾತನಾಡುವ ಹಾಗೆ ಇಲ್ಲ, ಬಿಡಿ ಯಾವುದೂ ಮಾತನಾಡುವ ಹಾಗೆ ಇಲ್ಲ. ಏಕೆಂದರೆ ನಾವು ಏನು ಮಾತನಾಡಿದರೂ ಹಿತಾಸಕ್ತಿ ಇರುತ್ತದೆ ಎಂದು ಹೇಳುತ್ತಾರೆ ಆದುದರಿಂದ ನಾವು ಏನೂ ಮಾತನಾಡುವ ಹಾಗೆ ಇಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಕ್ರಿಮಿನಲ್ ಲಾ ಪ್ರಕಾರ ಯಾರಾದರೂ ಸುಳ್ಳು ಕೇಸು ಹಾಕಿದರೆ, ಸುಳ್ಳು ಕೇಸು ಹಾಕಿದವನ ಮೇಲೆ ಕೋರ್ಟ್ನ ಶಿಕ್ಷೆ ಮಾಡಬಹುದು. ಇಲ್ಲಿ ಸದನದಲ್ಲಿ ಆ ಪ್ರೊಸೀಜರ್ ಇಲ್ಲ ಮಾಡುವುದಕ್ಕೆ ಬರುವುದಿಲ್ಲ ಇಲ್ಲಿ ಪ್ರತಿಯೊಬ್ಬ ಸದಸ್ಯರು ಏನಾದರೂ ಆಪಾದನೆ ಮಾಡಬೇಕಾದರೆ ವಿಚಾರ ಮಾಡಿ ಮಾಡಬೇಕು. ಕೋಟ್ಯಾಂತರ ರೂಪಾಯಿಗಳ ಲೂಟಿ ಮಾಡಿದ್ದಾನೆ, ಅವನಿಗೆ ಶಿಕ್ಷೆ ಆಗಿಲ್ಲವೆಂದರೆ .... ಅದಕ್ಕೆ ನಾವು ವಿಚಾರಣೆ ನಡೆಸುತ್ತಿದ್ದೇವೆಂದರೂ ರಾಜೀನಾಮೆ ಕೊಟ್ಟು ಹೋಗಿ ಎಂದರೆ ... ಏನು ಅರ್ಥ? ಮಂತ್ರಿಗಳಿಗೆ ಹೇಗೆ ಜವಾಬ್ದಾರಿ ಇದೆ ಉತ್ತರ ಕೊಡುವುದಕ್ಕೆ ಹಾಗೆಯೇ ಸದಸ್ಯರೂ ಸಹ ಆಧಾರವಲ್ಲದ ಆರೋಪಗಳನ್ನು ಮಾಡಬಾರದು. ಅದನ್ನು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ತೋಟಗಾರಿಕೆ ಇಲಾಖೆಯ ಬಗ್ಗೆ ಸುಮಾರು ಒಂದು ವರ್ಷದ ಹಿಂದೆ ರೈಸ್ಮಾಡಿದ್ದೆ. ಚಿಕ್ಕನಹಳ್ಳಿಯಲ್ಲಿ ಶೈತ್ಯಾಗಾರ ಕಟ್ಟುವ ವಿಷಯದಲ್ಲಿ ಡೆಪ್ಯುಟಿ ಡೈರೆಕ್ಟರ್ ಲೆವೆಲ್ನ ಆಫೀಸರ್ 7-8 ಲಕ್ಷ ರೂಪಾಯಿ ಹಣ ದುರುಪಯೋಗ ಮಾಡಿದ್ದಾರೆ. ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಿದ್ದೀರಿ ಎನ್ನುವುದು ಪ್ರಶ್ನೆ. ಒಂದು ವರ್ಷದಿಂದ ಏನೂ ಕ್ರಮ ತೆಗೆದುಕೊಳ್ಳಲ್ಲಿವೆಂದರೆ ಏನು ಅರ್ಥ? ಒಂದು ವರ್ಷದಿಂದ 7-8 ಲಕ್ಷ ರೂಪಾಯಿ ದುರುಪಯೋಗವಾಗಿದೆ.

ಶ್ರೀ ಡಿ.ಟಿ. ಜಯಕುಮಾರ್ : ಆ ಅಧಿಕಾರಿಯನ್ನು ಸಸ್ಪೆಂಡ್ನಲ್ಲಿಟ್ಟಿದ್ದೇವೆ.

ಉಪಾಧ್ಯಕ್ಷರು : ಅವರು ಕ್ರಮ ತೆಗೆದುಕೊಂಡಿದ್ದಾರೆ. ನೀವು ಮುಂದುವರಿಸಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಸರ್ಕಾರದ ಜವಾಬ್ದಾರಿ ಬಗ್ಗೆ ಸರ್ಕಾರದ ಹೊಣೆಗಾರಿಕೆ ಬಗ್ಗೆ ನಾನು ಕೇಳುತ್ತಿದ್ದೇನೆ. ಹಣ ಕಳವು ಮಾಡಿದ್ದಕ್ಕೆ ಕ್ರಿಮಿನಲ್ ಮೊಕದ್ದಮೆ ಬೇಡವೆ?, ತಪ್ಪು ಮಾಡಿದ್ದಾನೆಂದರೆ ಸಸ್ಪೆಂಡ್ ಮಾಡಿದರೆ ಮುಗಿಯಿತೇ? ಕ್ರಿಮಿನಲ್ ಆಕ್ಷನ್ ತೆಗೆದುಕೊಳ್ಳುವುದು ಬೇಡವೇ?

ಶ್ರೀ ಯು.ಆರ್. ಸಭಾಪತಿ : ಗೌರವಾನ್ವಿತ ಸಾರಿಗೆ ಸಚಿವರು ಒಂದು ಮಾತು ಹೇಳಿದರು. ಏನು ಮಾನ್ಯ ಸದಸ್ಯರು ದೊಡ್ಡ ಹಗರಣ ತಂದಿದ್ದರು ಅದು ಅವರದೇ ಒಂದು ಸಾಧನೆ ನಮ್ಮ ಮಾನ್ಯ ಮಂತ್ರಿಗಳು ಬರೆದಿದ್ದನ್ನು ಅವರು ಹೇಳಿದ್ದಾರೆಂದು ಹೇಳಿದರು. ಐಎಎಸ್ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕೆಂದು ಹೇಳಿದ್ದಾರೆ.

ಅವರು ಏನು ಹೇಳುತ್ತಿದ್ದಾರೆಂದರೆ ಸಾರಿಗೆ ಮಂತ್ರಿಗಳಾಗಿದ್ದಂಥ ಶ್ರೀ ಬೀಳಗಿಯವರು ಮುಖ್ಯ ಮಂತ್ರಿಗಳಿಗೆ ಒಂದು ಪತ್ರ ಬರೆದಿದ್ದಾರೆಂದು ಹೇಳಿದರು. ಇಂಥ ಮೂರು ಜನ ಅಧಿಕಾರಿಗಳು ಎಂದು ಸ್ಪೆಸಿಫಿಕ್ ಆಗಿ ಮೆನೆಷನ್ ಮಾಡಿದ್ದಾರೆ. ಮ್ಯಾನೇಜರ್ (ಪ್ರೊಡಕ್ಷನ್) ಮ್ಯಾನೇಜರ್ (ಪರ್ಚೇಸಿಂಗ್) ಮತ್ತು ಕಂಟ್ರೋಲರ ಎಂದು ಮೂರು ಜನರನ್ನು ಅವರು ಹೇಳಿದ್ದಾರೆ. ಈ ಮೂರು ಜನರನ್ನು ಅಮಾನತ್ತಿನಲ್ಲಿಡಬೇಕು. ಇಲ್ಲದಿದ್ದರೆ ಅವರನ್ನು ಯಾವುದೇ ಅನ್ ಎಕ್ಸಿಕ್ಯೂಟೀವ್ ಪೋಸ್ಟ್‌ಗೆ ಹಾಕಬೇಕೆಂಬ ಮಾತನ್ನು ಸ್ಪಷ್ಟವಾಗಿ ಉಲೇಖ ಮಾಡಿ ಮುಖ್ಯ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. ಅದನ್ನೇ ನಾನು ಹೇಳುವುದು. ನಾನು ಹೇಳಿದ್ದನ್ನು ನೀವು ಮಾಡುವುದು ಬೇಡ. ಸಿಓಡಿ ತನಿಖೆ ಮಾಡಬೇಕು. ವಿರೋಧ ಪಕ್ಷದ ನಾಯಕರು, ಶಾಸಕರು ಹೇಳಿದ್ದನ್ನೇ ನೀವು ಮಾಡಬೇಕೆಂದು ಅಲ್ಲ.

ಒಬ್ಬ ಜವಾಬ್ದಾರಿಯುತ ನಿಮ್ಮ ಸಚಿವ ಸಂಪುಟದಲ್ಲಿರತಕ್ಕ ಒಬ್ಬ ಮಂತ್ರಿ ತನ್ನ ಖಾತೆಯಲ್ಲಿರತಕ್ಕ ಮೂರು ಜನ ಅಧಿಕಾರಿಗಳು ಭ್ರಷ್ಟರು ಇದ್ದಾರೆ, ಅವರನ್ನು ಅಮಾನತ್ತಿನಲ್ಲಿಡಬೇಕು, ಇಲ್ಲದಿದ್ದರೆ ಅನ್ ಎಕ್ಸಿಕ್ಯೂಟೀವ್ ಪೋಸ್ಟ್‌ಗೆ ಹಾಕಬೇಕೆಂದು ಅವರು ಬರೆದದ್ದು. ಅದನ್ನು ನಾನು ಇನ್ಸಿಸ್ಟ್ ಮಾಡುವುದು. ನಾನು ಹೇಳಿದ್ದುದನ್ನು ಕೇಳುವುದು ಬೇಡ.. ನಾನು ಹೊಸಬ, ನನಗೆ ಏನೂ ಗೊತ್ತಿಲ್ಲ. ಆದರೂ ಏನೋ ಗೊತ್ತಿದ್ದ ಮಟ್ಟಿಗೆ ಇಲ್ಲಿ ಪ್ರಸ್ತಾವನೆ ಮಾಡುತ್ತೇನೆ. ಪ್ರಸ್ತಾವನೆ ಮಾಡಿದ್ದು ಯಾವುದರ ಆಧಾರದ ಮೇಲೆ? ನನ್ನಷ್ಟಕ್ಕೆ ನಾನು ಬರೆದುಕೊಂಡು ಇಲ್ಲಿ ಬಂದದ್ದು ಅಲ್ಲ. ಅವರ ಪತ್ರದಲ್ಲಿ ಏನಿದೆ ಎಂದು ಓದಿ ಹೇಳಿದ್ದೇನೆ.

ಒಬ್ಬ ಮಂತ್ರಿ ತನ್ನ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕೆಂದು ಬರೆದ ಮೇಲೆ ನೀವು ಅವರನ್ನು ಸಸ್ಪೆಂಡ್ ಮಾಡದೆ ಅವರನ್ನು ಅಲ್ಲಿಯೇ ಇಟ್ಟುಕೊಂಡು ತನಿಖೆ ಮಾಡುತ್ತೇವೆಂದರೆ ಇದು ಏನು ಸೋಜಿಗ ಎಂಬುದು ನನ್ನ ಪ್ರಶ್ನೆ. ಆದುದರಿಂದ ದಯವಿಟ್ಟು ಅಂಥ ಮಾತುಗಳನ್ನು ಹೇಳಬಾರದು. ಸ್ಥಾಪಿತ ಹಿತಾಸಕ್ತಿ ಇರಬಹುದು. ಆದರೆ ಅವರ ಮೇಲೆ ಕೇಸು ಹಾಕುವುದಕ್ಕೆ ನಾವು ಅಂಥವಕ್ಕೆ ಬರುವುದಿಲ್ಲ. ನಾವು ಹೊಸಬರು. ನಿಮ್ಮ ಹಾಗೆ 15-20 ವರ್ಷ ಆಗಿದ್ದರೆ ನಮಗೆ ಸ್ವಲ್ಪ ಸ್ಥಾಪಿತ ಹಿತಾಸಕ್ತಿ ನಮಗೆ ಬರುತ್ತಿತ್ತು. ನಮಗೆ ಒಂದೂವರೆ ವರ್ಷವಾಯಿತು. ಇನ್ನೂ ಬರಲಿಕ್ಕೆ ತುಂಬಾ ಹೊತ್ತು ಇದೆ. ನಿಮಗೆಲ್ಲಾ ಸ್ಥಾಪಿತ ಹಿತಾಸಕ್ತಿ ಬಂದಿರಬಹುದು. ಸ್ಥಾಪಿತ ಹಿತಾಸಕ್ತಿಯ ಮೇಲೆ ಒಬ್ಬನನ್ನು ವರ್ಗ ಮಾಡುವುದು ಇದ್ದರೆ, ಒಬ್ಬನ ಮೇಲೆ ತನಿಖೆ ಹಾಕುವುದು ಇದ್ದರೆ ಸ್ಥಾಪಿತ ಹಿತಾಸಕ್ತಿ ಬರಬಹುದು. ಅದು ಇಲ್ಲವೆಂದು ಹೇಳುವುದಿಲ್ಲ. ನಾವು ಮೊನ್ನೆ ಮೊನ್ನೆ ಬಂದವರು ನಮ್ಮ ಹತ್ತಿರ ಅಂಥದ್ದು ಹತ್ತಿರ ಬರಲಿಕ್ಕೆ ಇಲ್ಲ. ಸಧ್ಯಕ್ಕಂತೂ ಬರುವುದಿಲ್ಲ. ಅದಕ್ಕೋಸ್ಕರ ನೀವು ನಮ್ಮನ್ನು ಹಿಡಿದುಕೊಂಡು ಇಲ್ಲಿ ನೀವು ಹೊಸಬರು, ಸದನಕ್ಕೆ ವಿರುದ್ಧವಾಗಿ ಮಾತನಾಡುತ್ತೀರಿ ಎಂದು ಆ ರೀತಿ ಮಾತನಾಡುವುದು ಸರಿಯಲ್ಲ. ನಿಮ್ಮ ಸರ್ಕಾರದಲ್ಲಿ ಆಗತಕ್ಕ ಅನಾಹುತಗಳನ್ನು ಆಧಾರಸಹಿತವಾಗಿ ನಾನು ಈ ಸದನದಲ್ಲಿ ಮಂಡಿಸಿದ್ದೇನೆ. ಇನ್ನೂ ಮಂಡಿಸುತ್ತೇನೆ.

7.40 ಪಿ.ಎಂ

ಆ ದಿವಸ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್ ಬಗ್ಗೆ ನಾನೇನೂ ಪುರಾವೆ ಇಲ್ಲದೆ ಮಾಡಿದ್ದಲ್ಲ. ಸಾರ್ 30 ರಿಂದ 40 ಆರ್ಡರ್ ಷೀಟ್ಗಳನ್ನು ಹಿಡಿದುಕೊಂಡು ಬಂದಿದ್ದೇನೆ. ಇವರ ಅರಿಯರ್ಸ್ ಸ್ಕ್ಯಾಂಡಲ್ ಏನಿದೆ, ಒಬ್ಬನಿಗೆ ಪ್ರೊಮೋಷನ್ ಎಲ್ಲಿತನಕ ಅಂದರೆ ಗಾರ್ಡನರ್‌ನಿಂದ ಡೈರೆಕ್ಟ್ ಹಾರ್ಟಿಕಲ್ಚರ್ ಅಸಿಸ್ಟೆಂಟ್ವರೆಗೆ ಎರಡು ಪ್ರೊಮೋಷನನ್ನು ಒಂದೇ

ದಿವಸಕ್ಕೆ ಕೊಟ್ಟಂಥ ಆರ್ಡರಿನ ಕಾಪಿಯನ್ನು ಈ ಸದನದಲ್ಲಿ ನಮ್ಮ ಜಾಲಪ್ಪನವರಿಗೆ ಕೊಟ್ಟಿದ್ದೆ. ಆಗ ನೀವು ಇರಲಿಲ್ಲ. ಅದೇ ದಿವಸ ರಾತ್ರಿ, ಕುಳಿತುಕೊಂಡು ಅದರ ಮುನ್ನಾದಿನ ರಾತ್ರಿ ಇಡೀ ದಿವಸ ಕುಳಿತುಕೊಂಡು ಸಾಧಾರಣ 50-60 ಆರ್ಡರ್ಗಳನ್ನು ಅದೇ ಅಧಿಕಾರಿ ಕ್ಯಾನ್ಸಲ್ ಮಾಡಿಸಿದ್ದಾರೆ ಸ್ವಾಮಿ. ಅವರೆಲ್ಲಾ ಹೋಗಿ ಕೋರ್ಟಿನಿಂದ ಸ್ಟೇ ತೆಗೆದುಕೊಂಡು ಬಂದಿದ್ದಾರೆ. ಈಗ ನಿಮ್ಮ ಆರ್ಡರಿನ ಮೇಲೆ ಕೋರ್ಟಿನಿಂದ ಸ್ಟೇ ತೆಗೆದುಕೊಂಡು ಬಂದಿದ್ದಾರೆ. ಆಗಿದೆ. ನೀವು ಇಲ್ಲ ಎಂದು ಹೇಳಿದರೆ ನಾನು ಕೇಳುವುದಿಲ್ಲ. ಹಾಗಾದರೆ ಯಾವಾಗ ನೀವು ಇಂಥ ಆದೇಶವನ್ನು ಕೊಟ್ಟು ನಾನು ಇಲ್ಲಿ ಸದನದಲ್ಲಿ ಹೇಳಿದನಂತರ ಆ ಆದೇಶವನ್ನು ನೀವು ಕ್ಯಾನ್ಸಲ್ ಮಾಡಿಸಿದ್ದೀರಿ. ಮಾಡಿಸಿದ ಮೇಲೆ ಅಲ್ಲಿ ಪ್ರೈಮಾಫೇಸಿ ಕೇಸ್ ಉಂಟೋ ಇಲ್ಲವೋ? ಆ ಅಧಿಕಾರಿಯನ್ನು ಅಮಾನತ್ತಿನಲ್ಲಿ ಇಡಬೇಕೋ ಬೇಡವೋ? ನಾನೇನು ಸ್ಥಾಪಿತ ಹಿತಾಸಕ್ತಿಯಾಗಿ ಆ ಅಧಿಕಾರಿಯನ್ನು ಅಮಾನತ್ತಿನಲ್ಲಿಡಬೇಕು ಎಂದು ಹೇಳುವುದಾ?

ನಾನು ತೋಟಗಾರಿಕಾ ಇಲಾಖೆಯ ವಿಷಯ ಸಮಿತಿಯ ಅಧ್ಯಕ್ಷನಾಗಿ ನಾನು ಎಲ್ಲವನ್ನೂ ಅಧ್ಯಯನ ಮಾಡಿಯೇ ಬಂದು ಇಲ್ಲಿ ಪ್ರಸ್ತಾವನೆ ಮಾಡಿದ್ದೇನೆ. ಸುಮ್ಮನೆ ನಾನು ಹೇಳಲಿಲ್ಲ. ಅದರಿಂದಾಗಿ, ಇವತ್ತು ನಿಮ್ಮ ಹತ್ತಿರ ಅಧಿಕಾರ ಇದೆ. ನೀವು ಎಲ್ಲದಕ್ಕೂ ಹೇಳುತ್ತೀರಿ ನಿಮ್ಮ ಕಾಲದಲ್ಲಿ ಆಗಲಿಲ್ಲವಾ, ಅವರ ಕಾಲದಲ್ಲಿ ಆಗಲಿಲ್ಲವಾ ಎಂದು. ಹೌದು. ಅವರ ಕಾಲದಲ್ಲಿ ಆದದ್ದಕ್ಕೇ ಜನ ಅವರನ್ನು ಇಲ್ಲಿ ಕೂರಿಸಿದ್ದು. ನಿಮ್ಮ ಕಾಲದಲ್ಲಿ ಅದು ಆಗಬಾರದು ಎಂದು ನಿಮ್ಮನ್ನು ಅಲ್ಲಿ ಕೂರಿಸಿದ್ದು. ನೀವು ಇವರ ಕೊಟೇಷನ್ ಹೇಳಿಕೊಂಡು ನೀವು ರಕ್ಷಣೆ ಪಡೆದುಕೊಳ್ಳುವುದಾ? ಅವರು ಮಾಡಿದ ಕೆಲಸವನ್ನು ನೀವು ಮಾಡುವುದಕ್ಕೆ ಹೋಗುವುದಾ? ಇವರು ಮಾಡಿದ ಅನ್ಯಾಯದ ರಕ್ಷಣೆ ಕೊಡೆ ನೀವು ಹಿಡಿದುಕೊಂಡು ನೀವು ಅಲ್ಲಿ ಕುಳಿತುಕೊಳ್ಳಬೇಕಾ 110 ಜನ. ನೀವು ಇವರು ಮಾಡಿದ ಅನ್ಯಾಯವನ್ನು ಕಂಟಿನ್ಯೂ ಮಾಡಬಾರದು, ನಿಮ್ಮಲ್ಲಿ ಹೊಸತನ ತರಬೇಕು ಎಂದು ಹೇಳಿ ನಿಮಗೆ ಜನ ಆದೇಶ ಕೊಟ್ಟಿದ್ದು.

ಶ್ರೀ ಡಿ.ಟಿ. ಜಯಕುಮಾರ್ : ಆ ರೀತಿ ನಾವು ಮಾಡುವುದಿಲ್ಲ. ನೀವು ವಿಶ್ವಾಸ ಇಟ್ಟುಕೊಳ್ಳಿ.

ಶ್ರೀ ಯು.ಆರ್. ಸಭಾಪತಿ : ನೀವು ವಿಶ್ವಾಸ ಕಳೆದುಕೊಂಡಾಗಿದೆ. ಮಾನ್ಯ ತೋಟಗಾರಿಕಾ ಸಚಿವರು ಬಹಳ ಯಂಗ್ಮನ್ ಇದ್ದೀರಿ, ಅನುಭವಸ್ಥರಿದ್ದೀರಿ. ನಿಮಗೇನೂ ಸಾಮರ್ಥ್ಯ ಇಲ್ಲ ಎಂದು ಅಲ್ಲ. ನಮಗೆ ಗೊತ್ತು ನೀವು ಅಧಿಕಾರಿಗಳು ಎಷ್ಟು ಸಂಘರ್ಷ ಮಾಡಿಕೊಂಡಿದ್ದೀರಿ ಎಂದು. ಈಗಾಗಲೇ ನಿಮ್ಮ ಕೈಮೀರಿತ್ತು ಅದು. ನಿಮ್ಮ ಕೈಯಲ್ಲಿಲ್ಲ ಅದು. ನಿಮ್ಮ ಕೈಯಲ್ಲಿ ಆಗುವುದೂ ಇಲ್ಲ ಅದು. ನೀವು ಇಲ್ಲಿ ಸದನಕ್ಕೆ ಏನೋ ಉತ್ತರ ಕೊಡಬೇಕು ಎನ್ನುವ ದೃಷ್ಟಿಯಿಂದ ಕೊಡಬೇಕೇ ವಿನಾಃ ಬೇರೆ ಯಾವ ದೃಷ್ಟಿಯಿಂದಲೂ ಅಲ್ಲ ಎನ್ನುವಂಥ ಸ್ಪಷ್ಟವಾದ ಮಾತನ್ನು ಹೇಳುತ್ತೇನೆ. ಸ್ವಾಮಿ, ಉಪಾಧ್ಯಕ್ಷರೇ, ಕೇವಲ 20 ಕೋಟಿ. ನಾನು ದೊಡ್ಡ ದೊಡ್ಡ ಡಿಪಾರ್ಟ್ಮೆಂಟ್ ಬಗ್ಗೆ ಹೇಳುವುದಿಲ್ಲ.

ಒಂದೇ ಒಂದು ಹೇಳುತ್ತೇನೆ. ಮೀನುಗಾರಿಕಾ ಡಿಪಾರ್ಟ್ಮೆಂಟ್ ಉಂಟು. ಮೀನುಗಾರಿಕಾ ಮಂತ್ರಿಗಳು ಇಲ್ಲಿ ಕುಳಿತುಕೊಂಡಿದ್ದಾರೆ. ಕೇವಲ 20 ಕೋಟಿ ರೂಪಾಯಿ ಬಂಡವಾಳ ಅವರದು. ಇವತ್ತು 20 ಕೋಟಿ ಬಂಡವಾಳದಲ್ಲಿ ಅವರೊಬ್ಬ ಮಂತ್ರಿಗಳು. ಅದರಲ್ಲಿ ಅರ್ಧ ಅಂಶ ಪ್ಲಾನ್ಡ್ ಅರ್ಧ ಅಂಶ ನಾನ್ ಪ್ಲಾನ್ಡ್ ಆಗಿ ವಿಂಗಡಿಸಿ 10-10 ಕೋಟಿ ಕೊಟ್ಟಿದ್ದಾರೆ. ಅವರ ಇಲಾಖೆಯಲ್ಲಿ ಅವರ ಅಲಕ್ಷ್ಯತನವೋ ಅವರ

ಅಧಿಕಾರಿಗಳ ಅಲಕ್ಷ್ಯತನವೋ ಅವರು ಮಾಡಿದ ಎರಡು ವರ್ಷಗಳ ಸಾಧನೆ ಬಗ್ಗೆ ನಾನು ಪಟ್ಟಿ ಇಡುತ್ತೇನೆ ನಿಮ್ಮ ಮುಂದೆ. ಕೇಂದ್ರ ಸರ್ಕಾರ ಕರಾವಳಿಯಲ್ಲಿ ಯಾಂತ್ರೀಕೃತ ಮೀನುಗಾರಿಕೆಗೆ ದೋಣಿಗಳು ಬಂದು ಇಳಿಯುವ ಸಲುವಾಗಿ ಯೋಜನಾ ವೆಚ್ಚದ 50 ರಷ್ಟು ಕೇಂದ್ರ ಸರ್ಕಾರ ಕೊಡುತ್ತದೆ. 50 ರಷ್ಟು ರಾಜ್ಯ ಸರ್ಕಾರ ಕೊಡಬೇಕು.

ದೋಣಿಗಳು ಇಳಿಯುವುದಕ್ಕೆ ಇಳಿದಾಣ ತಂಗುದಾಣಗಳನ್ನು ಮಾಡಲಿಕ್ಕೆ ಸ್ಕೀಮ್ಗಳಿವೆ. ಬೇಕಾದಷ್ಟು ಸ್ಕೀಮುಗಳಿವೆ. ಇವತ್ತು ಏನಾಗಿದೆ ಕರ್ನಾಟಕ ರಾಜ್ಯದ ಮೀನುಗಾರಿಕಾ ಇಲಾಖೆಯಲ್ಲಿ ಮೀನುಗಾರಿಕಾ ಬಂದರು ಮತ್ತು ನಿರ್ಮಾಣಕ್ಕೆ ಸೂಕ್ತ ಸ್ಥಳ ಆಯ್ಕೆ ಮಾಡುವುದು ಅವರ ಕೆಲಸ. ಆಮೇಲೆ ಯೋಜನಾ ವರದಿ ಸಿದ್ಧಪಡಿಸುವುದು, ಆಮೇಲೆ ಆ ಯೋಜನಾ ವರದಿಯನ್ನು ಕೇಂದ್ರಕ್ಕೆ ಕಳುಹಿಸಿ ಅನುಮತಿ ಪಡೆಯುವುದು. 50 ಶೇಕಡ ಕೇಂದ್ರ ಕೊಡುವಾಗ, 50 ಶೇಕಡ ರಾಜ್ಯ ಸರ್ಕಾರ ಕೊಟ್ಟರೆ ಲಕ್ಷಾಂತರ ಜನ ಮೀನುಗಾರರು ಅಲ್ಲಿ ಬದುಕುವಂಥ ಒಂದು ವಿಚಾರದಲ್ಲಿ ಕೇಂದ್ರದ ಪುರಸ್ಕೃತ ಯೋಜನೆಗಳನ್ನೆಲ್ಲಾ ಇವರ ಅಧಿಕಾರಾವಧಿಯಲ್ಲಿ ಲ್ಯಾಪ್ಸ್ ಮಾಡಿಕೊಂಡಿದ್ದಾರೆ.

ಅಷ್ಟು ನಿರ್ಲಕ್ಷತನ! ನಾನು ಒಂದೊಂದು ವಿಚಾರ ನಿಮಗೆ ಹೇಳಿದರೆ ಆಶ್ಚರ್ಯ ಆಗಬಹುದು. ಕಳೆದ ಎರಡು ವರ್ಷಗಳಲ್ಲಿ ಮೀನುಗಾರಿಕಾ ಇಲಾಖೆಯ ಪ್ರಗತಿ ಅಂದರೆ ನಿರಾಶಾದಾಯಕ. ನಾನು ಮೀನುಗಾರಿಕಾ ಇಲಾಖೆಯ ವಿಷಯ ಸಮಿತಿ ಅಧ್ಯಕ್ಷನಾಗಿದ್ದಾಗ ಅಧಿಕಾರಿಗಳ ನಿರ್ಲಕ್ಷ್ಯತನವನ್ನು ಸಂಪೂರ್ಣವಾಗಿ ನಾನು ಮನವರಿಕೆ ಮಾಡಿಸಿದ್ದೇನೆ. ನಿಮ್ಮ ಅಧಿಕಾರಿಗಳು ಕೆಲಸ ಮಾಡುವುದಿಲ್ಲ, ನೀವು ಮಾಡಿಸಬೇಕು ಎಂದು ಹೇಳಿದರೆ ಇವರ ಹತ್ತಿರ ಆಗಲಿಲ್ಲ. 1994-95ರಲ್ಲಿ ಬಂದರು ನಿರ್ಮಾಣಕ್ಕಾಗಿ ಮೀಸಲಾಗಿ 4 ಕೋಟಿ 25 ಲಕ್ಷ ರೂಪಾಯಿ ಕೇಂದ್ರ ಸರ್ಕಾರದ ಅನುದಾನದಲ್ಲಿ ಇವರು ಮಾಡಿದ ಖರ್ಚು ಎಷ್ಟು ಸ್ವಾಮಿ? 42.76 ಲಕ್ಷ ರೂಪಾಯಿ. 1995-96ರಲ್ಲಿ ಮತ್ತೆ 3 ಕೋಟಿ 25 ಲಕ್ಷ ಅನುದಾನ. ಅದರಲ್ಲಿ ಇವರು ಮಾಡಿದ ಖರ್ಚೆಷ್ಟು? ಕೇವಲ 63.98 ಲಕ್ಷ. 1996-97ರಲ್ಲಿ ಈಗಾಗಲೇ 5 ತಿಂಗಳು ಕಳೆದುಹೋಗಿದೆ. 4 ಕೋಟಿ 10 ಲಕ್ಷ ಅನುದಾನದಲ್ಲಿ 10 ಲಕ್ಷದ ಕೆಲಸ ಮಾಡಲಿಕ್ಕೆ ಇವರಿಂದ ಆಗಲಿಲ್ಲ. ಇದು ನಮ್ಮ ಬಹಳ ಒಂದು ದುರ್ದೆಸೆ.

ಮೀನುಗಾರರಿಗೆ ನಾವು ಪ್ರತಿಯೊಂದು ಯೋಜನೆಗಳ ಬಗ್ಗೆ ಪ್ರಗತಿ ಪರೀಕ್ಷೆ ಮಾಡಲಿಕ್ಕೆ ಹೋಗಬಾರದು. ಮಾಡಿದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋಡಿಬೆಂಗ್ರೆ ಎಂದು ಹೇಳಿ ಒಂದಿದೆ. ಅದು ಇವರದೇ ಕಾನ್ಸ್ಟಿಟ್ಯುಯೆನ್ಸಿ. ಕೋಡಿಬೆಂಗ್ರೆಯಲ್ಲಿ ಮೀನುಗಾರಿಕಾ ಇಳಿದಾಣ ನಿರ್ಮಾಣಕ್ಕೆ ಕೇಂದ್ರಸರ್ಕಾರ 18-3-95ರಲ್ಲಿ 55.50 ಲಕ್ಷ ಮಂಜೂರಾತಿ ನೀಡಿದೆ. ಇಲ್ಲಿಯವರೆಗೆ ಮೂರು ವರ್ಷಗಳಲ್ಲಿ ಲ್ಯಾಂಡ್ ರಿಕ್ಲಮೇಷನ್ ಬಿಟ್ಟರೆ ಬೇರೆ ಯಾವ ಕೆಲಸವನ್ನೂ ನೀವು ಮಾಡಲಿಲ್ಲ. 20-2-95ರಲ್ಲಿ ಗಂಗೊಳ್ಳಿ, ಕುಂದಾಪುರ ತಾಲ್ಲೂಕು ಇಲ್ಲಿ 13.12 ಲಕ್ಷ ಯೋಜನೆಗೆ ಕೇಂದ್ರ ಸರ್ಕಾರ ಮಂಜೂರಾತಿ ನೀಡಿದರೂ ಕೂಡ ಇವತ್ತಿನವರೆಗೂ ಕೆಲಸ ಪ್ರಾರಂಭ ಆಗಲಿಲ್ಲ. ರಾಜ್ಯ ಸರ್ಕಾರದ ವತಿಯಿಂದ 9 ಲಕ್ಷ ಜೆಟ್ಟಿ ನಿರ್ಮಾಣವಾಗಿದೆ. ಅದು ಕಳಪೆ ಕಾಮಗಾರಿಯಿಂದ ಕುಸಿದು ಮೀನುಗಾರರೆಲ್ಲಾ ಕಂಪ್ಲೇಂಟ್ ಕೊಟ್ಟರೂ ಕೂಡ ಅದರ ಬಗ್ಗೆ ಯಾವುದೇ ಕ್ರಮ ಇದುವರೆಗೆ ತೆಗೆದುಕೊಳ್ಳಲಿಕ್ಕೆ ಆಗಲಿಲ್ಲ. ಉಡುಪಿ ತಾಲ್ಲೂಕು ಹೆಜಮಾಡಿ ಕೋಡಿಯಲ್ಲಿ ಇಳಿದಾಣ ನಿರ್ಮಾಣಕ್ಕೆ ಕೇಂದ್ರ ಸರ್ಕಾರ 95ರ ಅಕ್ಟೋಬರ್ನಲ್ಲಿ ಮಂಜೂರಾತಿ ನೀಡಿದ್ದರೂ ಕೂಡ ಕಾಮಗಾರಿ ಇವತ್ತಿಗೂ ಪ್ರಾರಂಭ ಆಗಲಿಲ್ಲ.

ಅಗತ್ಯವಾದ ಭೂಸ್ವಾಧೀನಕ್ಕೆ ಹಣ ಮಂಜೂರಾತಿಗಾಗಿ ಸರ್ಕಾರದಲ್ಲಿಯೇ ಪ್ರಸ್ತಾವನೆ ಕಳೆದ ಒಂದು ವರ್ಷದಿಂದ ಕೊಳೆಯುತ್ತಿದೆ.

ಇನ್ನು ಮಲ್ಪೆ ಬಂದರಿನ ಎರಡನೇ ಹಂತದ ಕಾಮಗಾರಿ ಯೋಜನೆ ಏನಿದೆ. ಈ ಕಾಮಗಾರಿಗೆ ಕೇಂದ್ರ 96ರ ಫೆಬ್ರವರಿಯಲ್ಲೇ ಅನುಮತಿ ನೀಡಿದ್ದರೂ ಕೂಡ 50 ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದರೂ ಕೂಡ ರಾಜ್ಯ ಸರ್ಕಾರಕ್ಕೆ ಇನ್ನೂ ಕೂಡ ಆಡಳಿತ ಅನುಮೋದನೆ ಕೊಡಲಿಕ್ಕಾಗಲಿಲ್ಲ ಉತ್ತರ ಕನ್ನಡದ ಅಳಿವೆಕೋಡಿ ಮೀನುಗಾರಿಕಾ ತಂಗುದಾಣ ನಿರ್ಮಾಣಕ್ಕೆ ಭಾರತ ಸರ್ಕಾರ 95 ಮಾರ್ಚಿಯಲ್ಲಿ 10 ಲಕ್ಷ ರೂಪಾಯಿ ಬಿಡುಗಡೆಗೊಳಿಸಿದ್ದರೂ ಕೆಲಸ ಇನ್ನೂ ಆರಂಭಿಸಿಲ್ಲ. ಹಂಗಾರಕಟ್ಟೆ ಜೆಟ್ಟಿ ಕಾರ್ಯ ಇನ್ನೂ ಆಗಲಿಲ್ಲ. ಮಲ್ಪೆ ಮೀನುಗಾರಿಕಾ ಬಂದರಿನ ಎರಡನೇ ಹಂತದ ಗಂಗೊಳ್ಳಿ ಕಾರವಾರ ಬಂದರಿನ ಎರಡನೇ ಹಂತ...

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಕಾಮಗಾರಿ ಪ್ರಾರಂಭ ಆಗಿದ್ದನ್ನೂ ನೋಡಲಿಲ್ಲ. ಮಾನ್ಯ ಸದಸ್ಯರು. ಅದಕ್ಕೆ ಉತ್ತರವನ್ನು ಕೊಡುತ್ತೇನೆ ಆಮೇಲೆ.

ಶ್ರೀ ಯು.ಆರ್. ಸಭಾಪತಿ : ಮಂಗಳೂರು ಮೀನುಗಾರಿಕಾ ಬಂದರಿನ ಎರಡನೇ ಹಂತ, ಗಂಗೊಳ್ಳಿ ಕಾರವಾರ ಬಂದರಿನ ಹಂತ, ಬೇಲಿಕೇರಿ ಬಾಳಂಬರ ಬಂದರುಗಳ ಯೋಜನಾ ವರದಿ ಸಿದ್ಧ ಇವತ್ತಿನವರೆಗೂ ಮಾಡಲೇ ಇಲ್ಲ. ಸೌತ್ ಕೆನರಾ, ನಾರ್ತ್ ಕೆನರಾ ಇಲ್ಲಿ. ಮೀನುಗಾರಿಕಾ ಕಾರ್ಯ ಹೆಚ್ಚಿರುವುದು ಕರಾವಳಿಯಲ್ಲಿ. ಇಳಿದಾಣ ನಿರ್ಮಾಣಕ್ಕೆ ಕಳೆದ ಎರಡು ವರ್ಷಗಳಲ್ಲಿ ಪ್ರತಿ ವರ್ಷಕ್ಕೆ ಎರಡು ಕೋಟಿ ರೂಪಾಯಿನಂತೆ 4 ಕೋಟಿ ರೂಪಾಯಿ ಬಂದಿದೆ ಸ್ವಾಮಿ. ಇದನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ : ಮಾನ್ಯ ಉಪಾಧ್ಯಕ್ಷರೇ, ಅವಿಶ್ವಾಸ ಜಯಪ್ರಕಾಶ್ ಹೆಗಡೆಯವರ ಮೇಲೆ ಮಾತ್ರವೇ? ಅವಿಶ್ವಾಸ ಆ ಒಬ್ಬ ಮಂತ್ರಿಗಳ ಮೇಲೆ ಮಾತ್ರವೇ?

ಶ್ರೀ ಯು.ಆರ್. ಸಭಾಪತಿ : ಇಲ್ಲ. ನಾನು ಎಲ್ಲದಕ್ಕೂ ಬರುತ್ತೇನಮ್ಮ. ನೀವೇನೂ ಗಾಬರಿಪಟ್ಟುಕೊಳ್ಳಬೇಡಿ. ನಾನು ಒಂದೊಂದು ಇಲಾಖೆಯದು ಹೇಳುತ್ತಾ ಬರುತ್ತೇನೆ ನಾನು. ಸಮಯಾವಕಾಶ ಕೊಡಲಿ. ನಾಳೆ ಸಾಯಂಕಾಲದವರೆಗೆ. ಎಲ್ಲಾ ಇಲಾಖೆಯದೂ ಭ್ರಷ್ಟಾಚಾರ ತರುತ್ತೇನೆ ನಾನು.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೆ, ಅವರಿಗೆ ಮಾತನಾಡಲಿಕ್ಕೆ ಅಧಿಕಾರ ಇದೆ. ಆದರೆ ಮಾತನಾಡುತ್ತಾ ಇರತಕ್ಕ ಸಂದರ್ಭದಲ್ಲಿ ಪ್ರತಿಯೊಂದು ಇಲಾಖೆಯ ಮಂತ್ರಿಗಳ ಭ್ರಷ್ಟಾಚಾರ ಎಂದು ಹೇಳಿದ್ದಾರೆ. ನಾನು ಕೇಳುತ್ತೇನೆ ಭ್ರಷ್ಟಾಚಾರ ಅಂದರೆ ಯಾವ ಮಂತ್ರಿ ಭಷ್ಟಾಚಾರ ಮಾಡಿದ್ದಾರೆ ಎಂಬುದನ್ನು ಸಾಬೀತು ಮಾಡಲಿ ಅವರು. ಮಂತ್ರಿಗಳ ಭ್ರಷ್ಟಾಚಾರದ ಬಗ್ಗೆ ಎಂದು ಬಾಯಿಗೆ ಬಂದ ಹಾಗೆ ಮಾತನಾಡಬಾರದು ಸದನದಲ್ಲಿ. ಯಾವ ಮಂತ್ರಿಯವರು ಭ್ರಷ್ಟಾಚಾರ ಮಾಡಿದ್ದಾರೆ ಎನ್ನುವುದನ್ನು ಹೇಳಲಿ. ಸದನದಲ್ಲಿ ಹೇಳಬೇಕು ಈಗ ಅಥವಾ ಅವರು ಹೇಳಿದ್ದನ್ನು ವಿತ್ಡ್ರಾ ಮಾಡಿಕೊಳ್ಳಬೇಕು.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ಸ್ಪೆಸಿಫಿಕ್ಕಾಗಿ ಹೇಳಲಿ.

ಉಪಾಧ್ಯಕ್ಷರು : ಶಿವರಾಮೇಗೌಡರೇ, ಕೇಳಿರಿ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಿದ್ದಾರೆ. ಬಾರಿ ಇರತಕ್ಕ ಹಿರಿಯ ಸದಸ್ಯರು ಖರ್ಗೆಯವರು ಮಾತನಾಡಿದ್ದಾರೆ. ಆಡಳಿತದಲ್ಲಿರತಕ್ಕ ಭ್ರಷ್ಟಾಚಾರದ ಬಗ್ಗೆ ಹೇಳಿದ್ದಾರೆ. ಆದರೆ ಮಾನ್ಯ ಮಿತ್ರರಾಗಿರತಕ್ಕ ಸಭಾಪತಿಯವರು ಮಾತನಾಡುತ್ತಾ ಇರತಕ್ಕಂಥ ಆವೇಶದಲ್ಲಿ ಎಲ್ಲಾ ಇಲಾಖೆಯನ್ನೂ ನಾನು ತರುತ್ತಾ ಇದ್ದೇನೆ ಎಂದರು. ತರಲಿ. ಮಾಡಲಿಕ್ಕೆ ಇರತಕ್ಕಂಥ ಅಧಿಕಾರ ಇದೆ ಅವರಿಗೆ. ನಾನು ಇಲ್ಲ ಎಂದು ಹೇಳಲಿಕ್ಕೆ ತಯಾರಾಗಿಲ್ಲ. ಆದರೆ ಪ್ರತಿ ಇಲಾಖೆಯ ಮಂತ್ರಿಗಳ ಭ್ರಷ್ಟಾಚಾರ. ನಾನು ಹೇಳುತ್ತಿದ್ದೇನೆ, ಈ ಪದ ಅವರು ಬಳಸಿರತಕ್ಕಂಥ ಸಂದರ್ಭದಲ್ಲಿ ನಾವು ಅದನ್ನು ಸ್ವೀಕಾರ ಮಾಡುತ್ತೇವೆ.

ಮಂತ್ರಿಗಳಾಗಿರತಕ್ಕವರು ನಾವು ಪ್ರತಿಯೊಬ್ಬರೂ 45 ಜನ ಮುಖ್ಯಮಂತ್ರಿಯಾದಿಯಾಗಿ ನಾವು ಸ್ವೀಕಾರ ಮಾಡುತ್ತೇವೆ. ಆ ಸ್ವೀಕಾರ ಮಾಡಿರತಕ್ಕ ಸಂದರ್ಭದಲ್ಲಿ ಆ ಸವಾಲನ್ನು ಎದುರಿಸಲಿ. ಯಾವ ಮಂತ್ರಿಗಳು ಭ್ರಷ್ಟಾಚಾರ ಎಸಗಿದ್ದಾರೆ ಎಂಬುದನ್ನು ಹೇಳಲಿ. ಮಾನ್ಯ ವಿರೋಧಪಕ್ಷದ ನಾಯಕರೇ ನಾವು ಅವರ ಮಾತುಗಳನ್ನು ಕೇಳಿದ್ದೇವೆ. ಹಲವಾರು ಬಾರಿ ಅವರ ಮಾತುಗಳನ್ನು ಕೇಳುತ್ತಾ ಇದ್ದೇವೆ. ಕೆಲವು ಸಂದರ್ಭದಲ್ಲಿ ಮೊದಲು ಮಾತನಾಡುವಾಗ 45 ಜನ ಮಂತ್ರಿಗಳಲ್ಲಿ ಅರ್ಧಕ್ಕಿಂತ ಹೆಚ್ಚು ಮಂತ್ರಿಗಳಿಗೆ ಕೆಲಸ ಗೊತ್ತಿಲ್ಲ; ಅವರು ಅಧಿಕಾರಿಗಳು ತಂಡ ಫೈಲುಗಳಿಗೆ ಸಹಿ ಮಾಡುತ್ತಾರೆ ಎನ್ನುವ ಮಾತನ್ನು ಆಡಿದರು. ನಾನು ಹೇಳುತ್ತಾ ಇದ್ದೇನೆ ತಾವು ದಯವಿಟ್ಟು ನಿಮ್ಮಿಂದ ನಮ್ಮ ಮಂತ್ರಿಗಳು ಯಾರೂ ಉಪದೇಶ ಕಲಿಯಬೇಕಾಗಿಲ್ಲ. ನಿಮಗಿಂತ ಬುದ್ಧಿವಂತರು ಮಂತ್ರಿಗಳಿದ್ದಾರೆ ಎನ್ನುವ ಮಾತು. ಆದರೆ ಆ ಬುದ್ಧಿವಂತಿಕೆಯ ಪ್ರದರ್ಶನವನ್ನು ನಾವು ಇಲ್ಲಿ ಮಾಡುವುದಿಲ್ಲ. ಬುದ್ಧಿವಂತಿಕೆಯ ಪ್ರದರ್ಶನ ಮಾಡಬೇಕೆಂದರೆ ಮಾಡೋಣ.

ಉಪಾಧ್ಯಕ್ಷರು : ಸಭಾಪತಿಯವರೇ, ಈಗ ತಾವು ಮಾತನಾಡುವಾಗ...

ಶ್ರೀ ಎಂ.ಸಿ. ನಾಣಯ್ಯ : ಬುದ್ಧಿವಂತಿಕೆಯ ಪ್ರದರ್ಶನವನ್ನು ಮಾಡುತ್ತೇವೆ.

ಶ್ರೀ ವೈ. ರಾಮಕೃಷ್ಣ : ಅದೇನೂ ಅನ್‌ಪಾರ್ಲಿಮೆಂಟರಿ ಅಲ್ಲ.

ಶ್ರೀ ಎಂ.ಸಿ. ನಾಣಯ್ಯ : ಅನ್‌ಪಾರ್ಲಿಮೆಂಟರಿ ಅಲ್ಲ. ಬುದ್ಧಿವಂತಿಕೆಯ ಪ್ರದರ್ಶನ ಎಂದು ನಾವೂ ಹೇಳುತ್ತೇವೆ. ನಾವು ಹೇಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ನನ್ನದು ಕ್ರಿಯಾಲೋಪ ಇದೆ.

ಉಪಾಧ್ಯಕ್ಷರು : ಮಾನ್ಯ ಶಿವರಾಮೇಗೌಡರೇ, ತಾವು ಕೂಡಿ ತಾವು ಎಲ್ಲರೂ ಕೂಡಿ ಮಾನ್ಯ ವಾಟಾಳ್‌ನಾಗರಾಜ್‌ರವರದ್ದು ಪಾಯಿಂಟ್ ಆಫ್ ಆರ್ಡರ್ ಇದೆ, ತಾವು ಕುಳಿತುಕೊಳ್ಳಿ

ಶ್ರೀ ಎಲ್.ಆರ್. ಶಿವರಾಮೇಗೌಡ : ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ.

ಉಪಾಧ್ಯಕ್ಷರು : ಮಾನ್ಯ ವಾಟಾಳ್‌ನಾಗರಾಜ್‌ರವರದ್ದು ಮೊದಲು ಪಾಯಿಂಟ್ ಆಫ್ ಆರ್ಡರ್ ಇದೆ. ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಶಾಸಕರಿಗೆ ಗೂಂಡಾಗಿರಿ ಮಾಡುತ್ತಿದ್ದಾರೆ, ಇಲ್ಲಿ ನಿಮ್ಮ ಗೂಂಡಾಗಿರಿ ನಡೆಯುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ನನ್ನದು ಕ್ರಿಯಾಲೋಪ ಇದೆ.

ಉಪಾಧ್ಯಕ್ಷರು : ಮಾನ್ಯ ವಾಟಾಳ್‌ನಾಗರಾಜ್‌ರವರೇ ತಾವು ಮಾತನಾಡಿರಿ, ತಾವು ಎಲ್ಲರೂ ದಯಮಾಡಿ ಕುಳಿತುಕೊಳ್ಳಿ ಮಾನ್ಯ ವಾಟಾಳ್‌ನಾಗರಾಜ್‌ರವರೇ, ತಾವು ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಒಂದು ಇಲ್ಲಿ ತಾವು ಸದಸ್ಯರಿಗೆ ರಕ್ಷಣೆ ಕೊಡಬೇಕು. ರಕ್ಷಣೆ ಕೊಡುವುದಕ್ಕಾಗುವುದಿಲ್ಲವೆಂದರೆ ನಾವು ಹೊರಗಡೆ ಹೋಗುತ್ತೇವೆ.

ಉಪಾಧ್ಯಕ್ಷರು : ಆ ಮಾತು ಏಕೆ ತಾವು ಮಾತನಾಡುತ್ತೀರಿ? ತಾವು ಆ ರೀತಿ ಮಾತನಾಡಬಾರದು?

ಶ್ರೀ ವಾಟಾಳ್ ನಾಗರಾಜ್ : ತಮ್ಮಲ್ಲಿ ನನ್ನ ಮನವಿ. ನಾನು ಏನೂ ಬೇರೆ ಅರ್ಥದಲ್ಲಿ ಹೇಳುತ್ತಿಲ್ಲ. ಈಗ ಅವಿಶ್ವಾಸದ ಮೇಲೆ ಚರ್ಚೆ ಮಾಡುವಾಗ ಹೀಗೇ ಮಾತನಾಡಬೇಕು, ಈ ಲೈನನ್ನು ಬಿಟ್ಟು ಮಾತನಾಡಬೇಕು ಹೀಗೆ ಹೇಳತಕ್ಕದ್ದು ಎಂದು ಎಲ್ಲೂ ಇಲ್ಲ. ನಾನು ಹೇಳುತ್ತೇನೆ, ನಾವು ಪ್ರಾಮಾಣಿಕವಾಗಿ ಸರ್ಕಾರದ ಮೇಲೆ ಮಂತ್ರಿಗಳ ಮೇಲೆ ಅನೇಕ ವಿಚಾರಗಳನ್ನು ಹೇಳುತ್ತೇವೆ ಅವರು ಹೇಳಿದ ನಂತರ ನೀವು ಅದಕ್ಕೆ ಉತ್ತರ ಕೊಡತಕ್ಕ ಸಂಪೂರ್ಣ ಅವಕಾಶ ತಮಗಿದೆ. ಆ ಅವಕಾಶವೆಲ್ಲವನ್ನೂ ಬಿಟ್ಟು ನೀವು ಒಂದೇ ಸಾರಿ ಧಾಳಿ ಮಾಡಿದರೆ ಹೇಗೆ? ಮತ್ತೊಂದು ಕಡೆ ನನ್ನ ಮಿತ್ರರು ಮಾನ್ಯ ಶಿವರಾಮೇಗೌಡರ ಬಗ್ಗೆ ಬಹಳ ಗೌರವವಿದೆ. ಎರಡನೆಯ ಅಭಿಪ್ರಾಯ ಇಲ್ಲವೇ ಇಲ್ಲ. ಆದರೆ ಅವರು ನಿಂತ ಪರಿಸ್ಥಿತಿಯನ್ನು ನೋಡಿದಾಗ ನಾವು ಯಾರೂ ಇಲ್ಲಿ ಕುಳಿತುಕೊಳ್ಳತಕ್ಕ ವಿಚಾರದ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ ನಾವು ಹೆದರಿ ಹೊರಗೆ ಹೋಗುತ್ತೇವೆಂದಲ್ಲ, ಭಯಭೀತಿಯಿಂದ ಹೊರಗೆ ಹೋಗುತ್ತೇವೆಂದಲ್ಲ; ನಾವು ಉತ್ತರ ಕೊಡುವುದಕ್ಕೆ ತಯಾರಾಗಿದ್ದೇವೆ, ನಿಲ್ಲೋಣ. ಆ ರೀತಿ ಇದೇ ಚರ್ಚೆ ನಡೆಯುವುದಾದರೆ ಇದೇ ಧಾಟಿಯಲ್ಲಿ ಚರ್ಚೆ ನಡೆಯುವುದಾದರೆ ಆ ಧಾಟಿಗೆ ನಾವು ಹೊಂದಿಕೊಳ್ಳುತ್ತೇವೆ. ಆ ಧಾಟಿ ಬೇಡವೆಂದರೆ, ಸಂಸದೀಯ ನಡವಳಿಕೆಯಲ್ಲಿ ಪ್ರಜಾಪ್ರಭುತ್ವದ ದೃಷ್ಟಿಯಿಂದ ಪ್ರಾಮಾಣಿಕವಾದ ಚರ್ಚೆಯಾ ಬೇಕು ಹಾಗಾದರೆ ಇಲ್ಲಿ ಮುಕ್ತವಾದ ಚರ್ಚೆ ಮಾಡುವುದಕ್ಕೆ ಒಂದು ರೀತಿ ಭಯಭೀತಿ ಉದ್ಭವವಾಗುತ್ತದೆ, ಮುಕ್ತ ಚರ್ಚೆಗೆ ಅವಕಾಶ ಇರಬೇಕೆನ್ನುವುದಾದರೆ, ನಾವು ಹೇಳತಕ್ಕ ಮಾತನ್ನು ತಾವು ಕೇಳಿ. ನೀವು ಅಷ್ಟೇ ತೀಕ್ಷ್ಣವಾಗಿ, ಅಷ್ಟೇ ಪರಿಣಾಮಕಾರಿಯಾಗಿ, ಉತ್ತರ ಕೊಡುವುದಕ್ಕೆ ತಮಗೆ ಇಲ್ಲಿ ಅವಕಾಶವಿದೆ. ಅದನ್ನು ಬಿಟ್ಟು ಈಗಲೇ ಇದೇನಿದು, ಇದೊಂದು ರೀತಿಯ *ಸರ್ವಾಧಿಕಾರಿಯ ರೀತಿಯಲ್ಲಿ ತಾವೆಲ್ಲರೂ ಆ ಧಾಟಿಯಲ್ಲಿ ಹೊರಗಡೆ ನಾವು ಯಾರೂ ಇಲ್ಲಿರುವುದಕ್ಕೆ ಸಾಧ್ಯವಿಲ್ಲ. ಇದು ಒಳ್ಳೆಯದಲ್ಲ.

ಉಪಾಧ್ಯಕ್ಷರು : ಆಯಿತು, ತಾವು ಕೂಡಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಸಭಾಪತಿಯವರು ಮಾತನಾಡುವಾಗ ಪ್ರತಿಯೊಬ್ಬ ಮಂತ್ರಿಗಳ ಮೇಲೆ ಏನೊಂದು ಆಪಾದನೆಯನ್ನು ಹಾಕಿದ್ದಾರೆ ಅದನ್ನು

ಅವರು ವಾಪಸ್ಸು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಅವರು ಅದನ್ನು ಸಾಬೀತು ಮಾಡಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಮಂತ್ರಿಗಳು ಈಗ ಏತಕ್ಕೆ ಉತ್ತರ ಕೊಡಬೇಕು? ನಾಳೆ ಉತ್ತರ ಕೊಡಲಿ.

ಉಪಾಧ್ಯಕ್ಷರು : ಅವರು ಮಾತನಾಡಬಾರದೇ? ನೇರವಾಗಿ ಅವರಿಗೆ ಸಂಬಂಧಪಟ್ಟಿದ್ದು ಇದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ನೇರವಾಗಿ ನನ್ನ ಇಲಾಖೆಯ ಮೇಲೆ ಮಾತನಾಡುವಾಗ ಪ್ರತಿಯೊಂದು ಮಂತ್ರಿಗಳು ಎಂದು ಹೇಳಿದರು. ಅದಕ್ಕೆ ಅವರು ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಅದನ್ನು ಸಾಬೀತು ಮಾಡಬೇಕು.

ಉಪಾಧ್ಯಕ್ಷರು : ಮಾನ್ಯ ಸದಸ್ಯರಾದ ಸಭಾಪತಿಯವರು ಮಾತನಾಡುವಾಗ ಆಧಾರಸಹಿತ ವಿವರಗಳು ಇದ್ದರೆ ತಾವು ಮಾತನಾಡಿ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಉಪಾಧ್ಯಕ್ಷರೆ, ನಾನು ಇಲ್ಲಿ ಮಾತನಾಡಲಿಕ್ಕೆ ನಿಂತಿದ್ದೇನೆ. ನಾನು ಮಾತನಾಡಿದ ಪ್ರತಿಯೊಂದು ವರ್ಡ್ ಏನಿದೆ ಅದಕ್ಕೆ ನಾನು ಬೈಂಡಿಂಗ್ ಆಗಿದ್ದೇನೆ. ನಾನು ಹಂತ ಹಂತವಾಗಿ ಸುಮಾರು 15 ದಿವಸಗಳವರೆಗೆ ಇಷ್ಟು ಕಡತ ನಾನು ತಯಾರು ಮಾಡಿದ್ದೇನೆ. ನಾನು ಹೊಸಬನಿದ್ದೇನೆ. ಈ ಸರ್ಕಾರದ ಮೇಲೆ ಅವಿಶ್ವಾಸ ಮಂಡನೆ ಮಾಡುವಾಗ ನಾನು ಪ್ರಥಮವಾಗಿ ಇಲ್ಲಿ ಭಾಷಣ ಮಾಡುತ್ತಿದ್ದೇನೆ. ಇಲಾಖಾವಾರು ಮಂತ್ರಿಗಳ ಇಲಾಖೆಯಲ್ಲಿ ಏನು ನಡೆಯುತ್ತಿದೆ ಏನು ಭ್ರಷ್ಟಾಚಾರ ನಡೆಯುತ್ತಿದೆ ಇದರ ಬಗ್ಗೆ ಸಾಕಷ್ಟು ಪುರಾವೆಗಳನ್ನು ನಾನು ಇಲ್ಲಿ ತಂದಿದ್ದೇವೆ. ಇದಕ್ಕೆ ಒಂದು ಕಾರಣ ಇವರು ಭ್ರಷ್ಟಾಚಾರಿಗಳಾಗಿರಬೇಕು ಅಥವ ಇವರ ಅಧೀನದಲ್ಲಿರತಕ್ಕ ಇಲಾಖಾ ಅಧಿಕಾರಿಗಳು ಭ್ರಷ್ಟಾಚಾರಿಗಳಾಗಿರಬೇಕೆನ್ನುವುದನ್ನು ನಾನು ಸಾಬೀತುಪಡಿಸುತ್ತಿದ್ದೇನೆ. ಆದರೆ ನಾನು ಹೇಳುವುದಕ್ಕಿಂತ ಮೊದಲೇ ಮಾನ್ಯ ನಾಣಯ್ಯನವರು ಮೈಮೇಲೆ ಬಿದ್ದ ಹಾಗೆ ಮಾತನಾಡಿದರೆ ಹೇಗೆ?

ಉಪಾಧ್ಯಕ್ಷರು : ಇಲ್ಲಿ ನಡೆಯತಕ್ಕ ವಿಷಯದ ಬಗ್ಗೆ ಮಾಡನಾಡಿ.

ಶ್ರೀ ಯು.ಆರ್. ಸಭಾಪತಿ : ನಾನು ಮಾತನಾಡುತ್ತಿರಬೇಕಾದರೆ ಇವರು ಏಕೆ ಮಧ್ಯಪ್ರವೇಶ ಮಾಡಬೇಕು? ಹೀಗೆ ಮಾತನಾಡಬೇಕು ಹಾಗೆ ಮಾತನಾಡಬೇಕೆಂದು ಏನಾದರೂ ಕಾಯಿದೆಯಲ್ಲಿ ಬರೆದಿದೆಯೇ?

ಉಪಾಧ್ಯಕ್ಷರು : ಇಲ್ಲಿ ಪ್ರತಿಯೊಬ್ಬ ಸದಸ್ಯರಿಗೂ ರಕ್ಷಣೆ ಇದೆ. ತಾವು ಮಾಡನಾಡುವಾಗ ಎಚ್ಚರಿಕೆಯಿಂದ ವಿಷಯಕ್ಕೆ ಸಂಬಂಧಪಟ್ಟಹಾಗೆ ತಾವು ಆಧಾರಸಹಿತವಾಗಿ ಮಾತನಾಡಬೇಕು. ತಾವು ದಯಮಾಡಿ ಆ ರೀತಿ ಮಾತನಾಡಿ.

ಮಾನ್ಯ ಸದಸ್ಯರು : ಮಾನ್ಯ ಉಪಾಧ್ಯಕ್ಷರೂ ಸಹ ಸದಸ್ಯರಿಗೆ ರಕ್ಷಣೆ ಕೊಡಬೇಕು. ಮಾನ್ಯ ಶಿವರಾಮೇಗೌಡರು ಮಾತನಾಡಲಿಕ್ಕೆ ಎದ್ದಾಗ ಅವರಿಗೆ ಮಾತನಾಡಲಿಕ್ಕೆ ಅವಕಾಶವನ್ನೇ ಕೊಡಲಿಲ್ಲ.

ಉಪಾಧ್ಯಕ್ಷರು : ಈಗ ಆ ವಿಷಯ ಮುಗಿದಿದೆ. ಈಗ ಮಾನ್ಯ ಸಭಾಪತಿಯವರು ಮಾತನಾಡಲಿ. ಹೊಸ ಸದಸ್ಯರು ಇದ್ದೀರಿ ತಾವೆಲ್ಲ ಹಾಗೆ ಮಾಡಬಾರದು. ಮಾನ್ಯ ಯಡಿಯೂರಪ್ಪನವರೇ, ತಾವು ಸ್ವಲ್ಪ ಅವರಿಗೆ ಹೇಳಿ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಭಾಪತಿಯವರಿಂದ ನಾವು ಬಹಳ ನಿರೀಕ್ಷೆ ಮಾಡಿದ್ದೆವು ಅವರು ಸ್ವಲ್ಪ ಅಭ್ಯಾಸ ಮಾಡುತ್ತಾರೆ ಚೆನ್ನಾಗಿ ಮಾತನಾಡುತ್ತಾರೆ, ಒಂದು ಹಿನ್ನೆಲೆಯಿದೆ ಎಂದು ಆದರೆ ವಿಧಾನಸಭಾ ಸದಸ್ಯರಾಗ ಬಂದಮೇಲೆ ಏನು ಮಾತನಾಡಬೇಕು ಏನು ಮಾತನಾಡಬಾರದು ಎಂದು ರೂಲ್ಸ್ ಇವೆ.ಅದನ್ನು ಓದಿಕೊಳ್ಳಬೇಕು. ಹಿಂದೆ ನಾವೆಲ್ಲಾ ಸದಸ್ಯರುಗಳಾದಾಗ ಮೊದಲು ಸ್ವಲ್ಪ ಟ್ರೈನಿಂಗ್ ಕೊಡುತ್ತಿದ್ದರು. ಈಗ ಏನಾಗಿದೆ ಅಂದರೆ ಏನಾದರೂ ಮಾತನಾಡಬಹುದು ಅದರೊಳಗೆ ಪತ್ರಿಕೆಗಳಲ್ಲಿ ಪ್ರಚಾರವಾಗುವುದಕ್ಕೆ ಏನೇನು ಬೇಕೋ ಅದೆಲ್ಲಾ ಮಾಡಬಹುದು ಎಂದು ಇದೆ. ಅದಕ್ಕೋಸ್ಕರ ನಾನು ಹೇಳುತ್ತೇನೆ, ನೀವು ಯುವಕರು, ವಯಸ್ಸಿನಲ್ಲಿ ನಮಗಿಂತ ಚಿಕ್ಕವರು ನಿಮ್ಮ ಮಾತುಗಳು ಹೇಳಿ. ಸ್ಪಷ್ಟವಾಗಿ ಇಂತಹ ಇಲಾಖೆಯಲ್ಲಿ ಇಂತಹ ಮಂತ್ರಿಯ ಮೇಲೆ ಇಂತಹ ಕೇಸಿನಲ್ಲಿ ಇಂತಹದ್ದು ಇದೆ ಅಂದರೆ, ನಾವು ಅದಕ್ಕೆ ತನಿಖೆ ಮಾಡುತ್ತೇವೆ. ಅದಕ್ಕೆ ಸಂಬಂಧಪಟ್ಟವರು ಯಾರೇ ಇದ್ದರೂ, ಇಲ್ಲಿ ಮಂತ್ರಿಗಳಾಗಿರುವವರು ಯಾರೂ ಹೆದರಿಕೊಂಡು ನೀವು ಹೇಳಿದ ಕೂಡಲೇ ಮನೆಗೆ ಓಡಿ ಹೋಗಿ ಮಲಗುವವರಿಲ್ಲ. ಅಂತಹದ್ದು ಏನಾದರೂ ಇದ್ದರೆ ಈ ಸದನದಿಂದ ಹೊರಗೆ ಹಾಕುವುದಲ್ಲ, ರಾಜಕಾರಣದಿಂದ ಹೊರಗೆ ಹೋಗುತ್ತಾರೆ. ಅದಕ್ಕೆ ತಾವು ಹೇಳುವಾಗ ನಿರ್ದಿಷ್ಟವಾಗಿ ದಯವಿಟ್ಟು ಹೇಳಿ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಉಪಾಧ್ಯಕ್ಷರೆ, ಈಗ 8 ಗಂಟೆಯಾಯಿತು ನಾಳೆ ಮಾತನಾಡೋಣ. ತಾವು ಹೇಳಿದ್ದೀರಿ 8 ಗಂಟೆಗೆ ಮುಗಿಸೋಣವೆಂದು.

ಉಪಾಧ್ಯಕ್ಷರು : ತಾವು ದಯಮಾಡಿ ಮುಗಿಸಿಬಿಡಿ.

ಶ್ರೀ ಯು.ಆರ್. ಸಭಾಪತಿ : ದಯವಿಟ್ಟು ಈಗ 8 ಗಂಟೆಯಾಯಿತು. ನಾಳೆ ನಾನು ಮಾತನಾಡುತ್ತೇನೆ. ನೀವು ಹೇಳಿದ ಪ್ರಕಾರ, ನಿಮ್ಮ ಮಾತಿಗೆ ನಾನು ಒಪ್ಪಿಕೊಂಡಿದ್ದೇನೆ. ನೀವು 8 ಗಂಟೆಗೆ ಮುಗಿಸೋಣವೆಂದು ಹೇಳಿದ್ದೀರಿ.

ಉಪಾಧ್ಯಕ್ಷರು : ತಾವು ಮುಗಿಸಿಬಿಡಿ.

ಶ್ರೀ ಯು.ಆರ್. ಸಭಾಪತಿ : ದಯವಿಟ್ಟು ನನಗೆ ನಾಳೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಿ. ನಾನು ನಾಳೆ ಮಾತನಾಡುತ್ತೇನೆ. ನೀವು ಹೇಳಿದಿರಲ್ಲಾ 8 ಗಂಟೆಗೆ ಮುಗಿಸೋಣವೆಂದು. ನಿಮ್ಮ ಹೇಳಿಕೆ ಪ್ರಕಾರ ನಾನು ಮಾತನಾಡಿದ್ದೇನೆ. ನಾನು ಹೆಚ್ಚಿಗೆ ಮಾತನಾಡಲಿಕ್ಕೆ ಹೋಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ತಾವೇ ಆದೇಶ ಕೊಟ್ಟಿದ್ದೀರಿ 8 ಗಂಟೆಗೆ ಮುಗಿಸೋಣ ಎಂದು ನಾಳೆ ಬೆಳಿಗ್ಗೆ ಅವರಿಗೆ 15 ನಿಮಿಷ ಅವಕಾಶ ಕೊಟ್ಟರೆ ಒಳ್ಳೆಯದು.

ಉಪಾಧ್ಯಕ್ಷರು : ಮಾನ್ಯ ಸದಸ್ಯರು 8 ಗಂಟೆ 15 ನಿಮಿಷಗಳವರೆಗೆ ಮಾತನಾಡಲಿ.

ಶ್ರೀ ವೈ. ರಾಮಕೃಷ್ಣ : ತಾವೇ ಹೇಳಿದ್ದೀರಿ, ಆ ಮಾತಿಗೆ ಗೌರವ ಕೊಡಬೇಕು.

ಉಪಾಧ್ಯಕ್ಷರು : ನಾನು 8 ಗಂಟೆಯಲ್ಲಿ ಮುಗಿಸುತ್ತೇನೆಂದು ಹೇಳಿದೆ, ಈಗ 10-15 ನಿಮಿಷ ಸಮಯ ಹೋಯಿತು. ತಾವು ಮುಗಿಸಿಬಿಡಿ ಸ್ವಾಮಿ.

ಶ್ರೀ ಯು.ಆರ್. ಸಭಾಪತಿ : ನಾನು ಮುಗಿಸಲಿಕ್ಕೆ ಆಗುವುದಿಲ್ಲ. ನನಗೆ ಸಮಯಾವಕಾಶ ಒಂದು ಗಂಟೆ ಕೊಟ್ಟಿದ್ದೀರಿ. ನಾನು ಎರಡು ಮೂರು ಗಂಟೆ ಕೇಳಿದ್ದೇನೆ.

ಉಪಾಧ್ಯಕ್ಷರು : ನಮ್ಮ ಕೊಠಡಿಯೊಳಗೆ ಅಲ್ಲಿ ವಿರೋಧಪಕ್ಷದ ನಾಯಕರು ಇದ್ದಾಗ ನಿಮಗೆ ಒಂದು ಗಂಟೆಗಿಂತ ಹೆಚ್ಚಿಗೆ ಸಮಯ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ರಿಕ್ವೆಸ್ಟ್ ಮಾಡಿಕೊಂಡಿದ್ದಾರೆ. ನಾವು ಇವತ್ತು ಬೆಳಿಗ್ಗೆ 10 ಗಂಟೆಗೆ ಸೇರಿದ್ದೇವೆ. ಊಟ ತಿಂಡಿ ಇಲ್ಲದೆ ಬೆಳಿಗ್ಗೆಯಿಂದ ಕುಳಿತುಕೊಂಡಿದ್ದೇವೆ. ತಾವೇ ಆದೇಶ ಕೊಟ್ಟಿದ್ದೀರಿ 8ಗಂಟೆಯ ತನಕ ಕುಳಿತುಕೊಳ್ಳೋಣವೆಂದು.

ಶ್ರೀ ಪಿ.ಜಿ.ಆರ್.ಸಿಂಧ್ಯ : ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆ ಅವತ್ತೇ ಮುಗಿಯಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾಳೆ ಬೆಳಿಗ್ಗೆ 9 ಗಂಟೆಗೆ ಬೇಕಾದರೆ ಬರುತ್ತೇವೆ.

(ಗೊಂದಲ)

ಉಪಾಧ್ಯಕ್ಷರು : ಅವರು ಈಗಾಗಲೇ 45 ನಿಮಿಷ ಮಾತನಾಡಿದ್ದಾರೆ. ಇನ್ನು ಹದಿನೈದು ನಿಮಿಷ ಮಾತನಾಡಿದರೆ ಅವರದ್ದು ಮುಗಿದುಹೋಗುತ್ತದೆ.

ಶ್ರೀ ಯು.ಆರ್. ಸಭಾಪತಿ : ಇಲ್ಲ, ನಾನು ಮಾತನಾಡಿದ್ದು ಮೂವತ್ತು ನಿಮಿಷ. ಮೂವತ್ತು ನಿಮಿಷದಲ್ಲಿ ಹದಿನೈದು ನಿಮಿಷ ಗಲಾಟೆ ಮಾಡಿ ತೆಗೆದುಕೊಂಡರು. ನೀವು ಹೇಳಿದ್ದು ಸರಿಯಿಲ್ಲ, ಉಪಾಧ್ಯಕ್ಷರೇ. ನಾನು ಅದನ್ನು ಒಪ್ಪುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೇ, ನಾವೂ ಕೂಡ ಸುಸ್ತಾಗಿದ್ದೇವೆ. ದಯಮಾಡಿ ನಾಳೆ ಎಂಟುಗಂಟೆಗೆ ಬೇಕಾದರೆ ತಾವು ಇಟ್ಟುಕೊಳ್ಳಿ.

ಉಪಾಧ್ಯಕ್ಷರು : ಈಗ ಒಂದು ಪ್ರಕಟಣೆ.

ಪ್ರಕಟಣೆ

ಉಪಾಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ದಿನಾಂಕ 26ನೇ ಆಗಸ್ಟ್, 1996ರಂದು ಕರ್ನಾಟಕ ವಿಧಾನ ಪರಿಷತ್ತು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿತೆಂದು ಈ ಮೂಲಕ ತಿಳಿಸುತ್ತಿದ್ದೇನೆ.

1. ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕ, 1996
2. ಕರ್ನಾಟಕ ಸಿವಿಲ್ ನ್ಯಾಯಾಲಯಗಳ (ತಿದ್ದುಪಡಿ) ವಿಧೇಯಕ, 1996